Karnataka Lochana

Vol 2, 3 December 89, June 1990 No. 2, 3

ಕರ್ನಾಟಕ ಲೋಚನ

ಸಂಪುಟ ೨, ೩ ಡಿಸೆಂಬರ್ ೮೯, ಜೂನ್ ೧೯೯೦ ಸಂಚಿಕೆ ೨, ೩

ಅದ್ವೈತ ವಿಚಾರಗೋಷ್ಠಿ ವಿಶೇಷಾಂಕ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

B.M.Sri. Memorial Foundation
Bangalore-19

Annual Subn.: Rs. 10-00 ವಾರ್ಷಿಕ ಚಂದಾ : ರೂ. ೧೦-೦೦
Subn. for life: 100-00 ಆಜೀವ : ೧೦೦-೦೦

' ಕರ್ನಾಟಕ ಲೋಚನ '

ಲೇಖನಗಳು–ಟಿಪ್ಪಣಿಗಳು

ಸಂಶೋಧನಾತ್ಮಕ ಪಾಂಡಿತ್ಯಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು – ಇವುಗಳ ಮೇಲಣ ವಿಮರ್ಶೆಗಳು, ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ ಇವುಗಳಿಗೆ ಸಂಬಂಧಿಸಿದ ಟೀಕೆ ಟಿಪ್ಪಣಿಗಳು – ಇವುಗಳಿಗೆ 'ಲೋಚನ' ಮೀಸಲಾಗಿದೆ.

ಯಾವದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ


ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾದ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. 'ಲೋಚನ'ದ ಗಾತ್ರ ಪರಿಮಿತವಾದದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ಕೋರಿಕೆ.

ವಿನಿಮಯ ಪತ್ರಿಕೆಗಳು

೧. ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ (ಮೈಸೂರು), ೨. ಸಾಧನೆ (ಬೆಂಗಳೂರು), ೩. ಗ್ರಂಥಲೋಕ (ಮೈಸೂರು), ೪. ತರಳಬಾಳು (ಸಿರಿಗೆರೆ), ೫. ಅಂಕಣ (ಬೆಂಗಳೂರು), ೬. ಸುಗುಣಮಾಲಾ (ಉಡುಪಿ), ೭. ಅನ್ವೇಷಣೆ (ಬೆಂಗಳೂರು), ೮. ಗ್ರಾಮಕ್ಷೇಮ (ಆನೇಕಲ್), ೯. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ನುಡಿ (ಬೆಂಗಳೂರು), ೧೦. ಶಂಕರ ಭಾಸ್ಕರ (ಬೆಂಗಳೂರು).

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಲೇಖಕರು ಕಳಿಸಬೇಕು.

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ; ಆದರೆ ಕಳಿಸಿದರೆ, 'ಸ್ವೀಕಾರ' ಭಾಗದಲ್ಲಿ ಗಮನಿಸಲಾಗುವುದು. ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.



ಪ್ರೊ|| ಎಂ. ವಿ. ಸೀತಾರಾಮಯ್ಯನವರು

(ಜನನ : 9–9–1910)

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕರಾಗಿ ಅಧ್ಯಕ್ಷರಾಗಿ ನಾಡಿನ ಖ್ಯಾತ ಸಾಹಿತಿ ಸಂಶೋಧಕರಾಗಿ ಅಪಾರ ಸೇವೆ ಸಲ್ಲಿಸಿದ್ದ ಪ್ರೊ|| ಎಂ. ವಿ. ಸೀತಾರಾಮಯ್ಯನವರು ದಿನಾಂಕ 12–3–90 ಸೋಮವಾರ ಮುಂಜಾನೆ 2-30ರ ಸುಮಾರಿನಲ್ಲಿ ನಮ್ಮನ್ನಗಲಿದರು. 16–3–90ರಂದು ನಡೆದ ಪ್ರತಿಷ್ಠಾನದ ವಿಶೇಷ ಕಾರ್ಯಸಮಿತಿ ಸಭೆಯು ಮೃತರ ಆತ್ಮಕ್ಕೆ ಶಾಂತಿಕೋರಿ ಸಂತಾಪಸೂಚಕ ನಿರ್ಣಯ ವನ್ನು ಕೈಗೊಂಡಿತು. ಮೃತರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ ಕೊಡಲೆಂದು ಪ್ರತಿಷ್ಠಾನ ಪ್ರಾರ್ಥಿಸುತ್ತದೆ.

ಸಂತಾಪ ಸೂಚಕ ನಿರ್ಣಯ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕರೂ ಗೌರವಾನ್ವಿತ ಅಧ್ಯಕ್ಷರೂ ಆಗಿದ್ದ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರ ನಿಧನ ಪ್ರತಿಷ್ಠಾನಕ್ಕೆ ಆಘಾತ ಉಂಟುಮಾಡಿದೆ. "ರಾಘವ" ಕಾವ್ಯನಾಮದಿಂದ ಪ್ರಸಿದ್ಧರಾಗಿದ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರು ಕಾದಂಬರಿ, ಸಣ್ಣಕತೆ, ನಾಟಕ, ಪ್ರಬಂಧ, ವ್ಯಕ್ತಿಚಿತ್ರ ಇತ್ಯಾದಿ ಸೃಜನಶೀಲ ಲೇಖಕರಾಗಿ ಎಷ್ಟು ಉನ್ನತ ಹೆಸರು ಗಳಿಸಿರುವರೊ ಅದಕ್ಕಿಂತ ಹೆಚ್ಚಿನ ಸಾಧನೆ ಸಿದ್ಧಿಗಳನ್ನು ಗ್ರಂಥ ಸಂಪಾದನೆ, ಸಂಶೋಧನೆ, ಶಾಸ್ತ್ರ ಸಾಹಿತ್ಯ, ಪಾಂಡಿತ್ಯಗಳಲ್ಲಿ ವಿದ್ವತ್ತು ಗಳಿಸುವಲ್ಲಿ ಯಶಸ್ವಿಯಾಗಿದ್ದರು. ಸಂಗೀತ–ಚಿತ್ರಕಲೆಗಳಲ್ಲಿಯೂ ಪರಿಶ್ರಮ ಉಳ್ಳವರಾಗಿದ್ದರು. ಕವಿರಾಜಮಾರ್ಗ, ಪ್ರಾಚೀನ ಕನ್ನಡ ವ್ಯಾಕರಣಗಳು, ಶ್ರೀ ಕೃಷ್ಣಬಾಲಲೀಲೆ ಮುಂತಾದ ವಿದ್ವದ್‌ಮಾನ್ಯ ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿರುವ ಧೀಮಂತ ನಿಶಿತಮತಿ ಸಾಹಿತಿ ವಿದ್ವಾಂಸರನ್ನು ಕಳೆದುಕೊಂಡು ಕನ್ನಡ ನಾಡು–ನುಡಿ ಅಷ್ಟರಮಟ್ಟಿಗೆ ಬಡವಾಯಿತು. ಶ್ರೀ ಪ್ರತಿಷ್ಠಾನಕ್ಕೆ ಯಾರಿಂದಲೂ ಭರಿಸಲಾಗದಂತಹ ನಷ್ಟವಾಗಿದೆ ಎಂಬುದು ಉತ್ಪ್ರೇಕ್ಷೆಯ ಮಾತಲ್ಲ. ಹತ್ತು ವರ್ಷಗಳಿಂದ ಅಹರ್ನಿಶಿ ಪ್ರತಿಷ್ಠಾನದ ಬೆಳವಣಿಗೆಗೆ ಶ್ರಮಿಸಿದರು. ಇತರರು ಆರೋಗ್ಯಪೂರ್ಣರಾಗಿದ್ದ ಸ್ಥಿತಿಯಲ್ಲಿ 25–30 ವರ್ಷಗಳಲ್ಲಿ ಮಾಡಬಹುದಾದ್ದನ್ನು ಶ್ರೀಯುತರು ಈ ದಶಕದಲ್ಲಿ ಸಾಧಿಸಿ ಸಿದ್ಧಿಗಳಿಸಿದ್ದರು. ಹಲವು ಹತ್ತು ಯೋಜನೆಗಳನ್ನು ಹಾಕಿಕೊಂಡು ಹಗಲೆನ್ನದೆ ರಾತ್ರಿ ಎನ್ನದೆ ಅದಕ್ಕಾಗಿ ದುಡಿದ, ದುಡಿಯುತ್ತಿದ್ದ ಅವರು ಇದ್ದಕ್ಕಿದ್ದಂತೆ ಇಲ್ಲವಾದದ್ದು ಅತೀವ ದುಃಖವನ್ನುಂಟುಮಾಡಿದೆ.

ಮೇ 6, 1990ರಂದು ಶ್ರೀ ಪ್ರತಿಷ್ಠಾನದ ದಶಮಾನೋತ್ಸವ ಸಮಾರಂಭದ ಸಮಾರೋಪ ಉತ್ಸವವನ್ನು ನಡೆಸಿ, ಆ ವೇಳೆಗೆ 10 ವರ್ಷದ ಹಿಂದೆ ಉದ್ಘಾಟಕರಾಗಿ ಆಗಮಿಸಿದ್ದ ರಾಷ್ಟ್ರಕವಿ ಡಾ॥ ಕುವೆಂಪು ಅವರಿಂದಲೇ ಶಿಲಾನ್ಯಾಸ ಮಾಡಿಸಬೇಕೆಂದು ನಿಶ್ಚಯಿಸಿದ್ದರು. ಆ ಕನಸು ನನಸಾಗುವುದಕ್ಕಿಂತ ಮುಂಚೆಯೇ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರೇ ಇಲ್ಲವಾದದ್ದು ವಿಧಿಯ ಅಣಕವೇ ಸರಿ.

ಶ್ರೀಯುತರಲ್ಲಿದ್ದ ಜೀವನಶ್ರದ್ಧೆ, ಉತ್ಸಾಹ, ಪ್ರೀತಿ, ತ್ಯಾಗ, ಪ್ರಾಮಾಣಿಕತನ, ಮುಗ್ಧತೆ, ಏನನ್ನಾದರೂ ಸಾಧಿಸಿಯೇ ತೀರುವೆಯೆಂಬ ಛಲ, ನಿರಂತರ ಕಾರ್ಯಶೀಲತೆ, ಸಮರ್ಪಣ ಮನೋಭಾವ, ಶ್ರಮವಿಲ್ಲದ ದುಡಿಮೆಯಿಂದ ಮಾತ್ರ ಸಂಸ್ಥೆಯ ಏಳಿಗೆ ಸಾಧ್ಯ ಎಂಬ ಆಕಾಂಕ್ಷೆಗೆ ತಕ್ಕ ದುಡಿಮೆ ಎಲ್ಲಿ ಕಂಡೇವು ? ಅವರ ಕತೃಶಕ್ತಿ ನಮಗೆಲ್ಲರಿಗೂ ಮಾರ್ಗದರ್ಶನ ಮಾಡಲಿ. ಇಂಥ ಹಿರಿಯರ ನಿಧನದಿಂದ ಉಂಟಾಗಿರುವ ಅಪಾರ ದುಃಖವನ್ನು ತಾಳಿಕೊಳ್ಳುವ ಶಕ್ತಿಯನ್ನು ದೈವ ಕರುಣಿಸಲಿ ! ಶ್ರೀಯುತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಕಾರ್ಯದರ್ಶಿಗಳು, ಕಾರ್ಯಸಮಿತಿ ಸದಸ್ಯರು.

Karnataka Lochana

Half-Yearly Journal, Published by B.M.Sri. Memorial Foundation, 54, 3rd Cross, Gavipuram Extn, Bangalore-19

Chairman, Editorial Board: Prof. L. S. Sheshagiri Rao

Editor: Prof. (Vidwan) T. Keshava Bhat

Asst. Editor: Sri N. S. Ramaswamy Iyer

Vol. II, III *December 89, June 1990* *No. 2, 3*

Special Issue on Advaitha Seminar

CONTENTS

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ಪತ್ರಿಕೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ೫೪, ೩ನೇ ಅಡ್ಡಬೀದಿ, ಗವಿಪುರ ವಿಸ್ತರಣ, ಬೆಂಗಳೂರು-೧೯

ಸಂಪಾದಕರು : **ಪ್ರೊ॥ ವಿದ್ವಾನ್ ಟಿ. ಕೇಶವಭಟ್ಟ**

ಸಹಾಯಕ ಸಂಪಾದಕರು : **ಶ್ರೀ ಎನ್. ಎಸ್. ರಾಮಸ್ವಾಮಿ ಅಯ್ಯರ್**

ಸಂಪುಟ ೨, ೩ ಡಿಸೆಂಬರ್ ೮೯, ಜೂನ್ ೧೯೯೦ ಸಂಚಿಕೆ ೨, ೩

ಅದ್ವೈತ ವಿಚಾರಗೋಷ್ಠಿ ವಿಶೇಷಾಂಕ

ಪರಿವಿಡಿ

ಪ್ರತಿಷ್ಠಾನಕ್ಕೆ ನೂತನ ಅಧ್ಯಕ್ಷರಾಗಿ ಪ್ರೊ॥ ಎಲ್. ಎಸ್. ಶೇಷಗಿರಿರಾವ್



16-3-90ರಂದು ಪ್ರತಿಷ್ಠಾನದಲ್ಲಿ ನಡೆದ ವಿಶೇಷ ಕಾರ್ಯಕಾರಿ ಸಮಿತಿಯು ಗೌರವಾಧ್ಯಕ್ಷರಾದ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರ ಸೂಚನೆಯ ಮೇರೆಗೆ ಉತ್ಸವ ಸಮಿತಿ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. 12-3-90ರಂದು ಅನಿರೀಕ್ಷಿತವಾಗಿ ನಿಧನರಾದ ಅಧ್ಯಕ್ಷರಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರ ಸ್ಥಾನದಲ್ಲಿ ಪ್ರೊ॥ ಎಲ್. ಎಸ್. ಶೇಷಗಿರಿ ರಾವ್ ಅವರನ್ನು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು. ಪ್ರೊ॥ ಶೇಷಗಿರಿರಾವ್ ಅವರು ಈ ಆಯ್ಕೆಯನ್ನು ಮನ್ನಿಸಿ ಅಧ್ಯಕ್ಷ ಪದವಿಯ ಗೌರವವನ್ನು ಸ್ವೀಕರಿಸಿದ್ದಾರೆ. ಅವರಿಗೆ ಪ್ರತಿಷ್ಠಾನದ ಸಮಸ್ತ ಸದಸ್ಯರ ಪರವಾಗಿ ಕೃತಜ್ಞತೆಯ ವಂದನೆಗಳು.

ಲಕ್ಷ್ಮೇಶ್ವರ ಸ್ವಾಮಿರಾವ್ ಶೇಷಗಿರಿರಾವ್ ಅವರು ನಾಡಿನ ಹೆಸರಾಂತ ಹಿರಿಯ ಸಾಹಿತಿಗಳು. 16-2-1925ರಂದು ಜನನ. ಬೆಂಗಳೂರಿನಲ್ಲಿ ಬಿ.ಎ. ನಾಗಪುರದಲ್ಲಿ ಎಂ. ಎ. ಪದವಿ ಪಡೆದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಸಣ್ಣಕತೆ, ನಾಟಕ, ವಿಮರ್ಶೆ ಮುಂತಾದ ಕ್ಷೇತ್ರಗಳಲ್ಲಿ ಹಲವಾರು ಕೃತಿಗಳನ್ನು ಪ್ರಕಟಿಸಿರುವ ಶ್ರೀಯುತರು ಇಂಗ್ಲಿಷ್‌ನಲ್ಲಿ ಕನ್ನಡ ಸಾಹಿತ್ಯವನ್ನು ಅಧಿಕೃತವಾಗಿ ಪ್ರತಿನಿಧಿಸಬಲ್ಲವರು. ಕನ್ನಡ ಸಾಹಿತ್ಯದ ಹಿರಿಮೆಗರಿಮೆಗಳನ್ನು ಕರ್ನಾಟಕದಿಂದ ಹೊರಕ್ಕೆ ಹರಡಿ ರಾಷ್ಟ್ರಮಟ್ಟದ ಗೌರವವನ್ನು ತಂದುಕೊಡುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ. ಹಲವಾರು ಮೌಲಿಕ ಗ್ರಂಥಗಳ, ಗ್ರಂಥಮಾಲೆಗಳ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ರಾಷ್ಟ್ರೋತ್ಥಾನದ ಭಾರತ ಭಾರತಿ ಪುಸ್ತಕ ಸಂಪದ, ಪತ್ರಿಕಾ ಅಕಡಮಿ ಗ್ರಂಥಗಳು, ಸಾಹಿತ್ಯ ಅಕಡಮಿಯ ಭಾರತೀಯ ಸಾಹಿತ್ಯ ಸಮೀಕ್ಷೆ, ಐಬಿಎಚ್. ಕನ್ನಡ ಇಂಗ್ಲಿಷ್ ನಿಘಂಟು, ಕನ್ನಡದ ಅಳಿವು ಉಳಿವು–ಅವುಗಳಲ್ಲಿ ಕೆಲವು.

ಅದ್ವೈತ

—ಪ್ರೊ|| ಎ. ಎನ್. ಮೂರ್ತಿರಾವ್

ನಾನು ತತ್ತ್ವಶಾಸ್ತ್ರಜ್ಞನಲ್ಲ. ಉಪನಿಷತ್ತುಗಳ ಮೇಲೆ ಆಗಾಗ ಕಣ್ಣು ಹಾಯಿಸಿರಬಹುದಾದರೂ ಆಚಾರ್ಯರ ಭಾಷ್ಯಸಹಿತ ಅವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿಲ್ಲ. 'ಅದ್ವೈತ' ಎಂಬ ಪದವನ್ನು ಕೇಳಿದಾಗ ನನ್ನ ಮನಸ್ಸಿಗೆ ಹೊಳೆದ ಕೆಲವು ಯೋಚನೆಗಳನ್ನು ತಮ್ಮಲ್ಲಿ ಅರಿಕೆ ಮಾಡುತ್ತೇನೆ. ನನ್ನದು ಅಧಿಕಾರ ವಾಣಿಯಲ್ಲ; ನನ್ನ ಮಾತಿಗೆ ಆಚಾರ್ಯರ ಭಾಷ್ಯಗಳ ಆಧಾರವಿಲ್ಲ.

ಸಾಮಾನ್ಯವಾಗಿ ತತ್ತ್ವಶಾಸ್ತ್ರಕ್ಕೆ ಸಂಬಂಧಪಟ್ಟ, ಅದರಲ್ಲೂ ವಿಶ್ವದ ಸ್ವರೂಪಕ್ಕೆ ಸಂಬಂಧಪಟ್ಟ ಕಲ್ಪನೆಗಳನ್ನು—ಅಂದರೆ ವಿಶ್ವವನ್ನು ನಿಂತು ನಡೆಸುವ ದೇವರು ಅಥವಾ ಬೇರೆ ಯಾವುದಾದರೂ ಶಕ್ತಿ; ಆತ್ಮ, ಮತ್ತು ಅದರ ಏಕತ್ವ ಅಥವಾ ಬಹುತ್ವ; ಅದಕ್ಕೂ ವಿಶ್ವಶಕ್ತಿಗೂ ಇರುವ ಸಂಬಂಧ; ಇತ್ಯಾದಿ ಕಲ್ಪನೆಗಳನ್ನು ಕುರಿತ ಮಾತಿನಲ್ಲಿ ಸ್ಪಷ್ಟತೆ ಕಡಮೆ. "ಇದೊಂದು ಗಹನವಾದ, ಗಂಭೀರವಾದ, ಸಾಮಾನ್ಯರಿಗೆ ಎಟುಕದ ಭವ್ಯಕಲ್ಪನೆ" ಎಂಬ ಭಾವನೆಯೇ ಹೆಚ್ಚು. ಆ ಕಲ್ಪನೆಗಳ ಸುತ್ತ ದಿವ್ಯವಾದ ಪ್ರಭಾವಲಯವಿದೆ. ಆದರೆ ಆ ಪ್ರಭೆ ಕಲ್ಪನೆಗಳಿಗೆ ಮಹತ್ವ ಕೊಡುತ್ತದೆಯೇ ಹೊರತು ಸ್ಪಷ್ಟತೆಯನ್ನಲ್ಲ. ಇಂಥ ಕಲ್ಪನೆಗಳಲ್ಲಿ ತತ್ತ್ವಶಾಸ್ತ್ರದ ದೃಷ್ಟಿಯಿಂದ ಬಹು ಮುಖ್ಯವಾದದ್ದೆಂದರೆ 'ಅದ್ವೈತ'.

ಅದ್ವೈತ ಎನ್ನುವುದು 'ಎರಡಲ್ಲ' ಎಂಬ ಭಾವನೆ; ದ್ವೈತ ಎನ್ನುವುದು 'ಎರಡು' ಎಂಬ ಭಾವನೆ, ಈ ಪದಗಳ ಮೂಲಾರ್ಥಕ್ಕೆ ಲೋಪ ಬರದಂತೆ ಅವನ್ನು ಎರಡು ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸಬಹುದು. 1. 'ದೇವರು' ಎಂಬ ಕಲ್ಪನೆಯನ್ನು ಕುರಿತಂತೆ ಬಳಸಬಹುದು. ಕ್ರೈಸ್ತರೂ ಮಹಮ್ಮದೀಯರೂ ದೇವರು ಒಬ್ಬನೇ ಎಂದು ನಂಬಿದ್ದಾರೆ. ನಾವು ಅನೇಕ ದೇವರುಗಳನ್ನು ಪೂಜಿಸುತ್ತೇವಾದರೂ ನಮ್ಮಲ್ಲಿ ಆಲೋಚನಾಪರರಾದವರು ಸಾಮಾನ್ಯ ಜನರ ಮಟ್ಟದಿಂದ ಮೇಲಕ್ಕೇರಿ ದೇವರೆಂದರೆ ಒಬ್ಬನೇ ಎಂದು ಹೇಳುತ್ತಾರೆ, 'ಸೇಶ್ವರೋಪನಿಷತ್ತು' ಎಂದು ಹೆಸರು ಪಡೆದಿರುವ ಶ್ವೇತಾಶ್ವತರೋಪನಿಷತ್ತಿನ ಈ ಮಂತ್ರ ಅದಕ್ಕೆ ಉದಾಹರಣೆ:

ಏಕೋ ದೇವಸ್ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।

27-1-89ರ ದಿನ ಬಿ.ಎಂ.ಶ್ರೀ. ಪ್ರತಿಷ್ಠಾನ ಏರ್ಪಡಿಸಿದ್ದ 'ಕನ್ನಡ ಸಾಹಿತ್ಯದಲ್ಲಿ ಅದ್ವೈತ' ಎಂಬ ವಿಚಾರಗೋಷ್ಠಿಯನ್ನು ಉದ್ಘಾಟಿಸುತ್ತ ಮಾಡಿದ ಭಾಷಣ.

ಕರ್ಮಾಧ್ಯಕ್ಷಸ್ಸರ್ವಭೂತಾಧಿವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥

[ದೇವರು ಒಬ್ಬನೇ; ಅವನು ಎಲ್ಲ ವಸ್ತುಗಳಲ್ಲೂ ಅಡಗಿದ್ದಾನೆ: ಎಲ್ಲದರಲ್ಲೂ ವ್ಯಾಪಿಸಿದ್ದಾನೆ; ಎಲ್ಲದರೊಳಗಿರುವ ಆತ್ಮ; ಕರ್ಮದ ಮೇಲ್ವಿಚಾರಣೆ ನಡೆಸುವವನು ಅವನೇ; ಅವನು ಜಗತ್ತಿನ ಎಲ್ಲ ವ್ಯಾಪಾರವನ್ನೂ ಸಾಕ್ಷಿಯಾಗಿ ನೋಡುತ್ತಿದ್ದಾನೆ: ಅವನೇ ಜಗತ್ತಿನ ಶಕ್ತಿ; ಅವನು ತಾನೇತಾನಾಗಿದ್ದಾನೆ; ಅವನಿಗೆ ಗುಣದ ಲೇಪವಿಲ್ಲ.]

ಈ ವ್ಯಕ್ತಿಯನ್ನು 'ಈಶ್ವರ' ಎಂದು ಕರೆಯೋಣ. ಈ ಮಂತ್ರದ ಪ್ರಕಾರ ಸರ್ವಭೂತಗಳು ಬೇರೆ, ಅವುಗಳಲ್ಲಿ ಗೂಢನಾಗಿರುವ ಈಶ್ವರ ಬೇರೆ. ಸರ್ವಭೂತಗಳು ಬೇರೆ, ಅವುಗಳ ಅಂತರಾತ್ಮ ಬೇರೆ; ಸಾಕ್ಷಿ ಬೇರೆ, ಅವನು ನೋಡುತ್ತಿರುವ ಜಗತ್ತು ಬೇರೆ. 'ಈಶ್ವರ' ಎಂಬ ಕಲ್ಪನೆ ಬಂದೊಡನೆ ಅದರ ಜೊತೆಗೆ ದ್ವೈತವೂ ಬರುತ್ತದೆ. ದೈವಶಾಸ್ತ್ರಜ್ಞರು ಮೆಟಫಿಸಿಕ್ಸ್‌ನ (Metaphysics –ಇನ್ನು ಮುಂದೆ ಈ ಪದಕ್ಕೆ ಬದಲಾಗಿ 'ವೇದಾಂತ' ಎಂಬ ಪದವನ್ನು ಬಳಸುತ್ತೇನೆ) ಯೋಚನೆಯೇ ಇಲ್ಲದೆ ಈ ಮಂತ್ರವನ್ನು ಹೇಳಿಕೊಳ್ಳುವುದು ಸಾಧ್ಯ. ದ್ವೈತಿಗಳು ಅದನ್ನು ತಮ್ಮ ವೇದಾಂತಕ್ಕೆ ಆಧಾರವಾಗಿ ಬಳಸಿಕೊಳ್ಳುವುದೂ ಸಾಧ್ಯ – ಸೃಷ್ಟಿ ಬೇರೆ, ಸೃಷ್ಟಿಕರ್ತ ಬೇರೆ, ಜೀವಾತ್ಮ ಬೇರೆ, ಪರಮಾತ್ಮ ಬೇರೆ ಎಂಬ ತತ್ತ್ವವನ್ನು ಸಮರ್ಥಿಸುವುದಕ್ಕಾಗಿ. ಈಶ್ವರ ಈ ಜಗತ್ತಿನ ಹೊರಗೆ, ಅದನ್ನು ಮೀರಿ, ಮೇಲೆ ಇದ್ದಾನೆ (transcendent) ಎಂದರೂ ಸರಿಯೆ: ಅದರೊಳಗೇ ಇದ್ದಾನೆ (immanent) ಎಂದರೂ ಸರಿಯೆ— ದ್ವೈತ ಉಳಿದೇ ಉಳಿಯುತ್ತದೆ. ಪರಮಾತ್ಮ ನಮ್ಮ ಹೃದಯದಲ್ಲೇ ಇದ್ದಾನೆ ಎಂಬ ಅರ್ಥ ಬರುವ ಮಾತನ್ನು ನಾವೆಲ್ಲ ಆಡುತ್ತಲೇ ಇರುತ್ತೇವೆ. ಯೇಸು (Jesus) 'The Kingdom of God is within you' (ದೇವರ ರಾಜ್ಯ ನಿಮ್ಮೊಳಗೇ ಇದೆ) ಎಂದು ಹೇಳಿದ. ಆದರೂ 'ಈಶ್ವರ ಈ ಪ್ರಪಂಚದ ಮಿತಿಯನ್ನು ಮೀರಿ ಮೇಲಿದ್ದಾನೆ' ಎಂಬುದೇ ನಮ್ಮಲ್ಲಿ ಹೆಚ್ಚಾಗಿರುವ ಭಾವನೆ. ಅವನು ನಮ್ಮೊಳಗೇ ಇದ್ದಾನೆ ಎಂಬ ಭಾವನೆ ಥಿಯರಿಯಾಗಿ ಉಳಿಯುತ್ತದೆ. ನಾವು ಅವನಿಗಾಗಿ ದೂರದ ವೈಕುಂಠವನ್ನು ನಿರ್ಮಿಸುತ್ತೇವೆ; ರತ್ನಸಿಂಹಾಸನವನ್ನು ಹಾಕುತ್ತೇವೆ; ಪೀತಾಂಬರವನ್ನು ಉಡಿಸಿ ಕಿರೀಟಕೌಸ್ತುಭಾದಿಗಳ ಅಲಂಕಾರ ಮಾಡುತ್ತೇವೆ. ಅವನು ನಮ್ಮ ರಕ್ಷಕನಾದ್ದರಿಂದ 'ನಮಗಿಂತ ಎತ್ತರದಲ್ಲಿದ್ದಾನೆ' ಎಂಬ ಭಾವನೆ ಸ್ವಾಭಾವಿಕ.

ತತ್ತ್ವಶಾಸ್ತ್ರಜ್ಞರು ಉಪನಿಷತ್ತುಗಳ ಮಂತ್ರಗಳನ್ನು 'ಪ್ರಮಾಣ' ಎಂದು ಭಾವಿಸುತ್ತಾರಾದ್ದರಿಂದ ತಮ್ಮ ಅನುಕೂಲಕ್ಕಾಗಿ ಅವುಗಳ ಪದಗಳನ್ನೋ ಅರ್ಥವನ್ನೋ ಸ್ವಲ್ಪ ತಿರುಚಿ ತಮ್ಮ ತತ್ತ್ವದ ಪರವಾಗಿ ವ್ಯಾಖ್ಯಾನ ಮಾಡುವುದು ಅಪರೂಪವೇನಲ್ಲ. ಉದಾಹರಣೆಗೆ ನಾರಾಯಣ ಸೂಕ್ತದ ಈ ಮಂತ್ರವನ್ನು ನೋಡಿ :

ಯಚ್ಚ ಕಿಂಚಿತ್ ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥

[ಈ ವಿಶ್ವದಲ್ಲಿ ನಾವು ನೋಡುವುದೆಲ್ಲವನ್ನೂ ಕೇಳಿರುವುದೆಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡು ನಿಂತಿದ್ದಾನೆ—ನಾರಾಯಣ.]

ಈ ಶ್ಲೋಕಕ್ಕೆ 'ವ್ಯಾಪಿಸಿರುವವನು ಬೇರೆ; ವ್ಯಾಪ್ತವಾಗಿರುವುದು ಬೇರೆ' ಎಂದು ಅರ್ಥ ಮಾಡಬಹುದು. ಅದು ದ್ವೈತ; 'ಪ್ರಪಂಚದ ಕಣಕಣದಲ್ಲೂ ಒಳಗೂ ಹೊರಗೂ ಅವನಿದ್ದಾನೆ ಎಂದ ಮೇಲೆ, ಅವನಿಲ್ಲದ್ದು ಏನೂ ಇಲ್ಲ ಎಂದಂತಾಯಿತು. ಅರ್ಥಾತ್, ಎಲ್ಲವೂ ಅವನೇ' ಎಂದೂ ಅರ್ಥ ಮಾಡಬಹುದು—ಇದು ಅದ್ವೈತ.

ದೇವರನ್ನು ಮಾತ್ರ ಕುರಿತದ್ದು — ಮೇಲೆ ಹೇಳಿದ ಅದ್ವೈತ. ಅದನ್ನು 'ಈಶ್ವರಾದ್ವೈತ' (theological monism) ಎಂದು ಕರೆಯೋಣ. ಅದಕ್ಕೆ ವೇದಾಂತದ ಸಂಬಂಧವನ್ನು ಕಲ್ಪಿಸಬಹುದಾದರೂ ಒಟ್ಟಿನಲ್ಲಿ, ಅದು ದೈವಶಾಸ್ತ್ರಕ್ಕೆ ಸಂಬಂಧಪಟ್ಟದ್ದು. ಕೆಲವರು 'ಅದ್ವೈತ' ಎಂಬ ಪದವನ್ನು 'ಈಶ್ವರಾದ್ವೈತ' ಎಂದೇ ಭಾವಿಸುತ್ತಾರೆ ಎಂಬುದು ನನ್ನ ಅನುಭವಕ್ಕೆ ಬಂದಿದೆ. ವಾಸ್ತವವಾಗಿ ವೇದಾಂತಿಯ ಅದ್ವೈತಕಲ್ಪನೆ ಬೇರೆ. ಆ ಮಟ್ಟದಲ್ಲಿ ವೇದಾಂತಿಗೆ ಈಶ್ವರ (personal god) ಅವಶ್ಯಕವಲ್ಲ. ಸೃಷ್ಟಿ, ಸೃಷ್ಟಿಕರ್ತ—ಇವು ಬೇರೆ ಬೇರೆಯಲ್ಲ. ಸೃಷ್ಟಿ ಎಂಬ ಕಾರ್ಯ ಯಾವುದೋ ಒಂದು ಘಳಿಗೆಯಲ್ಲಿ ನಡೆಯಿತು ಎಂದು ಭಾವಿಸುವುದೇ ತಪ್ಪು. ಇಡೀ ವಿಶ್ವ ಪರಬ್ರಹ್ಮ ಸ್ವರೂಪದಲ್ಲಿ ಎಲ್ಲ ಕಾಲದಲ್ಲೂ ಇದ್ದದ್ದೇ. ಬ್ರಹ್ಮ—ಒಂದೇ ಒಂದಾದ ಬ್ರಹ್ಮ, ತಾನು ಬಹುವಾಗಬೇಕು ಎಂದುಕೊಂಡಿತು, ಬಹುವಾಯಿತು. ಬಹುವಾದದ್ದು ಆಗ ತಾನೇ ಹೊಸದಾಗಿ ಸೃಷ್ಟಿಯಾದ ವಸ್ತುವಲ್ಲ. ಅನಂತಕಾಲದಲ್ಲೂ ಇದ್ದೇ ಇದ್ದ ಬ್ರಹ್ಮ. ನಮಗೆ ಬಹುವಾಗಿ ಕಾಣುವುದೆಲ್ಲ ಆ ಏಕೈಕ ಬ್ರಹ್ಮನ ಅಭಿವ್ಯಕ್ತಿ–manifestation. ಬಹುತ್ವ ಕಾಣುತ್ತಿದೆ ಎಂದುಕೊಳ್ಳುವ ನಾನೂ ಬ್ರಹ್ಮನೇ. ಬ್ರಹ್ಮ ತಾನಾಗಿ ತಂದುಕೊಂಡ ಲೀಲೆಯಿಂದಾಗಿ ನನ್ನ ನಿಜಸ್ವರೂಪ ನನಗೆ ಮಸುಕಾಗಿದೆ. ಅದನ್ನು ಸ್ಪಷ್ಟಪಡಿಸಿಕೊಳ್ಳುವುದೇ ಜ್ಞಾನ; ಅದೇ ಮೋಕ್ಷ. ಆ ಬ್ರಹ್ಮಕ್ಕೆ ನಾವು ಬೇಕಾದ ಹೆಸರಿಟ್ಟುಕೊಳ್ಳಬಹುದು; ಅದನ್ನು ನಾರಾಯಣ ಎಂದೋ, ಶಿವ ಎಂದೋ ಕರೆಯಬಹುದು. ಆಗ ನಾರಾಯಣ ಅಥವಾ ಶಿವನೇ ಬ್ರಹ್ಮ. ಅದಕ್ಕೆ ಹೆಸರು ಕೊಟ್ಟ ನಾನೂ ಬ್ರಹ್ಮ. ಚಿದಾನಂದರೂಪಶ್ಶಿವೋಽಹಂ ಶಿವೋಽಹಂ (ನಾನೇ ಚಿದಾನಂದರೂಪನಾದ ಶಿವ).

ಶಿವೋಽಹಂ ಎಂದ ಶಂಕರಾಚಾರ್ಯರೇ 'ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಂ' ಎಂದೂ ಹೇಳಬಹುದು; 'ಭಜ ಭಜ ಶ್ರೀಪಾರ್ವತೀವಲ್ಲಭಂ' ಎಂದು ನಮಗೆ ಉಪದೇಶ ಮಾಡಬಹುದು. 'ಇದು ದ್ವೈತವಲ್ಲವೆ!', ಎಂದು ಆಕ್ಷೇಪಿಸಿದರೆ ('ಭಜಿಸು' ಎಂದರೆ ಭಜಿಸುವವನೇ ಬೇರೆ, ಭಜಿಸಲ್ಪಟ್ಟವನು ಬೇರೆ !) "ಅದೆಲ್ಲ 'ಸೋಽಹಂ ಭಾವೇನ' (ಅವನೇ ನಾನು) ಆಡುವ ಮಾತು, ಮಾಡುವ ಪೂಜೆ. ಬ್ರಹ್ಮ ಎನ್ನುವುದು ಯಾವ ಉದಾತ್ತತೆಯ ಕಲ್ಪನೆಯೋ ಅದನ್ನು ಮೂರ್ತವಾಗಿ ಮಾಡಿ, ಮನನ ಮಾಡಿ, ಆ ಮೂಲಕ 'ಅದು ನಾನೇ' ಎಂಬ ಜ್ಞಾನವನ್ನು ಪಡೆಯಬೇಕು" ಎಂದು ವಿವರಣೆ ಕೊಡಬಹುದು.

ಈ ಏಕೈಕ ಬ್ರಹ್ಮನ ಸ್ವರೂಪವೇನು ? ಅದು ನಮಗೆ ತಿಳಿಯದು : ಅದನ್ನು ತಿಳಿದರೆ ಎಲ್ಲವನ್ನೂ ತಿಳಿದಿದ್ದೇನೆ ಎಂದುಕೊಳ್ಳಬಹುದು. ಆದರೆ ಈಗ ಅದು ತಿಳಿಯದು. 'ನ ತತ್ರ ಚಕ್ಷುರ್ಗಚ್ಛತಿ, ನ ವಾಗ್ಗಚ್ಛತಿ, ನೋ ಮನಃ ; ನ ವಿದ್ಮೋ ನ ವಿಜಾನೀಮೋ ಯಥೈದನುಶಿಷ್ಯಾತ್' (ಕಣ್ಣು ಅದನ್ನು ಕಾಣಲಾರದು, ವಾಕ್ ಅದನ್ನು ಗ್ರಹಿಸಲಾರದು, ಮನಸ್ಸೂ ಗ್ರಹಿಸಲಾರದು ; ನಾವು ಅದನ್ನು ತಿಳಿದಿಲ್ಲ, 'ಅದು ಹೀಗೆ' ಎಂದು ಇತರರಿಗೆ ಹೇಳಲಾರೆವು). ಅದಕ್ಕೆ ನಾಮವಿಲ್ಲ, ರೂಪವಿಲ್ಲ, ಗುಣಗಳಿಲ್ಲ. ಅವೆಲ್ಲ ಇರುವುದು ಸಾಧ್ಯವೂ ಅಲ್ಲ. ಏಕೆಂದರೆ ಬ್ರಹ್ಮ ಅನಂತ, ಅಸೀಮ, infinite. ಅದಕ್ಕೆ ಯಾವುದಾದರೂ ಗುಣವನ್ನು ಆರೋಪಿಸಿದರೆ ಕೂಡಲೆ ಅದು finite (ಸೀಮಿತ) ಆಗುತ್ತದೆ ; ಅದರ ಬ್ರಹ್ಮತ್ವಕ್ಕೆ ಚ್ಯುತಿ ಬರುತ್ತದೆ. ಉದಾ : ಪರಿಪೂರ್ಣತೆ ಎಂಬ ಗುಣವನ್ನು ಆರೋಪಿಸಿದರೆ, ಆ ಕ್ಷಣವೇ 'ಅದಕ್ಕೆ ಬೆಳವಣಿಗೆ ಸಾಧ್ಯವಿಲ್ಲ' ಎಂದಂತಾಗುತ್ತದೆ. ಬೆಳವಣಿಗೆ ಸಾಧ್ಯವಾದರೆ ಅದು ಪರಿಪೂರ್ಣವಲ್ಲ. ಅದು ವೃತ್ತದಂತೆ. ಸರಳರೇಖೆಯ ಉದ್ದವನ್ನು ಬೆಳೆಸುವಂತೆ ವೃತ್ತದ ವೃತ್ತತ್ವವನ್ನು ಬೆಳೆಸಲಾಗುವುದಿಲ್ಲ.

ಅಂದಮೇಲೆ, ಅದ್ವೈತ ನಿಜವಾದರೆ ಸಗುಣ ಸಾಕಾರ ಬ್ರಹ್ಮವು ನಾವು ಅನುಕೂಲಕ್ಕಾಗಿ ಮಾಡಿಕೊಂಡ ಕಲ್ಪನೆ, ಅಷ್ಟೆ. ಸಗುಣಬ್ರಹ್ಮದ ಉಪಾಸನೆ ನಿಜವಾಗಿ ಏಕೈಕ ಈಶ್ವರನ–personal godನ–ಉಪಾಸನೆಯೇ. ಇಂಥ ಉಪಾಸನೆಯಲ್ಲಿ ದ್ವೈತ ಅನಿವಾರ್ಯವಾಗಿ ಬಂದೇ ಬರುತ್ತದೆ. ಅದನ್ನು ನಾವು ತಿರಸ್ಕಾರದಿಂದ ಕಾಣಬೇಕಾಗಿಲ್ಲ. ನಿರ್ಗುಣ ನಿರಾಕಾರ ಅಸೀಮ ಅನಂತ—ಇವೆಲ್ಲ ನಕಾರಾತ್ಮಕ ಪದಗಳೆಂಬುದನ್ನು ಗಮನಿಸಬೇಕು—ಇಂಥ ಬ್ರಹ್ಮವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಾಗದಿದ್ದಾಗ, ನಮಗೆ ಯಾವುದು ಅತ್ಯಂತ ಉದಾತ್ತ ಎನ್ನಿಸುತ್ತದೆಯೋ, ಅತ್ಯಂತ 'ಬೃಹತ್' (ದೊಡ್ಡದು) ಎನ್ನಿಸುತ್ತದೆಯೋ ಆ ಗುಣವನ್ನುಳ್ಳ ಈಶ್ವರನನ್ನು ಕಲ್ಪಿಸಿಕೊಳ್ಳುತ್ತೇವೆ. ಆ ಈಶ್ವರನ ಉಪಾಸನೆ ನಿಜವಾಗಿ ಉದಾತ್ತತೆಯ ಮನನ, ಧ್ಯಾನ. ಅವನ ಆರಾಧನೆಯು ಬ್ರಹ್ಮವನ್ನು ತಿಳಿಯುವ ಪ್ರಯತ್ನ ಎಂದು ಭಾವಿಸಬಹುದು. ಅಂಥ ಅರ್ಚನೆಯೇ ಸಾರ್ಥಕವಾದ ಅರ್ಚನೆ. ಅದು ದ್ವೈತದಿಂದ ಅದ್ವೈತಕ್ಕೆ ಏರಲು ನಾವು ನಿರ್ಮಿಸಿಕೊಂಡ ಮೆಟ್ಟಿಲು.

ನನ್ನ ಮಟ್ಟಿಗೆ ಹೇಳುವುದಾದರೆ, ದೈವಶಾಸ್ತ್ರದ ದ್ವೈತಾದ್ವೈತಗಳು ಪ್ರಸಕ್ತವೇ ಅಲ್ಲ—ನನಗೆ ಈಶ್ವರನಲ್ಲಿ (personal godನಲ್ಲಿ) ನಂಬಿಕೆಯೇ ಇಲ್ಲವಾದ್ದರಿಂದ. ಆದರೆ ವೇದಾಂತದ ಅದ್ವೈತ ನನ್ನನ್ನು ಆಕರ್ಷಿಸಿದೆ. ನಾವು–ಎಂದರೆ ಮನುಷ್ಯರು, ಎಲ್ಲ ಪ್ರಾಣಿಗಳು, ಜೀವವಿಲ್ಲದಂತೆ ತೋರುವ ಎಲ್ಲ ವಸ್ತುಗಳು—ಎಲ್ಲವೂ ಬ್ರಹ್ಮ. ನಮ್ಮ ಕಣ್ಣಿಗೆ ಕಾಣುವ ಬಹುತ್ವ ನಿಜವಾಗಿ ಆ ಬ್ರಹ್ಮ ತನ್ನನ್ನು ಪ್ರಕಟಿಸಿಕೊಳ್ಳುವ ರೀತಿ. It is all the manifestation of the one and only Supreme.

(ಈ ವಿಶ್ವವೆಲ್ಲ ನಾರಾಯಣನ ದೇಹ ಎನ್ನುವ ಕಲ್ಪನೆಯೂ ಕೆಲವರಲ್ಲಿದೆ; ಅದು ಅದ್ವೈತಕ್ಕೆ ಹತ್ತಿರ ಬರುವ ಕಲ್ಪನೆ) ನಮ್ಮ ಮುಖ ಕೆಂಪೇರುವುದು, ಸಪ್ಪೆಯಾಗಿ ಕಾಣುವುದು, ನಾವು ದುಃಖದಿಂದ ಸೊರಗುವುದು, ಉತ್ಸಾಹದಿಂದ ಓಲಾಡುವುದು, ಇವೆಲ್ಲ ಹೇಗೆ ನಮ್ಮ ವ್ಯಕ್ತಿತ್ವದ (ನಾನು ಆತ್ಮ ಎಂಬ ಪದವನ್ನು ಬಳಸಲೊಲ್ಲೆ!) ಅಭಿವ್ಯಕ್ತಿವಿಧಾನವ್ರೋ, ಹಾಗೇಯೇ ಈ ವಿಶ್ವವೆಲ್ಲ, ಅದರ ವ್ಯಾಪಾರವೆಲ್ಲ, ಪರವಸ್ತು ತನ್ನನ್ನು ಪ್ರಕಟಿಸಿಕೊಳ್ಳುವ ವಿಧಾನ–manifestation.

ಅದ್ವೈತ ಕೇವಲ ಇಂದ್ರಿಯಗೋಚರವಾದ ಪ್ರಪಂಚಕ್ಕೂ ಇಂದ್ರಿಯ ವ್ಯಾಪಾರಗಳಿಗೂ ಸೀಮಿತವಾಗಬಾರದು. ಮೌಲ್ಯಪ್ರಪಂಚವೊಂದಿದೆ. ಮೌಲ್ಯ ಗಳಿಲ್ಲದೆ ಮಾನವ ಬದುಕಲಾರ. ಆದರೆ ಈ ಪ್ರಪಂಚದಲ್ಲಿ–ಇಹದಲ್ಲಿ, phenomenal ಪ್ರಪಂಚದಲ್ಲಿ – ಜೀವೋದ್ಧಾರಕ ಮೌಲ್ಯಗಳಲ್ಲದೆ ಜೀವನಾಶಕ ಪ್ರವೃತ್ತಿ ಗಳೂ ಇವೆ. ದಯೆ, ಕರುಣೆ, ಅಹಿಂಸೆ, ಪ್ರೇಮ, ಮುಂತಾದವುಗಳ ಜೊತೆಗೆ –ಅನೇಕ ವೇಳೆ ಈ ಘನ ಮೌಲ್ಯಗಳನ್ನು ಹೊರದೂಡಿ!—ಸ್ವಾರ್ಥ, ಅದರೊಡನೆ ಬರುವ ಕ್ರೋಧ ಮದಮಾತ್ಸರ್ಯಗಳು, ಕೊಲೆಗಡುಕತನ, ಮುಂತಾದವೂ ನಮ್ಮಲ್ಲಿ ಜಾಗ್ರತವಾಗಿರುತ್ತವೆ. ಇವೆಲ್ಲಕ್ಕೂ ಉಗಮಸ್ಥಾನ, ಮೂಲ, ಒಂದೇ ಆಗಿರಬೇಕು. ಭಗವಂತ ಎಲ್ಲವನ್ನೂ ಸೃಷ್ಟಿಸಿದ ಎನ್ನುವ ದ್ವೈತಿಗಳು ಇದನ್ನು ಒಪ್ಪಬೇಕಾಗುತ್ತದೆ. ಒಳ್ಳೆಯ ಪ್ರವೃತ್ತಿಗಳನ್ನು ಮಾತ್ರ ದೇವರು ಕೊಟ್ಟ, ಕೆಟ್ಟದ್ದನ್ನು ನಾವು ಸೃಷ್ಟಿಸಿ ಕೊಂಡೆವು, ಎನ್ನುವುದು ತರ್ಕಬದ್ಧವಾದ ಮಾತಲ್ಲ.

ಅದ್ವೈತಿಗಳಂತೂ ಮೇಲೆ ಹೇಳಿದ್ದನ್ನು ಅನಿವಾರ್ಯವಾಗಿ ಒಪ್ಪಲೇಬೇಕಾಗುತ್ತದೆ. ವಿಶ್ವದಲ್ಲಿ ಒಂದಲ್ಲದೆ ಎರಡಿಲ್ಲ ಎಂದ ಮೇಲೆ ಆ ಒಂದರಲ್ಲಿ (ಬ್ರಹ್ಮದಲ್ಲಿ) ಒಳ್ಳೆಯದು ಕೆಟ್ಟದ್ದು ಎರಡೂ ಇರಲೇಬೇಕು – ಅದರ ಭಾಗವಾಗಿ; ಸುಖ ಸಂಕಟ. ಎರಡೂ ಇರಬೇಕು. ವಿಶ್ವವ್ಯವಸ್ಥೆ ಒಳ್ಳೆಯದು–ಕೆಟ್ಟದ್ದು, ಸುಖ–ಸಂಕಟ ಎಂಬ ದ್ವಂದ್ವ ಗಳನ್ನು ಮೀರಿದ್ದು ಎಂದು ಕೆಲವರು ಹೇಳುವುದುಂಟು; ಆ ಉನ್ನತ ಮಟ್ಟದಲ್ಲಿ ಸಂಕಟ ಸಂಕಟವೇ ಅಲ್ಲ ಎನ್ನುವವರೂ ಉಂಟು. ಹೀಗೆ ವಾದಿಸುವವರು ಸಂಕಟ ವನ್ನು ಅನುಭವಿಸಿದವರಲ್ಲ; ಅಥವಾ ಅನುಭವಿಸಿದ್ದರೂ ಅದನ್ನು ಮರೆತು ಆತ್ಮ ವಂಚನೆ ಮಾಡಿಕೊಳ್ಳುತ್ತಿರುವ ಜನ. ಸುಖ–ಸಂಕಟ, ಒಳ್ಳೆಯದು–ಕೆಟ್ಟದ್ದು—ಎಲ್ಲ ಬ್ರಹ್ಮದ ಅವಿಭಾಜ್ಯ ಭಾಗ ಎನ್ನುವುದೇ ಸರಿ.

ಹಾಗಾದರೆ ಬೇಕಾದ್ದು ಬೇಡದ್ದು ಎಲ್ಲವನ್ನೂ ಒಳಗೊಂಡ ಈ ಏಕೈಕ ವಸ್ತು ವಿದೆಯಲ್ಲ, ಅದರಿಂದ ನಮಗಾಗುವ ಪ್ರಯೋಜನವೇನು? ಈ ಪ್ರಶ್ನೆಯೇ ಅಸಂಬದ್ಧ. ಅದನ್ನು ಕೇಳಿದೊಡನೆಯೇ ಅದ್ವೈತ ಹಾರಿಹೋಗಿ ದ್ವೈತ ನುಗ್ಗಿ ಬರುತ್ತದೆ. ಪ್ರಯೋಜನ ಕೊಡುವುದು ಒಂದು, ಪಡೆಯುವುದು ಮತ್ತೊಂದು; — ಅದು

ಸಾಧ್ಯವಲ್ಲ. ಸೋऽಹಂ—ಅದು ನಾನೇ, ನಾನೇ ಅದು! ಆದ್ದರಿಂದ ನಮ್ಮಲ್ಲಿ ಇರುವ ಕೇಡನ್ನು ನಾವೇ ಸರಿಪಡಿಸಿಕೊಳ್ಳಬೇಕು—ಬೇರೊಬ್ಬರು ಇಲ್ಲವೇ ಇಲ್ಲವಾದ್ದರಿಂದ. ಪರಬ್ರಹ್ಮ ತಾನು ಪ್ರಕಟಗೊಳ್ಳಲು ಮಾಡಿಕೊಂಡಿರುವ ವ್ಯವಸ್ಥೆಯಲ್ಲಿ ಅದರ ಪ್ರತಿಯೊಂದು ಅಂಶವೂ ಮೇಲಕ್ಕೆ ಏರುವ ಪ್ರಯತ್ನ ಮಾಡುತ್ತಲೇ ಇರಬೇಕು.

"ಇದೇನು ವಿಚಿತ್ರ? ಪರಬ್ರಹ್ಮನಲ್ಲಿ ಅನಪೇಕ್ಷಣೀಯವಾದ. ಸರಿಪಡಿಸಬೇಕಾದ. ಇನ್ನೂ ಬೆಳೆಯಬೇಕಾದ. ಭಾಗ ಇದೆ ಎನ್ನುತ್ತೀರಲ್ಲ? ಇದು ಅಕ್ಷಮ್ಯ ಅಪರಾಧ" ಎಂಬ ಆಕ್ಷೇಪಣೆ ಬರಬಹುದು. ಬಂದರೆ ನಾನು ಅಪರಾಧಿ ಎಂದು ಒಪ್ಪಿಕೊಳ್ಳುತ್ತೇನೆ. ನನ್ನ ಯೋಚನೆ ಹರಿದಿರುವುದು ಹಾಗೆಯೇ.

ಸರಿಪಡಿಸಿಕೊಳ್ಳುವ ಕೆಲಸ, ಬೆಳೆಯುವ ಕೆಲಸ, ಸಾಧ್ಯವೆ? ಸಾಧ್ಯ ಎಂದು ತೋರುತ್ತದೆ. ಮಿಲಿಯಗಟ್ಟಲೆ ವರ್ಷಕಾಲ ಜೀವ ವಿಕಾಸವಾಗಿರುವ ರೀತಿಯನ್ನು ನೋಡಿದರೆ ಹೇಗೋ ಅದು ಉತ್ತಮಗೊಳ್ಳುತ್ತಿದೆ ಎನ್ನಿಸುತ್ತದೆ. ಪರಬ್ರಹ್ಮ ಪ್ರಕಟಗೊಳ್ಳುವ—'manifest' ಆಗುವ—ವ್ಯವಸ್ಥೆಯಲ್ಲಿ ಏಕಕೋಶದ ಜೀವಿಯಿಂದ ಮಾನವನವರೆಗೂ ವಿಕಾಸ ಸಾಗಿದೆ. ನಾನು ಬೆಳವಣಿಗೆ ಸಾಧ್ಯ ಎಂದದ್ದಕ್ಕೆ ಇದೇ ಸಾಕ್ಷ್ಯ. 'ಪರಬ್ರಹ್ಮ ಉದ್ದೇಶಪೂರ್ವಕವಾಗಿ ಮಾನವನನ್ನು ತನ್ನ ಒಂದು ಅಂಶವಾಗಿ ಬೆಳೆಸಿತು' ಎಂದು ನಾನು ಹೇಳುತ್ತಿಲ್ಲ. ಉದ್ದೇಶವಿತ್ತು ಎನ್ನುವುದಕ್ಕೆ ನಿರ್ದುಷ್ಟ ಸಾಕ್ಷ್ಯ ಸಿಕ್ಕುವುದಿಲ್ಲ. ಆದರೆ ಉದ್ದಿಷ್ಟವಾಗಿಯೋ ಅನುದ್ದಿಷ್ಟವಾಗಿಯೋ ನಮ್ಮ ಗತಿ ಮೇಲುಮುಖವಾಗಿದೆ. ಕೆಳಮುಖವಾದಂತಿದ್ದರೂ ಒಟ್ಟಿನಲ್ಲಿ ಮೇಲುಮುಖ ಎಂದು ಹೇಳಬಹುದು. ಮಾನವನ ಕೈಬೆರಳುಗಳು ಪದಾರ್ಥಗಳನ್ನು ಹಿಡಿಯಲು ಅನುಕೂಲವಾಗುವಂತೆ (prehensile ಗುಣವನ್ನು ತಂದುಕೊಂಡು) ಬೆಳೆದವು. ಮೊದಮೊದಲು ಅವನ್ನು ಬಳಸಿದ್ದು ಮರ ಹತ್ತುವುದಕ್ಕಾಗಿ, ತಿನ್ನುವ ಪದಾರ್ಥಗಳನ್ನು ಹಿಡಿಯುವುದಕ್ಕಾಗಿ, ಮೈ ಕೆರೆದುಕೊಳ್ಳುವುದಕ್ಕಾಗಿ. ಈಗ ಮಾನವ ಅದೇ ಹಿಡಿಯುವ ಗುಣವನ್ನು—prehensile ಗುಣವನ್ನು—ಬಳಸಿ ವೀಣೆಯನ್ನು ನುಡಿಸುತ್ತಿದ್ದಾನೆ. ನಾದಸೌಂದರ್ಯವನ್ನು ನಿರ್ಮಿಸುತ್ತಿದ್ದಾನೆ. 'ನನ್ನ ಹಸಿವನ್ನು ತೀರಿಸಿಕೊಳ್ಳುವುದಕ್ಕೆ ಏನು ಮಾಡಲಿ' ಎಂದಷ್ಟೇ ಯೋಚಿಸುತ್ತಿದ್ದ ಮಿದುಳು ಈಗ ಅದ್ವೈತದ, ವಿಶ್ವವ್ಯವಸ್ಥೆಯ ವಿಷಯ ಯೋಚಿಸುತ್ತಿದೆ: ಗುರುತ್ವಾಕರ್ಷಣ ಶಕ್ತಿಯನ್ನು ಗುರುತಿಸಿದೆ: ಅಣುವನ್ನು ಸೀಳಿದೆ: ವಿಶ್ವಮಾನವನಾಗಬಹುದು ಎಂಬ ಯೋಚನೆಯಾದರೂ ಅವನಿಗೆ ಬಂದಿದೆ. ಕೇವಲ ಎರಡು ಮೂರು ಮಿಲಿಯ ವರ್ಷಗಳಲ್ಲಿ ಅವನು ಹೀಗಾದರೂ ಆಗಬಹುದು! ಯುಗದಿಂದ ಯುಗಕ್ಕೆ ಕಾಲ (ಅಂದರೆ ಮಾನವ) ಕೆಡುತ್ತ ಬಂದಿದೆ ಎನ್ನುವ ಮಾತು ನಿಜವಲ್ಲ. ಹಿರಣ್ಯಾಕ್ಷ ಹಿರಣ್ಯಕಶಿಪು ರಾವಣಾದಿಗಳ ಕೇಡಿಗತನಕ್ಕೆ ಕಲಿಯುಗದ ಸಹಾಯವೇನೂ ಬೇಕಾಗಲಿಲ್ಲವಷ್ಟೆ!

ಬೆಂಜಮಿನ್ ಡಿಸ್ರೇಲಿ (Benjamin Disraeli) ಎಂಬವನು ಕಳೆದ ಶತಮಾನದಲ್ಲಿ ಕೆಲವು ವರ್ಷ ಕಾಲ ಇಂಗ್ಲೆಂಡಿನ ಪ್ರಧಾನಿಯಾಗಿದ್ದ. ಅವನು ಮೇಧಾವಿ, ಆತ್ಮವಿಶ್ವಾಸವುಳ್ಳವನು. ಆಗ ವಿಕಾಸ ವಾದ(theory of evolution)ವನ್ನು ಕುರಿತಂತೆ ತೀವ್ರವಾದ ಭಿನ್ನಾಭಿಪ್ರಾಯಗಳು ಇದ್ದ ಕಾಲ. ದೊಡ್ಡ ಸಭೆಯೊಂದರಲ್ಲಿ ಆ ಥಿಯರಿಯ ಚರ್ಚೆ ನಡೆಯುತ್ತಿದೆ; ಡಿಸ್ರೇಲಿಯೂ ಸಭೆಗೆ ಹೋಗಿದ್ದಾನೆ. ತಾನು ಮಾತಾಡುವ ಸಂದರ್ಭ ಬಂದಾಗ ಅವನು ಶ್ರೀ ಭಗವಾನುವಾಚ ಎನ್ನಬಹುದಾದ ಧ್ವನಿಯಲ್ಲಿ ಹೇಳಿದ : "Gentlemen, the problem seems to be just this : Is man descended from apes or from angels? Well, gentlemen, I am on the side of the angels !" [ಮಹನೀಯರೆ, ಇವತ್ತಿನ ಸಮಸ್ಯೆ ಇಷ್ಟೇ : ಮಾನವ ಕಪಿಯ ಸಂತಾನವೇ ಅಥವಾ ಏಂಜಲ್‌ರ (ದೇವಸೇವಕರ) ಸಂತಾನವೆ ? ಮಹನೀಯರೆ, ನಾನು ಏಂಜಲ್ ಪಕ್ಷಕ್ಕೆ ಸೇರಿದವನು".

ಮಾನವ ಏಂಜಲ್‌ರ ಸಂತಾನ ಎಂಬ ವಾದವನ್ನು ಸಮರ್ಥಿಸಿದ ಡಿಸ್ರೇಲಿಯ ಮನಸ್ಸಿನಲ್ಲಿ 'ನಾನು ಮಾನವನ ಗೌರವವನ್ನು ಉಳಿಸಿದೆ' ಎಂಬ ಭಾವನೆಯಿತ್ತು. ಆದರೆ ವಾಸ್ತವವಾಗಿ ಹೇಳಿದ್ದೇನು ? ಮಾನವ ಏಂಜಲ್ ಮಟ್ಟದಿಂದ ಅಳೆಯಲಾರದಷ್ಟು ದೂರ ಕೆಳಗೆ ಬಿದ್ದು ಇಂದಿನ – ಅರ್ಧ ಪಶುವಾದ – ಮಾನವನಾಗಿದ್ದಾನೆ. ತಾನು ಹುಟ್ಟಿದ ಘನವಾದ ಏಂಜಲ್ ವಂಶಕ್ಕೆ ಮಾನವ ಮಸಿ ಬಳಿದ ! ವಾಸ್ತವವಾಗಿ ಮಾನವನಿಗೆ ಗೌರವ ಕೊಡುವುದೆಂದರೆ ವಿಕಾಸ ವಾದ. ಅದರ ಪ್ರಕಾರ ಮಾನವ ಪಾತಾಳಕ್ಕೆ ಬೀಳುತ್ತಿಲ್ಲ, ಪಾತಾಳದಿಂದ ಏರಿದ್ದಾನೆ. ಕಪಿಯ ಸಂತಾನ ಬೆಳೆದು ಮಾನವನಾಗಿದೆ ! ಇದನ್ನು ನೆನೆದು ನಾವು ಸಂತೋಷಪಡಬಹುದು. ಪರಬ್ರಹ್ಮ ಕೆಡುತ್ತಿಲ್ಲ, ಜಡವಾಗಿಯೂ ಇಲ್ಲ, ಬೆಳೆಯುತ್ತಿದೆ !

ವಿಕಾಸವಾದವು ಮಾನವನಿಗೆ ಉತ್ತೇಜಕವಾದದ್ದು, ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ಬೆಳೆಸಬಲ್ಲದು. ಕಪಿಯಂಥ ಚಂಚಲಮನಸ್ಸಿನ ಬೇಜವಾಬ್ದಾರಿ ವ್ಯಕ್ತಿ ಇವತ್ತು ಎಷ್ಟು ಮೇಲಕ್ಕೆ ಏರಿದ್ದಾನೆ ! ಅವನ ಈಗಿನ ಸ್ಥಿತಿ ಸಮರ್ಪಕ ಎಂದಲ್ಲ. ಅವನು ಇನ್ನೂ ಅರ್ಧ ಪಶುವೇ. ಇನ್ನೂ ಅವನು ತುಳಿಯಬೇಕಾದ ದಾರಿ ಬೇಕಾದಷ್ಟಿದೆ. ಅವನು ಈಗ ಒಂದು ಅಣುಬಾಂಬು ಹಾಕಿ ಲಕ್ಷಗಟ್ಟಲೆ ಜನರನ್ನು ಕೊಂದು 'ಇದಕ್ಕಾಗಿ ನಾನು ಪಶ್ಚಾತ್ತಾಪ ಪಡುವುದಿಲ್ಲ' ಎನ್ನುವ ಮಟ್ಟದಲ್ಲೇ ಇದ್ದಾನೆ. ಪರಬ್ರಹ್ಮನ ಮಾನವಾಂಶವು ಶಕ್ತಿಯನ್ನು ಸಂಪಾದಿಸಿದೆ ; ಅದನ್ನು ಬಳಸುವ ನೀತಿಯನ್ನು ಕಲಿತಿಲ್ಲ. ಆದರೆ ಕಲಿಯಬಲ್ಲದು ಎಂಬುದಕ್ಕೆ ಸಾಕ್ಷ್ಯ ಸಿಕ್ಕುತ್ತದೆ.

ದಿನದಿನದ ಬದುಕಿನಲ್ಲಿ ನಮ್ಮ ಅನುಭವ ದ್ವೈತದ್ದೊ, ಅದ್ವೈತದ್ದೊ ? ಅದ್ವೈತ ಕೇವಲ ವೇದಾಂತಿಗಳ ಥಿಯರಿಯಾಗಿದೆ, ಅಷ್ಟೆ. ನಮ್ಮ ಮಾತುಕಥೆ, ನಡೆನುಡಿ, ಸಹಮಾನವರೊಡನೆ ವ್ಯವಹಾರ — ಎಲ್ಲದರಲ್ಲೂ ನಾವು ದ್ವೈತಿಗಳೇ. ದೇವರಿಗೆ

ಕೂಡ ನಮ್ಮ ಇತಿಮಿತಿಗಳನ್ನು ಆರೋಪಿಸಿ ಅವನನ್ನು ಲಂಚಕೋರನನ್ನಾಗಿ ಮಾಡಿ ಅವನಿಂದ ಪ್ರಯೋಜನ ಪಡೆಯಲು ಹವಣಿಸುತ್ತೇವೆ. ದೇವರು ಬೇರೆ ನಾವು ಬೇರೆ ಎನ್ನುವ ದ್ವೈತ ಇದ್ದೇ ಇದೆ. ಮಾನವರೆಲ್ಲ ಒಂದು ಎನ್ನುವ ಸೀಮಿತ ಅದ್ವೈತವನ್ನೂ ನಾವು ಸಾಧಿಸಿಲ್ಲ.

ಆದರೂ ಕೆಲವು ವೇಳೆ, ಕ್ಷಣಿಕವಾಗಿ ನಮಗೆ ಅದ್ವೈತದ ಅನುಭವ ಆಗುತ್ತದೆ. ನಮ್ಮ ಮಗುವನ್ನು ಪ್ರೀತಿಯ ಭರದಲ್ಲಿ ಎದೆಗೆ ಅಪ್ಪಿಕೊಳ್ಳುವಾಗ 'ನಾನು, ಮಗು' ಎಂಬ ದ್ವೈತ ಕಳಚಿಬೀಳುತ್ತದೆ; ಏಕತ್ವದ ಅನುಭವವಾಗುತ್ತದೆ. ಅದು ಕ್ಷಣಮಾತ್ರದ ಅನುಭವ; ಉಳಿದ ವೇಳೆಯಲ್ಲಿ ನಾವು ದ್ವೈತಿಗಳೇ. ಈಗ ನಾನು ಬಣ್ಣಿಸಲಿರುವ ಒಂದೆರಡು ಅನುಭವಗಳು ಇತರರಿಗೂ ಆಗಿರಬಹುದು. ಮೂವತ್ತರ ದಶಕದಲ್ಲಿ ಒಂದು ದಿನ ನಮ್ಮೂರಿನ ಹೊಳೆಯ ಮಡುವಿನಲ್ಲಿ ನೀರಿನ ಮೇಲೆ ಅಂಗತ್ತನಾಗಿ ಮಲಗಿ ತೇಲುತ್ತಿದ್ದಾಗ ಆಕಾಶದ ನೀಲಿಯ ಅನಂತದಲ್ಲಿ ನಾನು ಲೀನನಾದಂತೆ ಅನುಭವವಾಯಿತು. ಆ ಕ್ಷಣದವಟ್ಟಿಗೆ ನಾನೇ ಆಕಾಶ, ಆಕಾಶವೇ ವಿಶ್ವ. ತೇಲುವುದಕ್ಕೆ ಅವಶ್ಯಕವಾದ ಕೈಗಳ ಚಲನೆ ನಿಂತು ನಾನು ಮುಳುಗುವುದರಲ್ಲಿದ್ದೆ. ಕೂಡಲೆ ದ್ವೈತಕ್ಕೆ ಜಾರಿ ಬದುಕಿಕೊಂಡೆ! 1976ರಲ್ಲಿ ಅಮೇರಿಕದ ಗ್ರಾಂಡ್ ಟೇಟನ್ ಶಿಖರಗಳ ಮುಂದೆ ನಿಂತಾಗ ನಾನು ಐದು ಅಡಿ ಮೂರೂವರೆ ಅಂಗುಲ ಬೆಳೆದು ಆ ಶಿಖರಗಳ ಜೊತೆ ವಿಶ್ವದಲ್ಲಿ ಸೇರಿಹೋದಂತೆ ಭಾಸವಾಯಿತು.

ಇನ್ನೊಂದು ಅನುಭವ–ಸಂಗೀತವನ್ನು ಕೇಳುವಾಗ ಎರಡುಮೂರುಸಾರಿ ಆಗಿದೆ. ಕಛೇರಿ ಆರಂಭವಾಗಿ ಸುಮಾರು ಒಂದು ಘಂಟೆ ಕಳೆದಿದೆ. ನಾದದ ಅನುರಣನ ಸಂಪತ್ತು–resonance–ಮಂದಿರದಲ್ಲಿ ತುಂಬಿದೆ. ರಾಗದ ಆಲಾಪನೆ ವಿಳಂಬದಿಂದ ಮಧ್ಯಮಕಾಲಕ್ಕೆ ಸಾಗಿದೆ. ಕಣ್ಣುಗಳು ತಾವಾಗಿಯೇ ಮುಚ್ಚಿದವು. ಪಿಟೀಲು, ಮೃದಂಗ, ಗಾಯನ, ಶ್ರೋತೃಗಳು—ಯಾವುದರ ಅರಿವೂ ಇಲ್ಲ. ಇರುವುದೊಂದೇ–ನಾದ, ನಾನು ಅದರಲ್ಲಿ ಲೀನನಾಗಿದ್ದೇನೆ. ಅದು ನೆನಪಿಸಿಕೊಂಡರೂ ಬಹಳ ಹಿತವಾದ ಅನುಭವ. ಅದು ಕೃತಿಗಳನ್ನು ಹಾಡುತ್ತಿರುವಾಗ ಬರುವುದಿಲ್ಲ; ರಾಗಾಲಾಪನೆ ನಡೆಯುತ್ತಿರುವಾಗ ಮಾತ್ರ ಬರುತ್ತದೆ.

ಇಂಥ ಅನುಭವವನ್ನು ದೀರ್ಘಕಾಲ ನಿಲ್ಲಿಸಿಕೊಳ್ಳುವ ಭಾಗ್ಯ ನಮಗಿಲ್ಲ. ಬಹು ಬೇಗ ಅದ್ವೈತದಿಂದ ದ್ವೈತಕ್ಕೆ ಜಾರುತ್ತೇವೆ. ಮುಂದೆ ಎಂದಾದರೂ, ಮುಂದಿನ ವರ್ಷಗಳು ಕಳೆದ ಮೇಲಾದರೂ, ಮಾನವಕುಲಕ್ಕೆ ಆ ಅನುಭವ 'ನಾರ್ಮಲ್' ಆಗುತ್ತದೆಯೆ? ಸಾರ್ವಕಾಲಿಕ, ಸಾರ್ವತ್ರಿಕ ಅನುಭವವಾಗುತ್ತದೆಯೆ? ಇವತ್ತಿನ ಕ್ಷಣಭಂಗುರ ಅನುಭವ ಮಾನವಕುಲಕ್ಕೆ ಮುಂದೆ ಬರಲಿರುವ ಸೌಭಾಗ್ಯದ ಸೂಚನೆಯೆ? ನನಗೆ ತಿಳಿಯದು.

ಒಂದು ಮಾತನ್ನೇನೋ ಧೈರ್ಯವಾಗಿ ಹೇಳಬಹುದು. ಇಂಥ ಅದ್ವೈತಾನುಭವ ನಮಗೆ ಆಗುವ ಅಲ್ಪಕಾಲದಲ್ಲಿ ನಮ್ಮ ಕೇಡಿಗತನ, ಸ್ವಾರ್ಥ, ಇತ್ಯಾದಿ ಜೀವಮಾರಕ ಗುಣಗಳು ಜಾಗ್ರತವಾಗಿರುವುದಿಲ್ಲ. ನಮ್ಮ ಮನಸ್ಸನ್ನು ಆಗ ತುಂಬುವ ಅನಂತತೆ ನಿಜವಾಗಿ ವ್ಯಕ್ತಿ ವಿಶ್ವಪ್ರೇಮದಲ್ಲಿ ಲೀನನಾಗುವ ಅನಂತತೆ. ಆಗ ಯಾರೊಡನೆಯೂ ಮಾತು ಬೇಕೆನ್ನಿಸುವುದಿಲ್ಲ, ಏಕೆಂದರೆ ನಾನೇ ಅವರಾಗಿದ್ದೇನೆ! ಅದ್ವೈತದ ಅನುಭವಲ್ಲಿ ಈ ಮಹತ್ಪ್ರಯೋಜನವುಂಟು:

1. ಸರ್ವವೂ ನಾನೇ ಎಂಬ ಅರಿವಿನಿಂದಾಗಿ ನನ್ನ ಕುತೂಹಲ, ಆಸಕ್ತಿ, ಪ್ರೇಮಗಳು ವಿಶ್ವೀಯವಾಗುತ್ತವೆ; ಹಾಗಾಗಲೇಬೇಕು—ವಿಶ್ವ ನಾನೇ ಆದ್ದರಿಂದ.

> ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂತ್ ವಿಜಾನತಃ ।
> ತತ್ರ ಕೋ ಮೋಹಃ ಕಶ್ಶೋಕಃ ಏಕತ್ವಮನುಪಶ್ಯತಃ ॥

[ತಿಳಿದವನಿಗೆ ಎಲ್ಲ ಭೂತಗಳು ಆತ್ಮವೇ ಆದವಲ್ಲ. ಅಂಥ ಸ್ಥಿತಿಯಲ್ಲಿ, ಏಕತ್ವವನ್ನು ಕಾಣುತ್ತಲೇ ಇರುವವನಿಗೆ ಶೋಕವೆಲ್ಲಿಯದು, ಮೋಹವೆಲ್ಲಿಯದು!]

2. ಎಲ್ಲವೂ ನಾವೇ, ಆದ್ದರಿಂದ ನಮ್ಮನ್ನು ಉತ್ತಮಗೊಳಿಸಿಕೊಳ್ಳುವ ಕೆಲಸವನ್ನು ನಾವೇ ಕೈಗೊಳ್ಳಬೇಕು. 'ಯೋಗಕ್ಷೇಮಂ ವಹಾಮ್ಯಹಂ' (ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ) ಎನ್ನುವ ಬೇರೊಬ್ಬರಿಲ್ಲ. ನನ್ನ ಉದ್ಧಾರಕ್ಕೆ ದುಡಿಯಬೇಕು. ಈ ಅರಿವು ನಮಗೆ ಒಳ್ಳೆಯದು.

ಅದ್ವೈತ ಕಲ್ಯಾಣಕಾರಕವಾದ ಕಲ್ಪನೆ.

ಅದ್ವೈತ ದರ್ಶನದ ಹಿನ್ನೆಲೆ; ಆದಿ ಶಂಕರಾಚಾರ್ಯರ ಜೀವನ ಮತ್ತು ಸಾಧನೆ

—ಎಸ್. ರಾಮಚಂದ್ರ ಶಾಸ್ತ್ರೀ

ದಿಕ್ಕಾಲಾದ್ಯನವಚ್ಛಿನ್ನಾನಂತ ಚಿನ್ಮಾತ್ರಮೂರ್ತಯೇ ।
ಸ್ವಾನುಭೂತ್ಯೇಕಮಾನಾಯ ನಮಃ ಶಾಂತಾಯ ತೇಜಸೇ ॥

ಮಾನವನು ವಿವೇಕಪ್ರಧಾನನಾದ ಜೀವಿಯಾದುದರಿಂದ ಪ್ರತಿಯೊಂದು ಕಾರ್ಯವನ್ನು ಮಾಡುವಾಗಲೂ ತನ್ನ ವಿವೇಚನಾಶಕ್ತಿಯನ್ನು ಉಪಯೋಗಿಸುತ್ತಾನೆ. ಶಾಂತಚಿತ್ತನಾಗಿ ವಿವೇಚನೆ ಮಾಡಿದಾಗ, ಪ್ರತಿಯೊಬ್ಬ ಮನುಷ್ಯನೂ ದೃಶ್ಯ ಮತ್ತು ಅದೃಶ್ಯ ಜಗತ್ತಿಗೆ ಸಂಬಂಧಿಸಿದ ಕೆಲವು ಶ್ರದ್ಧೆಗಳ, ವಿಚಾರಗಳ ಮತ್ತು ಕಲ್ಪನೆಗಳ ಒಂದು ಸಮುದಾಯ ಮಾತ್ರವೆಂಬುದಾಗಿ ಗೊತ್ತಾಗುತ್ತದೆ. ಮಾನವನ ಸಮಸ್ತ ಕಾರ್ಯ ವಿಧಾನಗಳಿಗೂ ಆಧಾರಭೂತವಾದುದು ಮಾನವನ ವಿಚಾರವೇ. ಶ್ರದ್ಧೆಗೆ ಅನುರೂಪವಾಗಿಯೇ ಮಾನವನಿರುತ್ತಾನೆ – **ಯೋ ಯಚ್ಛ್ರದ್ಧಃ ಸ ಏವ ಸಃ** ॥ (ಗೀತಾ) ಅವನ ಕಾರ್ಯವಿಧಾನವು ನಿಶ್ಚಿತವಾಗಿರುತ್ತದೆ. ಅದಕ್ಕೆ ಅನುರೂಪವಾಗಿ ಅವನಿಗೆ ಫಲವು ಪ್ರಾಪ್ತವಾಗುತ್ತದೆ. ಈ ವಿಧವಾಗಿ ಗೊತ್ತಿರಲಿ ಅಥವಾ ಇಲ್ಲದಿರಲಿ, ಪ್ರತಿಯೊಬ್ಬ ಮಾನವನಿಗೂ ಒಂದೊಂದು ದರ್ಶನವಿರುತ್ತದೆ. ಈ ರೀತಿ ದರ್ಶನವು ನಮ್ಮ ಜೀವನದಲ್ಲಿ ಅನುಸ್ಯೂತವಾಗಿರುತ್ತದೆ. ನಮ್ಮ ಜೀವನದಿಂದ ಅದನ್ನು ಬೇರ್ಪಡಿಸಲು ಸಾಧ್ಯವಿಲ್ಲ.

ದರ್ಶನ ಎಂಬ ಪದಕ್ಕೆ–ಯಾವುದರ ದ್ವಾರಾ ನೋಡುತ್ತೇವೋ ಅದು ದರ್ಶನ ಎಂದರ್ಥ. ನೋಡಬೇಕಾದುದು ಯಾವುದು ? ವಸ್ತುವಿನ ಸತ್ಯಭೂತವಾದ ತಾತ್ತ್ವಿಕ ಸ್ವರೂಪವೇ ನೋಡಬೇಕಾದುದು. ನಾವು ಯಾರು ? ಎಲ್ಲಿಂದ ಬಂದಿದ್ದೇವೆ ? ಸರ್ವತ್ರ ದೃಶ್ಯವಾಗಿರುವ ಜಗತ್ತಿನ ಸತ್ಯಸ್ವರೂಪವೇನು ? ಇದರ ಉತ್ಪತ್ತಿ ಎಲ್ಲಿಂದ ಆಯಿತು ? ಇದರ ಸೃಷ್ಟಿಗೆ ಕಾರಣರು ಯಾರು ? ಇದು ಚೇತನವೇ, ಅಚೇತನವೇ ? ಈ ಸಂಸಾರದಲ್ಲಿ ನಾವು ಯಾವ ಕಾರ್ಯ ಮಾಡಬೇಕು ? ಎಂದು ಮುಂತಾದ ಪ್ರಶ್ನೆಗಳಿಗೆ ಉಚಿತವಾದ ಸಮಾಧಾನವನ್ನು ಕೊಡುವುದೇ ದರ್ಶನದ ಪ್ರಧಾನ ಧ್ಯೇಯವಾಗಿರುತ್ತದೆ. ಆದುದರಿಂದ ದರ್ಶನ ಶಾಸ್ತ್ರವು ವಸ್ತುವಿನ ಸ್ವರೂಪವನ್ನು ಪ್ರತಿಪಾದಿಸುವುದರಿಂದ "ವಸ್ತುತಂತ್ರ"ವಾಗಿರುವುದೆಂದು ಹೇಳಲಾಗಿದೆ.

ಇಲ್ಲಿ ಪಾಶ್ಚಾತ್ಯ ತತ್ತ್ವವಿಚಾರಶಾಸ್ತ್ರಕ್ಕೂ ಭಾರತೀಯ ದರ್ಶನಶಾಸ್ತ್ರಕ್ಕೂ ಇರುವ ಪ್ರಧಾನವಾದ ವ್ಯತ್ಯಾಸವನ್ನು ಗಮನಿಸಬಹುದು. ಪಾಶ್ಚಾತ್ಯ ವಿಚಾರಶಾಸ್ತ್ರ

ಅಥವಾ ಫಿಲಾಸಫಿ ಕಲ್ಪನಾಕುಶಲರಾದ ವಿದ್ವಾಂಸರ ಮನೋವಿನೋದದ ಸಾಧನ ಮಾತ್ರವಾಗಿದೆ. ಜಗತ್ತಿನ ಅಪೂರ್ವವಾದ, ಆಶ್ಚರ್ಯಮಯವಾದ ವಸ್ತುಗಳನ್ನು ನೋಡಿ, ಅವುಗಳ ರಹಸ್ಯವನ್ನು ತಿಳಿಯಲು ಮತ್ತು ಕುತೂಹಲವನ್ನು ಶಾಂತಗೊಳಿಸಲು ಫಿಲಾಸಫಿ ಉತ್ಪನ್ನವಾಯಿತೆಂದು ಹೇಳುತ್ತಾರೆ. ಪ್ರತಿಯೊಂದು ವಸ್ತುವನ್ನು ಪರೀಕ್ಷೆ ಮಾಡುವ ಸಮಯದಲ್ಲಿ ಮನಸ್ಸಿಗೆ ತೋರಿದ ಕಲ್ಪನೆಗಳಿಂದ ಪಾಶ್ಚಾತ್ಯವಿಚಾರಶಾಸ್ತ್ರ ತುಂಬಿದೆ. ಆದ್ದರಿಂದ ಇಂದಿಗೂ ಒಂದು ನಿಶ್ಚಿತವಾದ ಸಿದ್ಧಾಂತವನ್ನು ತಲುಪಲು ಅವರಿಗೆ ಸಾಧ್ಯವಾಗಿಲ್ಲ. ಭಾರತದಲ್ಲಿ ದಾರ್ಶನಿಕನು ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಎಂಬ ದುಃಖತ್ರಯಗಳಿಂದ ಅಹರ್ನಿಶಿ ಪೀಡಿತನಾಗಿ, ಉದ್ವಿಗ್ನನಾಗಿ, ಅವುಗಳನ್ನು ನಿರ್ಮೂಲಮಾಡಬೇಕೆಂಬ ಭಾವನೆಯಿಂದ ಪ್ರೇರಿತನಾಗುತ್ತಾನೆ. ಸಾಧಿಸಬೇಕಾದುದನ್ನು ತನ್ನ ಸೂಕ್ಷ್ಮವಾದ ವಿವೇಚನಾಶಕ್ತಿಯ ಆಧಾರದ ಮೇಲೆ ನಿಶ್ಚಯ ಮಾಡಿಯೇ ಸಾಧನಾಮಾರ್ಗದ ಕಡೆಗೆ ಪ್ರವೃತ್ತನಾಗುತ್ತಾನೆ. ಆದ್ದರಿಂದ ಭಾರತೀಯರ ದೃಷ್ಟಿಯಲ್ಲಿ ದರ್ಶನ ಜೀವನದ ಅವಿಭಾಜ್ಯ ಅಂಗವಾಗಿರುತ್ತದೆ. ಅದು ಜೀವನದ ಮಾರ್ಗ. ತನ್ನ ಜೀವನದ ಗುರಿಯನ್ನು ಅವನು ಸಾಕ್ಷಾತ್ಕರಿಸಿಕೊಳ್ಳಬೇಕು. ಇದನ್ನೇ ಪ್ರಾರಂಭದ ಶ್ಲೋಕದಲ್ಲಿ – "ಸ್ವಾನುಭೂತ್ಯೇಕಮಾನಾಯ"– ಸ್ವಾನುಭವವೇ ಪ್ರಮಾಣವುಳ್ಳದ್ದು–ಎಂದು ಹೇಳಲಾಗಿದೆ. ಆದ್ದರಿಂದ ದರ್ಶನವೆಂದರೆ ಸಾಕ್ಷಾತ್ಕಾರ ಮಾಡಿಕೊಳ್ಳುವುದು ಎಂದಾಯಿತು. ಈ ದರ್ಶನಶಾಸ್ತ್ರವನ್ನೇ ಸಂಪ್ರದಾಯವಾಗಿ ಅಧ್ಯಾತ್ಮವಿದ್ಯೆ ಅಥವಾ ಬ್ರಹ್ಮವಿದ್ಯೆ ಎಂದು ಕರೆಯುವುದು ರೂಢಿಗೆ ಬಂದಿತು. ಮುಂಡಕೋಪನಿಷತ್ತು ಈ ವಿದ್ಯೆಯನ್ನು–"ಸರ್ವವಿದ್ಯಾಪ್ರತಿಷ್ಠಾ"–ಎಂದು ಕರೆಯುತ್ತದೆ. (ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಂ........). ಭಗವದ್ಗೀತೆಯಲ್ಲಿ ತನ್ನ ವ್ಯಾಪಕವಾದ ವಿಭೂತಿಯನ್ನು ವರ್ಣನೆ ಮಾಡುವ ಪ್ರಸಂಗದಲ್ಲಿ ಶ್ರೀಕೃಷ್ಣನು ಸಮಸ್ತವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆಯೇ (ಅಧ್ಯಾತ್ಮವಿದ್ಯಾ ವಿದ್ಯಾನಾಂ....) ತನ್ನ ಸ್ವರೂಪವೆಂದು ಅದರ ಮಹತ್ವವನ್ನು ತಿಳಿಸುತ್ತಾನೆ.

ಭಾರತೀಯ ದರ್ಶನಧಾರೆಯು ವೇದಗಳ ಕಾಲದಿಂದಲೂ ಅವಿಚ್ಛಿನ್ನವಾಗಿ ಪ್ರವಹಿಸುತ್ತಾ ಬಂದಿದೆ. ವೇದಗಳಲ್ಲಿ ಪ್ರತಿಪಾದಿತವಾಗಿರುವ ದರ್ಶನವೇ ಅದ್ವೈತ ದರ್ಶನದ ಆಧಾರ. ಅನೇಕರೂಪವಾದ, ಪ್ರತಿಕ್ಷಣದಲ್ಲಿಯೂ ವಿಲಕ್ಷಣವಾದ ರೂಪವನ್ನು ಧರಿಸುವ ಪದಾರ್ಥಗಳ ಅಂತರ್ಯದಲ್ಲಿ ಇರುವ ಏಕರೂಪತೆ, ಅನೇಕತ್ವದಲ್ಲಿರುವ ಏಕತೆ, ಇವನ್ನು ವಿಚಾರಮಾಡಿರುವುದು ಪ್ರಾಚೀನ ವೈದಿಕ ಋಷಿಗಳು ದರ್ಶನ ಶಾಸ್ತ್ರಕ್ಕೆ ಕೊಟ್ಟಿರುವ ಅಮೂಲ್ಯ ಕಾಣಿಕೆ. ಪರಿವರ್ತನಶೀಲವಾಗಿರುವ ಬ್ರಹ್ಮಾಂಡದಲ್ಲಿ ಅಪರಿವರ್ತನವಾಗಿರುವ ತತ್ತ್ವ ಹೊಂದಿರುವಂತೆ, ಈ ಪಿಂಡಾಂಡದಲ್ಲಿಯೂ ಅಪರಿವರ್ತನಶೀಲವಾದ ತತ್ತ್ವ ಹೊಂದಿರುತ್ತದೆ. ಬ್ರಹ್ಮಾಂಡದ ನಿಯಾಮಕವಾಗಿರುವ ವಸ್ತುವಿಗೆ ಬ್ರಹ್ಮವೆಂದೂ, ಪಿಂಡಾಂಡದ ನಿಯಾಮಕವಾಗಿರುವ ವಸ್ತುವಿಗೆ ಆತ್ಮವೆಂದೂ ಹೆಸರು.

ಪ್ರಾಚೀನ ದಾರ್ಶನಿಕರು ಬ್ರಹ್ಮಾಂಡ ಮತ್ತು ಪಿಂಡಾಂಡಗಳ ಐಕ್ಯತೆಯನ್ನು ಸರ್ವತೋ-ಭಾವದಿಂದ ಅಂಗೀಕರಿಸಿರುತ್ತಾರೆ; ಬ್ರಹ್ಮ ಮತ್ತು ಆತ್ಮ – ಇವುಗಳ ಐಕ್ಯವನ್ನು ಪ್ರತಿಪಾದಿಸಿರುತ್ತಾರೆ. ಬ್ರಹ್ಮ ಕೇವಲ ಒಂದು ಅಲಭ್ಯವಾದ, ಅಲೌಕಿಕವಾದ ಹಾಗೂ ಅದ್ಭುತವಾದ ಪದಾರ್ಥವಲ್ಲ. ಆದರೆ, ಪ್ರತಿಯೊಂದು ಪ್ರಾಣಿಯೂ ತನ್ನೊಳಗೆ ನಿಯಾಮಕನಾಗಿರುವ (ಅಂತರ್ಯಾಮಿಯಾದ) ಆತ್ಮನ ರೂಪದಲ್ಲಿ ಅವನ ಸತ್ಯತ್ವವನ್ನು ಅನುಭವಿಸುತ್ತಲಿದೆ. ಆದುದರಿಂದ ಬ್ರಹ್ಮಸಾಕ್ಷಾತ್ಕಾರ ಮತ್ತು ಅನುಭವಕ್ಕೆ ಸುಲಭವಾದ ಸಾಧನ ಎಂದರೆ, ಆತ್ಮಸಾಕ್ಷಾತ್ಕಾರವನ್ನು ಹೊಂದುವುದು. ಇದನ್ನೇ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು "ಆತ್ಮಾ ವಾ ಅರೇ ದ್ರಷ್ಟವ್ಯಃ", ಆತ್ಮತತ್ತ್ವವನ್ನು ಸಾಕ್ಷಾತ್ಕಾರ ಮಾಡಿಕೋ–ಎಂದು ಸ್ಪಷ್ಟವಾಗಿ ತಿಳಿಸುತ್ತಾರೆ.

ಋಗ್ವೇದವು ಅನುಪಮ ಶಕ್ತಿಶಾಲಿಯಾದ ನಿಯಂತೃವೊಬ್ಬನನ್ನು ಅರಿತಿವೆ. ವಿಭಿನ್ನ ದೇವತೆಗಳು ಅವನ ನಾನಾ ಶಕ್ತಿಗಳ ಪ್ರತಿನಿಧಿಗಳೆಂದೂ ವಾಸ್ತವವಾಗಿ ತಿಳಿಸುತ್ತದೆ. ಈ ಕಾರಣದಿಂದ (ಭಾರತೀಯ ದರ್ಶನ) ವೈದಿಕಧರ್ಮವನ್ನವಲಂಬಿಸಿವೆ. ಅನೇಕತ್ವದಲ್ಲಿ ಏಕತ್ವದ ಭಾವನೆ, ಭಿನ್ನತೆಯಲ್ಲಿ ಅಭಿನ್ನತೆಯ ಕಲ್ಪನೆ, ಇವು ದಾರ್ಶನಿಕ ಜಗತ್ತಿನಲ್ಲಿ ಬಹು ಅಮೂಲ್ಯವಾದ ತತ್ತ್ವಗಳು.

ಋಗ್ವೇದಲ್ಲಿನ 10ನೇ ಮಂಡಲದ 121 ನೇ ಸೂಕ್ತದಲ್ಲಿನ ಹಿರಣ್ಯಗರ್ಭ ಸ್ತುತಿಯು ಗಂಭೀರವಾದ ಆಧ್ಯಾತ್ಮಿಕತತ್ತ್ವಗಳಿಂದ ಕೂಡಿದೆ, ಹಾಗೂ ಬಹು ಮಹತ್ವಪೂರ್ಣವಾದುದು. ಅಸುಂದರರೂಪನಾಗಿರುವುದರಿಂದ, ಅಥವಾ ನಿರ್ದಿಷ್ಟರೂಪವಿಲ್ಲದಿರುವುದರಿಂದ, ಹಿರಣ್ಯಗರ್ಭನು "ಕಃ" ಎಂಬ ಶಬ್ದದಿಂದ ವ್ಯವಹರಿಸಲ್ಪಡುತ್ತಾನೆ. ಏಕೆಂದರೆ, ಅವನ ಸ್ವರೂಪವು ಅನಿರ್ವಚನೀಯವಾದುದು ಅಥವಾ ಸುಖ ಸ್ವರೂಪವಾದುದು.

ಬ್ರಹ್ಮ ಸರ್ವವ್ಯಾಪಿ ಎಂಬುದರ ಮಹತ್ವಪೂರ್ಣವಾದ ಕಲ್ಪನೆಯ ವರ್ಣನೆಯು ಅನೇಕ ಸೂಕ್ತಗಳಲ್ಲಿ ಬರುತ್ತದೆ.

ಋಗ್ವೇದದಲ್ಲಿ ಬರುವ ಉಚ್ಛಿಷ್ಟಸೂಕ್ತದಲ್ಲಿ (ಋಗ್ವೇದ–1–19) ಉಚ್ಛಿಷ್ಟ ಎಂಬುದರಿಂದ ಬ್ರಹ್ಮದ ಪ್ರತಿಪಾದನೆಯಿರುತ್ತದೆ. ಉಚ್ಛಿಷ್ಟ ಎಂದರೆ ಉಳಿದಿರುವುದು ಎಂದರ್ಥ; ದೃಶ್ಯ ಪ್ರಪಂಚವನ್ನು ನಿಷೇಧಿಸಿದ ಅನಂತರ ಅವಶಿಷ್ಟವಾಗುವುದೇ ಉಚ್ಛಿಷ್ಟ –ಎಂದರೆ ಬಾಧರಹಿತವಾದ ಬ್ರಹ್ಮ. ಬ್ರಹ್ಮದ ಈ ಸ್ವರೂಪವನ್ನು ಅಭಿವ್ಯಕ್ತಗೊಳಿಸುವುದಕ್ಕಾಗಿ ಬೃಹದಾರಣ್ಯಕ ಉಪನಿಷತ್ತು "ನೇತಿ, ನೇತಿ." ಎಂದು ಪ್ರಯೋಗ ಮಾಡಿರುವುದನ್ನು ಕಾಣುತ್ತೇವೆ. ಸೂಕ್ತದ ಮೊದಲನೆಯ ಮಂತ್ರದಲ್ಲಿ ಪ್ರತಿಪಾದಿತವಾಗಿರುವ "ನಾಮರೂಪಗಳು ಉಚ್ಛಿಷ್ಟವನ್ನವಲಂಬಿಸಿವೆ"-ಎಂಬ ಸಿದ್ಧಾಂತವು ಅದ್ವೈತ

ವೇದಾಂತದ ದೃಷ್ಟಿಯಿಂದ ಮಹತ್ತ್ವಪೂರ್ಣವಾದುದು. ನಾಮರೂಪಾತ್ಮಕವಾದ ದೃಶ್ಯಜಗತ್ತನ್ನು ಸೂಚಿಸುವುದಕ್ಕೆ ಈ ಪ್ರಯೋಗವು ಮಹತ್ತ್ವಪೂರ್ಣವಾಗಿರುತ್ತದೆ. ಉಪನಿಷತ್ತುಗಳ ಬ್ರಹ್ಮತತ್ತ್ವ ಮತ್ತು ಬ್ರಹ್ಮಾತ್ಮೈಕ್ಯವಾದಕ್ಕೆ ಇದು ಪೂರ್ವಪೀಠಿಕೆಯಾಗಿರುತ್ತದೆ. ಈ ಸಂಕೇತಗಳನ್ನು ವಿಶದಗೊಳಿಸುವುದೇ ಉಪನಿಷತ್ತುಗಳ ಪ್ರಧಾನ ಲಕ್ಷ್ಯವಾಗಿರುತ್ತದೆ.

ಈ ರೀತಿಯಾಗಿ ವೇದದ ಋಷಿಗಳು ಈ ಜಗತ್ತಿಗೆ ಕರ್ತಾ ಹಾಗೂ ನಿಯಾಮಕ ಮೂಲತತ್ತ್ವಗಳನ್ನು ತಮ್ಮ ಸೂಕ್ಷ್ಮದೃಷ್ಟಿಯಿಂದ ಪ್ರತಿಪಾದಿಸಿದ್ದರು. ಈ ವಿಷಯದಲ್ಲಿ ಋಗ್ವೇದ 10ನೇ ಮಂಡಲದಲ್ಲಿ ಬರುವ ನಾಸದೀಯ ಸೂಕ್ತವು ಮೂರ್ಧನ್ಯವಾದುದು. ಈ ಸೂಕ್ತವು ವೇದದ ಋಷಿಗಳ ಆಧ್ಯಾತ್ಮಿಕದೃಷ್ಟಿಯನ್ನು ಸಂಪೂರ್ಣವಾಗಿ ಅಭಿವ್ಯಕ್ತಗೊಳಿಸುತ್ತದೆ. ಋಗ್ವೇದದಲ್ಲಿನ ಅದ್ವೈತಭಾವನೆಯನ್ನು ಈ ಸೂಕ್ತವು ಸ್ಪಷ್ಟವಾಗಿ ನಿರೂಪಿಸುತ್ತದೆ. ನಾಸದೀಯ ಸೂಕ್ತದ ಋಷಿಯ ಮುಂದೆ ಈ ವಿಶ್ವದ ಉತ್ಪತ್ತಿಯ ವಿಷಯದಲ್ಲಿನ ಗಹನವಾದ ಸಮಸ್ಯೆಯಿದ್ದಿತು. ಈ ವಿಶ್ವವು ಎಲ್ಲಿಂದ ಉತ್ಪನ್ನವಾಯಿತು? ಇದರ ಮೂಲತತ್ತ್ವವಾದರೂ ಏನು ? ಯಾವ ವಸ್ತು ಮೊದಲು ಉತ್ಪನ್ನವಾಯಿತು ? ಇತ್ಯಾದಿ. ಈ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ಇಲ್ಲಿ ಕೊಡಲಾಗಿದೆ. ಸೃಷ್ಟಿಯ ಆದಿಕಾಲದಲ್ಲಿ ಕೇವಲ ಅಸತ್ ಆಗಲೀ, ಕೇವಲ ಸತ್ ಆಗಲೀ ಇರಲಿಲ್ಲ ಎಂದು ಪ್ರಾರಂಭ ಮಾಡಿ, ಕೊನೆಯಲ್ಲಿ ವಾಯುರಹಿತವಾಗಿದ್ದರೂ, ತನ್ನ ಸಾಮರ್ಥ್ಯದಿಂದಲೇ ಶ್ವಾಸ ತೆಗೆದುಕೊಳ್ಳುತ್ತಿದ್ದ ಸದ್ವಸ್ತುವೊಂದು ಇದ್ದಿತೇ ಹೊರತು ಬೇರಿನ್ನಾವುದೂ ಇರಲಿಲ್ಲ ಎಂದು ತಿಳಿಸುತ್ತದೆ. ತದೇಕಮ್-ಅದು ಒಂದು. ಈ ತತ್ತ್ವದ ಲಿಂಗ ನಿರ್ಧಾರಣೆಯನ್ನು ಮಾಡಲು ಅಶಕ್ತರಾಗಿ ವೇದದ ಋಷಿಗಳು ಆ ಪರತತ್ತ್ವಕ್ಕೆ ಎಲ್ಲೆಡೆಯಲ್ಲಿಯೂ ನಪುಂಸಕ ಲಿಂಗದ ತತ್ ಅಥವಾ ಸತ್ ಎಂಬ ಶಬ್ದಗಳನ್ನು ಪ್ರಯೋಗ ಮಾಡುತ್ತಾರೆ. ಏಕಂ ಸತ್ ವಿಪ್ರಾಃ ಬಹುಧಾ ವದಂತಿ........॥ (ಋಗ್ವೇದ-1-164-16.) ಆದ್ದರಿಂದ ಮುಂದೆ ಉಪನಿಷತ್ತುಗಳಲ್ಲಿ ವಿಶದೀಕರಿಸುವ ಅಭಿನ್ನತೆಯ ಮೂಲ ಸ್ರೋತ ಋಗ್ವೇದದಲ್ಲಿಯೇ ಸುಸ್ಪಷ್ಟವಾಗಿದೆ.

ಉಪನಿಷತ್ತುಗಳಲ್ಲಿಯಾದರೋ ಅದ್ವೈತ ದರ್ಶನದ ಸ್ಪಷ್ಟವಾದ ವ್ಯಾಖ್ಯಾನ ಸಿಗುತ್ತದೆ. ಆತ್ಮದ ಸತ್ಯತ್ವವನ್ನು ಕಠೋಪನಿಷತ್ತಿನಲ್ಲಿ ಯಮ–ನಚಿಕೇತ ಸಂವಾದದಲ್ಲಿ ಸ್ಪಷ್ಟವಾಗಿ ಕಾಣಬಹುದು. ಆತ್ಮ ನಿತ್ಯವಾದ ವಸ್ತು. ಅದಕ್ಕೆ ಯಾವಾಗಲೂ ಮರಣವಿಲ್ಲ ಮತ್ತು ಅವಸ್ಥಾದಿ ಕೃತದೋಷಗಳು ಅದಕ್ಕೆ ಅಂಟುವುದಿಲ್ಲ. ವಿಷಯಗ್ರಹಣ ಮಾಡುವ ನಮ್ಮ ಸಮಸ್ತ ಇಂದ್ರಿಯಗಳಿಗಿಂತಲೂ, ಸಂಕಲ್ಪವಿಕಲ್ಪಾತ್ಮಕವಾದ ಮನಸ್ಸಿಗಿಂತಲೂ, ವಿವೇಚನಾತ್ಮಕವಾದ ಬುದ್ಧಿಗಿಂತಲೂ, ಹಾಗೂ ನಮ್ಮ ಅಸ್ತಿತ್ವಕ್ಕೆ ಕಾರಣಭೂತವಾದ ಪ್ರಾಣಕ್ಕಿಂತಲೂ ಆದು ಬೇರೆಯಾಗಿರುತ್ತದೆ. ಇಲ್ಲಿ ಬರುವ ರಥದ ಉಪಮಾನ ಸುಂದರ

ವಾದುದು. ರಥದ ಸ್ವಾಮಿಯಾದ ಆತ್ಮನೇ ಸರ್ವಶ್ರೇಷ್ಠ ತತ್ತ್ವವೆಂದು ಯಮನು ತಿಳಿಸುತ್ತಾನೆ.

ಉಪನಿಷತ್ತಿನ ಅಧ್ಯಾತ್ಮವೇತ್ತರಾದ ಋಷಿಗಳು ನಾನಾತ್ಮಕವಾದ, ಸತತವಾಗಿ ಪರಿವರ್ತನಶೀಲವಾದ, ಹಾಗೂ ಅನಿತ್ಯವಾದ ಈ ಜಗತ್ತಿನ ಮೂಲದಲ್ಲಿ ಇರುವ ಶಾಶ್ವತವಾದ ಸತ್ತಾತ್ಮಕವಾದ ಪದಾರ್ಥವನ್ನು ತಾತ್ತ್ವಿಕದೃಷ್ಟಿಯಿಂದ ವಿವೇಚನೆ ಮಾಡಿರುತ್ತಾರೆ. ಈ ಅನ್ವೇಷಣ ಕಾರ್ಯದಲ್ಲಿ ಅಧಿದೈವಿಕ ಅಧಿಭೌತಿಕ ಮತ್ತು ಅಧ್ಯಾತ್ಮಿಕ ಎಂಬ ಮೂರು ಸ್ತರಗಳಲ್ಲಿ ಪ್ರವರ್ತಿಸಿದ್ದಾರೆ. ಅಧಿದೈವಿಕ ಪದ್ಧತಿಯು ನಾನಾರೂಪದ ಹಾಗೂ ಸ್ವಭಾವದ ಅನೇಕ ದೇವತೆಗಳಲ್ಲಿ ಶಕ್ತಿಸಂಚಾರವಾಗುವಂತೆ ಮಾಡುವ ಪರಮಾತ್ಮ ತತ್ತ್ವವೊಂದನ್ನು ವಿಮರ್ಶಿಸುತ್ತದೆ. ಅಧಿಭೌತಿಕ ಪದ್ಧತಿಯು ಈ ಭೌತಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ವಿನಾಶಗಳ ಕಾರಣವನ್ನು ವಿಮರ್ಶೆ ಮಾಡುತ್ತ ವಿಲಕ್ಷಣವಾದ ನಿತ್ಯಪದಾರ್ಥದ ನಿರೂಪಣೆಯಲ್ಲಿ ಸಮರ್ಥವಾಗುತ್ತದೆ. ಅಧ್ಯಾತ್ಮಿಕ ಪದ್ಧತಿಯಲ್ಲಿ ಮಾನಸಿಕ ಪ್ರಕ್ರಿಯೆ ಮತ್ತು ಶಾರೀರಿಕ ಕಾರ್ಯಗಳನ್ನು ಅವಲೋಕಿಸುವುದರಿಂದ ಅವುಗಳ ಮೂಲಭೂತವಾದ ತತ್ತ್ವವನ್ನು ನಿರೂಪಿಸುತ್ತದೆ. ಉಪನಿಷತ್ ಋಷಿಗಳು ಈ ಮೂರು ಪದ್ಧತಿಗಳ ಮೂಲಕ ಯಾವ ಪರಮತತ್ತ್ವ ಅಥವಾ ಅತ್ಯಂತ ಸತ್ಯಭೂತ ವಾದ ಪದಾರ್ಥವನ್ನು ಊಹಿಸಿರುವರೋ ಅದನ್ನೇ ಬ್ರಹ್ಮವೆಂದು ಕರೆಯುವುದು. ಆ ಬ್ರಹ್ಮವನ್ನು ಸಗುಣವೆಂದಾಗಲಿ, ನಿರ್ಗುಣವೆಂದಾಗಲಿ ಕರೆಯಲಿ, ಆ ತತ್ತ್ವ ವಾದರೋ ಒಂದೇ. ಈ ಆತ್ಮನ ಅಪರೋಕ್ಷಾನುಭೂತಿಯೇ ಉಪನಿಷತ್ತುಗಳ ಪರಮ ಸಿದ್ಧಾಂತ. ಈ ಅಪರೋಕ್ಷಾನುಭೂತಿಯೇ ವೈದಿಕತತ್ತ್ವಜ್ಞಾನದ ಹೃದಯ ವಾಗಿರುತ್ತದೆ. "ಸ ಆತ್ಮಾ ತತ್ತ್ವಮಸಿ ; ಅಯಮಾತ್ಮಾ ಬ್ರಹ್ಮ : ಅಹಂ ಬ್ರಹ್ಮಾಸ್ಮಿ : ಸರ್ವಂ ಖಲ್ವಿದಂ ಬ್ರಹ್ಮ : ಬ್ರಹ್ಮವಿತ್ ಬ್ರಹ್ಮೈವ ಭವತಿ : ಅತ್ರಬ್ರಹ್ಮ ಸಮಶ್ನುತೇ : ಸತ್‌ಚಿದಾನಂದಂ ಬ್ರಹ್ಮ"–ಇವೇ ಮುಂತಾದ ನೂರಾರು ಶ್ರುತಿವಾಕ್ಯಗಳು ಅದ್ವೈತ ದರ್ಶನವನ್ನು ಪ್ರತಿಪಾದಿಸುತ್ತವೆ. ಆದ್ದರಿಂದ, ಮುಂದೆ ಕರೆಯಲಾಗುವ ಅದ್ವೈತ ದರ್ಶನವನ್ನು ಶ್ರೌತದರ್ಶನ, ಔಪನಿಷದ ದರ್ಶನವೆಂದು ಸಂಪ್ರದಾಯವಾಗಿ ಕರೆಯುತ್ತಾರೆ. ಈ ದರ್ಶನವು ನಾರಾಯಣ, ಪದ್ಮಭವ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ, ಶುಕ, ಗೌಡಪಾದ ಹಾಗೂ ಗೋವಿಂದ ಭಗವತ್ಪಾದರ ವರೆಗೆ ಅವಿಚ್ಛಿನ್ನವಾಗಿ ಪ್ರವಹಿಸುತ್ತಾ ಬಂದಿದೆ. ಹಾಗೂ ಬ್ರಹ್ಮಸೂತ್ರದಲ್ಲಿಯೇ ಹೆಸರಿಸಲ್ಪಟ್ಟಿರುವ ಅನೇಕ ದಾರ್ಶನಿಕರಿಂದ ಪ್ರತಿಪಾದಿಸಲ್ಪಟ್ಟಿದೆ. ಇದಿಷ್ಟು ಅದ್ವೈತ ದರ್ಶನದ ಹಿನ್ನೆಲೆ.

ಶ್ರೀ ಶಂಕರಭಗವತ್ಪಾದರು ಭಾರತದ ಭೂಮಿಯಲ್ಲಿ ಅವತರಿಸಿದ ಸಮಯ ದಾರ್ಶನಿಕ ಇತಿಹಾಸದಲ್ಲಿ ಅಥವಾ ಅಧ್ಯಾತ್ಮಶಾಸ್ತ್ರದ ಇತಿಹಾಸದಲ್ಲಿ ಒಂದು ಸಂಧಿಕಾಲ. ಸಂಪ್ರದಾಯವಾಗಿ ಬಂದಿದ್ದ ವೈದಿಕಕರ್ಮಾನುಷ್ಠಾನಗಳ ಹಿಂದಿದ್ದ ಆಧ್ಯಾತ್ಮಿಕ ಭಾವನೆ

ಗಳನ್ನು ಮರೆತು, ಕೇವಲ ದಂಭಾಚಾರಕ್ಕಾಗಿ ಕರ್ಮಗಳನ್ನು ಮಾಡುವುದಲ್ಲದೆ, ಅಕರ್ಮಣ್ಯತೆಯು ಪ್ರವರ್ಧಮಾನಕ್ಕೆ ಬರುತ್ತಿದ್ದರೆ, ಮತ್ತೊಂದೆಡೆ ಅವೈದಿಕ ದರ್ಶನಗಳು ಪ್ರಬಲವಾಗುತ್ತಿದ್ದ ಸಮಯ. ವರ್ಣಾಶ್ರಮಧರ್ಮಗಳ ಕಟ್ಟುಪಾಡುಗಳು ಸಡಿಲಗೊಳ್ಳುತ್ತಿದ್ದವು. ಚಾರ್ವಾಕರು ನಾಸ್ತಿಕವಾದವನ್ನು ಹರಡುತ್ತಿದ್ದರು. ಅನೇಕಾತ್ಮ ಸಿದ್ಧಾಂತವನ್ನು ಪ್ರತಿಪಾದಿಸುವ ಸಾಂಖ್ಯರು ಈಶ್ವರಾಸ್ತಿಕ್ಯವಾದವನ್ನು ನಿರಾಕರಿಸಿದ್ದರು. ಮೀಮಾಂಸಕರು ಕೇವಲ ಕರ್ಮಪ್ರಾಶಸ್ತ್ಯವನ್ನು ಎತ್ತಿಹಿಡಿದು. ಕರ್ಮಗಳ ಹಿಂದೆ ಅನುಸ್ಯೂತವಾಗಿದ್ದ ಆಧ್ಯಾತ್ಮಿಕ ಭಾವನೆಗಳನ್ನು ಮರೆತಿದ್ದರು. ಬೌದ್ಧರು ವೇದಗಳ ಪ್ರಾಮಾಣ್ಯವನ್ನು ಒಪ್ಪದೆ ನೈರಾತ್ಮ್ಯವಾದ ಮತ್ತು ಶೂನ್ಯವಾದಗಳನ್ನು ಪ್ರಚಾರ ಮಾಡುತ್ತಿದ್ದರು. ವೇದಗಳ ಪ್ರಾಮಾಣ್ಯವನ್ನು ಒಪ್ಪದ ಅವೈದಿಕ ದರ್ಶನವಾದ ಜೈನ ಪಂಥಾನುಯಾಯಿಗಳು ತಮ್ಮ ಸಪ್ತಭಂಗೀನಯದ ಮೂಲಕ ಸತ್ಯದ ಸ್ವರೂಪವನ್ನು ಸಂಪೂರ್ಣ ಸಂದೇಹಗ್ರಸ್ತವನ್ನಾಗಿ ಮಾಡಿ ಈಶ್ವರಾಸ್ತಿಕ್ಯವನ್ನು ನಿರಾಕರಿಸಿದ್ದರೆ, ಕಾಪಾಲಿಕರು. ಶಾಕ್ತರು. ಗಾಣಾಪತ್ಯ–ಮುಂತಾದ ವಾಮಾಚಾರಾವಲಂಬಿಗಳು ಉಗ್ರ ಪೂಜಾವಿಧಾನಗಳಿಂದ ಹಿತಕರವಲ್ಲದ ಆಚಾರಗಳಿಂದ ಸನಾತನಧರ್ಮ ಅಥವಾ ಔಪನಿಷದ ದರ್ಶನ ವಿಸ್ಮೃತಪ್ರಾಯವಾಗುವ ಪರಿಸ್ಥಿತಿಗೆ ಬಂದಿತ್ತು. ಈ ಪರಿಸ್ಥಿತಿಯಲ್ಲಿ ಶ್ರೀ ಭಗವತ್ಪಾದರ ಅವತಾರವಾಗಿ. ಪುನಃ ಸನಾತನ ಧರ್ಮದ ವೈಜಯಂತಿಯು ಉನ್ನತವಾಗಿ ವಿಜೃಂಭಿಸಿತು ಶ್ರೀ ಭಗವತ್ಪಾದರು, ಸನಾತನಧರ್ಮದ ಉದ್ಧಾರಕ್ಕಾಗಿ ಸಾಕ್ಷಾತ್ ಶಂಕರನೇ ಎತ್ತಿದ ಅವತಾರವೆಂದು ನಂಬಿಕೆ. ಶ್ರೀ ಶಂಕರರ ಜೀವನ ವೃತ್ತಾಂತಗಳನ್ನು ನಿರೂಪಿಸುವ ಅನೇಕ ಶಂಕರ ದಿಗ್ವಿಜಯಗಳಿವೆ. ಆದರೆ, ಇವುಗಳಲ್ಲಿ ಏಕರೂಪತೆಯಿರುವುದಿಲ್ಲ; ಮತ್ತು ಇವು ಯಾವುವೂ ಸಮಕಾಲೀನ ಗ್ರಂಥಗಳಲ್ಲ. ಶ್ರೀ ಭಗವತ್ಪಾದರ ಸಾಕ್ಷಾತ್ ಶಿಷ್ಯರಲ್ಲೊಬ್ಬರಾದ ಪದ್ಮಪಾದರು "ವಿಜಯ ಡಿಂಡಿಮ"ವೆಂಬ ಗ್ರಂಥವನ್ನು ಬರೆದಿದ್ದರೆಂದು ಸಂಪ್ರದಾಯ ತಿಳಿಸುತ್ತದೆ. ಇದರಲ್ಲಿ ಪ್ರಾಯಃ ಆಚಾರ್ಯರ ವಿಜಯಯಾತ್ರೆಯ ವಿವರಣೆ, ಹೆಸರೇ ಸೂಚಿಸುವಂತೆ, ಇರುವಂತೆ ಕಾಣುತ್ತದೆ. ದುರ್ದೈವವಶಾತ್ ಈ ಗ್ರಂಥ ಉಪಲಬ್ಧವಾಗಿಲ್ಲ. ಅದು ಸಿಕ್ಕಿದರೆ, ಆಚಾರ್ಯರ ವಿಷಯದಲ್ಲಿ ಪ್ರಾಮಾಣಿಕ ನಿರೂಪಣೆ ನಮಗೆ ದೊರಕುತ್ತದೆ. ಆದರೆ, ಈಗ ಉಪಲಬ್ಧವಾಗಿರುವ ಶಂಕರ ದಿಗ್ವಿಜಯಗಳೆಲ್ಲವೂ ಅರ್ವಾಚೀನಗಳಾಗಿರುವುದರಿಂದ, ಅವುಗಳ ವಿಷಯದಲ್ಲಿ ನಾವು ಎಚ್ಚರಿಕೆಯಿಂದ ಇರುವುದು ಅತ್ಯಾವಶ್ಯಕ. ಏಕೆಂದರೆ, ಇವುಗಳಲ್ಲಿ ಚಾರಿತ್ರಿಕ ಸತ್ಯಗಳ ಕೊರತೆ ಇರಬಹುದು, ಮತ್ತು ಇವು ಪವಾಡಗಳಿಂದ ಕೂಡಿರಬಹುದು. ಮಹಾತ್ಮರ ಅಥವಾ ಮಹಾಪುರುಷರ ಜೀವನದ ಸುತ್ತ ಪವಾಡಗಳನ್ನು ನಿರ್ಮಿಸುವುದು ಎಲ್ಲ ದೇಶ ಎಲ್ಲ ಕಾಲಗಳಲ್ಲಿಯೂ ಸಾಮಾನ್ಯವಾದುದು. ಮಾಧವೀಯ ಶ್ರೀ ಶಂಕರ ದಿಗ್ವಿಜಯವನ್ನು ಪ್ರಾಮಾಣಿಕವೆಂದು ಅಂಗೀಕರಿಸುವುದು ಸಂಪ್ರದಾಯ. ಶ್ರೀ ಶಂಕರರ ಸುತ್ತ ಹೆಣೆದಿರುವ ಅನೇಕ ಪವಾಡಗಳನ್ನು ತಿರಸ್ಕರಿಸಿದರೂ, ಶ್ರೀ ಶಂಕರರ ವ್ಯಕ್ತಿತ್ವಕ್ಕೆ ಯಾವ ಕುಂದೂ ಉಂಟಾಗುವುದಿಲ್ಲ. ಅವರು

ಸಾಕ್ಷಾತ್ ಪರಮೇಶ್ವರನ ಅವಾತಾರವೆಂಬ ಅಂಶವನ್ನು ಕೇವಲ ಮೂಢನಂಬಿಕೆಯಿಂದು ತಳ್ಳಿಹಾಕಿದರೂ, ಅವರ ಸಾಧನೆಗಳನ್ನು ನಾವು ಸೂಕ್ಷ್ಮವಾಗಿ ವಿವೇಚನೆ ಮಾಡಿದರೆ ಅವರು ಅವತಾರ ಪುರುಷರಾಗಿರದೇ ಸಾಧ್ಯವಿಲ್ಲವೆಂಬುದು ವ್ಯಕ್ತವಾಗುತ್ತದೆ.

ಈ ವರ್ಷವನ್ನು ನಾವು ಶ್ರೀ ಭಗವತ್ಪಾದರು ಅವತರಿಸಿದ ದ್ವಾದಶ ಶತಾಬ್ದ ವೆಂದು ಆಚರಿಸುತ್ತಿದ್ದೇವೆ. ಇಂದಿಗೆ, 1200 ವರ್ಷಗಳ ಹಿಂದೆ ಶ್ರೀ ಶಂಕರರು ಈ ಭಾರತ ಭೂಮಿಯಲ್ಲಿ ಅವತರಿಸಿದರು. ಅಂದರೆ, ಶ್ರೀ ಶಂಕರರ ಜನನ ಕ್ರಿ.ಶ. 788 ಎಂಬುದು ಬಹುತೇಕ ನಿಶ್ಚಿತವಾದ ಸಮಯ. ಇದನ್ನು ಅಂಗೀಕರಿಸದೆ, ಕೆಲವರು ಶ್ರೀ ಶಂಕರರ ಸಮಯವನ್ನು ಕ್ರಿ.ಪೂ. 509 ಎಂದು ಹೇಳುತ್ತಾರೆ. ಇದು ಕೇವಲ ಕಟ್ಟುಕತೆ. ಒಂದು ವೇಳೆ ಈ ಸಮಯವನ್ನು ನಾವು ಒಪ್ಪಿದರೆ, ಆಗ ಭಾರತೀಯ ಸಾಹಿತ್ಯದ ಚರಿತ್ರೆಯೇ ಪುನರ್ನಿರ್ಮಾಣವಾಗಬೇಕಾಗುತ್ತದೆ. ಕಾಳಿದಾಸಾದಿಗಳ ಕಾಲವನ್ನು ನಾವು ಅದಕ್ಕೂ ಹಿಂದೆ ಎಂದು ಪರಿಗಣಿಸಬೇಕಾಗುತ್ತದೆ. ಹಾಗೂ ಕೇವಲ ಆಭಾಸಗಳ ಪರಂಪರೆಯಾಗುತ್ತದೆ. ಶ್ರೀ ಶಂಕರರು ತಮ್ಮ ಭಾಷ್ಯಗಳಲ್ಲಿ ಬೌದ್ಧ ಆಚಾರ್ಯರುಗಳಾದ ದಿಙ್ನಾಗ, ಧರ್ಮಕೀರ್ತಿ–ಇವರುಗಳ ಗ್ರಂಥಗಳಿಂದ ವಾಕ್ಯಗಳನ್ನು ಉದಾಹರಿಸಿದ್ದಾರೆ ; ಹಾಗೂ ಬ್ರಹ್ಮಸೂತ್ರದ 2–2–22 ಮತ್ತು 2–2–24 ಸೂತ್ರಗಳ ಮೇಲಿನ ತಮ್ಮ ಭಾಷ್ಯದಲ್ಲಿ ಇಬ್ಬರು ಬೌದ್ಧಾಚಾರ್ಯರುಗಳ ವಾಕ್ಯಗಳನ್ನು ಉದಾಹರಿಸಿದ್ದಾರೆ. ಇದರಲ್ಲಿ ಮೊದಲನೆಯದು ಬೌದ್ಧಾಚಾರ್ಯನಾದ ಗುಣಮತಿಯ ಅಭಿಧರ್ಮಕೋಶ ವ್ಯಾಖ್ಯಾನ ದಲ್ಲಿ ಉಪಲಬ್ಧವಾಗಿದೆ. ಗುಣಮತಿಯ ಸಮಯ 7ನೆಯ ಶತಮಾನದ ಮಧ್ಯಭಾಗ. ಆದ್ದರಿಂದ, ಶ್ರೀ ಶಂಕರರ ಕಾಲ 7ನೇ ಶತಮಾನಕ್ಕಿಂತ ಹಿಂದೆ ಇರಲಾರದೆಂಬುದು ನಿರ್ವಿವಾದ. ಇದಲ್ಲದೆ, ಇನ್ನೂ ಅನೇಕ ಆಂತರಿಕ ಹಾಗೂ ಬಾಹ್ಯ ಪ್ರಮಾಣಗಳ ಆಧಾರದ ಮೇಲೆ ಶ್ರೀಶಂಕರರ ಸಮಯ ಕ್ರಿ.ಶ. 788 ರಿಂದ ಕ್ರಿ.ಶ. 820 ರ ವರೆಗೆ ಎಂಬುದು ನಿಶ್ಚಿತವಾಗಿದೆ.

ಕೇರಳ ಪ್ರಾಂತ್ಯದಲ್ಲಿ ವೈದಿಕ ಕರ್ಮಾಚರಣೆಯಲ್ಲಿ ಬಹು ಶ್ರದ್ಧೆಯಿಟ್ಟಿದ್ದ, ಬಹು ನಿಷ್ಠಾವಂತರಾದ, ಸದಾಚಾರಸಂಪನ್ನರಾಗಿದ್ದ ನಂಬೂದರಿ ಬ್ರಾಹ್ಮಣರಿಂದ ಕೂಡಿದ್ದ ಕಾಲಟಿ ಎಂಬ ಅಗ್ರಹಾರ. ಇಲ್ಲಿ ಶಿವಗುರು ಮತ್ತು ಆರ್ಯಾಂಬಾ ಎಂಬ ನಂಬೂದರಿ ಬ್ರಾಹ್ಮಣ ದಂಪತಿಗಳಿಗೆ, ಅವರ ತಪಸ್ಸು ಮತ್ತು ವ್ರತಾಚರಣೆಯ ಫಲವಾಗಿ, ಶ್ರೀ ಶಂಕರರ ಜನನವಾಗುತ್ತದೆ. ಶ್ರೀ ಶಂಕರರ ಜೀವನದ ವಿಷಯ ಬಹು ಪ್ರಸಿದ್ಧ ವಾದುದು ಮತ್ತು ಸರ್ವಜನವಿದಿತವಾದುದು. ಆದುದರಿಂದ, ಆ ವಿಷಯದಲ್ಲಿನ ದೀರ್ಘ ವಾದ ವಿವರಣೆಗಳಿಗೆ ಹೋಗದೆ, ಕೇವಲ ಪ್ರಮುಖವಾದ ವಿಷಯಗಳನ್ನು ಮಾತ್ರ ನಿರೂಪಿಸಲಾಗಿದೆ. ಬ್ರಹ್ಮಾದಿ ದೇವತೆಗಳ ಪ್ರಾರ್ಥನಾನುಸಾರವಾಗಿ, ಭಾರತದಲ್ಲಿ ಪ್ರಚಲಿತವಾಗಿದ್ದ ಪಾಷಂಡಮತಗಳನ್ನು ಖಂಡನೆ ಮಾಡಿ, ಅವುಗಳಲ್ಲಿದ್ದ ದೋಷ

ಗಳನ್ನು ನಿವಾರಣೆಮಾಡಿ. ವೈದಿಕಮತಾನುಯಾಯಿಗಳನ್ನಾಗಿ ಮಾಡಿ, ಸನಾತನ ಧರ್ಮವನ್ನು ಉದ್ಧಾರಮಾಡುವುದಕ್ಕಾಗಿ ಸಾಕ್ಷಾತ್ ಪರಶಿವನೇ ಶ್ರೀ ಶಂಕರರ ರೂಪದಲ್ಲಿ ಅವತರಿಸಿದನೆಂಬ ಸಂಪ್ರದಾಯವಾಗಿ ಬಂದ ಐತಿಹ್ಯ.

ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ ।
ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥

ಇದು ಆಚಾರ್ಯರ ವಿಷಯದಲ್ಲಿ ಹೇಳುವ ಒಂದು ಶ್ಲೋಕ. ಶ್ರೀ ಶಂಕರರು ತಮ್ಮ ಎಂಟನೆಯ ವಯಸ್ಸಿನಲ್ಲಿ ಸಕಲವೇದಾಧ್ಯಯನ ಮಾಡಿದರು. ಹನ್ನೆರಡನೆಯ ವಯಸ್ಸಿನ ಹೊತ್ತಿಗೆ ಸಮಸ್ತ ಶಾಸ್ತ್ರಗಳಲ್ಲಿಯೂ ಪಾಂಡಿತ್ಯ ಗಳಿಸಿದರು. ತಮ್ಮ ಹದಿನಾರನೆಯ ವಯಸ್ಸಿಗೆ ಪ್ರಸ್ಥಾನತ್ರಯಗಳಿಗೆ ಅಮೋಘವಾದ ಭಾಷ್ಯಗಳನ್ನು ರಚಿಸಿದರು. ಅಲ್ಲಿಂದ ತಮ್ಮ ಮೂವತ್ತೆರಡನೆಯ ವಯಸ್ಸಿನ ತನಕ ತಮ್ಮ ಭಾಷ್ಯಗಳಲ್ಲಿ ಪ್ರತಿಪಾದಿತವಾದ ಔಪನಿಷದ ದರ್ಶನವನ್ನು ಭಾರತದ ಮೂಲೆ ಮೂಲೆಯಲ್ಲಿಯೂ ಪ್ರಚಾರ ಮಾಡಿದರು. ಅವೈದಿಕ ಮತಗಳನ್ನು ಹಾಗೂ ವೈದಿಕ ಮತಗಳಾದರೂ ದೋಷಗಳಿಂದ ದುಷ್ಟವಾಗಿದ್ದ ಇತರ ಮತಗಳನ್ನು, ಭಾರತದಲ್ಲೆಲ್ಲ ಮೂರು ಬಾರಿ ಸಂಚರಿಸಿ, ವಾದದಲ್ಲಿ ಖಂಡನೆಮಾಡಿ, ಸನಾತನ ಧರ್ಮದ ವೈಜಯಂತಿಯು ಎತ್ತರದಲ್ಲಿ ಹಾರಾಡುವಂತೆ ಮಾಡಿದರು. ಪ್ರಾಯಃ ಅಂದು ಅವರು ಆ ಕೆಲಸ ಮಾಡದೆ ಇದ್ದಿದ್ದರೆ, ಇಂದು ನಾವಾರೂ ಸನಾತನ ಧರ್ಮಾವಲಂಬಿಗಳಾಗಿ ಉಳಿಯುತ್ತಿರಲಿಲ್ಲ. ತಮ್ಮ ಅಲೌಕಿಕವಾದ ಪ್ರತಿಭೆ, ಸೂಕ್ಷ್ಮಾರ್ಥಗಳನ್ನು ಗ್ರಹಿಸಲು ಸಮರ್ಥವಾದ ತೀಕ್ಷ್ಣ ಬುದ್ಧಿ. ಗಾಢವಾದ ಅನುಶೀಲನೆ ಮತ್ತು ಶುದ್ಧ ಚಾರಿತ್ರ್ಯ, ಅಪ್ರತಿಮವಾದ ತಾರ್ಕಿಕ ಸಾಮರ್ಥ್ಯದಿಂದ ಪಾಷಂಡ ಮತಗಳನ್ನು ನಿರುತ್ತರರನ್ನಾಗಿ ಮಾಡಲು ಅವರು ಸಮರ್ಥರಾದರು. ಶ್ಲೋಕದಲ್ಲಿ ಹೇಳಿರುವ ಮೂರು ಕಾರ್ಯಗಳನ್ನು ಓರ್ವ ಅಲೌಕಿಕನಾದ ವ್ಯಕ್ತಿ ಮಾಡಲು ಸಮರ್ಥನಾದಾನೇ ಹೊರತು, ಸಾಧಾರಣ ವ್ಯಕ್ತಿಯಿಂದ ಸಾಧ್ಯವಾಗದು. ಈ ದೃಷ್ಟಿಯಿಂದ ಶ್ರೀ ಶಂಕರರನ್ನು ಅವತಾರ ಪುರುಷರೆನ್ನಲು ಯಾವ ಬಾಧೆಯೂ ಇಲ್ಲ. ಅವರು ತಮ್ಮ ತಾಯಿಯವರ ಅನುಕೂಲಕ್ಕಾಗಿ ಪೂರ್ಣಾನದಿಯ ಪಾತ್ರವನ್ನು ಬದಲಾಯಿಸಿದ್ದು. ದರಿದ್ರಳಾದ ಬ್ರಾಹ್ಮಣಿಯೊಬ್ಬಳಿಗೆ ಕನಕಧಾರೆಯನ್ನು ಸುರಿಸಿ ಲಕ್ಷ್ಮೀಕಟಾಕ್ಷವನ್ನು ಮಾಡಿಸಿದ್ದು, ಆಪತ್ಸಂನ್ಯಾಸವನ್ನು ತೆಗೆದುಕೊಂಡಾಗ ತಮ್ಮ ತಾಯಿಗೆ ವಚನ ಕೊಟ್ಟಿದ್ದು ಹಾಗೂ ತಮ್ಮ ಮಾತಿನಂತೆ, ಊರಿನ ಮಡಿವಂತರ ವಿರೋಧವಿದ್ದರೂ. ನಡೆದುಕೊಂಡಿದ್ದು, ಗುರುವನ್ನು ಅರಸುತ್ತ ಹೊರಟು ನರ್ಮದಾ ತೀರಕ್ಕೆ ಬಂದು, ನದಿಯ ಭಯಂಕರವಾದ ಪ್ರವಾಹವನ್ನು ತಮ್ಮ ಕಮಂಡಲುವಿನೊಳಗೆ ತಡೆಹಿಡಿದು. ಶ್ರೀಗೋವಿಂದ ಭಗವತ್ಪಾದರ ಕೃಪಾಕಟಾಕ್ಷಕ್ಕೆ ಪಾತ್ರರಾದುದು - ಈ ಎಲ್ಲ ಅಲೌಕಿಕ ಘಟನೆಗಳೂ ಅವರ ಅಲೌಕಿಕ ವ್ಯಕ್ತಿತ್ವವನ್ನು ಸ್ಪಷ್ಟಪಡಿಸುತ್ತವೆ.

ಅವರ ಸಾಧನೆಗಳನ್ನು ವಿವೇಚನೆ ಮಾಡುವುದೆಂದರೆ, ಅದು ಕಷ್ಟಸಾಧ್ಯ ಹಾಗೂ ಅಗಾಧವಾದುದು. ಅವರ ಒಂದೊಂದು ಕೆಲಸವೂ ಅನುಪಮವಾದುದು. ರಾಮಾಯಣದಲ್ಲಿ ಶ್ರೀವಾಲ್ಮೀಕಿಗಳು ರಾಮ–ರಾವಣರ ಯುದ್ಧವನ್ನು ವರ್ಣಿಸಲು ಪ್ರಯತ್ನಪಟ್ಟು, ಹೇಳುವ–

ಗಗನಂ ಗಗನಾಕಾರಂ ಸಾಗರಸ್ಸಾಗರೋಪಮಃ ।
ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ ॥

ಎಂಬ ಮಾತು ಆಚಾರ್ಯರ ಸಾಧನೆಗೂ ಅನ್ವಯಿಸುತ್ತದೆ. ಶ್ರೀ ಗೋವಿಂದ ಭಗವತ್ಪಾದರಿಂದ ಉಪದಿಷ್ಟರಾದ ಮೇಲೆ, ಅವರಿಂದ ಆಜ್ಞಪ್ತರಾಗಿ, ಹಿಮಾಲಯದ ವ್ಯಾಸಗುಹೆಯಲ್ಲಿದ್ದು ಬ್ರಹ್ಮಸೂತ್ರಗಳು, ಭಗವದ್ಗೀತೆ ಮತ್ತು ಉಪನಿಷತ್ತುಗಳಿಗೆ ಭಾಷ್ಯಗಳನ್ನು ಬರೆದಿರುವುದು ಅಮೋಘಕಾರ್ಯ. ಶ್ರೀ ಶಂಕರರ ಭಾಷ್ಯಗಳಲ್ಲಿ ವಾಗ್ದೇವಿಯು ನರ್ತನಮಾಡುತ್ತಾಳೆ. ವ್ಯಾಖ್ಯಾನಕರ್ತೃವಾದ ವಾಚಸ್ಪತಿಮಿಶ್ರನು ಹೇಳುವಂತೆ, ಶ್ರೀ ಶಂಕರರ ಶೈಲಿಯು ಎಷ್ಟು ಪ್ರಸನ್ನವಾಗಿದೆಯೋ ಅಷ್ಟೇ ಗಂಭೀರವಾಗಿದೆ. ಅದ್ವೈತ ದರ್ಶನವನ್ನು ಪುನಃ ದೃಢವಾದ ನೆಲೆಯಲ್ಲಿ ಸ್ಥಾಪನೆ ಮಾಡುವುದಕ್ಕೆ ಈ ಕಾರ್ಯವನ್ನು ಮಾಡಬೇಕಾಯಿತು. ಅದ್ವೈತ ದರ್ಶನವನ್ನು ತಾವು ಸ್ಥಾಪನೆ ಮಾಡಿ ಪ್ರವರ್ತಿಸಿದುದೆಂದು ಶ್ರೀ ಶಂಕರರು ಎಲ್ಲೂ ಹೇಳಿಲ್ಲ. ಒಂದು ವೇಳೆ ಹಾಗೆ ಹೇಳಿದ್ದರೆ, ಆ ಸಿದ್ಧಾಂತಕ್ಕೆ ಪ್ರಾಮಾಣ್ಯ ಬರುತ್ತಿರಲಿಲ್ಲ. ಅವರು ತಮ್ಮ ಭಾಷ್ಯದಲ್ಲಿ ಅನೇಕ ಕಡೆ–ಸಂಪ್ರದಾಯ ವಿದ್ಭಿರಾಚಾರ್ಯೈಃ, ಇತಿ ಸಂಪ್ರದಾಯವಿದಾಹುಃ –ಎಂದು ಹೇಳಿರುತ್ತಾರೆ. ಅಂದರೆ ತಾವು ಪ್ರತಿಪಾದಿಸುತ್ತಿರುವ ಅದ್ವೈತದರ್ಶನವು ಸಾಂಪ್ರದಾಯಿಕವಾಗಿ ಬಂದಿರುವುದು: ಅದನ್ನೇ ಪ್ರತಿಪಾದನೆ ಮಾಡಿ ತೋರಿಸುತ್ತಿದ್ದೇನೆ ಎಂಬುದು ಅವರ ಅಭಿಪ್ರಾಯ. ಒಂದು ಸಿದ್ಧಾಂತವನ್ನು ಸ್ಥಾಪನೆ ಮಾಡಬೇಕಾದರೆ ಯಾವ ಗ್ರಂಥಗಳನ್ನು ಪ್ರಮಾಣವಾಗಿ ತೆಗೆದುಕೊಳ್ಳಬೇಕೆಂಬುದನ್ನು ಮೊತ್ತಮೊದಲಿಗೆ ತೋರಿಸಿದವರು ಆಚಾರ್ಯರು. ಶ್ರುತಿಪ್ರಸ್ಥಾನ, ಸ್ಮೃತಿಪ್ರಸ್ಥಾನ ಮತ್ತು ನ್ಯಾಯಪ್ರಸ್ಥಾನಗಳೆಂಬ ಪ್ರಸ್ಥಾನತ್ರಯವನ್ನು ತೋರಿಸಿಕೊಟ್ಟರು. ಯಾವ ಸಿದ್ಧಾಂತವನ್ನು ಪ್ರತಿಪಾದನೆ ಮಾಡಬೇಕಾದರೂ, ಅದು ಶ್ರುತಿಪ್ರತಿಪಾದ್ಯವಾಗಿರಬೇಕು ಹಾಗು ಶ್ರುತಿಯಿಂದ ಪ್ರಮಾಣಿತವಾಗಿರಬೇಕು. ಇಲ್ಲದೆ ಹೋದರೆ ನ್ಯಾಸ್ಯತೆ ಬರುವುದಿಲ್ಲ. ತಾವು ಪ್ರತಿಪಾದಿಸುತ್ತಿರುವುದು ಶ್ರುತಿಯಲ್ಲಿರುವ ಸಿದ್ಧಾಂತವನ್ನೇ ಎಂದು ದಶೋಪನಿಷತ್ತುಗಳಿಗೆ ಭಾಷ್ಯಗಳನ್ನು ಬರೆದು ತೋರಿಸಿದರು. ಆ ಸಿದ್ಧಾಂತವನ್ನೇ. ಪೂರ್ಣಾವತಾರಿಯಾದ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶ ಮಾಡುವ ಮೂಲಕ ಭಗವದ್ಗೀತೆಯಲ್ಲಿ ಪ್ರತಿಪಾದಿಸಿದ್ದಾನೆ ಎಂಬುದನ್ನು ಸ್ಮೃತಿಪ್ರಸ್ಥಾನವಾದ ಭಗವದ್ಗೀತೆಗೆ ಭಾಷ್ಯ ಬರೆದು ತೋರಿಸಿದರು. ನ್ಯಾಯಪ್ರಸ್ಥಾನವಾದ ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದು ಈ ಸಿದ್ಧಾಂತವು ನಿರ್ದುಷ್ಟವಾದುದೆಂದು ಪ್ರತಿಪಾದನೆ ಮಾಡಿದರು. ಈ ರೀತಿ ಪ್ರಸ್ಥಾನ

ತ್ರಯಗಳಿಗೆ ಭಾಷ್ಯ ರಚಿಸಿ ಸಿದ್ಧಾಂತ ಪ್ರತಿಪಾದನೆ ಮಾಡುವುದಕ್ಕೆ ಮೊತ್ತಮೊದಲು ಮಾರ್ಗ ತೋರಿಸಿದವರು ಆಚಾರ್ಯರು. ಇನ್ನು ಅದ್ವೈತದರ್ಶನವನ್ನು ಸ್ಥೂಲವಾಗಿ ಪರಿಚಯಿಸುವುದಾದರೆ–"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" – ಎಂದು ಶ್ಲೋಕಾರ್ಧದಲ್ಲಿ ಹೇಳಬಹುದು. ಈ ಸೃಷ್ಟಿಯಲ್ಲಿ ಬ್ರಹ್ಮವಸ್ತುವೊಂದೇ ಸತ್ಯವಾದುದು. ಸತ್ಯವೆಂದರೆ, ಯಾವುದು ತ್ರಿಕಾಲಗಳಲ್ಲಿಯೂ ವಿಕಾರವನ್ನು ಹೊಂದುವುದಿಲ್ಲವೋ ಅದು ಸತ್ಯ. ಅಂತಹ ಸದ್ವಸ್ತು ಒಂದು ಮಾತ್ರ ಇರಲು ಸಾಧ್ಯವೇ ಹೊರತು ಎರಡಿರಲಾರದು. ಇನ್ನೊಂದು ವಸ್ತುವು ಹಾಗೆ ಇತ್ತೆಂದರೆ ಗೌಡಪಾದರು ಹೇಳುವಂತೆ– "ದ್ವಿತೀಯಾದ್ವೈ ಭಯಂ ಭವತಿ" ಎಂದಾಗುತ್ತದೆ. ಹಿಂದೆ ಉದಾಹರಿಸಲಾಗಿರುವ– "ಏಕಂ ಸತ್...." ಎಂಬ ಋಗ್ವೇದ ಮಂತ್ರವನ್ನು ಸ್ಮರಿಸಬಹುದು. ಉಪನಿಷತ್ತುಗಳಲ್ಲಿ ಬರುವ–ಐತದಾತ್ಮ್ಯಮಿದಂ ಸರ್ವಂ; ಸ ಆತ್ಮಾ; ಇತ್ಯಾದಿ ಅನೇಕ ಶ್ರುತಿವಾಕ್ಯಗಳು ಈ ವಿಷಯವನ್ನು ಪುಷ್ಟೀಕರಿಸುತ್ತವೆ. ಈ ಆತ್ಮನು ಪ್ರಮಾಣಾದಿ ವ್ಯವಹಾರಗಳಿಗೆ ಆಶ್ರಯನು; ಈ ವ್ಯವಹಾರಗಳಿಗಿಂತ ಮುಂಚೆಯೇ ಆತ್ಮನು ಪ್ರಸಿದ್ಧನಾಗಿದ್ದಾನೆ; ಆತ್ಮನ ನಿರಾಕರಣೆ ಸಾಧ್ಯವಿಲ್ಲ; ಆಗಂತುಕ ವಸ್ತುವಿನ ನಿರಾಕರಣೆ ಸಾಧ್ಯವೇ ಹೊರತು ಸ್ವಭಾವದ ನಿರಾಕರಣೆ ಸಾಧ್ಯವಿಲ್ಲ–ಇದು ಆತ್ಮಾಸ್ತಿತ್ವದ ವಿಷಯದಲ್ಲಿ ಆಚಾರ್ಯರು ಹೇಳುವ ಮಾತು. ಎರಡನೆಯದು ಜಗನ್ಮಿಥ್ಯಾತ್ವ: ಈ ಸಿದ್ಧಾಂತ ವಿಷಯದಲ್ಲಿ ಅನೇಕರು ತಪ್ಪು ಕಲ್ಪನೆ ಮಾಡಿಕೊಂಡು ಪ್ರವರ್ತಿಸುತ್ತಾರೆ. ಮಿಥ್ಯಾ ಎಂದರೆ ಸುಳ್ಳು ಎಂದು ಅರ್ಥ ಮಾಡುತ್ತಾರೆ. ಅದು ಶುದ್ಧ ತಪ್ಪು. ಮಿಥ್ಯಾ ಎಂದರೆ ಅಪರಮಾರ್ಥ, ಅಸತ್ಯ ಎಂದು. ಸತ್ಯದ ಜ್ಞಾನವಾಗುತ್ತಿದ್ದ ಹಾಗೇ ನಿವೃತ್ತವಾಗುತ್ತದೆ. ಆಚಾರ್ಯರ ಪರಿಭಾಷೆಯಲ್ಲಿ ಸತ್ಯವೆಂದರೆ–ಯದ್ರೂಪೇಣ ಯನ್ನಿಶ್ಚಿತಂ ತದ್ರೂಪೇಣ ನ ವ್ಯಭಿಚರತಿ – ಅಂದರೆ ಯಾವ ರೂಪದಿಂದ ನಿಶ್ಚಿತವಾಗುತ್ತದೆಯೋ ಮತ್ತು ಆ ರೂಪ ಸರ್ವದಾ ಸಮಭಾವದಿಂದ ಇರುವುದಾದರೆ ಅದು ಸತ್ಯವೆನಿಸುತ್ತದೆ. ಈ ಪರಿಭಾಷೆಯಿಂದ ವಿಶ್ಲೇಷಿಸಿದರೆ, ಜಗತ್ತು ಸರ್ವದಾ ಚಂಚಲಶೀಲವಾಗಿ, ಪರಿವರ್ತನಶೀಲವಾಗಿರುವುದರಿಂದ ಸತ್ಯವಾಗಲು ಸಾಧ್ಯವಿಲ್ಲ. ವ್ಯವಹಾರೇ ಭಾಟ್ಟನಯಃ – ಎಂಬ ನ್ಯಾಯದಂತೆ, ಜಗತ್ತಿನ ಸತ್ಯವನ್ನು ಅಂಗೀಕರಿಸುವುದಾದರೆ, ಅದು ವ್ಯಾವಹಾರಿಕ ಮಟ್ಟದಲ್ಲಿ ಮಾತ್ರ. ಪರಮತತ್ತ್ವಜ್ಞಾನವಾದ ಮರುಕ್ಷಣ ಜಗತ್ತಿನ ಸತ್ತಾ ನಿವರ್ತಿತವಾಗುತ್ತದೆ. ಈ ಪ್ರಸಂಗದಲ್ಲಿಯೇ ಆಚಾರ್ಯರು ಪ್ರಸಿದ್ಧವಾದ ಮಾಯಾವಾದವನ್ನು ಪ್ರತಿಪಾದನೆ ಮಾಡುವುದು. ಈ ಮಾಯಾವಾದವೂ ಸಹ ಶ್ರುತಿ ಪ್ರತಿಪಾದಿತವಾದುದೇ. ಋಗ್ವೇದದಲ್ಲಿನ– "ಇಂದ್ರೋ ಮಾಯಾಭಿಃ...." ಎಂಬ ಮಂತ್ರವೇ ಆಧಾರ. ಜಗತ್ತು ಮಿಥ್ಯಾಭೂತವಾದುದು ಬ್ರಹ್ಮಸಾಕ್ಷಾತ್ಕಾರ ಹೊಂದಿದ ಬ್ರಹ್ಮಜ್ಞಾನಿಯ ದೃಷ್ಟಿಯಲ್ಲಿ. ಇನ್ನು ಮೂರನೆಯದಾದ–ಜೀವೋ ಬ್ರಹ್ಮೈವ ನಾಪರಃ–ಎಂಬುದು ಈ ಮೇಲಿನ ಎರಡು ತತ್ತ್ವಗಳ ವಿಶ್ಲೇಷಣೆ ಮತ್ತು ಅನುಭವದಿಂದ ಉಂಟಾಗತಕ್ಕ ಜ್ಞಾನ. ಜೀವವೆಂಬುದು ಬೇರೆ ಅಲ್ಲ; ಅದು ಕೇವಲ ಬ್ರಹ್ಮವೇ–ಬ್ರಹ್ಮಾತ್ಮೈಕ್ಯ ಜ್ಞಾನವೂ ಉಪನಿಷತ್

ಪ್ರತಿಪಾದ್ಯವಾದುದೇ. ತತ್ತ್ವಮಸಿ ಎಂಬ ಉಪದೇಶ ವಾಕ್ಯವಾಗಲಿ. ಬ್ರಹ್ಮವಿತ್ ಬ್ರಹ್ಮೈವಭವತಿ ಎಂಬ ಸಿದ್ಧಾಂತವಾಕ್ಯವಾಗಲಿ, ಈ ಎಲ್ಲವೂ ಈ ಸಿದ್ಧಾಂತವನ್ನೇ ಸ್ಪಷ್ಟವಾಗಿ ನಿರೂಪಿಸುತ್ತವೆ. ಈ ರೀತಿಯಾಗಿ ಔಪನಿಷದ ಸಿದ್ಧಾಂತವನ್ನು ಭದ್ರವಾದ ಬುನಾದಿಯ ಮೇಲೆ ಪ್ರತಿಷ್ಠಿತಗೊಳಿಸಿದುದು ಆಚಾರ್ಯರ ಮೊದಲನೆಯ ಸಾಧನೆ. ಪ್ರೌಢವಾದ ತಮ್ಮ ಭಾಷ್ಯಗಳು ಕೇವಲ ವಿದ್ವಾಂಸರಿಗೆ ಮಾತ್ರ ಲಭ್ಯವಾದುದರಿಂದ ಸಾಮಾನ್ಯ ಜನತೆಯ ಶ್ರೇಯೋಭಿವೃದ್ಧಿಗಾಗಿ ಅನೇಕ ಪ್ರಕರಣಗಳನ್ನು ರಚಿಸಿರುವುದಲ್ಲದೆ, ಅನುಪಮ ಕಾವ್ಯಶೈಲಿ ಮತ್ತು ಗೇಯಗುಣಗಳನ್ನು ಹೊಂದಿರುವ ನೂರಾರು ದೇವತಾಸ್ತೋತ್ರಗಳನ್ನು ರಚಿಸಿರುತ್ತಾರೆ. ನಿರ್ಗುಣ ಬ್ರಹ್ಮವನ್ನು ಉಪಾಸನೆ ಮಾಡುವುದು ಸಾಧಾರಣವಾಗಿ ಕಷ್ಟಸಾಧ್ಯವೆಂಬುದನ್ನು ಅರಿತ ಆಚಾರ್ಯರು, ಸಾಮಾನ್ಯರಿಗಾಗಿ ಸಗುಣೋಪಾಸನೆಯ ಮಾರ್ಗವನ್ನು ಈ ದೇವತಾಸ್ತೋತ್ರಗಳ ಮೂಲಕ ತೋರಿಸಿದರು. ಈ ಸ್ತೋತ್ರಗಳು ಮೇಲುನೋಟಕ್ಕೆ ಅದ್ಭುತವಾದ ಸಾಹಿತ್ಯಕೃತಿಗಳಾದರೂ, ಅವುಗಳನ್ನು ಸೂಕ್ಷ್ಮವಾಗಿ ವಿವೇಚನೆಮಾಡಿದರೆ ಅವೆಲ್ಲವುಗಳ ತಾತ್ಪರ್ಯಾರ್ಥ ಅದ್ವೈತ ಸಿದ್ಧಾಂತವೇ ಎಂಬುದು ಸ್ಪಷ್ಟವಾಗುತ್ತದೆ.

ಯಾವ ರೀತಿಯಿಂದಲೂ ಸನಾತನಧರ್ಮಕ್ಕೆ ಚ್ಯುತಿ ಬಾರದಿರುವಂತೆ, ಸರ್ವದಾ ಜನತೆ ಧರ್ಮಮಾರ್ಗದಿಂದ ಚ್ಯುತರಾಗದಂತೆ, ಶ್ರದ್ಧಾಭಕ್ತಿಯಿಂದ ಕೂಡಿದ ಜನತೆಗೆ ಧರ್ಮಮಾರ್ಗದರ್ಶನ ಮಾಡುವುದಕ್ಕೆ, ಭಾರತದ ನಾಲ್ಕು ಮೂಲೆಗಳಲ್ಲಿ ನಾಲ್ಕು ಆಮ್ನಾಯಪೀಠ ಅಥವಾ ಧರ್ಮಪೀಠಗಳನ್ನು ಸ್ಥಾಪಿಸಿ, ತಮ್ಮ ಪ್ರಮುಖರಾದ ನಾಲ್ವರು ಶಿಷ್ಯರನ್ನು ಈ ನಾಲ್ಕು ಪೀಠಗಳಲ್ಲಿ ಅಧಿಪತಿಗಳನ್ನಾಗಿ ಮಾಡಿದುದು ಶ್ರೀ ಶಂಕರರ ದೂರದೃಷ್ಟಿಯ ಪ್ರತೀಕವಾದ, ಅದ್ಭುತವಾದ ಸಾಧನೆ ಎಂದು ಹೇಳಬಹುದು. ಸ್ಥಾಪಿತವಾದ 1200 ವರ್ಷಗಳನಂತರವೂ ಈ ಪೀಠಗಳು ಜಾಗೃತವಾಗಿದ್ದು ಶ್ರದ್ಧಾಭಕ್ತಿಯುಳ್ಳ ಆಸ್ತಿಕರಿಗೆ ನಿತ್ಯಯಾತ್ರಾಸ್ಥಳಗಳಾಗಿವೆ. ಈ ನಾಲ್ಕು ಧರ್ಮಪೀಠಗಳೂ ಅವಿಚ್ಛಿನ್ನವಾಗಿ ತಪೋಮಹಿಮರೂ ಮತ್ತು ವಿದ್ಯಾವಿನಯಸಂಪನ್ನರೂ ಆದ ಗುರುಪರಂಪರೆಯಿಂದ ವಿರಾಜಮಾನವಾಗಿರುವುದು ಇಂದಿಗೂ ಸತ್ಯ. ಈ ಪೀಠಾಧಿಪತಿಗಳು ಇಂದಿಗೂ ದೇಶಸಂಚಾರಮಾಡಿ ಜನತೆಯಲ್ಲಿ ಧರ್ಮಜಾಗೃತಿಯನ್ನುಂಟುಮಾಡುತ್ತಿರುವುದೂ ಸತ್ಯಸಂಗತಿ. ಇದು ಮಾತ್ರವಲ್ಲದೆ, ಧರ್ಮದ ಪ್ರಚಾರಕ್ಕಾಗಿ ದೇಶದಲ್ಲಿ ದಶನಾಮೀಸಂಪ್ರದಾಯದ ಸಂನ್ಯಾಸಿಗಳ ವರ್ಗವೊಂದನ್ನು ಸ್ಥಾಪಿಸಿದರು.

ಮೂರನೆಯದಾಗಿ, ಶ್ರೀಮದಾಚಾರ್ಯರ ಲೋಕಸಂಗ್ರಹ ಕಾರ್ಯ. ತಾವು ಉಪದೇಶ ಮಾಡಿದ ತತ್ತ್ವಗಳನ್ನು ತಮ್ಮ ಜೀವನದ ಆಚರಣೆಯಲ್ಲಿ ತೋರಿಸಿದರು. ಮನುಸ್ಮೃತಿಯಲ್ಲಿ ಬರುವ–ಸ್ವಯಮಾಚರತೇ ಯಸ್ಮಾತ್....–ಎಂಬುದಕ್ಕೆ ಉದಾಹರಣೆಯಾದರು. ಹಿಂದೂಧರ್ಮದ ಎಲ್ಲ ಮತಗಳನ್ನೂ ಪರಿಶೋಧಿಸಿ, ಅವೆಲ್ಲವುಗಳ

ದೋಷಗಳನ್ನು ನಿವಾರಣೆ ಮಾಡಲು ಮಾರ್ಗವನ್ನು ಸೂಚಿಸಿ, ಅದರಂತೆ ಆ ದೋಷಗಳೆಲ್ಲವೂ ನಿವೃತ್ತಿಯಾದನಂತರ ಆ ಎಲ್ಲ ಮತಗಳೂ ಅದ್ವೈತದಲ್ಲಿಯೇ ಪರ್ಯವಸಾನ ಹೊಂದುತ್ತವೆಂಬುದನ್ನು ನಿರೂಪಿಸಿದರು. ದೈವಾಸ್ತಿಕ್ಯವನ್ನು ಒಪ್ಪಿದರೂ, ಅಹಿತಕರವಾಗದ ಶೈವಾದಿ ಆರು ಮತಗಳನ್ನು ಪರಿಷ್ಕರಿಸಿ ಷಣ್ಮತಸ್ಥಾಪನಾಚಾರ್ಯರಾದರು.

ಈ ರೀತಿಯಾಗಿ ಮೂರು ವಿಧಗಳಲ್ಲಿ ಶ್ರೀ ಶಂಕರರ ಸಾಧನೆಗಳನ್ನು ಗುರುತಿಸಬಹುದು.

ಕೊನೆಯದಾಗಿ, ಪರಬ್ರಹ್ಮವನ್ನು ವಿಷ್ಣುವಿನ ರೂಪದಲ್ಲಿ ಸ್ತುತಿಸುವ ಷಟ್ಪದೀ ಸ್ತೋತ್ರದ ಪ್ರಾರಂಭದ ಶ್ಲೋಕದಿಂದ ಈ ಲೇಖನವನ್ನು ಮುಕ್ತಾಯ ಮಾಡುತ್ತೇನೆ. ಈ ಶ್ಲೋಕದಲ್ಲಿ ಸಿದ್ಧಾಂತದ ಸಾರವನ್ನು ಬಹು ಸುಲಭಶೈಲಿಯಲ್ಲಿ ಆಚಾರ್ಯರು ನಿರೂಪಣೆ ಮಾಡಿರುತ್ತಾರೆ.

ಅವಿನಯಮಪನಯ ವಿಷ್ಣೋ
    ದಮಯ ಮನಶ್ಶಮಯ ವಿಷಯಮೃಗತೃಷ್ಣಾಂ ।
ಭೂತದಯಾಂ ವಿಸ್ತಾರಯ
    ತಾರಯ ಸಂಸಾರ ಸಾಗರತಃ ॥

ಇತಿ ಶಮ್

ಆದಿಶಂಕರರ ಪೂರ್ವದಲ್ಲಿ ಅದ್ವೈತ

—ಜಿ. ಎ. ನರಸಿಂಹಮೂರ್ತಿ

ಓನ್ನಮೋ ಬ್ರಹ್ಮಾದಿಭ್ಯೋ ಬ್ರಹ್ಮವಿದ್ಯಾ ಸಂಪ್ರದಾಯ ಕರ್ತೃಭ್ಯೋ।
ವಂಶ ಋಷಿಭ್ಯೋ ನಮೋ ಮಹದ್ಭ್ಯೋ ನಮೋ ಗುರುಭ್ಯಃ ॥

ನಾರಾಯಣಂ ಪದ್ಮಭುವಂ ವಸಿಷ್ಠಂ ಶಕ್ತಿಂ ಚ ತತ್ಪುತ್ರ ಪರಾಶರಂ ಚ
ವ್ಯಾಸಂ ಶುಕಂ ಗೌಡಪದಂ ಮಹಾನ್ತಂ ಗೋವಿಂದಯೋಗೀಂದ್ರ-
ಮಥಾಸ್ಯ ಶಿಷ್ಯಂ
ಶ್ರೀಶಂಕಾರಚಾರ್ಯಮಥಾಸ್ಯ ಪದ್ಮಪಾದಂ ಚ ಹಸ್ತಾಮಲಕಂ ಚ ಶಿಷ್ಯಂ
ತಂ ತ್ರೋಟಕಂ ವಾರ್ತಿಕಕಾರಮನ್ಯಾನಸ್ಮದ್ಗುರೂನ್
ಸಂತತಮಾನತೋಸ್ಮಿ ॥

ಶ್ರೀ ಆದಿಶಂಕರ ಭಗವತ್ಪಾದರಿಗಿಂತ ಮೊದಲೇ ಅದ್ವೈತವು ವಿವಿಧವಾಗಿ ಪ್ರತಿಪಾದಿತವಾಗಿತ್ತು. ಆದರೆ ಆಗ ಪ್ರಚಾರದಲ್ಲಿದ್ದ ಎಲ್ಲ ಆಚಾರ್ಯರುಗಳ ಕೃತಿಗಳು ನಮಗೆ ಸಿಕ್ಕಿರುವುದಿಲ್ಲ. ಪ್ರಮುಖರಾದ ವ್ಯಾಸರು, ಗೌಡಪಾದರು ಮತ್ತು ಬಾದರಾಯಣರ ಗ್ರಂಥಗಳು ದೊರಕಿರುವುದು ಸುದೈವ ಎನ್ನಬೇಕು. ಇತರ ಆಚಾರ್ಯರುಗಳು ಪ್ರತಿಪಾದಿಸುತ್ತಿದ್ದ ಅದ್ವೈತವನ್ನು ಭಗವತ್ಪಾದರು ತಮ್ಮ ಭಾಷ್ಯದಲ್ಲಿ ವಿಮರ್ಶಿಸಿದ್ದಾರೆ.

ಭಗವಂತನಾದ ಶ್ರೀಮನ್ನಾರಾಯಣನು ಬ್ರಹ್ಮನಿಗೆ ಉಪದೇಶ ಮಾಡಿದ ಅದ್ವೈತ ತತ್ತ್ವವನ್ನು, ಬ್ರಹ್ಮನು ವಸಿಷ್ಠ ಮಹರ್ಷಿಗೆ ಹೇಳಿಕೊಟ್ಟನು. ವಸಿಷ್ಠರು ಅವತಾರಪುರುಷನಾದ ಶ್ರೀರಾಮನಿಗೆ ಅದನ್ನೇ ಬಹುಮುಖವಾಗಿ ಉಪದೇಶ ಮಾಡಿದುದು ವಾಸಿಷ್ಠರಾಮಾಯಣದಲ್ಲಿ ಕಂಡುಬರುತ್ತದೆ.

"ಋಷಿಭಿಃ ಬಹುಧಾ ಗೀತಂ" ಎಂಬ ಗೀತಾವಾಕ್ಯವನ್ನು ವಿವರಿಸುವಾಗ ಭಗವತ್ಪಾದರು 'ಋಷಿಭಿಃ' ಎಂದರೆ ವಸಿಷ್ಠಾದಿಭಿಃ, ಎಂದೇ ತಿಳಿಸಿದ್ದಾರೆ.

ಇದೇ ಪರಂಪರೆಯಲ್ಲಿ ಬಂದ ಭಗವಾನ್ ವ್ಯಾಸರು ತಾವು ರಚಿಸಿದ ಮಹಾಭಾರತದಲ್ಲಿ ಅದ್ವೈತವನ್ನು ವಿಸ್ತಾರವಾಗಿ ಪ್ರಚುರಪಡಿಸಿದ್ದಾರೆ. ಈ ಮಹಾಭಾರತವನ್ನು 'ಭಾರತಃ ಪಂಚಮೋ ವೇದಃ' ಎಂದು ಹಿರಿಯರು ಬಹಳ ಗೌರವದಿಂದ ಕರೆಯುತ್ತಾರೆ. ಇದರಲ್ಲಿ ಭಗವಂತನಿಂದ ಗಾನಮಾಡಲ್ಪಟ್ಟ ಭಗವದ್ಗೀತೆ, ವಿಷ್ಣುಸಹಸ್ರನಾಮ, ಸನತ್ಸುಜಾತೀಯ, ಭೀಷ್ಮಸ್ತವರಾಜ ಮತ್ತು ಅನುಸ್ಮೃತಿ ಎಂಬ ಐದು ರತ್ನಗಳಿವೆ. ಅಲ್ಲದೆ ಮೋಕ್ಷಧರ್ಮಕ್ಕೆ ಮೀಸಲಾದ ಒಂದು ಪರ್ವವೇ ಇದರಲ್ಲಿದೆ.

"ಅಪಾಂತರ ತಮಾ ನಾಮ ವೇದಾಚಾರ್ಯಃ ಪುರಾಣರ್ಷಿಃ ವಿಷ್ಣುನಿಯೋಗಾತ್ ಕಲಿದ್ವಾಪರಯೋಃ ಸಂಧೌ ಕೃಷ್ಣದ್ವೈಪಾಯನಸ್ಸಂಬಭೂವ" ಎಂದು ಭಗವತ್ಪಾದರು 'ಯಾವದಧಿಕಾರಂ ಅವಸ್ಥಿತಿಃ' ಎಂಬ ಸೂತ್ರದ ಭಾಷ್ಯದಲ್ಲಿ ತಿಳಿಸಿರುವಂತೆ ವ್ಯಾಸರು ಜ್ಞಾನಪ್ರಕಾಶವನ್ನು ನೀಡಲು ಅವತರಿಸಿದರು.

ಜೀವಾತ್ಮನು ಪರಮಾತ್ಮನೇ. ಅವಿದ್ಯೆಯಿಂದ ಲೋಕವ್ಯವಹಾರಗಳನ್ನು ಅವನಲ್ಲಿ ಕಲ್ಪಿಸಲಾಗಿದೆ. ಈ ವಿದ್ಯೆಯನ್ನು ಗುರುಮುಖೇನ ಅರಿತ ಶಾಸ್ತ್ರ ಉಪದೇಶದಿಂದ ಕಳೆದುಕೊಂಡರೆ ಸ್ವಸ್ವರೂಪ ಪ್ರಾಪ್ತಿಯಾಗುವುದು ಎಂಬ ಅದ್ವೈತ ತತ್ತ್ವವನ್ನು ಈ ಐದು ರತ್ನಗಳಲ್ಲೂ ಸ್ಪಷ್ಟಪಡಿಸಲಾಗಿದೆ.

ಉಪನಿಷತ್ತು, ಭಗವದ್ಗೀತೆ ಬ್ರಹ್ಮಸೂತ್ರ—ಇವುಗಳಿಗೆ ಪ್ರಸ್ಥಾನತ್ರಯ ಎಂದು ವಿದ್ವಾಂಸರು ಹೆಸರಿಟ್ಟಿದ್ದಾರೆ. ಪ್ರಸ್ಥಾನವೆಂದರೆ ತತ್ತ್ವವನ್ನು ತಿಳಿಸಲು ಹೊರಟ ಮಾರ್ಗ.

ಉಪನಿಷತ್ತು ಉತ್ತಮಾಧಿಕಾರಿಗೆ ಆತ್ಮಜ್ಞಾನವನ್ನೂ ಮಧ್ಯಮಾಧಿಕಾರಿಗೆ ಉಪಾಸನೆಯನ್ನೂ ಮೋಕ್ಷಸಾಧನವಾಗಿ ತಿಳಿಸುತ್ತದೆ. ಭಗವದ್ಗೀತೆಯು ಉಪನಿಷತ್ತುಗಳ ಆಧಾರವನ್ನೇ ಇಟ್ಟುಕೊಂಡು, ಕರ್ಮ, ಯೋಗ, ಭಕ್ತಿ ಎಂಬ ಸಾಧನೆಗಳಿಗೂ ಜ್ಞಾನವೆಂಬ ಸಾಧ್ಯಕ್ಕೂ ಇರುವ ಸಂಬಂಧವನ್ನು ವಿವರವಾಗಿ ತಿಳಿಸುತ್ತದೆ. ಇದು ಸ್ಮೃತಿಪ್ರಸ್ಥಾನವೆಂದೂ, ಸಾಧನಪ್ರಸ್ಥಾನವೆಂದೂ ಪ್ರಸಿದ್ಧವಾಗಿದೆ. 'ಸಮಸ್ತ ವೇದಾರ್ಥಸಾರ ಸಂಗ್ರಹ ಭೂತಂ ಗೀತಾಶಾಸ್ತ್ರಂ. ತದರ್ಥೇ ವಿಜ್ಞಾತೇ ಸಮಸ್ತ ಪುರುಷಾರ್ಥ ಸಿದ್ಧಿಃ' ಎಂಬುದಾಗಿ ಗೀತೆಯ ಮಹಿಮೆಯು ಭಗವತ್ಪಾದರಿಂದ ಭಾಷ್ಯದ ಪ್ರಾರಂಭದಲ್ಲಿಯೇ ಘೋಷಿಸಲ್ಪಟ್ಟಿದೆ.

ಪ್ರಪಂಚದಲ್ಲಿರುವ ಜೀವಕೋಟಿಯೆಲ್ಲವೂ ಶೋಕಮೋಹಾದಿ ಸಂಸಾರದುಃಖ ಸಾಗರದಲ್ಲಿ ಮುಳುಗಿ ಕ್ಲೇಶ ಪಡುತ್ತಿವೆ. ಈ ಕ್ಲೇಶವನ್ನು ಕಳೆದು, ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯಲು ಜೀವನ ವಾಸ್ತವ ಸ್ವರೂಪದ ತತ್ತ್ವಜ್ಞಾನವೇ ಉಪಾಯ. ಕರ್ಮರೂಪವಾದ ಪ್ರವೃತ್ತಿಧರ್ಮ, ಜ್ಞಾನ ವೈರಾಗ್ಯರೂಪವಾದ ನಿವೃತ್ತಿಧರ್ಮ, ವಾಸುದೇವನೆಂಬ ಪರಬ್ರಹ್ಮ—ಇವುಗಳನ್ನು ವಿವರವಾಗಿ ತಿಳಿಸುವುದೇ ಗೀತೆಯ ಉದ್ದೇಶ. ಪ್ರವೃತ್ತಿಧರ್ಮವು ನಿವೃತ್ತಿಧರ್ಮದ ಮೂಲಕವೂ ನಿವೃತ್ತಿ ಧರ್ಮವು ನೇರವಾಗಿಯೂ ಮೋಕ್ಷಕ್ಕೆ ಉಪಾಯಗಳಾಗಿವೆ.

ಗೀತೋಕ್ತ ಯೋಗವೆಂದರೆ ಉಪಾಸನೆಮಾತ್ರವಲ್ಲ, ಸಮ್ಯಗ್ದರ್ಶನವಾಗಿ ಮಾಡುವ ಆತ್ಮಚಿಂತನೆ. ಇದಕ್ಕೆ ಧ್ಯಾನಯೋಗವೂ ಕರ್ಮಯೋಗವೂ ಸಾಧನೆಗಳಾಗಿವೆ.

ಗೀತೆಯ ಬೋಧೆಯನ್ನು ಹೀಗೆ ಸಂಗ್ರಹಿಸಬಹುದು :

ಭಗವತ್ತತ್ತ್ವವು ಸರ್ವಯೋಗೈಶ್ವರ್ಯದಿಂದಲೂ ಸರ್ವಜ್ಞಾನ ಶಕ್ತಿಯಿಂದಲೂ ಕೂಡಿದ ಸೋಪಾಧಿಕ ಸಗುಣರೂಪ, ಯಾವ ಉಪಾಧಿಯೂ ಇಲ್ಲದ ನಿರ್ಗುಣ, ನಿರ್ವಿಶೇಷರೂಪ ಎಂದು ಎರಡು ಬಗೆ. 'ದ್ವಿರೂಪಂ ಹಿ ಬ್ರಹ್ಮ ಅವಗಮ್ಯತೇ.' ಇವುಗಳಲ್ಲಿ ಸಗುಣರೂಪ ಭಜಿಸಲು ಸುಲಭ. ಇವರನ್ನು ಭಗವಂತನೇ ಉದ್ಧಾರ ಮಾಡುತ್ತಾನೆ. 'ತೇಷಾಮಹಂ ಸಮುದ್ಧರ್ತಾ' ಇದೇ ಗೀತೆ ತಿಳಿಸಿರುವ ಮುಕ್ತಿ ಸಾಧನೆಗಳಲ್ಲೆಲ್ಲ ಶ್ರೇಷ್ಠವಾದುದು. ಆದರೆ ಈ ಸಗುಣೋಪಾಸನೆ ಅವಿದ್ಯಾಕಲ್ಪಿತ ಆತ್ಮೇಶ್ವರ ಭೇದ ಭಾವವನ್ನವಲಂಬಿಸಿದೆಯಾಗಿ ನಿರುಪಾಧಿಕ ಬ್ರಹ್ಮದ ಜ್ಞಾನದಿಂದಲೇ ನೇರವಾಗಿ ಮುಕ್ತಿಯಾಗುವುದು.

ಅಸತ್ತು ಭಾವ ವಸ್ತುವಿಗಿರುವಂತೆ ಹುಟ್ಟು ಮೊದಲಾದವುಗಳನ್ನು ಹೊಂದಿರುವುದಿಲ್ಲ. ಸತ್ತು ನಾಶವಾಗುವುದಿಲ್ಲ. ಶರೀರ ಅನಿತ್ಯವಾದ್ದರಿಂದ ಅಸತ್ತು. ಅಂದರೆ ಮಿಥ್ಯೆ. ಆತ್ಮ ಅವಿನಾಶಿಯಾದ್ದರಿಂದ ಸತ್ತು. ಆತ್ಮ ಅವಿಕ್ರಿಯ. ಜ್ಞಾನಿಯು ತನ್ನ ಸ್ವರೂಪದಲ್ಲಿ ತೋರುವ ಕರ್ಮವನ್ನೆಲ್ಲ ಅಕರ್ಮವೆಂದೂ ಪ್ರಕೃತಿಯೇ ಕರ್ಮ ಮಾಡುವುದು, ಆತ್ಮನಲ್ಲ ಎಂದೂ ಅರಿತಿರುತ್ತಾನೆ.

ಜ್ಞಾನಿಯು ಭಗವದಾತ್ಮನೇ. ಸಮದರ್ಶನ ಉಳ್ಳ ಜ್ಞಾನಿಯು ತನ್ನ ಆತ್ಮನಾದ ಭಗವಂತನಲ್ಲಿ ಎಲ್ಲ ಪ್ರಾಣಿಗಳೂ, ಎಲ್ಲ ಪ್ರಾಣಿಗಳಲ್ಲಿ ತನ್ನ ಆತ್ಮನಾದ ಭಗವಂತನೂ ಇರುವುದನ್ನು ಕಂಡುಕೊಳ್ಳುತ್ತಾನೆ. ಹೀಗೆ ಬ್ರಹ್ಮವನ್ನು ಅರಿತ ಜ್ಞಾನಿಯು ಬ್ರಹ್ಮದಲ್ಲೇ ಸೇರಿ ಹೋಗುತ್ತಾನೆ.

ಆತ್ಮಜ್ಞಾನದಿಂದ ಅಜ್ಞಾನ–ಮಾಯೆ ನಾಶವಾಗುತ್ತದೆ. ಪ್ರಮಾಣ ಪ್ರಮೇಯ ವ್ಯವಹಾರಗಳೂ ಇಲ್ಲವಾಗುತ್ತವೆ. ಜ್ಞಾನವೆಂದರೆ ಶಾಸ್ತ್ರಾಚಾರ್ಯರುಗಳ ಉಪದೇಶದಿಂದ ಉಂಟಾಗುವ ಆತ್ಮಜ್ಞಾನ; ವಿಜ್ಞಾನವೆಂದರೆ ವಿಶೇಷವಾಗಿ ಉಂಟಾಗುವ ಆತ್ಮಾನುಭವ.

ಆತ್ಮನನ್ನು ಅರಿತುಕೊಳ್ಳುವುದಕ್ಕೆ ಅಂತಃಕರಣವಾದ ಮನಸ್ಸು ಆತ್ಮನಂತೆ ನಿರ್ಮಲ, ಸ್ವಚ್ಛ, ಸೂಕ್ಷ್ಮ ಆಗಬೇಕು. ಆಗ ಕ್ಷೇತ್ರಜ್ಞ ಪರಮಾತ್ಮರ ಭೇದ ಬುದ್ಧಿ ಹೋಗಿ. ಆವೆರಡೂ ಒಂದೇ ತತ್ತ್ವವೆಂದು ನಿಶ್ಚಯವಾಗುತ್ತ . ಈ ಜ್ಞಾನನಿಷ್ಠೆ ಉಂಟಾಗಲು ಈಶ್ವರಾರ್ಪಣ ಬುದ್ಧಿಯಿಂದ ಮಾಡಿದ ಕರ್ಮಗಳಿಂದಾದ ಶುದ್ಧಿಯೂ, ಅಮಾನಿತ್ವಾದಿ ಸಾಧನೆಗಳೂ ಕೈಗೂಡಿ ಭೇದಬುದ್ಧಿ ನಿಮಿತ್ತವಾದ ಕರ್ಮಗಳನ್ನೆಲ್ಲ ಸಂನ್ಯಾಸ ಮಾಡಿರಬೇಕು. ಆಗ "ನನ್ನ ಆತ್ಮನೇ ಆಗಿರುವ ವಾಸುದೇವನೇ ಬ್ರಹ್ಮಾದಿಸ್ತಂಬ ಪರ್ಯಂತವಾದ ಸಕಲಭೂತಗಳಿಗೂ ಆತ್ಮನಾಗಿರುತ್ತಾನೆ" ಎಂದು ತಿಳಿಯುತ್ತಾನೆ. ಆತನು ಸರ್ವಾತ್ಮಭಾವದಿಂದ ಸರ್ವಭೂತಗಳಿಗೂ ಹಿತವನ್ನು ಮಾಡುತ್ತಾನೆ.

ವ್ಯಾಸರ ಪುತ್ರರೇ ಶುಕಮಹರ್ಷಿಗಳು. ತಂದೆಯ ಪುತ್ರಮೋಹಬಾಧೆಯಿಂದ ದೂರವಾಗಿ, ಜನಕ ಮಹಾರಾಜನ ಸಾಮೀಪ್ಯದಿಂದ ಅದ್ವೈತ ದರ್ಶನ ಪಡೆದ ಮಹಾನುಭಾವರು. ಇವರು ವ್ರತಸ್ಥನಾಗಿದ್ದ ಪರೀಕ್ಷಿತರಾಜನಿಗೆ ಭಾಗವತವನ್ನು ಉಪದೇಶ ಮಾಡಿದರು. ಇದರ ಮಂಗಳ ಶ್ಲೋಕದಲ್ಲಿ 'ಯತ್ರ ತ್ರಿಸರ್ಗೋ ಮೃಷಾ' ಎಂದು ಪ್ರಪಂಚಸೃಷ್ಟಿಯೆಲ್ಲ ಮಿಥ್ಯೆಯೆಂದು ತಿಳಿಸಿ 'ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ' – ಮಾಯಾದೋಷವು ಎಂದೂ ಇಲ್ಲದ್ದು, ಸ್ವಪ್ರಕಾಶ ತತ್ತ್ವವೊಂದೇ ಸತ್ಯ ಎಂದು ತೋರಿಸಿದ್ದಾರೆ. ಕಡೆಯಲ್ಲಿಯೂ "ಸರ್ವವೇದಾನ್ತಸಾರಂ ಯದ್ಬ್ರಹ್ಮಾತ್ಮೈಕತ್ವ ಲಕ್ಷಣಂ ವಸ್ತ್ವದ್ವಿತೀಯಂ ತನ್ನಿಷ್ಠಂ ಕೈವಲ್ಯೈಕ ಪ್ರಯೋ-ಜನಂ"–ಎಲ್ಲ ವೇದಾನ್ತಗಳ ಸಾರವಾದ ತತ್ತ್ವಾರ್ಥವು ಬ್ರಹ್ಮಾತ್ಮೈಕತ್ವ, ಅದು ಅದ್ವಿತೀಯ. ಅದರ ಅನುಭವದಿಂದ ಮೋಕ್ಷಸಿದ್ಧಿ ಎಂದು ಸ್ಫುಟಪಡಿಸಿದ್ದಾರೆ.

ಮಧ್ಯದಲ್ಲಿಯೂ ಅಲ್ಲಲ್ಲಿ "ಏತಾವಾನೇವ ಮನುಜೈಃ ಯೋಗನೈಪುಣ್ಯಬುದ್ಧಿಭಿಃ। ಸ್ವಾರ್ಥಃ ಸರ್ವಾತ್ಮನಾ ಜ್ಞೇಯೋ ಯತ್ಪರಾತ್ಮೈಕತ್ವದರ್ಶನಂ" "ಏಕಏವಾದ್ವಿತೀ-ಯೋಽಸೇ ಐತದಾತ್ಮ್ಯಮಿದಂ ಜಗತ್" ಅಧ್ಯಾತ್ಮಯೋಗನಿಪುಣರು ಪರಮಾತ್ಮ ಜೀವಾತ್ಮರ ಐಕ್ಯವನ್ನೇ ಪರಮಾರ್ಥವೆಂದು ತಿಳಿಯುವರು. ಇದೇ ಪುರುಷಾರ್ಥಸಿದ್ಧಿಗೆ ಕಾರಣವಾದುದು. ಪರಮಾತ್ಮ ಏಕವೇವಾದ್ವಿತೀಯ. ಸರ್ವ ಜಗತ್ತು ಪರಮಾತ್ಮ ಮಾತ್ರವೇ, ಎಂದು ತಿಳಿಸಿದ್ದಾರೆ. "ವಾಚಾರಂಭಣಂ ವಿಕಾರಃ" ಎಂಬ ಛಾಂದೋಗ್ಯ ಶ್ರುತಿಯೂ ಇದಕ್ಕೆ ದನಿಗೂಡಿಸುತ್ತದೆ.

ಶ್ರೀ ಶುಕಾಚಾರ್ಯರ ಶಿಷ್ಯರೇ ಪ್ರಸಿದ್ಧರಾದ ಗೌಡಪಾದಾಚಾರ್ಯರು. "ತಥಾ ಚ ಸಂಪ್ರದಾಯ ವಿದೋ ವದನ್ತಿ", "ಅತ್ರೋಕ್ತಂ ವೇದಾನ್ತಾರ್ಥ ಸಂಪ್ರದಾಯ ವಿದ್ಭಿರಾಚಾರ್ಯೈಃ" ಎಂದು ಸ್ತುತಿಸಲ್ಪಟ್ಟ ಗೌಡಪಾದರು "ಸರ್ವ ವೇದಾನ್ತಸಾರ ಸಂಗ್ರಹ" ರೂಪವಾಗಿರುವ ಮಾಂಡೂಕ್ಯಕಾರಿಕೆಗಳನ್ನು ರಚಿಸಿದ್ದಾರೆ. ಈ ಕಾರಿಕೆಗಳು ಆಗಮ, ವೈತಥ್ಯ, ಅದ್ವೈತ ಮತ್ತು ಅಲಾತಶಾಂತಿ ಎಂದು ನಾಲ್ಕು ಪ್ರಕರಣಗಳಾಗಿವೆ.

ಆಗಮ ಪ್ರಕರಣದಲ್ಲಿ ಎಚ್ಚರದ ಆತ್ಮ ವಿಶ್ವ–ಸ್ಥೂಲಪ್ರಪಂಚವನ್ನೆಲ್ಲ ಉಪಾಧಿಯಾಗಿ ಉಳ್ಳವನು. ಕನಸಿನ ಆತ್ಮ ತೈಜಸ ಅಥವಾ ಹಿರಣ್ಯಗರ್ಭ–ಸೂಕ್ಷ್ಮ ಪ್ರಪಂಚವನ್ನೆಲ್ಲ ಉಪಾಧಿಯಾಗಿ ಉಳ್ಳವನು. ತನಿನಿದ್ರೆಯ ಆತ್ಮ ಪ್ರಾಜ್ಞ ಅಥವಾ ಅವ್ಯಾಕೃತ –ಎಲ್ಲ ಜಗತ್ತಿಗೆ ಕಾರಣವಾಗಿರುವವನು. ಈ ಪ್ರತಿಯೊಂದು ಅವಸ್ಥೆಯಲ್ಲಿಯೂ ತುರೀಯವೆಂಬ ಜ್ಞೇಯ ಸೇರಿಕೊಂಡಿದೆ. ಈ ತುರೀಯವೆಂಬ ನಮ್ಮೆಲ್ಲರ ವಿಶುದ್ಧಾತ್ಮ ಈ ಮೂರು ಅವಸ್ಥೆಗಳಿಗಿಂತ ವಿಲಕ್ಷಣ. ವಾಚ್ಯವಾಚಕಭಾವರಹಿತ, ಅವಸ್ಥಾತ್ರಯ ಕಲಂಕ ಒಂದಿಷ್ಟೂ ಇಲ್ಲದವನು. ಅದನ್ನೇ ಓಂಕಾರ, ಆತ್ಮ ಎನ್ನುವುದು. ಈ ಮೂರು ಅವಸ್ಥೆಗಳೂ ಅನಾದಿಮಾಯೆಯಿಂದ ಆತ್ಮನಲ್ಲಿ ತೋರುತ್ತಿರುವ ಅಸದ್ರೂಪಗಳು, ಅವು ನಿಜವಾಗಿ ಇರುವುದಿಲ್ಲ.

ವೈತಥ್ಯ ಪ್ರಕರಣದಲ್ಲಿ ಎಚ್ಚರ ಕನಸುಗಳು ಎಲ್ಲ ರೀತಿಯಿಂದಲೂ ಸಮನಾಗಿವೆ ಎಂದು ತೋರಿಸಿ, ಆತ್ಮನಲ್ಲಿಯೇ ದ್ವೈತವೆಲ್ಲ ಕಲ್ಪಿತ ಎಂಬುದನ್ನು ಸ್ಪಷ್ಟಪಡಿಸಿದೆ.

ಅದ್ವೈತ ಪ್ರಕರಣದಲ್ಲಿ ಶ್ರುತಿಯಲ್ಲಿ ಹೇಳಿರುವ ಸೃಷ್ಟಿಯು ಜೀವಪರಮಾತ್ಮರ ಐಕ್ಯವನ್ನು ತಿಳಿಸಲು ಉಪಾಯಮಾತ್ರವಾಗಿದೆ. ಬ್ರಹ್ಮವು ಚೇತನಾಚೇತನರೂಪವಾಗಿ ಜನಿಸಿರುವುದೆಂದೂ ಜೀವರು ಉಪಾಸನೆಯಿಂದ ಬ್ರಹ್ಮಸ್ವರೂಪವನ್ನು ಪಡೆಯುವರೆಂದೂ ವಾದಿಸುತ್ತಿದ್ದವರ ಜಾತಬ್ರಹ್ಮವಾದವನ್ನು ಖಂಡಿಸಿ, ಅಜಾತವಾದವನ್ನು ಆಚಾರ್ಯರು ಸ್ಥಾಪಿಸಿದ್ದಾರೆ.

'ಆತ್ಮನು ಪರಮಾರ್ಥವಾಗಿ ಜನ್ಮಾದಿವಿಕಾರರಹಿತನಾಗಿರುತ್ತಾನೆ. ಪ್ರಪಂಚೋಪಶಮನಾಗಿರುತ್ತಾನೆ' ಎಂಬುದೇ ಮಾಂಡೂಕ್ಯದ ತಾತ್ಪರ್ಯ. ಆತ್ಮನು ಅಜ ಎಂಬುದು ಪರಮಾರ್ಥ ದೃಷ್ಟಿಯಿಂದಲ್ಲ, ಜನ್ಮವುಳ್ಳ ಪದಾರ್ಥಗಳಿವೆ ಎಂದುಕೊಳ್ಳುವ ಅವಿದ್ಯಾ ದೃಷ್ಟಿಯಿಂದ. ಪರಮಾರ್ಥತಃ ಆತ್ಮ ಯಾವ ಧರ್ಮವೂ ಇಲ್ಲದ ನಿರ್ವಿಶೇಷ ಬ್ರಹ್ಮ. "ಅಜಃ ಕಲ್ಪಿತ ಸಂವೃತ್ಯ ಪರಮಾರ್ಥೇನ ನಾಪ್ಯಜಃ" ಎಂದೇ ಪರಮಾಚಾರ್ಯರ ನುಡಿ.

ಬ್ರಹ್ಮ ಮಾಯೆಯಿಂದ ಜಗದ್ರೂಪವಾಗಿ ಹುಟ್ಟಬಹುದು; ಆದರೆ ಅಸತ್ತು ನಿಜವಾಗಿಯಾಗಲೀ ಮಾಯೆಯಿಂದಾಗಲೀ ಹುಟ್ಟಲೇ ಅರದು, ಎಂದು ಸತ್ಕಾರ್ಯರೂಪವಾದ ಸ್ವಮತವನ್ನು ಪ್ರತಿಪಾದಿಸಿದ್ದಾರೆ.

ಆತ್ಮನೇ ಸತ್ಯ ಎಂಬುದನ್ನರಿತರೆ ಮನಸ್ಸು ಅಮನಸ್ಕಾಗುವುದು. ಮಧ್ಯಮಾಧಿಕಾರಿಗಳು ಮನೋನಿಗ್ರಹದಿಂದಲೂ ಈ ತತ್ತ್ವವನ್ನು ಕಂಡುಕೊಳ್ಳಬಹುದು. ಈ ಮನೋನಿಗ್ರಹ ಪುರುಷತಂತ್ರವಾದ ಉಪಾಸನೆಯಲ್ಲ. ಮನಸ್ಸನ್ನು ವಿಷಯಚಿಂತನೆಯಿಂದ ಚೆದರಿಸದೆ, ಆತ್ಮಚಿಂತನೆಯಿಂದ ಬೇಸತ್ತು ಲಯಗೊಳಿಸದೆ, ಈ ಚಿಂತನೆಯ ಆನಂದದಿಂದಲೇ ತೃಪ್ತನಾಗದೆ, ಏಕಾಗ್ರತೆಯಿಂದ ಮಾಡುವ ಆತ್ಮಸ್ವರೂಪ ಚಿಂತನೆಯೇ ಮನೋನಿಗ್ರಹ.

ಕೊನೆಯದಾದ **ಅಲಾತಶಾಂತಿ** ಪ್ರಕರಣದಲ್ಲಿ ಜ್ಞಾತೃ ಜ್ಞೇಯ ಜ್ಞಾನಗಳ ಅಭೇದವನ್ನು ಉಪಕ್ರಮೋಪಸಂಹಾರದಲ್ಲಿ ಮಂಗಳ ಶ್ಲೋಕ ಮುಖೇನ ಹೇಳಿದೆ. ಅದ್ವೈತವು ಯಾವ ದರ್ಶನಕ್ಕೂ ವಿರುದ್ಧವಲ್ಲ. ಹೊರಗಿನ ವಿಷಯವನ್ನು ಸತ್ಯವೆಂದು ಒಪ್ಪುವ ವೈಭಾಷಿಕ ಸೌತ್ರಾಂತಿಕರ ಮತವನ್ನು, ಒಳಗಿನ ವಿಜ್ಞಾನವನ್ನು ಮಾತ್ರ ಒಪ್ಪುವ ವಿಜ್ಞಾನವಾದಿಗಳ ದೃಷ್ಟಿಯಿಂದ ಖಂಡಿಸಿ, ಅದೇ ಯುಕ್ತಿಗಳಿಂದ ವಿಜ್ಞಾನವಾದವನ್ನೂ ಖಂಡಿಸಿ, ಅಜಾತವಾದವನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಭಗವತ್ಪಾದರು ಈ ಪ್ರಕರಣವನ್ನು 'ಶಾಸ್ತ್ರ' ಎಂದು ಕರೆದಿದ್ದಾರೆ.

ಕಾರಿಕೆಗಳಲ್ಲಿ ಬೌದ್ಧರ ಶಬ್ದಗಳನ್ನು ಬಳಸಿದ್ದರೂ ಅದು ಕೇವಲ ಶಬ್ದಸಾಮ್ಯವಾಗಿದ್ದು ಅರ್ಥಸಾಮ್ಯವಾಗಿಲ್ಲ. ಆ ಶಬ್ದಗಳು ವೇದಾಂತಕ್ಕೆ ಅನುಗುಣವಾದ ಬೇರೆಯ ಅರ್ಥದಲ್ಲೇ ಪ್ರಯೋಗವಾಗಿವೆ. ಅದ್ವೈತವನ್ನು ಕಾರಿಕೆಗಳಲ್ಲಿ ಮತ್ತು ಅವುಗಳ ಭಾಷ್ಯದಲ್ಲಿ ಯುಕ್ತಿಯಿಂದ ಸಾಧಿಸಿದ್ದರೂ ಆಗಮವೇ ಪ್ರಮಾಣವೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಬ್ರಹ್ಮದಲ್ಲಿ ಯಾವ ಶಬ್ದ ಪ್ರವೃತ್ತಿ ನಿಮಿತ್ತವೂ ಇಲ್ಲದ್ದರಿಂದ ಅದನ್ನು ಯಾವ ಶಬ್ದವೂ ತಿಳಿಸಲಾರದು. ಆದ್ದರಿಂದ ಅದರಲ್ಲಿ ತಪ್ಪುತಿಳಿವಳಿಕೆಯಿಂದ ಕಾಣಬರುವ ಯಾವ ವಿಶೇಷವೂ ಇಲ್ಲವೆಂದು ಹೇಳುವ ಮೂಲಕವೇ ಶಾಸ್ತ್ರ ಅದನ್ನು ತಿಳಿಸಿಕೊಡುತ್ತದೆ. ಆತ್ಮನಲ್ಲಿ ಅವಸ್ಥಾತ್ರಯನಿಮಿತ್ತದಿಂದ ಅಂತಃಪ್ರಜ್ಞತ್ವವೇ ಮೊದಲಾದ ಧರ್ಮಗಳು ಕಲ್ಪಿತವಾಗಿವೆ. ಈ ಕಲ್ಪಿತವನ್ನು ಅಲ್ಲಗಳೆದರೆ ಅವಸ್ಥಾತೀತವಾದ ಆತ್ಮಸ್ವರೂಪವು ತಿಳಿದುಬರುವುದು. ಅದ್ವೈತವು ಜಿಜ್ಞಾಸುವಿನ ಆತ್ಮವೇ ಆಗಿ, ಆರೋಪಿತ ವಿಕಲ್ಪಗಳಲ್ಲೆಲ್ಲ ಅನುಗತವಾಗಿರುವುದರಿಂದ ಆತ್ಮಸ್ವರೂಪದ ತಿಳಿವಳಿಕೆ ಹೊಸದಾಗಿ ಉಂಟುಮಾಡಬೇಕಾದದ್ದೇನಲ್ಲ. ಆತ್ಮನಲ್ಲಿ ಯಾವ ಧರ್ಮವೂ ನಿತ್ಯವಾಗಿಲ್ಲ. ಆದ್ದರಿಂದ ಶಾಸ್ತ್ರ ಆತ್ಮವಿಷಯದ ಅಜ್ಞಾನವನ್ನು ಕಳೆಯುವುದರಲ್ಲೇ ಸಾರ್ಥಕವಾಗುತ್ತದೆ. ಯಾವ ಪ್ರಮಾಣವೇ ಆಗಲಿ ಪ್ರಮೇಯದ ಅಜ್ಞಾನವನ್ನು ಕಳೆಯುವುದೇ ಹೊರತು, ಪ್ರಮೇಯವನ್ನು ವಿಷಯೀಕರಿಸಿ ಬೆಳಗದು. ವಸ್ತುವಿನ ತಿಳಿವಳಿಕೆ ಅಜ್ಞಾನನಾಶದಿಂದ ತಾನೇ ಆಗುತ್ತದೆ. ಇದು ಪ್ರಮಾಣಫಲವಲ್ಲ. ಆದ್ದರಿಂದ ಪರಮಾರ್ಥತತ್ತ್ವದ ಜ್ಞಾನ ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಅನರ್ಥ ಪ್ರಪಂಚದ ನಿವೃತ್ತಿಮಾತ್ರದಿಂದಲೇ ಆಗಿಬಿಡುವುದು. ಅದಕ್ಕಾಗಿ ಸಾಕ್ಷಾತ್ಕಾರನೆಂಬ ಬೇರೆ ಪ್ರಮಾಣವಾಗಲೀ ಪ್ರಸಂಖ್ಯಾನವೇ ಮೊದಲಾದ ಬೇರೆ ಸಾಧನೆಯಾಗಲೀ ಬೇಕಿರುವುದಿಲ್ಲ.

ಅಜ್ಞಾನವು ತತ್ತ್ವವನ್ನು ತಿಳಿಯದ್ದೆಂಬ ನಿದ್ರೆ, ತಪ್ಪಾಗಿ ತಿಳಿದುಕೊಳ್ಳುವ ಕನಸು ಎಂದು ಎರಡು ಬಗೆ. ತಿಳಿಯದೆ ಇರುವುದೇ ತಪ್ಪಾಗಿ ತಿಳಿಯುವುದಕ್ಕೆ ಕಾರಣ. ಸುಷುಪ್ತಿ(ಗಾಢನಿದ್ರೆ)ಯಲ್ಲಿ ಈ ಕಾರಣಮಾತ್ರವಿರುತ್ತದೆ. ಎಚ್ಚರ ಕನಸುಗಳಲ್ಲಿ ಕಾರ್ಯಕಾರಣಗಳೆರಡೂ ಇದ್ದಂತೆ ತೋರುತ್ತವೆ. ಶುದ್ಧಾತ್ಮನಲ್ಲಿ ಇವೆರಡೂ ಇರುವುದಿಲ್ಲ.

ಈ ಮೇಲಿನ ಉಪದೇಶಗಳು ಕಾರಿಕೆಗಳಲ್ಲಿ ಪ್ರತಿಪಾದಿತವಾಗಿವೆ.

ಆಚಾರ್ಯ ಬಾದರಾಯಣರ ಸೂತ್ರಗಳು ನ್ಯಾಯಪ್ರಸ್ಥಾನವೆಂದು ಪ್ರಸಿದ್ಧವೇ ಆಗಿವೆ. ವೇದಾಂತವಾಕ್ಯಗಳನ್ನು ತರ್ಕದ ಒರೆಗಲ್ಲಿಗೆ ಹಚ್ಚಿ, ಉಪನಿಷತ್ತುಗಳ ತಾತ್ಪರ್ಯವನ್ನು ನಿರ್ಣಯಿಸುವುದಕ್ಕೆ ಹೊರಟಗ್ರಂಥಗಳಲ್ಲಿ ಅತ್ಯಂತ ಪ್ರಾಚೀನವಾದುವು

ಬ್ರಹ್ಮಸೂತ್ರಗಳು. ಅದನ್ನೇ ಶಾರೀರಕ ಮೀಮಾಂಸವೆಂದು ಕರೆಯುತ್ತಾರೆ. ಅಂದರೆ ನಮ್ಮೆಲ್ಲರ ಶರೀರದಲ್ಲಿರುವ ಆತ್ಮದ ವಿಚಾರವೇ ಶಾರೀರಕಮೀಮಾಂಸ ಶಾಸ್ತ್ರದ ವಿಷಯವಾಗಿದೆ. ಇಲ್ಲಿ ವೇದಾಂತವಾಕ್ಯಗಳ ವಿಷಯಕ್ಕೆ ಉಂಟಾಗಬಹುದಾದ ಸಂಶಯಗಳನ್ನು ಪರಿಹರಿಸಿ ವೇದಾಂತದ ಸಿದ್ಧಾಂತ ಯಾವುದು ಎಂಬುದನ್ನು ಗೊತ್ತುಪಡಿಸಿದ್ದಾರೆ. ವೇದಾಂತಕ್ಕೆ ಪ್ರತಿಪಾದಿತಗಳಾಗಿದ್ದ ಸಾಂಖ್ಯ, ಯೋಗ, ನ್ಯಾಯ ಮತ್ತು ದೈಶೇಷಿಕ ಎಂಬ ನಾಲ್ಕು ದರ್ಶನಗಳವರ ವಾದವನ್ನು ವಿಮರ್ಶಿಸಿ, ಆ ವಾದಗಳ ದೋಷವನ್ನು ತಿಳಿಸಿಕೊಟ್ಟಿದ್ದಾರೆ.

ವೇದಾಂತಸಿದ್ಧಾಂತದ ವಿಷಯಕ್ಕೆ ಭಗವತ್ಪಾದರ ಕಾಲಕ್ಕಿಂತ ಪೂರ್ವದಲ್ಲೇ ಪರಸ್ಪರ ವಿರುದ್ಧಾಭಿಪ್ರಾಯಗಳಿದ್ದವು. "ವೇದಾಂತ ವಾಕ್ಯಗಳಿಗೆ ಅರ್ಥವನ್ನು ಮಾಡುವುದರಲ್ಲಿಯೂ ಅವುಗಳಿಗೆ ತರ್ಕವನ್ನು ಹೊಂದಿಸುವುದರಲ್ಲಿಯೂ ಅನೇಕ ಭಿನ್ನ ಭಿನ್ನ ಮತಗಳಿರುವುದರಿಂದ, ಜಿಜ್ಞಾಸುಗಳು ಸರಿಯಾಗಿ ವಿಚಾರಮಾಡದೆ ಯಾವುದಾದರೊಂದು ಮತವನ್ನು ಅನುಸರಿಸಿಬಿಟ್ಟರೆ, ಪುರುಷಾರ್ಥವನ್ನು ದೊರಕಿಸಿಕೊಳ್ಳುವ ಬದಲು ಅನರ್ಥವನ್ನು ಹೊಂದಬಹುದು. ಆದ್ದರಿಂದ ಸಕಲ ವೇದಾಂತಗಳ ತಾತ್ಪರ್ಯವೂ ಆತ್ಮೈಕ್ಯವನ್ನು ತಿಳಿಸುವುದು ಎಂಬುದನ್ನು ತೋರಿಸಿಕೊಡುವುದಕ್ಕಾಗಿ ತಾವು ವೇದಾಂತ ಸೂತ್ರಗಳಿಗೆ ಭಾಷ್ಯವನ್ನು ಬರೆದಿರುವುದಾಗಿ ಭಗವತ್ಪಾದರು ತಮ್ಮ ಭಾಷ್ಯದ ಉಪೋದ್ಘಾತದಲ್ಲಿ ತಿಳಿಸಿದ್ದಾರೆ.

ಈ ಬ್ರಹ್ಮಸೂತ್ರಗಳಲ್ಲಿ ನಾಲ್ಕು ಅಧ್ಯಾಯಗಳಿವೆ. ಇವುಗಳಿಗೆ ಸಮನ್ವಯ, ಅವಿರೋಧ, ಸಾಧನ ಮತ್ತು ಫಲ ಎಂದು ಹೆಸರು. ಮೊದಲನೆಯ ಸಮನ್ವಯಾಧ್ಯಾಯದಲ್ಲಿ ವೇದಾಂತ ವಾಕ್ಯಗಳನ್ನು ವಿಚಾರಮಾಡಿ ಅವುಗಳ ತಾತ್ಪರ್ಯವನ್ನು ನಿರ್ಣಯಿಸಿದೆ. ಎರಡನೆಯ ಅವಿರೋಧಾಧ್ಯಾಯದಲ್ಲಿ ಹಿಂದಿನ ಅಧ್ಯಾಯದಲ್ಲಿ ನಿರ್ಣಯಿಸಿದ ತತ್ತ್ವಾರ್ಥಕ್ಕೆ ಯಾವ ವಿರೋಧವೂ ಇಲ್ಲವೆಂದೂ ಇತರ ಮತಗಳ ಸಿದ್ಧಾಂತಗಳು ಪ್ರಮಾಣಕ್ಕೂ ಯುಕ್ತಿಗೂ ಅನುಭವಕ್ಕೂ ವಿರುದ್ಧವಾಗಿವೆಯೆಂದೂ ನ್ಯಾಯಪೂರ್ವಕವಾಗಿ ತೋರಿಸಿಕೊಟ್ಟಿದ್ದಾರೆ. ಹೀಗೆ ನಿಶ್ಚಿತವಾದ ತತ್ತ್ವದ ಅನುಭವ ಪಡೆಯಲು ಮಾಡಬೇಕಾದ ಸಾಧನೆಗಳನ್ನು ಸಾಧನಾಧ್ಯಾಯದಲ್ಲಿ ತಿಳಿಸಿದೆ. ಇಂಥಾ ತತ್ತ್ವಜ್ಞಾನದಿಂದ ದೊರೆಯುವ ಫಲವನ್ನು ಕೊನೆಯ ಫಲಾಧ್ಯಾಯದಲ್ಲಿ ತಿಳಿಸಿದೆ.

ಈ ಪ್ರತಿಯೊಂದು ಅಧ್ಯಾಯದಲ್ಲೂ ನಾಲ್ಕು ಪಾದಗಳಿವೆ. ಆಯಾ ಅಧ್ಯಾಯಗಳಲ್ಲಿನ ಒಂದೊಂದು ವಿಶೇಷಾಂಶ ಈ ಪಾದಗಳಲ್ಲಿ ವಿಚಾರಿತವಾಗಿದೆ. ಒಂದೊಂದು ಪಾದದಲ್ಲಿಯೂ ಅನೇಕ ಅಧಿಕರಣಗಳಿವೆ. ಪ್ರತಿಯೊಂದು ಅಧಿಕರಣದ ವಿಷಯವನ್ನು ಒಂದೊಂದು ವೇದಾಂತವಾಕ್ಯವನ್ನು ಉದಾಹರಿಸಿ ಚರ್ಚಿಸಲಾಗಿದೆ. ಈ ಅಧಿಕರಣಗಳು ಕೆಲವು ಒಂದೊಂದೇ ಸೂತ್ರವನ್ನೂ ಉಳಿದವು ಅನೇಕ ಸೂತ್ರಗಳನ್ನೂ ಹೊಂದಿವೆ.

ಒಟ್ಟಿನಲ್ಲಿ ಶಾರೀರಕ ಮೀಮಾಂಸದಲ್ಲಿ ನಾಲ್ಕು ಅಧ್ಯಾಯಗಳು, ಹದಿನಾರು ಪಾದಗಳು, ಒಂದುನೂರ ತೊಂಬತ್ತೆರಡು ಅಧಿಕರಣಗಳು, ಐದುನೂರ ಐವತ್ತೈದು ಸೂತ್ರಗಳೂ ಇವೆ.

ಈ ಸೂತ್ರಗಳು ಬಹಳ ಗಹನವಾಗಿದೆ. ಅವುಗಳ ಅರ್ಥವು ದುರೂಹವಾಗಿದೆ. ಆದ್ದರಿಂದ ಅವು ಭಾಷ್ಯದ ಸಹಾಯವಿಲ್ಲದೆ ಸುಲಭವಾಗಿ ಅರ್ಥನಿರ್ಣಯವಾಗುವಂತಿಲ್ಲ. ಭಗವತ್ಪಾದರ ಭಾಷ್ಯವು ಈ ಸೂತ್ರಗಳಿಗೆ ಇಂಥದೇ ಅರ್ಥವೆಂದು ಉಪನಿಷತ್ತು, ತದನುಸಾರಿಯಾದ ಯುಕ್ತಿಗಳಿಂದ ತೋರಿಸಿಕೊಟ್ಟಿದೆ.

ಜಗತ್ತಿನ ತಿರುಳು ಬ್ರಹ್ಮ. ಅದೇ ನಮ್ಮೆಲ್ಲರ ಆತ್ಮ. ಅದು ಅದ್ವಿತೀಯ, ನಿರ್ವಿಶೇಷ. ಈ ಸಿದ್ಧಾಂತವು ಉಪನಿಷತ್ತುಗಳಿಂದಲೇ ತಿಳಿದು ಬರುವುದು. ಪ್ರತ್ಯಕ್ಷದಿಂದಾಗಲೀ ಅನುಮಾನದಿಂದಾಗಲೀ ಅದನ್ನು ತಿಳಿಯಲು ಬಾರದು. ಬ್ರಹ್ಮ 'ಔಪನಿಷದ' ಎಂಬ ವಿಶೇಷಣದಿಂದ ಶ್ರುತಿಯಲ್ಲೂ 'ಶಾಸ್ತ್ರಯೋಗಿ' ಎಂಬ ವಿಶೇಷಣದಿಂದ ಶಾರೀರಕ ಮೀಮಾಂಸದಲ್ಲೂ ಕರೆಯಲ್ಪಟ್ಟಿದೆ.

ವಿಸ್ತಾರವಾದ ಈ ಶಾಸ್ತ್ರದ ಎಲ್ಲ ವಿಷಯಗಳನ್ನೂ ಸಿದ್ಧಾಂತಗಳನ್ನೂ ವಿವರಿಸಲು ಇಲ್ಲಿ ಅವಕಾಶವಿಲ್ಲ. ದಿಕ್ಸೂಚಿಯಾಗಿ ಕೆಲವನ್ನು ಹೀಗೆ ಉದಾಹರಿಸಬಹುದು:

ಬ್ರಹ್ಮ ಜಿಜ್ಞಾಸೆ ಮಾಡತಕ್ಕದ್ದೋ ಅಲ್ಲವೇ ಎಂಬ ಸಂಶಯ ಬಂದಾಗ, "ಜಿಜ್ಞಾಸೆಗೆ ವಿಷಯವಾಗಿರುವ ಬ್ರಹ್ಮ ಜಿಜ್ಞಾಸುವಿನ ಆತ್ಮವೇ ಆಗಿರುವುದರಿಂದ ನಿಸ್ಸಂದಿಗ್ಧವಾಗಿದೆ. ಬ್ರಹ್ಮ ನಿತ್ಯಪ್ರಾಪ್ತವಾದ್ದರಿಂದ ಅದನ್ನು ತಿಳಿದುಕೊಳ್ಳುವುದರಿಂದ ಹೊಸದಾಗಿ ಆಗಬೇಕಾದ ಪ್ರಯೋಜನವೇನೂ ಇಲ್ಲ. ನಿಷ್ಪ್ರಯೋಜನವಾದ ಜಿಜ್ಞಾಸೆಯನ್ನು ಮಾಡಬೇಕೆನ್ನುವ ಅಧಿಕಾರಿಯೂ ಇರುವುದಿಲ್ಲ" ಎಂದು ಪೂರ್ವಪಕ್ಷ ಹೇಳುತ್ತದೆ. ಅದಕ್ಕೆ ಸಿದ್ಧಾಂತ ಹೀಗಿದೆ: "ಬ್ರಹ್ಮ ಆತ್ಮರೂಪದಿಂದ ಪ್ರಸಿದ್ಧನಾಗಿದ್ದರೂ ಆತ್ಮನು ದೇಹೇಂದ್ರಿಯರೂಪನೋ ಅದಕ್ಕಿಂತ ಬೇರೆಯಾಗಿ ಕರ್ತೃತ್ವ ಭೋಕ್ತೃತ್ವ ಉಳ್ಳವನೋ ಎಂಬ ಬಗ್ಗೆ ಮತಭೇದವಿದೆ. ಅದು ನಿತ್ಯಪ್ರಾಪ್ತವಾಗಿದ್ದರೂ ಅಜ್ಞಾನದಿಂದ ಅಪ್ರಾಪ್ತವಾದಂತೆ ಇದೆ. ಅದನ್ನು ಅರಿತರೆ ಮುಕ್ತಿ ದೊರಕುವುದೆಂದು ಶ್ರುತಿಯಲ್ಲಿ ಹೇಳಿದೆ. ಆದ್ದರಿಂದ ನಿತ್ಯಾನಿತ್ಯವಿವೇಕ, ಕರ್ಮ ಫಲದಲ್ಲಿ ವೈರಾಗ್ಯ, ಶಮಾದಿ ಷಟ್ಕ ಸಂಪತ್ತಿ ಇವುಗಳಿಂದೊಡಗೂಡಿದ ನಿತ್ಯವಾದ ಮುಕ್ತಿಯನ್ನು ಪಡೆಯಬೇಕೆಂದು ಅಪೇಕ್ಷಿಸುವವರು ಈ ಜಿಜ್ಞಾಸೆಗೆ ಅಧಿಕಾರಿಗಳು".

"ಜಗತ್ಕಾರಣ ವಾಕ್ಯದಲ್ಲಿ ಬ್ರಹ್ಮಲಕ್ಷಣವಿಲ್ಲ. ಏಕೆಂದರೆ ಪ್ರಧಾನ ಪರಮಾಣುಗಳು, ಅಥವಾ ಯಾವನಾದರೊಬ್ಬ ಜೀವ, ಜಗತ್ತಿಗೆ ಕಾರಣವಾಗಿರಬಹುದು. ಅಥವಾ

ಸ್ವಭಾವದಿಂದಲೇ ಜಗತ್ತು ಹೀಗೆಯೇ ಇದ್ದುಕೊಂಡಿರಬಹುದು, ಅಲ್ಲದೆ ಜಗತ್ಕಾರಣತ್ವದಿಂದ ಬ್ರಹ್ಮಸ್ವರೂಪ ಗೊತ್ತುಪಡಿಸಿದಂತಾಗುವುದಿಲ್ಲ" ಎಂದು ಪೂರ್ವಪಕ್ಷ. ಅದಕ್ಕೆ ಸಿದ್ಧಾಂತ: ಅನೇಕ ಕರ್ತೃಭೋಕ್ತೃಗಳಿಂದ ಕೂಡಿರುವ ಈ ಜಗತ್ತಿಗೆ ಅಚೇತನವಾದ ಪ್ರಧಾನ ಮತ್ತು ಪರಮಾಣುಗಳಾಗಲೀ ಜೀವನಾಗಲೀ ಕಾರಣವೆಂದು ಕಲ್ಪಿಸುವುದು ಸರಿಯಲ್ಲ. ಗೊತ್ತಾದ ದೇಶ–ಕಾಲ–ನಿಮಿತ್ತಗಳನ್ನನುಸರಿಸಿ ಉಂಟಾಗುತ್ತಿರುವ ಕ್ರಿಯಾಫಲಗಳಿಗೆ ಆಶ್ರಯವಾದ ಈ ಜಗತ್ತು ಸ್ವಭಾವದಿಂದಲೇ ಹೀಗಿರುವುದೆಂದು ಊಹಿಸಲೂ ಆಗುವುದಿಲ್ಲ. ಜಗತ್ಕಾರಣತ್ವ ತಿಳಿಸುವ ಶ್ರುತಿಯಲ್ಲಿ, ಬ್ರಹ್ಮ ಆನಂದ ಸ್ವರೂಪ, ಸರ್ವಜ್ಞ, ಸರ್ವಶಕ್ತಿಯುತ, ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವವಾಗಿದೆ ಎಂದು ಹೇಳಿರುವುದರಿಂದ ಬ್ರಹ್ಮಸ್ವರೂಪವೂ ವಾಕ್ಯದಿಂದ ನಿರ್ಣಯವಾಗುತ್ತದೆ."

ಬ್ರಹ್ಮಕ್ಕೆ ವೇದಕಾರಣತ್ವವನ್ನು ತಿಳಿಸಿ, ಅದರ ಸರ್ವಜ್ಞತ್ವವನ್ನು ಸ್ಥಿರಪಡಿಸಿದೆ. ಬ್ರಹ್ಮವು ಇಂದ್ರಿಯಗೋಚರವಲ್ಲದ್ದರಿಂದ ಅದಕ್ಕೆ ಪ್ರತ್ಯಕ್ಷಾದಿಗಳು ಪ್ರಮಾಣವಲ್ಲ, ಶಾಸ್ತ್ರವೊಂದೇ ಪ್ರಮಾಣ ಎಂದು ಸಿದ್ಧಪಡಿಸಿದೆ.

ಶಾಸ್ತ್ರವು ಪ್ರವೃತ್ತಿ ನಿವೃತ್ತಿಗಳನ್ನೇ ಅಲ್ಲದೆ ಕೇವಲವಸ್ತುವನ್ನೂ ಹೇಳಬಹುದು. ವಸ್ತುವಿನ ಉಪದೇಶದಿಂದ ಪ್ರಯೋಜನವಿರಬೇಕೆಂಬ ನಿಯಮವಿದೆಯೇ ಹೊರತು ವಸ್ತು ಕ್ರಿಯೆಗೆ ಅಂಗವಾಗಿರಬೇಕೆಂಬ ನಿಯಮವೇನಿಲ್ಲ, ಬ್ರಹ್ಮಜ್ಞಾನದಿಂದ ಅಜ್ಞಾನ ನಿವೃತ್ತಿಯಾಗಿ ಸದ್ಯೋಮುಕ್ತಿಯಾಗುವುದೆಂಬ ಮಹಾಪ್ರಯೋಜನವಿದೆ. ಶ್ರವಣದ ಜತೆಗೆ ಮನನ, ನಿಧಿಧ್ಯಾಸನಗಳನ್ನು ಉಪದೇಶಿಸಿದ್ದರೂ ಅವು ಬ್ರಹ್ಮಜ್ಞಾನಕ್ಕಾಗಿಯೇ ವಿಹಿತವಾಗಿವೆ. ಜ್ಞಾನ ಬಂದ ಮೇಲೆ ಸಂಸಾರವು ಇರುವುದೇ ಇಲ್ಲವಾದ್ದರಿಂದ ಜ್ಞಾನವು ನಿಷ್ಪ್ರಯೋಜನವೆಂದು ಹೇಳುವುದಕ್ಕಾಗುವುದಿಲ್ಲ.

ಶಾಸ್ತ್ರ ವಿಹಿತ ಕ್ರಿಯೆಗಳು ಪುರುಷವ್ಯಾಪಾರತಂತ್ರ. ಆದರೆ ಜ್ಞಾನ ಕ್ರಿಯೆಯಲ್ಲ. ಏಕೆಂದರೆ ಅದು ವಸ್ತುತಂತ್ರ.

ಶ್ರುತಿಯಲ್ಲಿ ಸಚ್ಛಬ್ದವಾಚ್ಯವಾಗಿರುವುದು ಚೇತನವಾದ ಬ್ರಹ್ಮವೇ, ಗುಣಗಳಿಂದ ಕೂಡಿರುವ ಜಡವಾದ ಪ್ರಧಾನವಲ್ಲ.

ಆದಿ ಶಂಕರರ ಪೂರ್ವದಲ್ಲಿ ಈ ಮೊದಲು ತಿಳಿಸಿದ ಆಚಾರ್ಯಪ್ರಮುಖರಲ್ಲದೆ, ಇತರ ಕೆಲವು ಅದ್ವೈತಾಚಾರ್ಯರುಗಳು ಇದ್ದರೆಂಬುದು ಭಗವತ್ಪಾದರ ಭಾಷ್ಯದಲ್ಲಿ ಸೂಚಿತವಾಗಿದೆ. ಅವರುಗಳ ಗ್ರಂಥಗಳು ಉಪಲಬ್ಧವಿಲ್ಲದ್ದರಿಂದ, ದೊರೆಕಿರುವ ಈ ಸೂಚನೆಗಳಿಂದಲೇ ಅವರು ಪ್ರತಿಪಾದಿಸುತ್ತಿದ್ದ ಅದ್ವೈತದ ಸ್ವರೂಪವನ್ನು ಗ್ರಹಿಸಬೇಕಾಗಿದೆ.

ಅವರುಗಳಲ್ಲಿ ದ್ರವಿಡಾಚಾರ್ಯರೆಂಬವರನ್ನು ಆಗಮವಿದರೆಂದೂ ಸಂಪ್ರದಾಯ ಬಲ್ಲವರೆಂದೂ ಭಾಷ್ಯದಲ್ಲಿ ಹೊಗಳಿದೆ. ಅವರು "ಆತ್ಮನಲ್ಲಿ ಅಧ್ಯಾರೋಪಿತವಾಗಿರುವ ಧರ್ಮಗಳನ್ನು ನಿವೃತ್ತಿಮಾಡುವುದರಿಂದಲೇ ಶಾಸ್ತ್ರಕ್ಕೆ ಪ್ರಾಮಾಣ್ಯ" ಎಂದೂ "ಸೃಷ್ಟಿಯನ್ನು ಹೇಳುವುದು ಆತ್ಮೈಕತ್ವವನ್ನು ತಿಳಿಸುವುದಕ್ಕೆ" ಎಂದೂ ತಿಳಿಸಿದ್ದಾರೆ.

ಬ್ರಹ್ಮನಂದಿ ಎಂಬ ವಾಕ್ಯಕಾರರು ವಿವರ್ತವಾದಿ ಎಂದು ಮಧುಸೂದನ ಸರಸ್ವತಿಗಳ ವಚನವಿದೆ.

"ಭಗವಾನ್ ಉಪವರ್ಷಃ" ಎಂದು ಶಬರ ಸ್ವಾಮಿಗಳಿಂದ ಕರೆಯಲ್ಪಟ್ಟ ಆಚಾರ್ಯ ಉಪವರ್ಷರು ಪೂರ್ವೋತ್ತರ ಮೀಮಾಂಸಗಳೆರಡಕ್ಕೂ ವಿವರಣೆಯನ್ನು ಬರೆದ ಅದ್ವೈತ ಸಂಪ್ರದಾಯದ ವೃತ್ತಿಕಾರರೆಂದು ಸೂತ್ರಭಾಷ್ಯದ "ಅತ ಏವ ಭಗವತಾ ಉಪವರ್ಷೇಣ ಪ್ರಥಮೇ ತನ್ತ್ರೇ ಆತ್ಮಾಸ್ತಿತ್ವಾಭಿಧಾನ ಪ್ರಸಕ್ತೌ ಶಾರೀರಕೇ ವಕ್ಷ್ಯಾಮಃ ಇತಿ ಉದ್ಧಾರಃಕೃತಃ" ಎಂಬ ವಚನದಿಂದ ತಿಳಿದುಬರುತ್ತದೆ.

ಇವರಲ್ಲದೆ ಹೆಸರು ತಿಳಿಸದೆ, ಅನೇಕ ವೃತ್ತಿಕಾರರಾದ ಅದ್ವೈತಿಗಳ ತಪ್ಪುವಾದವನ್ನು ಸೂತ್ರಭಾಷ್ಯದಲ್ಲಿ ಖಂಡಿಸಲಾಗಿದೆ. ಅವುಗಳು: 1) ಉಪಾಸನಾ ವಿಧಿಗೆ ಶೇಷವಾಗಿರುವ ಬ್ರಹ್ಮವನ್ನು ಶಾಸ್ತ್ರಪ್ರಮಾಣ ತಿಳಿಸಿಕೊಡುತ್ತದೆ. 2) ಆನಂದಮಯನು ಪರಮಾತ್ಮನೇ. 3) ಒಂದು ಸಲ ಮಾಡಿದ ಶಾಸ್ತ್ರಶ್ರವಣ ಮಾತ್ರದಿಂದ ಬ್ರಹ್ಮಾತ್ಮ-ಜ್ಞಾನವಾಗಲಾರದಾದ್ದರಿಂದ ಶಾಸ್ತ್ರಯುಕ್ತಿಗಳ ಅಭ್ಯಾಸವನ್ನು ಮಾಡಬೇಕೆಂದು ವಾದಿಸುತ್ತಿದ್ದ ಪ್ರಸಂಖ್ಯಾನವಾದ. 4) ದೇವಯಾನ ಮಾರ್ಗದಿಂದ ಹೋಗುವವರನ್ನು ಅಮಾನವ ಪುರುಷನು ಪರಬ್ರಹ್ಮದ ಬಳಿಗೆ ಕರೆದುಕೊಂಡು ಹೋಗುತ್ತಾನೆ ಎಂಬವರ ಪಕ್ಷ. 5) ಭೇದಾಭೇದವಾದಿಗಳ ಮತ.

ಈ ಮೇಲೆ ತಿಳಿಸಿದ ವೃತ್ತಿಕಾರರೆಲ್ಲರೂ ಮೋಕ್ಷದಲ್ಲಿ ಅದ್ವೈತಬ್ರಹ್ಮವನ್ನೇ ಜೀವನು ಪಡೆಯುತ್ತಾನೆ ಎನ್ನುವವರಾಗಿದ್ದರು.

ಭರ್ತೃಪ್ರಪಂಚ ಎಂಬವರು ದ್ವೈತಾದ್ವೈತಿಗಳು. ಮೋಕ್ಷದಲ್ಲಿ ಅದ್ವೈತವನ್ನೇ ಒಪ್ಪಿದವರು. "ಶರೀರವಿರುವಾಗ ಬ್ರಹ್ಮಸಾಕ್ಷಾತ್ಕಾರ ಪಡೆದುಕೊಳ್ಳುವುದು; ಸತ್ತ ಬಳಿಕ ಬ್ರಹ್ಮದಲ್ಲಿ ಲಯವಾಗುವುದು" ಎಂಬ ಎರಡು ಬಗೆಯ ಮೋಕ್ಷವನ್ನು ನಂಬಿದ್ದವರು.

ಅಶ್ಮರಥ್ಯ ಎಂಬವರು ಜೀವಾತ್ಮನಿಗೂ ಪರಮಾತ್ಮನಿಗೂ ಅಭೇದವಿರುವಂತೆ ಭೇದವೂ ಇದೆ ಎಂದು ಹೇಳುತ್ತಿದ್ದರು. ಔಡುಲೋಮಿ ಎಂಬವರು "ಜೀವನು ಈಗ ಪರಮಾತ್ಮನಿಗಿಂತ ಬೇರೆ; ಜ್ಞಾನಧ್ಯಾನಾದಿಗಳಿಂದ ಪರಮಾತ್ಮನಲ್ಲಿ ಅಭೇದವನ್ನು

ಪಡೆಯುತ್ತಾನೆ" [ಆಮುಕ್ತೇ ಭೇದ ಏವ ಸ್ಯಾತ್ ಜೀವಸ್ಯ ಚ ಪರಸ್ಯ ಚ ವಿಮುಕ್ತೇ ತು ನ ಭೇದೋಽಸ್ತಿ ಭೇದಹೇತೋರಭಾವತಃ] ಎನ್ನುತ್ತಿದ್ದರು.

"ಪರಮಾತ್ಮನೇ ಜೀವರೂಪದಿಂದ ತೋರಿಕೊಳ್ಳುತ್ತಿದ್ದಾನಾದ್ದರಿಂದ ಜೀವ ಪರಮಾತ್ಮರಿಗೆ ಯಾವಾಗಲೂ ಅಭೇದವೇ ಇರುವುದು" ಎಂದು ಹೇಳುತ್ತಿದ್ದ ಕಾಶಕೃತ್ಸ್ನರ ಮತವೇ ಬಾದರಾಯಣರಿಗೆ ಸಮ್ಮತವೆಂದು ಭಗವತ್ಪಾದರ ಭಾಷ್ಯ ತಿಳಿಸುತ್ತದೆ.

ಹೀಗೆ ಕೆಲವು ಪೂರ್ವಾಚಾರ್ಯರುಗಳಿಂದ ಉಪದಿಷ್ಟವಾಗುತ್ತಿದ್ದ ಅದ್ವೈತದಲ್ಲಿದ್ದ ತಪ್ಪು ಸೂಚನೆಗಳನ್ನು ಪರಿಹರಿಸಿ, ತತ್ತ್ವವನ್ನು ಪ್ರಸ್ಥಾನತ್ರಯದ ಬಲವಾದ ಅಡಿಪಾಯದ ಮೇಲೆ ಸ್ಥಿರವಾಗಿ ನಿಲ್ಲಿಸಿ, ಸ್ಪಷ್ಟಪಡಿಸಿದ ಹಿರಿಮೆ ಭಗವತ್ಪಾದರಿಗೇ ಸಲ್ಲತಕ್ಕದ್ದು.

ಯೈರಿಮೇ ಗುರುಭಿಃ ಪೂರ್ವಂ ಪದವಾಕ್ಯ ಪ್ರಮಾಣತಃ ।
ವ್ಯಾಖ್ಯಾತಾ ಸರ್ವವೇದಾನ್ತಾಸ್ತಾನ್ನಿತ್ಯಂ ಪ್ರಣತೋಽಸ್ಮ್ಯಹಂ ॥

—o—

33

ಅದ್ವೈತ ಪ್ರಭೇದಗಳು

—ಡಾ|| ಶ್ರೀನಿವಾಸರಾವ್

"ಅದ್ವೈತ ಪ್ರಭೇದಗಳು" ಎಂಬ ಪದಸಮುಚ್ಚಯವನ್ನು ಮೂರು ಬೇರೆ ಬೇರೆ ರೀತಿಗಳಲ್ಲಿ ಅರ್ಥೈಸಲು ಸಾಧ್ಯವಿದೆ. ಹೀಗೆ ಅರ್ಥೈಸಿದಾಗ ಅದ್ವೈತ ಸಿದ್ಧಾಂತದ ಬಗ್ಗೆ ಮೂರು ಬೇರೆ ಬೇರೆ ರೀತಿಯ ನಿಲುವುಗಳೂ ಮೂಡುತ್ತವೆ. ಅದ್ವೈತ ಸಿದ್ಧಾಂತವನ್ನು ಅಂಗೀಕರಿಸಿ ಅನುಸರಿಸುವವರ ದೃಷ್ಟಿಯಲ್ಲಿ ಈ ಮೂರು ನಿಲುವುಗಳು ಸಮರ್ಪಕವಾಗಿ ಕಾಣುವುವೇ ಅಥವಾ ಇಲ್ಲವೇ ಎಂಬ ಬಗ್ಗೆ ನನಗೆ ಸಂಶಯವಿದೆ. ಆದರೆ, ಇತರ ತತ್ತ್ವ ಪ್ರಣಾಲಿಗಳೊಂದಿಗೆ ಅದ್ವೈತವೂ ಒಂದೆಂದು ಭಾವಿಸಿ ಕೇವಲ ತಾತ್ತ್ವಿಕ ಕುತೂಹಲದಿಂದ ಅಧ್ಯಯನ ಮಾಡಬಲ್ಲ ಚಾರಿತ್ರಿಕ ದೃಷ್ಟಿಕೋನದ ಜಿಜ್ಞಾಸುವಿಗೆ ನಾನು ಹೇಳಿದ ಮೂರು ನಿಲುವುಗಳೂ ಕುತೂಹಲಕಾರಿಗಳಾಗಿ ಕಾಣುವುದು ಸಾಧ್ಯವಿದೆ. ಇಂತಹ ಜಿಜ್ಞಾಸುಗಳಾರೂ ಈ ಸಭೆಯಲ್ಲಿ ಇಲ್ಲವೇ ಇಲ್ಲವೆಂಬ ಭರವಸೆ ನನಗೆ ಸಂಪೂರ್ಣವಾಗಿ ಇಲ್ಲದಿರುವುದರಿಂದ ರೂಢಿಯಲ್ಲಿರುವ ಅರ್ಥದಲ್ಲಿ ಅದ್ವೈತ ಪ್ರಭೇದಗಳನ್ನು ಚರ್ಚಿಸುವುದರೊಂದಿಗೆ ಹೆಚ್ಚು ರೂಢಿಯಲ್ಲಿಲ್ಲದ ಎರಡು ಅರ್ಥಗಳಲ್ಲೂ ಸ್ವಲ್ಪಮಟ್ಟಿಗೆ ಈ ಪ್ರಭೇದಗಳನ್ನು ಚರ್ಚಿಸುವ ಪರಿಮಿತ ಉದ್ದೇಶ ನನಗಿದೆ.

"ಅದ್ವೈತ ಪ್ರಭೇದಗಳು" ಎಂಬ ಪದಸಮುಚ್ಚಯವನ್ನು ವಿಭಿನ್ನ ರೀತಿಯ ಅದ್ವೈತ ಸಿದ್ಧಾಂತಗಳು ಎಂಬ ಅರ್ಥದಲ್ಲಿ ಕಲ್ಪಿಸಿಕೊಳ್ಳುವುದು ಸಾಧ್ಯವಿದೆ. ಹೀಗೆ ಕಲ್ಪಿಸಿಕೊಂಡಾಗ ಅದ್ವೈತಸಿದ್ಧಾಂತವು ಒಂದೇ ಆಗದೆ, ಅನೇಕ ಬಗೆಯದಾಗುತ್ತದೆ. ಅಂತಹ ಸಂದರ್ಭದಲ್ಲಿ ಈ ವಿಭಿನ್ನ ಸಿದ್ಧಾಂತಗಳಿಗೆ ವಿಭಿನ್ನವಾದ ನಾಮಧೇಯಗಳಿದ್ದರೂ ಅವೆಲ್ಲವೂ 'ಅದ್ವೈತ' ಎಂಬ ಶಬ್ದದಿಂದಲೇ ಮುಕ್ತಾಯವಾಗುತ್ತವೆ. ಭಾರತೀಯ ತತ್ತ್ವಶಾಸ್ತ್ರದ ವಿಸ್ತಾರವಾದ ಪರಿಚಯವಿಲ್ಲದವರಿಗೂ ಇದು ಸತ್ಯವೆಂದು ಸುಲಭವಾಗಿ ಮನವರಿಕೆಯಾಗುತ್ತದೆ. ರಾಮಾನುಜರ ಸಿದ್ಧಾಂತ ವಿಶಿಷ್ಟಾದ್ವೈತವೆಂದೇ ಪ್ರಸಿದ್ಧವಾಗಿದೆ. ವಲ್ಲಭಾಚಾರ್ಯರ ಸಿದ್ಧಾಂತದ ಹೆಸರು ಶುದ್ಧಾದ್ವೈತ. ನಿಂಬಾರ್ಕಾಚಾರ್ಯರ ಸಿದ್ಧಾಂತದ ಹೆಸರು ದ್ವೈತಾದ್ವೈತ. ಶಿವಾದ್ವೈತ, ಶಕ್ತಿವಿಶಿಷ್ಟಾದ್ವೈತ ಮೊದಲಾದುವೂ ಪ್ರಸಿದ್ಧ ಸಿದ್ಧಾಂತಗಳ ಹೆಸರುಗಳೇ. ದಿವಂಗತ ಪ್ರೊ|| ಹೆಚ್. ಎನ್. ರಾಘವೇಂದ್ರಾಚಾರ್ಯರು ಮಧ್ವಸಿದ್ಧಾಂತವನ್ನು "ಸ್ವತಂತ್ರಾದ್ವೈತ" ಎಂದು ಕರೆದದ್ದು ಇಲ್ಲಿ ಗಮನಾರ್ಹ. ಸಂಪೂರ್ಣ ಸ್ವತಂತ್ರವಾದ ತತ್ತ್ವಗಳು ಎಷ್ಟಿವೆಯೆಂಬ ಪ್ರಶ್ನೆಗೆ ದ್ವೈತ ಸಿದ್ಧಾಂತದ ನಿಸ್ಸಂದಿಗ್ಧ ಉತ್ತರ "ಒಂದೇ" ಎಂದು. ಆದ್ದರಿಂದ ಈ ದೃಷ್ಟಿಯಿಂದ ಆ ಸಿದ್ಧಾಂತವನ್ನು ಒಂದು ರೀತಿಯ ಅದ್ವೈತವೆಂದು ಹೆಸರಿಸುವುದು ಅನುಚಿತವಾಗಿ ಕಾಣಿಸುವುದಿಲ್ಲ. ಯಾವುದನ್ನು ನಾವು ವೇದಾಂತಪ್ರಭೇದವೆಂದು

ನಿರ್ದೇಶಿಸುತ್ತೇವೆಯೋ ಅದು ವಾಸ್ತವವಾಗಿ ಒಂದು ರೀತಿಯ ಅದ್ವೈತ ಪ್ರಭೇದವೇ ಹೊರತು ಬೇರೇನೂ ಅಲ್ಲ. ವಿಭಿನ್ನತತ್ತ್ವಗಳ ಶ್ರೇಣಿಯಲ್ಲಿ ಅತ್ಯುನ್ನತ ಸ್ಥಾನದಲ್ಲಿರುವ ತತ್ತ್ವ ಒಂದೇ ಎಂಬುದು ಈ ಎಲ್ಲಾ ವೇದಾಂತಪ್ರಭೇದಗಳೂ ಒಪ್ಪುವ ಅಂಶವಾದ್ದರಿಂದ ಅವೆಲ್ಲವೂ ತಮ್ಮನ್ನು ‘ ಅದ್ವೈತ ’ ಶಬ್ದದಿಂದ ನಿರ್ದೇಶಿಸಿಕೊಳ್ಳುತ್ತವೆ. ಆದರೆ ಇತರ ವಿಷಯಗಳಲ್ಲಷ್ಟೇ ಅಲ್ಲದೆ, ಈ ಏಕೈಕ ಪರಮತತ್ತ್ವದ ಸ್ವರೂಪದ ಬಗೆಗೂ ಅವುಗಳಲ್ಲಿ ಒಮ್ಮತ ಇಲ್ಲದಿರುವುದರಿಂದ ಅವು ವಿಭಿನ್ನರೀತಿಯ ಅದ್ವೈತಗಳೂ ಆಗುತ್ತವೆ. ಹೀಗಾಗಿ ನಿರ್ಗುಣಬ್ರಹ್ಮವೊಂದೇ ಸತ್ಯವೆಂದು ಬಗೆದು ಅದಕ್ಕಿಂತ ಭಿನ್ನವಾದುದು ಯಾವುದೂ ಇರಲಾರದೆಂದೂ, ಆದ್ದರಿಂದ ಜಗತ್ತು ಮಾಯಾಕಲ್ಪಿತವಾದ ಮಿಥ್ಯೆಯೆಂದು ವಾದಿಸುವುದು ಒಂದು ರೀತಿಯ ಅದ್ವೈತವಾದರೆ ಈ ಮಾಯೆಯನ್ನೇ ಸಂಪೂರ್ಣವಾಗಿ ವರ್ಜಿಸಿ ಸಮಸ್ತಜಗತ್ತನ್ನು ಬ್ರಹ್ಮಸ್ವರೂಪವೆಂದೇ ಬಗೆಯುವ ಶುದ್ಧಾದ್ವೈತವು ಇನ್ನೊಂದು ಬಗೆಯ ಅದ್ವೈತವಾಗುತ್ತದೆ. ವಿಷ್ಣುವೊಬ್ಬನನ್ನೇ ಪರಮತತ್ತ್ವವೆಂದು ರಾಮಾನುಜ ಮಧ್ವರಿಬ್ಬರೂ ಅಂಗೀಕರಿಸಿದರೂ ಈ ವಿಷ್ಣುವಿಗೂ ಮತ್ತು ಉಳಿದೆಲ್ಲ ತತ್ತ್ವಗಳಿಗೂ ಸಂಪೂರ್ಣ ಭೇದವನ್ನು ಮಧ್ವರು ಪ್ರತಿಪಾದಿಸಿದರೆ ರಾಮಾನುಜರು ಅವುಗಳ ನಡುವೆ ಅಪೃಥಕ್‌ಸಿದ್ಧಿ ಸಂಬಂಧವನ್ನು ಪ್ರತಿಪಾದಿಸುತ್ತಾರೆ. ಈ ಇಬ್ಬರ ಸಿದ್ಧಾಂತವನ್ನು ಒಪ್ಪದ ನಿಂಬಾರ್ಕರದು ದ್ವೈತಾದ್ವೈತ ವಾದ. ಇದು ಮೊದಲನೆಯ ನಿಲುವು. ಆದರೆ ರೂಢಿಯಲ್ಲಿ ಇದನ್ನು ಅದ್ವೈತ ಪ್ರಭೇದವೆಂದು ಪರಿಗಣಿಸುವುದಿಲ್ಲ.

ಸಾಮಾನ್ಯವಾಗಿ ರೂಢಿಯಲ್ಲಿರುವ ಅರ್ಥದಲ್ಲಿ “ಅದ್ವೈತ ಪ್ರಭೇದ”ವೆಂದರೆ “ಅದ್ವೈತ” ಎಂದು ಕರೆಯಲ್ಪಡುವ ಸಿದ್ಧಾಂತದಲ್ಲಿನ ಒಳಭೇದಗಳು ಅಂದರೆ ಅದ್ವೈತದಲ್ಲಿನ ವಿಭಿನ್ನರೀತಿಗಳು ಎಂದರ್ಥ. ಈ ಪ್ರಭೇದಗಳಾವುವು ಎಂಬುದನ್ನು ಸಿದ್ಧಾಂತವನ್ನು ಪರೀಕ್ಷಿಸುವುದರಿಂದ ತಿಳಿಯಬೇಕಾಗುತ್ತದೆ. ಹೀಗೆ ಪರೀಕ್ಷಿಸಿದಾಗ ಎರಡು ರೀತಿಯ ಪ್ರಭೇದಗಳು ಗೋಚರಿಸುತ್ತವೆ. ಇವುಗಳಲ್ಲಿ ಮೊದಲನೆಯ ರೀತಿಯ ಪ್ರಭೇದದ ಬಗೆಗೆ ಬಹು ಹೆಚ್ಚಿನ ಮಾಹಿತಿ ಸಿಗುವುದಿಲ್ಲವಾದರೂ ನನ್ನ ಅಭಿಪ್ರಾಯದಲ್ಲಿ ಈ ಬಗೆಯ ಪ್ರಭೇದವು ಅದ್ವೈತಸಿದ್ಧಾಂತದ ಬೆಳವಣಿಗೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಮಂಡನ ಮಿಶ್ರರ ಅದ್ವೈತವನ್ನು ಭಾವಾದ್ವೈತ ಅಥವಾ ಸತ್ತಾದ್ವೈತವೆಂದೂ ಮತ್ತು ಶಂಕರಾಚಾರ್ಯರ ಅದ್ವೈತವನ್ನು ಆತ್ಮಾದ್ವೈತ ಅಥವಾ ಚಿದದ್ವೈತವೆಂದೂ ವಾಚಸ್ಪತಿ ಮಿಶ್ರರು ನಿರ್ದೇಶಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದು, ಇದಕ್ಕೆ ನಾನು ಮಧುಸೂದನ ಸರಸ್ವತಿಗಳಲ್ಲಿ ಕಂಡುಬರುವ ಆನಂದಾದ್ವೈತವೆಂಬ ಮೂರನೆಯ ಪ್ರಕಾರವನ್ನು ಜೋಡಿಸಬಯಸುತ್ತೇನೆ. ಇದಕ್ಕೆ ಕಾರಣ ಸತ್–ಚಿತ್–ಆನಂದ ಸ್ವರೂಪನಾದ ಬ್ರಹ್ಮನ ಸತ್-ಸ್ವರೂಪವು ಮಂಡನರಿಗೆ ಪ್ರಧಾನವಾದರೆ, ಬ್ರಹ್ಮನ ಚಿತ್-ಸ್ವರೂಪವು ಶಂಕರರಿಗೆ ಪ್ರಧಾನವಾಗುತ್ತದೆ. ಬ್ರಹ್ಮನ

ಆನಂದಸ್ವರೂಪವನ್ನು ಪ್ರಧಾನವಾಗಿ ಗ್ರಹಿಸುವ ಮಧುಸೂದನ ಸರಸ್ವತಿಗಳು ಈ ಪ್ರಭೇದಚಕ್ರವನ್ನು ಪೂರ್ಣಗೊಳಿಸುತ್ತಾರೆ. ಮಂಡನ–ಗೌಡಪಾದ–ಶಂಕರರು ಅದ್ವೈತವನ್ನು ಕಲ್ಪಿಸಿಕೊಳ್ಳುವ ರೀತಿಯಲ್ಲಿ ಸೂಕ್ಷ್ಮವಾದ ಭೇದಗಳಿವೆಯೆಂದು ನಂಬಲು ಸಾಧ್ಯವಿರುವವರು ಮಾತ್ರ ಈ ರೀತಿಯ ಪ್ರಭೇದವನ್ನು ಗ್ರಹಿಸಬಲ್ಲರು. ಇಂತಹರ ಸಂಖ್ಯೆ ಬಹಳವಿಲ್ಲವಾದರೂ ಈ ರೀತಿಯ ಪ್ರಭೇದದ ಬಗೆಗೂ ಒಂದೆರಡು ಮಾತು ಇಲ್ಲಿ ಉಚಿತವೆನ್ನಿಸುತ್ತದೆ.

ಮಂಡನಮಿಶ್ರರು ತಮ್ಮ 'ಬ್ರಹ್ಮಸಿದ್ಧಿ'ಯನ್ನು ಬರೆದ ಕಾಲದಲ್ಲಿ ಮೀಮಾಂಸಾ ದರ್ಶನವು ಬಹಳ ಪ್ರಚಾರದಲ್ಲಿದ್ದುದರಿಂದಲೂ ಮತ್ತು ಸ್ವತಃ ಮಂಡನರೇ ಒಬ್ಬ ದೊಡ್ಡ ಮೀಮಾಂಸಕರಾಗಿದ್ದುದರಿಂದಲೂ ಅವರ ಸತ್ತಾದ್ವೈತ ಪ್ರತಿಪಾದನೆಯಲ್ಲಿ ಈ ಪ್ರಭಾವ ಸ್ಪಷ್ಟವಾಗಿದೆ. "ಸತ್" ಸ್ವಭಾವವನ್ನುಳ್ಳ ಭಾವರೂಪೀ ಬ್ರಹ್ಮವೊಂದೇ. ಬೇರೆ ಇನ್ನಾವ ವಸ್ತುವಿಗೂ ಈ ಸ್ವಭಾವವಿಲ್ಲವಾದ್ದರಿಂದ 'ಸತ್' ಎಂಬುದು ಒಂದೇ ಅಥವಾ ಸತ್ತಾದ್ವೈತ ಎಂದಾಗುತ್ತದೆ. ಮಂಡನರು ಸತ್ತೆಯು ಎರಡು ರೂಪದಲ್ಲಿರಬಹುದೆಂದು ನಂಬುತ್ತಾರೆ: ಭಾವರೂಪ ಸತ್ತಾ ಮತ್ತು ಅಭಾವರೂಪ ಸತ್ತಾ. ಬ್ರಹ್ಮವು ಹೇಗೆ ಸತ್ಯವೋ ಹಾಗೆಯೇ ಅವಿದ್ಯಾನಿವೃತ್ತಿ ಮತ್ತು ಪ್ರಪಂಚಾಭಾವಗಳೂ ಪರಮ ಸತ್ಯಗಳೇ. ಹಾಗಾದರೆ ಎರಡು ಪರಮ ಸತ್ಯಗಳನ್ನು ಒಪ್ಪಿದಂತಾಗಿ ಅದ್ವೈತ-ಹಾನಿಯಾಗುವುದಿಲ್ಲವೇ? ಮಂಡನರ ಪ್ರಕಾರ ಇಲ್ಲ. ಏಕೆಂದರೆ ಪ್ರಪಂಚಾಭಾವ ಮತ್ತು ಅವಿದ್ಯಾನಿವೃತ್ತಿಗಳು ಸತ್ಯವಾದರೂ ಅವು ಅಭಾವರೂಪವಾದ ಸತ್ಯಗಳು. ಹೀಗಾಗಿ ಅವು ಭಾವರೂಪ ಸತ್ಯವಾದ ಬ್ರಹ್ಮದಿಂದ ಭಿನ್ನವಾದವು, ಭಾವರೂಪವಾದ ಸತ್ಯವು ಬ್ರಹ್ಮವೊಂದೇ ಆದ್ದರಿಂದ ಅದರದೇ ರೀತಿಯ ಇನ್ನೊಂದು ಭಾವರೂಪದ ಸತ್ಯವಿದ್ದರೆ ಮಾತ್ರ ಅದ್ವೈತಹಾನಿಯಾಗಬಹುದೇ ಹೊರತು, ಬೇರೆ ರೀತಿಯ ಅಭಾವರೂಪೀ ಸತ್ಯಗಳ ಇರುವಿಕೆಯಿಂದ ಅದ್ವೈತಹಾನಿಯಾಗುವುದಿಲ್ಲ. ("ದ್ವಿವಿಧಾ ಧರ್ಮಾಃ ಭಾವರೂಪಾ ಅಭಾವರೂಪಶ್ಚೇತಿ; ತತ್ರ ಅಭಾವರೂಪಾನ ಅದ್ವೈತಂ ವಿಘ್ನಂತಿ" ಬ್ರಹ್ಮಸಿದ್ಧಿ-ಪುಟ 4). ಮಂಡನರ ಈ ಅಭಾವನಿಷ್ಠೆಯನ್ನು ಸುರೇಶ್ವರರು ಕಟುವಾಗಿ ಟೀಕಿಸುತ್ತಾರೆ. ಬ್ರಹ್ಮವು ನಿಜವಾಗಿಯೂ ಏಕಮೇವಾದ್ವಿತೀಯವಾಗಿದ್ದರೆ ಬ್ರಹ್ಮಕ್ಕಿಂತ ಭಿನ್ನವಾದ ಇನ್ನೊಂದು ತತ್ತ್ವ ಇರುವುದಾದರೂ ಹೇಗೆ? ಬ್ರಹ್ಮವೊಂದೇ ಭಾವರೂಪೀ ತತ್ತ್ವವಾಗುವುದರಿಂದ ಸಿದ್ಧಿಸುವ ಭಾವಾದ್ವೈತ ಅಥವಾ ಸತ್ತಾದ್ವೈತವು ನಿಜವಾದ ಅರ್ಥದಲ್ಲಿ ಅದ್ವೈತವಾಗುವುದೇ ಇಲ್ಲ. ಭಾವಾಭಾವಸ್ವರೂಪಿಗಳಾದ ಅನೇಕ ತತ್ತ್ವಗಳ ನಡುವೆ ಬ್ರಹ್ಮವೂ ಒಂದು ಎಂದಾಗುವುದೇ ಹೊರತು ಬ್ರಹ್ಮವೊಂದೇ ತತ್ತ್ವ ಎಂಬ ಸಿದ್ಧಾಂತ ಸಿದ್ಧಿಸುವುದಿಲ್ಲ. ಅವಿದ್ಯಾನಿವೃತ್ತಿಯೆಂಬ ಇನ್ನೊಂದು ಸತ್ಯವು ಜ್ಞಾನಸ್ವರೂಪಿಯಾದ ಬ್ರಹ್ಮನೊಂದಿಗೆ ಸರಿಜೋಡಿಯಾಗಿ ನಿಂತು ದ್ವೈತವೇ ಸಿದ್ಧಿಸುತ್ತದೆ. ಆದ್ದರಿಂದ ಸತ್ತಾದ್ವೈವಿಧ್ಯವನ್ನು ಒಪ್ಪುವುದರಿಂದ ಹೊರಡುವ ಅದ್ವೈತ

ಸಿದ್ಧಾಂತವು ದೋಷಪೂರ್ಣವಾದುದು. ಆದರಿಂದಾಗಿ ಅವಿದ್ಯಾನಿವೃತ್ತಿಯಂತಹ ಸಂಪೂರ್ಣ ನಿಷೇಧಾತ್ಮಕವಾದ ಸಂಗತಿಗಳಿಗೂ ಸತ್ಯತ್ವ ಪ್ರಾಪ್ತಿಯಾಗುತ್ತದೆ. ಅಭಾವ ವನ್ನೂ ಒಂದು ರೀತಿಯ ಪದಾರ್ಥವೆಂದು ಪರಿಗಣಿಸುವ ಮೀಮಾಂಸ ಶಾಸ್ತ್ರದಲ್ಲಿ ಅದರ ಜ್ಞಾನಕ್ಕೆ ಕಾರಣವಾದ ಅನುಪಲಬ್ಧಿ ಎಂಬ ಪ್ರಮಾಣವನ್ನೂ ಒಪ್ಪಲಾಗಿದೆ. ಸದ್ವಸ್ತುವಿನ ಜೊತೆಗೆ ಅಸದ್ವಸ್ತುವನ್ನೂ ತಾತ್ತ್ವಿಕವೆಂದು ಗ್ರಹಿಸದಿರುವುದು ಈ ಶಾಸ್ತ್ರಕ್ರಮದಲ್ಲಿ ಅಸಾಧ್ಯ. "ಅವಿದ್ಯಾಸ್ತಮಯೋ ಮೋಕ್ಷಃ", (ಬ್ರಹ್ಮಸಿದ್ಧಿ. ಪುಟ 119) ಮತ್ತು "ವಿದ್ಯೈವ ಚ ಅವಿದ್ಯಾ ನಿವೃತ್ತಿಃ"(ಬ್ರಹ್ಮಸಿದ್ಧಿ. ಪುಟ 121) ಎಂದೂ ಸಹ ಹೇಳುವ ಮಂಡನರು ಬ್ರಹ್ಮನ ಚಿತ್‌ಸ್ವರೂಪಕ್ಕೆ ಪ್ರಾಧಾನ್ಯವಿತ್ತಿದ್ದ ಪಕ್ಷದಲ್ಲಿ ಅವರು ಅವಿದ್ಯಾನಿವೃತ್ತಿಯನ್ನು ಒಂದು ಪ್ರತ್ಯೇಕ ರೀತಿಯ ಸತ್ಯವೆಂದು ಭಾವಿಸಲು ಆಗುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಬ್ರಹ್ಮದ ಚಿತ್‌ಸ್ವರೂಪವನ್ನೇ ಪ್ರಧಾನವಾಗಿ ಗ್ರಹಿಸಿದ್ದ ಪಕ್ಷದಲ್ಲಿ ಅವಿದ್ಯಾನಿವೃತ್ತಿಯೆಂದರೆ, ಅದು ಚಿತ್‌ಸ್ವರೂಪದ ಪ್ರಾಪ್ತಿಯಾಗಿ ಪರಿಣಮಿಸಿ ಅವಿದ್ಯಾನಿವೃತ್ತಿಯನ್ನು ಒಂದು ಪ್ರತ್ಯೇಕ ತತ್ತ್ವವಾಗಿ ಪರಿಗ್ರಹಿಸಬೇಕಾದ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಶಂಕರರ ಚಿದದ್ವೈತ ಅಥವಾ ಆತ್ಮಾದ್ವೈತವು ಈ ಪರಿಸ್ಥಿತಿಯನ್ನು ನಿವಾರಿಸುತ್ತದೆ.

ಭಕ್ತಿಪಂಥದ ಉಚ್ಚ್ರಾಯಸ್ಥಿತಿಯಲ್ಲಿ ಬಂಗಾಳದಲ್ಲಿದ್ದ ಮಧುಸೂದನ ಸರಸ್ವತಿ ಗಳು ಬ್ರಹ್ಮನ ಆನಂದ ಸ್ವರೂಪಕ್ಕೆ ಒತ್ತುಕೊಟ್ಟು ಅದ್ವೈತವನ್ನು ಪ್ರತಿಪಾದಿಸಿದುದು ನನಗೆ ವಿಶೇಷವಾಗಿ ಕಾಣಿಸುವುದಿಲ್ಲ. ಅವರ **ಶ್ರೀಮದ್‌ಭಗವದ್‌ಭಕ್ತಿರಸಾಯನ** ವೆಂಬ ಗ್ರಂಥದಲ್ಲಿ ಅವರ "ಆನಂದಾದ್ವೈತ"ದ ವಿವರಗಳಿವೆ. ವಸ್ತುಗಳ ಬಗೆಗಿನ ನಮ್ಮ ಅಜ್ಞಾನವು ನಿವೃತ್ತಿಯಾದಾಗ (ಉದಾ : "ಇದು ಹಗ್ಗ") ಆ ಅಜ್ಞಾನಕ್ಕೆ ಆಶ್ರಯ ವಾಗಿದ್ದ ಅಧಿಷ್ಠಾನದ ಬಗ್ಗೆ ಇದ್ದ "ಇದು" ಎಂಬ ಅಸ್ಪಷ್ಟ ಭಾವ ತೊಲಗಿ "ಹಗ್ಗ" ಎಂಬ ಸ್ಪಷ್ಟಜ್ಞಾನವಾಗುತ್ತದೆ. ಎದುರಿಗಿರುವ ವಸ್ತುವನ್ನು ಎಲ್ಲಿಯ ವರೆಗೆ "ಇದು" ಎಂದು ಅಸ್ಪಷ್ಟವಾಗಿ ಗ್ರಹಿಸುತ್ತಿರುತ್ತೇವೆಯೋ ಅಲ್ಲಿಯ ವರೆಗೂ ಅದು ಹಾವಾಗಿ ಗೋಚರಿಸುವ ಸಾಧ್ಯತೆ (ಅಂದರೆ ಅಧ್ಯಾರೋಪದ ಸಾಧ್ಯತೆ) ಇರುತ್ತದೆ. ಆ ವಸ್ತು ವನ್ನು ಅದರ ಸಮಗ್ರಸ್ವರೂಪದಲ್ಲಿ ಗ್ರಹಿಸಿದಾಗ ಯಾವುದೇ ರೀತಿಯ ಅಧ್ಯಾರೋಪ ಸಾಧ್ಯವಾಗುವುದಿಲ್ಲ. (ಉದಾ : ಹಗ್ಗವನ್ನು ಹಗ್ಗವೆಂದು ಗ್ರಹಿಸಿದಾಗ). ಕೇವಲ 'ಇದು' ಎಂಬ ಗ್ರಹಿಕೆ ಅಧ್ಯಾರೋಪಕ್ಕೆ ಎಡೆಕೊಡುತ್ತದೆಯೇ ಹೊರತು ವಸ್ತುವಿನ ಪೂರ್ಣರೂಪದ ಗ್ರಹಿಕೆ ಅಧ್ಯಾರೋಪವನ್ನು ಅಸಾಧ್ಯಗೊಳಿಸುತ್ತದೆ. ಆದರೆ ಚಿತ್‌ಸ್ವರೂಪವಾದ ಬ್ರಹ್ಮನಲ್ಲಿ ಜಗತ್ತಿನ ಅಧ್ಯಾರೋಪವಾಗುತ್ತದಲ್ಲವೆ ? ಚೈತನ್ಯವು ಕೇವಲ ಸತ್ತಾಸ್ವರೂಪದಲ್ಲಿ ಪ್ರಕಟವಾದಾಗ ಆ ಚೈತನ್ಯದಮೇಲೆ ಅಧ್ಯಾರೋಪ ಸಾಧ್ಯ. ಅದರೆ ಅದೇ ಚೈತನ್ಯವು ಆನಂದ ಸ್ವರೂಪದಲ್ಲಿ ಪ್ರಕಟವಾದಾಗ ಈ ರೀತಿಯ ಅಧ್ಯಾ ರೋಪ ಅಸಾಧ್ಯ. ಸತ್‌ಸ್ವರೂಪ ಮತ್ತು ಆನಂದಸ್ವರೂಪಗಳ ಪೃಥಕ್ಕರಣ ನಡೆಯದೇ ಇರುವಾಗ ಇರುವ (ತತ್ತ್ವವೇ) ಬ್ರಹ್ಮ. ಈ ಬ್ರಹ್ಮನಲ್ಲಿ ಅಧ್ಯಾರೋಪ ಸಾಧ್ಯ.

ಕೇವಲ ಆನಂದಸ್ವರೂಪಿಯಾದ ಚೈತನ್ಯವೇ 'ಭಗವತ್', ಈ ಭಗವತ್ತತ್ತ್ವದಲ್ಲಿ ಅಧ್ಯಾರೋಪ ಅಸಾಧ್ಯ, ಅರಗಿನಂತಿರುವ ಚಿತ್ತ ಅಥವಾ ಮನಸ್ಸು ಕರಗಿ ಭಗವತ್ ಸ್ವರೂಪವನ್ನು (ಅಂದರೆ ಶುದ್ಧ ಆನಂದಸ್ವರೂಪವನ್ನು) ಪಡೆದಾಗ ಮಾತ್ರ ಅನಾದಿಯಾದ ಅಧ್ಯಾರೋಪ ವ್ಯಾಪಾರವು ಅಂತಿಮವಾಗಿ ನಿಲ್ಲುತ್ತದೆ. ಆನಂದವು ಅಂತಹ ಚಿತ್ತದ ಸ್ಥಾಯೀಭಾವವಾಗುತ್ತದೆ.

ಸತ್-ಚಿತ್-ಆನಂದಗಳು ಬ್ರಹ್ಮನ ಪರಸ್ಪರ ಪ್ರತ್ಯೇಕ ಅಥವಾ ಭಿನ್ನವಾದ ಸ್ವರೂಪಗಳೆಂದು ಇಲ್ಲಿ ಪ್ರತಿಪಾದಿಸುತ್ತಿಲ್ಲ. ಪರಸ್ಪರ ಪ್ರತ್ಯೇಕಿಸಲಾಗದ ಈ ಸ್ವರೂಪಗಳಲ್ಲಿ ಯಾವುದೇ ಒಂದು ಸ್ವರೂಪದ ಮೇಲೆ ಒತ್ತು ಕೊಟ್ಟಾಗ ಒಂದು ರೀತಿಯ ಅದ್ವೈತದ ಪ್ರಾದುರ್ಭಾವವಾಗುತ್ತದೆಂದು ಮಾತ್ರ ಇಲ್ಲಿ ಅಭಿಪ್ರಾಯ.

ಕೊನೆಯದಾಗಿ, ರೂಢಿಯಲ್ಲಿ ಪಂಡಿತ ಪಾಮರರು ಒಪ್ಪುವ ಅರ್ಥದಲ್ಲಿ "ಅದ್ವೈತ ಪ್ರಭೇದ" ವೆಂದರೆ ಅದ್ವೈತಸಿದ್ಧಾಂತದ ಪ್ರತಿಪಾದನೆಯಲ್ಲಿ ಉಂಟಾಗಿರುವ ಭೇದಗಳು. "ಪ್ರಸ್ಥಾನಭೇದ" ಎಂಬ ಶಬ್ದ ಸಾಮಾನ್ಯವಾಗಿ ಬಳಕೆಯಲ್ಲಿದೆ. ವಾಚಸ್ಪತಿ ಮಿಶ್ರರ "ಭಾಮತೀ" ಎಂಬ ಶಾಂಕರಸೂತ್ರಭಾಷ್ಯವನ್ನು ಅನುಸರಿಸಿದ 'ಭಾಮತೀ ಪ್ರಸ್ಥಾನ'ವೂ ಸುರೇಶ್ವರರ ಪಂಚಪಾದಿಕೆಯ ಮೇಲೆ ಪ್ರಕಾಶಾತ್ಮಮುನಿಗಳು ಬರೆದ 'ವಿವರಣ'ವೆಂಬ ಭಾಷ್ಯವನ್ನು ಅನುಸರಿಸುವ 'ವಿವರಣಪ್ರಸ್ಥಾನ'ವೂ ಬಹುಕಾಲದಿಂದ ಇರುವ ಎರಡು ಮುಖ್ಯ ಪ್ರಭೇದಗಳು. ಹೊಳೆನರಸೀಪುರದ ಶ್ರೀ ಸಚ್ಚಿದಾನಂದ ಸರಸ್ವತಿಗಳು ಅನೇಕ ವರ್ಷಗಳಲ್ಲಿ ಬರೆದಿರುವುವನ್ನು ಗಮನಿಸಿದರೆ ಶಂಕರಾಚಾರ್ಯರ ಮೂಲ ಬರವಣಿಗೆಯನ್ನು ಮಾತ್ರ ಆಧರಿಸಿದ 'ಭಾಷ್ಯಪ್ರಸ್ಥಾನ'ವನ್ನೂ ಅಂಗೀಕರಿಸಬೇಕಾಗುತ್ತದೆ.

ಇವು ಮುಖ್ಯ ಪ್ರಭೇದಗಳಾದರೂ ಅದ್ವೈತಸಿದ್ಧಾಂತಕ್ಕೆ ಸಂಬಂಧಿಸಿದ ಅನೇಕ ದೊಡ್ಡ ಹಾಗು ಚಿಕ್ಕ ವಿಷಯಗಳ ಬಗ್ಗೆ ಕಾಲಾಂತರದಲ್ಲಿ ಎಷ್ಟೋ ಬೇರೆ ಬೇರೆ ಅಭಿಪ್ರಾಯಗಳು ಮೂಡಿವೆಯೆಂದರೆ ಈ ಅಭಿಪ್ರಾಯ ಭೇದಗಳನ್ನು ಸಂಗ್ರಹ ರೂಪದಲ್ಲಿ ಹೇಳುವ ಉದ್ದೇಶದಿಂದಲೇ ಅಪ್ಪಯ್ಯ ದೀಕ್ಷಿತರು ಸಿದ್ಧಾಂತಲೇಶಸಂಗ್ರಹ ಎಂಬ ನೂರಕ್ಕೂ ಹೆಚ್ಚು ಪುಟಗಳ ಗ್ರಂಥವನ್ನು ಬರೆದಿದ್ದಾರೆ. ಅದ್ವೈತ ಪ್ರಭೇದಗಳು ಹೆಚ್ಚಾಗಿ ಸಿದ್ಧಾಂತದ ಸಮರ್ಥನೆಯ ಸಂದರ್ಭದಲ್ಲಿ ಹುಟ್ಟಿದ ಕೆಲವು ವಿಶಿಷ್ಟ ಸಮಸ್ಯೆಗಳಿಗೆ ಕೊಡಲಾದ ವಿಭಿನ್ನ ಉತ್ತರಗಳನ್ನು ಅನುಸರಿಸಿ ಉಂಟಾಗಿರುವ ಪ್ರಭೇದಗಳು ಎನ್ನಬಹುದು. ಅದ್ವೈತದ ಮೂಲ ಸಿದ್ಧಾಂತಗಳಾದ ನಿರ್ಗುಣ ಬ್ರಹ್ಮವೊಂದೇ ಪರಮಸತ್ಯ ಮತ್ತು ವ್ಯಾವಹಾರಿಕ ಜಗತ್ತು ಮಿಥ್ಯ ಎಂಬೆರಡು ವಿಷಯಗಳಲ್ಲಿ ಎಲ್ಲಾ ಪ್ರಭೇದಗಳಲ್ಲೂ ಒಮ್ಮತವಿದೆ. ಈ ಮೂಲಸಿದ್ಧಾಂತಗಳನ್ನು ವಿವರವಾಗಿ ಪ್ರತಿಪಾದಿಸುವಾಗ ಹುಟ್ಟಿದ ಸಂದೇಹಗಳನ್ನು ನಿವಾರಿಸುವ ಪ್ರಯತ್ನದಲ್ಲಿ

ಅದ್ವೈತಿಗಳಲ್ಲಿ ಅಭಿಪ್ರಾಯಭೇದ ಉಂಟಾಗಿದೆ. ಇವು ಬಹುಸಂಖ್ಯಾತವಾಗಿದ್ದು ಇವುಗಳ ಪ್ರತಿಪಾದನೆ ಹಾಗೂ ನಿರಾಕರಣೆಗಳು ವಿಸ್ತಾರವಾಗಿರುವುದರಿಂದ ಈ ಚಿಕ್ಕ ಪ್ರಬಂಧದ ಪರಿಮಿತಿಯಲ್ಲಿ ಅವುಗಳಲ್ಲಿ ಬಹು ಮುಖ್ಯವಾದ ಕೆಲವನ್ನು ಮಾತ್ರ ಸ್ಥೂಲವಾಗಿ ಸಾದರ ಪಡಿಸಲು ಸಾಧ್ಯ.

ವ್ಯಾವಹಾರಿಕ ಜಗತ್ತಿಗೆ ಅನ್ವಯವಾಗುವ ಯಾವ ಪ್ರತ್ಯಯಗಳೂ ಪರಮ ಸತ್ಯವಾದ ಬ್ರಹ್ಮವಸ್ತುವಿಗೆ ಅನ್ವಯವಾಗುವುದಿಲ್ಲವೆಂದೂ, ಈ ಬ್ರಹ್ಮ ನಿರ್ಗುಣವೆಂದೂ ಅದ್ವೈತಿಗಳ ಮತ. ಬ್ರಹ್ಮ ಒಂದೇ. ಅದರಿಂದ ಭಿನ್ನವಾದ ಇನ್ನೊಂದು ಇಲ್ಲ. ಆದ್ದರಿಂದ ವ್ಯಾವಹಾರಿಕ ಪ್ರತ್ಯಯಗಳು ಅನ್ವಯವಾಗುವ ಜಗತ್ತು ಇರುವುದು ಸಾಧ್ಯವಿಲ್ಲ. ಆದರೆ ಸ್ಪಷ್ಟವಾಗಿ ನಮ್ಮ ಅನುಭವಕ್ಕೆ ಬರುವ ಈ ಜಗತ್ತು ಇಲ್ಲವೆಂದು ಹೇಗೆ ಹೇಳಬಹುದು ? ಈ ಸಂದರ್ಭದಲ್ಲೇ ಅದ್ವೈತದಲ್ಲಿ ಮಾಯಾವಾದದ ಜನನವಾಗುತ್ತದೆ. ಮಾಯೆಯ ವಿಷಯದಲ್ಲಿ ಅದ್ವೈತಿಗಳಲ್ಲಿ ಸಾಕಷ್ಟು ಅಭಿಪ್ರಾಯ ಭೇದವಿದೆ. ಶಂಕರಾಚಾರ್ಯರ ಕೃತಿಗಳಲ್ಲಿ–ವಿಶೇಷವಾಗಿ ಬ್ರಹ್ಮಸೂತ್ರಭಾಷ್ಯದಲ್ಲಿ–ಮಾಯೆಯು ಬ್ರಹ್ಮನ ಶಕ್ತಿವಿಶೇಷವೆಂಬ ಪ್ರತಿಪಾದನೆ ಇದೆ. ಈ ಶಕ್ತಿಯೇ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣ. ಶಂಕರರು ಪ್ರಕೃತಿಯೇ ಜಗತ್ತಿಗೆ ಕಾರಣವೆಂಬ ಸಾಂಖ್ಯ ಸಿದ್ಧಾಂತವನ್ನು ನಿರಾಕರಿಸಿ ಬ್ರಹ್ಮನೇ ಜಗತ್ತಿನ ಕಾರಣನೆಂದು ಪ್ರತಿಪಾದಿಸುತ್ತಾರೆ. ಏಕಮೇವಾದ್ವಿತೀಯವಾದ ನಿರ್ಗುಣಬ್ರಹ್ಮವೊಂದೇ ಇರುವಾಗ ಅದು ಗೋಚರಿಸದೇ ಅದರ ಸ್ಥಾನದಲ್ಲಿ ಇನ್ನೊಂದು (ಅಂದರೆ ಜಗತ್ತು) ಕಾಣಿಸಲು ಕಾರಣವಾದ ಶಕ್ತಿಯೇ ಮಾಯೆ. ನಿಜವಾಗಿಯೂ ಇರುವ ಬ್ರಹ್ಮವಸ್ತುವಿನ ಅಜ್ಞಾನದಿಂದಾಗಿ ನಮಗೆ ಜಗತ್ತು ಗೋಚರಿಸುವುದಷ್ಟೇ ಅಲ್ಲದೆ ಅದೇ ಸತ್ಯವೆಂದೂ ಅನ್ನಿಸುತ್ತದೆ. ಹೇಗೆಂದರೆ: ಎದುರಿಗಿರುವ ಹಗ್ಗದ ಬಗೆಗಿನ ಅಜ್ಞಾನದಿಂದಾಗಿ ಆ ಹಗ್ಗವು ತಾನಿರುವಂತೆ ಗೋಚರಿಸದೆ ಹಾವಾಗಿ ಕಂಡ ಹಾಗೆ. ಶಂಕರರ ಕೃತಿಗಳಲ್ಲಿ ಮಾಯೆ, ಅವಿದ್ಯೆ, ಅಜ್ಞಾನ ಎಂಬ ಶಬ್ದಗಳು ಅನೇಕ ಕಡೆ ಪರ್ಯಾಯವಾಗಿ ಉಪಯೋಗವಾಗಿವೆ.

ಆದರೆ ಅದ್ವೈತ ಸಿದ್ಧಾಂತದ ಬೆಳವಣಿಗೆಯ ನಂತರದ ಹಂತಗಳಲ್ಲಿ ಮಾಯೆ ಒಂದು ತತ್ತ್ವ ಅಥವಾ ವಸ್ತುವಾಗುತ್ತದೆ. ಈ ತತ್ತ್ವಕ್ಕೂ ಸಹ ಇರುವ ಬ್ರಹ್ಮವಸ್ತುವನ್ನು ಕಾಣಿಸದಂತೆ ಮಾಡುವ ಆವರಣ ಶಕ್ತಿ ಇದೆ; ಇಲ್ಲದೇ ಇರುವ ಜಗತ್ತನ್ನು ತೋರ್ಪಡಿಸುವ ವಿಕ್ಷೇಪಶಕ್ತಿಯೂ ಇದೆ. ಈ ಮಾಯೆ ಅನಾದಿಯಾದ ಪದಾರ್ಥ. ಆದರೆ ಅನಂತವಲ್ಲ. ಬ್ರಹ್ಮಜ್ಞಾನವಾಗುವ ವರೆಗೂ ಅದು ಇರುತ್ತದೆ. ಈ ಮಾಯೆಯನ್ನು ಅನಿರ್ವಚನೀಯವೆಂದೂ ಕರೆಯಲಾಗುತ್ತದೆ. ಈ ಹೆಸರು 'ಸದಸದನಿರ್ವಚನೀಯ' ಎಂಬುದರ ಸಂಕ್ಷೇಪ ರೂಪ; ಸದಸದ್ವಿಲಕ್ಷಣವೆಂಬ ಶಬ್ದವೂ ಉಪಯೋಗದಲ್ಲಿದೆ. ಮಿಥ್ಯೆಯೆಂಬ ಶಬ್ದಕ್ಕೂ ಇದೇ ಅರ್ಥ. "ಸತ್" ಎಂದರೆ

ಸರ್ವಕಾಲದಲ್ಲೂ ಇರುವ ಎಂದಿಗೂ ಇನ್ನೊಂದರಿಂದ ಬಾಧಿತವಾಗದ ವಸ್ತು, ಅಂದರೆ ನಿತ್ಯವಾದ ಬ್ರಹ್ಮನಂತಹ ಪದಾರ್ಥ. "ಅಸತ್" ಎಂದರೆ ಯಾವ ಕಾಲದಲ್ಲೂ ಅಸ್ತಿತ್ವವನ್ನೇ ಹೊಂದಿರದ ಬಂಜೆಯ ಮಗನಂತಹ ಪದಾರ್ಥ. ಜಗತ್ತು ಬ್ರಹ್ಮ ಜ್ಞಾನವಾದಾಗ ಇಲ್ಲವಾಗುವುದರಿಂದ ನಿತ್ಯವಾದ ವಸ್ತು ಅಥವಾ "ಸತ್" ಅಲ್ಲ ; ಅದು "ಅಸತ್" ಕೂಡ ಅಲ್ಲ, ಏಕೆಂದರೆ ಅದು ಅನುಭವಗೋಚರ–ಬಂಜೆಯ ಮಗನಂತೆ ಎಂದೂ ಯಾರೂ ಕಾಣದ, ಕಾಣಲಾಗದ ವಸ್ತುವಲ್ಲ. ಹೀಗೆ ಹಗ್ಗವನ್ನು ಹಾವೆಂದು ಭ್ರಮಿಸಿದಾಗ ಹಾವು ಅನುಭವಕ್ಕೆ ಬಂದರೂ ಅದು ವಸ್ತುತಃ ಅಲ್ಲಿ ಇರುವುದಿಲ್ಲವೋ ಹಾಗೆಯೇ ಜಗತ್ತು ಅನುಭವಕ್ಕೆ ಬಂದರೂ ವಾಸ್ತವವಾಗಿ ಇರುವುದಿಲ್ಲ. ಸ್ವಪ್ನದಲ್ಲಿನ ವಸ್ತುಗಳು ನಮ್ಮ ಅನುಭವಕ್ಕೆ ಎಟಕಿದ ವಸ್ತುಗಳಾದರೂ ಅವು ನಿಜವಾಗಿಯೂ ಇರುವ ವಸ್ತುಗಳಲ್ಲ. ಈ ರೀತಿ ಅನುಭವಕ್ಕೆ ಬಂದರೂ ಇಲ್ಲದಿರುವ ವಸ್ತುಗಳೇ "ಮಿಥ್ಯೆ". ಈ ಮಿಥ್ಯೆಗೆ ಕಾರಣವಾದದ್ದೇ ಮಾಯೆ.

ಇಂತಹ ಮಾಯೆಯನ್ನು ಶಂಕರರು ಹೇಳುವಂತೆಯೇ ಬ್ರಹ್ಮನ ಅಂತರ್ಗತವಾದ ಸಹಜ ಶಕ್ತಿಯೆಂದು ಕಲ್ಪಿಸಿಕೊಂಡರೆ, ಬ್ರಹ್ಮನು ನಿತ್ಯನಾದ್ದರಿಂದ ಅವನ ಸಹಜ ಶಕ್ತಿಯಾದ ಮಾಯೆಯೂ ನಿತ್ಯವಾಗಿ ಮೋಕ್ಷ ಅಸಾಧ್ಯವಾಗುತ್ತದೆ, ಆದ್ದರಿಂದ ಮಾಯೆ ಬ್ರಹ್ಮನ ಅಂತರ್ಗತ ಶಕ್ತಿಯಾಗದೆ ಬ್ರಹ್ಮನನ್ನು ಕೇವಲ ಆಧಾರವಾಗಿ ಉಳ್ಳ ತತ್ತ್ವವಾಗ ಬೇಕಾಗುತ್ತದೆ. ಬ್ರಹ್ಮನಿಲ್ಲದಿದ್ದರೆ ಈ ಮಾಯೆ ಏನನ್ನೂ ಮಾಡಲಾರದು. ಮಾಯೆಯ ಕಾರ್ಯಕಾರಣ ಸಾಮರ್ಥ್ಯವು ಸಂಪೂರ್ಣವಾಗಿ ಬ್ರಹ್ಮಾಧೀನವಾದದ್ದರಿಂದ ಬ್ರಹ್ಮನೇ ಜಗತ್ತಿನ ಕಾರಣನೆಂಬ ತಪ್ಪು ಅಭಿಪ್ರಾಯ ಉಂಟಾಗುತ್ತದೆ. ಹಗ್ಗವು ಕೇವಲ ಅಲ್ಲಿ ಬಿದ್ದಿದ್ದುದರಿಂದಲ್ಲವೇ ಅದನ್ನು ನಾವು ಹಾವೆಂಬ ಭ್ರಮೆಗೆ ಕಾರಣವನ್ನಾಗಿ ಒಪ್ಪುತ್ತೇವೆ ? ಹಾಗೆಯೇ ತನ್ನಷ್ಟಕ್ಕೆ ತಾನಿರುವ ಬ್ರಹ್ಮನು ಜಗತ್ತೆಂಬ ಭ್ರಮೆಗೆ ಕಾರಣವಾಗುತ್ತಾನೆ. ಬ್ರಹ್ಮನು ವಿವರ್ತಕಾರಣ ಮಾತ್ರ.

ಮಾಯೆಯನ್ನು ಅನಿರ್ವಚನೀಯವಾದ ಪದಾರ್ಥವೆಂದು ಪರಿಗಣಿಸುವುದರಿಂದ ಕೆಲವು ಸಮಸ್ಯೆಗಳು ಹುಟ್ಟುತ್ತವೆ. ಬ್ರಹ್ಮಜ್ಞಾನವಾದಾಗ ಈ ಮಾಯಾಪದಾರ್ಥದ ನಿವೃತ್ತಿ ಅಥವಾ ನಾಶವಾಗಬೇಕಷ್ಟೆ ? ಈ ಅವಿದ್ಯಾನಿವೃತ್ತಿ ಎಂತಹುದು ? ಇದು "ಸತ್" ಆದರೆ ಬ್ರಹ್ಮನಂತೆಯೇ ನಿತ್ಯವಾದ ಇನ್ನೊಂದಾಗಿ ಅದ್ವೈತಹಾನಿಯಾಗುತ್ತದೆ. "ಅಸತ್" ಎಂದು ಪರಿಗಣಿಸಿದರೆ ಅವಿದ್ಯಾನಿವೃತ್ತಿಯೆನ್ನುವುದೇ ಇಲ್ಲವಾಗುವುದರಿಂದ ಮೋಕ್ಷ ಅಸಾಧ್ಯವಾಗುತ್ತದೆ. "ಸದಸದ್ವಿಲಕ್ಷಣ" ವೆಂದರೆ ಅವಿದ್ಯೆ ಅಥವಾ ಮಾಯೆಗೂ ಮತ್ತು ಅದರ ನಿವೃತ್ತಿಗೂ ಯಾವ ಭೇದವೂ ಇಲ್ಲದಂತಾಗಿ ಮೋಕ್ಷವೆನ್ನು-ವುದು ಮರೀಚಿಕೆಯಾಗುತ್ತದೆ. "ಸದಸತ್" ಎಂದರೆ ಪರಸ್ಪರ ವಿರುದ್ಧ ಸ್ವಭಾವಗಳನ್ನುಳ್ಳ ಅಸಂಭವನೀಯ ವಸ್ತುವಾಗುತ್ತದೆ. ಆದ್ದರಿಂದ ಅವಿದ್ಯಾನಿವೃತ್ತಿಯೆನ್ನುವುದು ಈ ಮೇಲಿನ ನಾಲ್ಕೂ ಅಲ್ಲದ ಐದನೆಯ ಪ್ರಕಾರದ ವಸ್ತುವೆಂದು ಅನಂದ

ಬೋಧಾಚಾರ್ಯರು ನಿರ್ಣಯಿಸುತ್ತಾರೆ. ಅವಿದ್ಯಾನಿವೃತ್ತಿಯು ಅಭಾವರೂಪಿಯಾದ ನಿತ್ಯಪದಾರ್ಥವೆಂಬ ಮಂಡನರ ಮತವನ್ನು ಈಗಾಗಲೇ ಪ್ರಸ್ತಾಪಿಸಿದ್ದೇನೆ. ಅದ್ವೈತ ವಿದ್ಯಾಚಾರ್ಯರ ಪ್ರಕಾರ ಅವಿದ್ಯಾನಿವೃತ್ತಿಯು ಅನಿರ್ವಚನಿಯು, ಅದ್ವೈತ ಬ್ರಹ್ಮ ಸಿದ್ಧಿಕಾರರ ಪ್ರಕಾರ ಅವಿದ್ಯಾನಿವೃತ್ತಿಯೆಂದರೆ ಆದೇ ಸಾಕ್ಷಾತ್ ಬ್ರಹ್ಮವಸ್ತು.

ಅನಿರ್ವಚನೀಯವಾದ ಮಾಯೆ ಅಥವಾ ಅವಿದ್ಯೆಯು ಯಾರನ್ನು ಆಶ್ರಯಿಸಿ ಇರುತ್ತದೆ ಎಂಬುದು ಇನ್ನೊಂದು ಸಮಸ್ಯೆ. ಅವಿದ್ಯೆಗೆ ಆಶ್ರಯವಾವುದು? ವಿಷಯ ಯಾವುದು? ಬ್ರಹ್ಮವಸ್ತುವನ್ನು ಬಿಟ್ಟು ಇನ್ನಾವ ವಸ್ತುವೂ ಇಲ್ಲದಿರುವುದರಿಂದ ಬ್ರಹ್ಮನೇ ಅವಿದ್ಯೆಗೆ ಆಶ್ರಯ; ಅವನೇ ಅವಿದ್ಯೆಗೆ ವಿಷಯವೂ ಹೌದು. ಇದು ವಿವರಣ ಪ್ರಸ್ಥಾನವನ್ನು ಅನುಸರಿಸುವವರ ನಿಲುವು. ಚೈತನ್ಯಸ್ವರೂಪನಾದ ಬ್ರಹ್ಮನು ಜಡಸ್ವರೂಪಿಯಾದ ಮಾಯೆಗೆ ಆಶ್ರಯದಾತನಾಗುವುದು ಸೂರ್ಯನು ಕತ್ತಲಿಗೆ ಆಶ್ರಯದಾತನಾದಂತೆ ಎಂದು ಭಾಮತೀಕಾರರ ನಿಲುವು. ಅವರ ಪ್ರಕಾರ ಬ್ರಹ್ಮನು ಅವಿದ್ಯೆಯ ವಿಷಯವೇ ಹೊರತು ಆಶ್ರಯವಲ್ಲ, ಜೀವವು ಅವಿದ್ಯೆಗೆ ಆಶ್ರಯ.

ಮಾಯೆ ಹಾಗೂ ಅವಿದ್ಯೆ ಒಂದೇ ಅಲ್ಲವೆಂಬ ಅಭಿಪ್ರಾಯವೂ ಕೆಲವು ಅದ್ವೈತಿಗಳಲ್ಲಿದೆ. ವಿಶ್ವವ್ಯಾಪಿಯಾದ ಅಜ್ಞಾನವನ್ನು ಮಾಯೆಯೆಂದೂ ಜೀವಕ್ಕೆ ಮಾತ್ರ ಸೀಮಿತವಾದ ಅಜ್ಞಾನವನ್ನು ಅವಿದ್ಯೆಯೆಂದೂ ಕರೆಯುವ ರೂಢಿಯಿದೆ. ವಿಶ್ವವ್ಯಾಪಿಯಾದ ಮಾಯೆಯು ಈಶ್ವರನ ಉಪಾಧಿ; ಅಂತಃಕರಣಕ್ಕೆ ಸೀಮಿತವಾದ ಅವಿದ್ಯೆಯು ಜೀವನ ಉಪಾಧಿ. ಈಶ್ವರನು ಒಬ್ಬನೇ ಆದ್ದರಿಂದ ಮಾಯೆ ಒಂದೇ. ಅನೇಕ ಜೀವರು ಇರುವುದರಿಂದ ಅವಿದ್ಯೆಗಳೂ ಅನೇಕ, ಒಂದೇ ಅವಿದ್ಯೆಯ ಆಧಾರದ ಮೇಲೆ ಜೀವ–ಈಶ್ವರ ಭೇದವನ್ನು ಮತ್ತು ಅನೇಕ ಜೀವರ ಕಲ್ಪನೆಯನ್ನು ವಿವರಿಸಲು ಸಾಧ್ಯವಿರುವುದರಿಂದ ಈ ಹೊಸ ಕಲ್ಪನೆಗಳು ಅವಶ್ಯವೇ ಎಂದು ಸಂಶಯಪಡಲು ಸಾಧ್ಯವಿದೆ.

ಜೀವ ಈಶ್ವರರ ಸ್ವರೂಪದ ಬಗೆಗೂ ಮತಭೇದಗಳಿವೆ. ಪ್ರಕಟಾರ್ಥವಿವರಣದ ಪ್ರಕಾರ ಅನಾದಿಯೂ ಅನಿರ್ವಚನೀಯವೂ ಆದ ಮಾಯೆಯಲ್ಲಿ ಚಿದ್ರೂಪವಾದ ಬ್ರಹ್ಮದ ಪ್ರತಿಬಿಂಬವೇ ಈಶ್ವರ. ಈ ಮಾಯೆಯ ಅಸಂಖ್ಯ ಅಂಶಗಳಾದ ಅವಿದ್ಯೆಗಳಲ್ಲಿ ಪ್ರತಿಬಿಂಬಿತವಾದ ಚೇತನವೇ ಜೀವರುಗಳು. ಸಂಕ್ಷೇಪ ಶಾರೀರಕದ ಪ್ರಕಾರ ಅವಿದ್ಯೆಯಲ್ಲಿನ ಚಿತ್ಪ್ರತಿಬಿಂಬವೇ ಈಶ್ವರ; ಅಂತಃಕರಣದಲ್ಲಿನ ಚಿತ್ಪ್ರತಿಬಿಂಬವೇ ಜೀವ. ಆದರೆ ವಿವರಣಪ್ರಸ್ಥಾನವು ಜೀವ–ಈಶ್ವರರಿಬ್ಬರೂ ಪ್ರತಿಬಿಂಬಗಳೆಂಬ ಈ ಸಿದ್ಧಾಂತವನ್ನು ಒಪ್ಪುವುದಿಲ್ಲ. ಎರಡು ಭಿನ್ನ ಪ್ರತಿಬಿಂಬಗಳಿಗೆ ಎರಡು ಭಿನ್ನವಾದ ಉಪಾಧಿ ಅಥವಾ ಪ್ರತಿಫಲಕಗಳು ಬೇಕಾಗಿದ್ದು ಔಪಾಧಿಕ ಅಜ್ಞಾನವು ಒಂದೇ ಆಗಿರು-

ವುದರಿಂದಲೂ ಮತ್ತು ಈ ಒಂದೇ ಅಜ್ಞಾನವೇ ಜೀವ–ಈಶ್ವರ ಭೇದಕ್ಕೆ ಕಾರಣವಾಗ ಬೇಕಾಗಿರುವುದರಿಂದಲೂ ವಿವರಣಪ್ರಸ್ಥಾನವು ಈಶ್ವರನನ್ನು ಬಿಂಬವೆಂದೂ ಜೀವವನು ಈಶ್ವರನ ಪ್ರತಿಬಿಂಬವೆಂದೂ ಪರಿಗಣಿಸುತ್ತದೆ.

ಆಕಾರವಿರುವ ವಸ್ತುವಿಗೆ ಪ್ರತಿಬಿಂಬವಿರುವುದು ವಾಸ್ತವ, ಆದರೆ ನಿರ್ಗುಣವೂ ಮತ್ತು ನಿರಾಕಾರವೂ ಆದ ಬ್ರಹ್ಮವು ಅವಿದ್ಯೆಯಲ್ಲಿ ಪ್ರತಿಬಿಂಬಿತವಾಗುವುದಾದರೂ ಹೇಗೆ? ಆದ್ದರಿಂದ ಮಾಯಾವಚ್ಛಿನ್ನವಾದ ಬ್ರಹ್ಮವನ್ನು ಈಶ್ವರನೆಂದೂ ಅಂತಃಕರಣಾದಿ ಗಳಿಂದ ಅವಚ್ಛಿನ್ನವಾದ ಬ್ರಹ್ಮವನ್ನು ಜೀವವೆಂದೂ ಪರಿಗಣಿಸಬೇಕಾಗುತ್ತದೆಂಬುದು ಇನ್ನೊಂದು ಅಭಿಪ್ರಾಯ.

ಜೀವವು ಒಂದೇ ಅಥವಾ ಅನೇಕವೇ ಎಂಬ ವಿಷಯದಲ್ಲೂ ಅಭಿಪ್ರಾಯಭೇದ ವಿದೆ. ಕೆಲವರು ಅದ್ವೈತಿಗಳ ಪ್ರಕಾರ ಜೀವ ಒಂದೇ ; ಸಜೀವವಾದ ಶರೀರವೂ ಒಂದೇ. ಉಳಿದ ಶರೀರಗಳು ಸ್ವಪ್ನದಲ್ಲಿ ಕಂಡು ಬರುವ ಶರೀರಗಳಂತೆ ನಿರ್ಜೀವ. ಈ ಏಕಜೀವದ ಅಜ್ಞಾನದಿಂದ ಕಲ್ಪಿತವಾಗಿರುವುದೇ ಜಗತ್ತು. ಬಂಧ–ಮೋಕ್ಷಗಳೆರಡೂ ಈ ಒಂದು ಜೀವಕ್ಕೆ ಮಾತ್ರ ಅನ್ವಯಿಸುತ್ತವೆ. ಇತರ ಜೀವರ ಬಂಧಮೋಕ್ಷಗಳು ಸ್ವಪ್ನದಲ್ಲಿನ ಘಟನೆಗಳಂತೆ ಆಭಾಸಮಾತ್ರ. ಇದು ತೀರಾ ಅಸಂಭವವಲ್ಲವೇ ಎಂದು ನಾವು ಸೋಜಿಗ ಪಟ್ಟರೆ ಈ ಪಕ್ಷದವರು ಅಸಂಭವವಾದದ್ದನ್ನು ಸಂಭವಿಸುವಂತೆ ಮಾಡಬಲ್ಲ ಮಾಯೆಯ ಶಕ್ತಿಯನ್ನು ನಮಗೆ ನೆನಪಿಸುತ್ತಾರೆ! ಇನ್ನು ಕೆಲವರು ಬ್ರಹ್ಮನ ಪ್ರತಿಬಿಂಬವಾದ ಹಿರಣ್ಯಗರ್ಭನು ಮುಖ್ಯಜೀವನೆಂದೂ ಉಳಿದೆಲ್ಲ ಜೀವರುಗಳೂ ಇವನ ಪ್ರತಿಬಿಂಬ ವೆಂದೂ ವಾದಿಸಿ ಅನೇಕ ಶರೀರಗಳಲ್ಲಿ ಈ ಒಂದೇ ಜೀವವೇ ಪ್ರತಿಬಿಂಬಿತವಾಗಿದೆ ಯೆಂದು ಅಭಿಪ್ರಾಯಪಡುತ್ತಾರೆ.

ಜೀವವು ಒಂದೇ ಆದರೆ ಈ ಜೀವ ಮುಕ್ತವಾದಾಗ ಎಲ್ಲಾ ಜೀವರು ಮುಕ್ತ ರಾದರೆಂದು ಭಾವಿಸಬೇಕಾಗುತ್ತದೆ. ಅಂದರೆ ಮೋಕ್ಷಕ್ಕಾಗಿ ಯತ್ನಿಸುತ್ತಿದ್ದ ಜೀವರಿಗೂ ಅದಕ್ಕಾಗಿ ಯತ್ನಿಸದೇ ಇದ್ದ ಜೀವರಿಗೂ ಏಕಪ್ರಕಾರವಾಗಿ ಮೋಕ್ಷಪ್ರಾಪ್ತಿಯಾಗ ಬೇಕಾಗುತ್ತದೆ. ಇದು ಅಸಂಗತವಾದ್ದರಿಂದ ಅಂತಃಕರಣಾದಿ ಉಪಾಧಿಭೇದಗಳಿಂದಾಗಿ ಅನೇಕ ಜೀವರು ಇದ್ದಾರೆಂದು ಭಾವಿಸುವುದು ಹೆಚ್ಚು ಸೂಕ್ತ. ಆಗ ಉಪಾಧಿ ವಿಮುಕ್ತರಾದ ಜೀವರು ಮಾತ್ರ ಮುಕ್ತರಾಗಿ ಉಳಿದವರು ಬಂಧದಲ್ಲಿ ಮುಂದುವರಿ ಯುವುದರಿಂದ ಸರ್ವಮೋಕ್ಷ ಪ್ರಸಂಗವು ಉದ್ಭವಿಸುವುದಿಲ್ಲ. ಹೀಗೆ ಅಭಿಪ್ರಾಯ ಪಡುವವರೂ ಇದ್ದಾರೆ.

ಈ ವಿಷಯುಗಳಷ್ಟೇ ಅಲ್ಲದೆ ಮನಸ್ಸೆಂಬುದು ಒಂದು ಇಂದ್ರಿಯವೇ ಅಥವಾ ಅಲ್ಲವೇ, ಶ್ರವಣದಿಂದ ಅಪರೋಕ್ಷಜ್ಞಾನ ಪ್ರಾಪ್ತಿಯಾಗುತ್ತದೆಯೋ ಅಥವಾ ಇಲ್ಲವೇ.

ಅಖಂಡಾಕಾರವೃತ್ತಿಯ ವಿಷಯವು ನಿರುಪಾಧಿಕ ಬ್ರಹ್ಮವೇ ಅಥವಾ ಅಲ್ಲವೇ, “ ಆತ
ವಾ ಅರೇ ದೃಷ್ಟವ್ಯಃ ಶ್ರೋತವ್ಯೋ ನಿಧಿಧ್ಯಾಸಿತವ್ಯಃ” ಎಂಬ ಶ್ರುತಿವಾಕ್ಯವು ವಿಧಿ
ಅಥವಾ ಅಲ್ಲವೇ, ಇತ್ಯಾದಿಯಾಗಿ ಅನೇಕ ವಿಷಯಗಳ ಬಗ್ಗೆ ಅದ್ವೈತಿಗಳಲ್ಲಿ ಪ್ರಬ
ಭಿನ್ನಾಭಿಪ್ರಾಯಗಳಿವೆ. ವಿಪುಲವಾದ ಚಿಂತನೆ ನಡೆದಿರುವಾಗ ಭಿನ್ನ ಅಭಿಪ್ರಾಯ
ಗಳಿಂದ ಒಂದು ಸಾಗರವೇ ಸೃಷ್ಟಿಯಾಗುವುದರಲ್ಲಿ ಆಶ್ಚರ್ಯವೇನಿದೆ ?

—o—

ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಅದ್ವೈತ ದರ್ಶನ

ಪ್ರೊ|| ಜಿ. ವೆಂಕಟಸುಬ್ಬಯ್ಯ

ಭಾರತದ ವೇದಾಂತ ಸಂಪ್ರದಾಯವು ಬಹಳ ಪ್ರಾಚೀನವಾದುದು. ಉಪನಿಷತ್ತುಗಳು ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳನ್ನು ಒಟ್ಟು ಪ್ರಸ್ಥಾನತ್ರಯವೆಂದು ಕರೆಯುತ್ತಾರೆ. ವೇದಾಂತ ಮಾರ್ಗದಲ್ಲಿ ಮುಂದುವರಿದು ಸಾಕಷ್ಟು ಅರಿವನ್ನು ಸಂಪಾದಿಸಬೇಕಾದವರೆ ಈ ಪ್ರಸ್ಥಾನತ್ರಯವನ್ನು ಆಳವಾಗಿ ಅಭ್ಯಾಸ ಮಾಡಬೇಕು. ಇದೊಂದು ಪರಂಪರೆಯಾದುದರಿಂದ ಇವುಗಳ ಅಂತರಾರ್ಥವನ್ನು ತಿಳಿದುಕೊಳ್ಳುವುದು ಸ್ವಪ್ರಯತ್ನದಿಂದಲೇ ಸಾಧ್ಯವಾಗುವುದಿಲ್ಲ. ಆದುದರಿಂದಲೇ ಪರಂಪರಾನುಗತವಾದ ಅರ್ಥವನ್ನು ಸ್ಪಷ್ಟವಾಗಿ ಹೃದ್ಗತ ಮಾಡಿಕೊಳ್ಳಬೇಕಾದರೆ ಸಂಪ್ರದಾಯನಿಷ್ಠರಾದ ಗುರುಗಳ ಬೋಧೆ ಅತ್ಯಗತ್ಯವಾಗುತ್ತದೆ.

ಶಂಕರಾಚಾರ್ಯರು ವೇದಾಂತದ ರೀತಿ ನೀತಿ ಸಂಪ್ರದಾಯಗಳನ್ನು ನಿರ್ದಿಷ್ಟಪಡಿಸುವುದಕ್ಕಾಗಿಯೇ ಈ ಪ್ರಸ್ಥಾನತ್ರಯಕ್ಕೆ ತಾವೇ ಭಾಷ್ಯಗಳನ್ನು ರಚಿಸಿದ್ದಾರೆ. ಪ್ರಸನ್ನ ಗಂಭೀರವಾದ ಶೈಲಿಯಲ್ಲಿ ರಚಿತವಾಗಿರುವ ಈ ಭಾಷ್ಯಗಳನ್ನು ಕೂಡ ಗುರುಮುಖದಿಂದ ಕಲಿಯುವುದೇ ಸರಿಯಾದ ಮಾರ್ಗ. ಆ ದೃಷ್ಟಿಯಿಂದ ಜಿಜ್ಞಾಸುಗಳಿಗೆ ಸಹಾಯ ಮಾಡಲು ಇನ್ನೂ ಅನೇಕ ಗ್ರಂಥರಾಶಿ ನಿರ್ಮಾಣವಾಗಿದೆ. ಅವುಗಳನ್ನು ಪ್ರಸ್ಥಾನಗ್ರಂಥಗಳೆಂದು ಕರೆಯುತ್ತಾರೆ. ನಿಜವಾಗಿ ಸ್ಪಷ್ಟಗ್ರಹಿಕೆ ಬೇಕೆನ್ನುವ ಬಯಕೆ ಆಳವಾಗಿದ್ದರೆ ಅಂಥವರು ಈ ಎಲ್ಲ ಪ್ರಸ್ಥಾನ ಗ್ರಂಥಗಳನ್ನೂ ಚಾರಿತ್ರಿಕ ದೃಷ್ಟಿಯಿಂದ ಒಂದಾದ ಮೇಲೆ ಒಂದರಂತೆ ಅಭ್ಯಾಸ ಮಾಡಬೇಕು. ಇದು ಒಂದು ಜೀವಮಾನದ ಕೆಲಸ. ಆದುದರಿಂದಲೇ ಗುರುಬೋಧೆ ಅತ್ಯಗತ್ಯವಾಗುತ್ತದೆ. ಇದು ದರ್ಶನದ ಮಾತಾಯಿತು.

ಇನ್ನು ಸಾಹಿತ್ಯದಲ್ಲಿ ಈ ದರ್ಶನವನ್ನು ಪ್ರತಿಪಾದಿಸುವುದು ಎಂದರೇನು ? ಶಂಕರರ ಅದ್ವೈತ ದರ್ಶನವನ್ನು ಕವಿಗಳು ಸಾಹಿತ್ಯದಲ್ಲಿ ಪ್ರತಿಪಾದಿಸಿದ್ದಾರೆಯೇ ? ಎಂಬ ಪ್ರಶ್ನೆಗಳು ಏಳಬಹುದು. ಆದರೆ ಈ ವಿಷಯವನ್ನು ಕುರಿತು ಬರೆಯುವುದಕ್ಕೆ ಮುಂಚೆ ಸಾಹಿತ್ಯದಲ್ಲಿ ದರ್ಶನದ ಪ್ರತಿಪಾದನೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದು ಒಳ್ಳೆಯದು. ಒಂದು ಸಾಹಿತ್ಯ ಕೃತಿಗೆ ಯಾವುದಾದರೂ ಉದ್ದೇಶವಿರುತ್ತದೆ. ಆದರೆ ಅದು ಸಾಹಿತ್ಯದಲ್ಲಿ ಯಾವಾಗಲೂ ನೇರವಾಗಿ ನಿರೂಪಿತವಾಗುವುದಿಲ್ಲ. ರಾಮಾಯಣ ಮಹಾಭಾರತಗಳಲ್ಲಿ ಕೂಡ ಧರ್ಮಾಧರ್ಮಗಳ ಸಂಘರ್ಷವನ್ನು ನಾವು ಕಂಡರೂ ಎಲ್ಲಿಯೂ ಕವಿ ಇದು ಧರ್ಮ, ಇದು ಸಂಘರ್ಷ, ಇದು ಅಧರ್ಮ ಎಂದು ನೇರವಾಗಿ ನಿರೂಪಿಸುವುದಿಲ್ಲ. ನಮಗೆ ಆ ಅರ್ಥ ಅನ್ಯಥಾ ಬೋಧೆಯಾಗುವಂತೆ ಮಾಡುತ್ತಾನೆ. ಆ ಬೋಧೆ ಕಾವ್ಯಪಾಕದಲ್ಲಿ ತಾನಾಗಿ ತೇಲಿಬರಬೇಕು. ನೇರವಾಗಿ ನಿರೂಪಿಸಿದ

ಗ್ರಂಥಗಳು ಇಲ್ಲವೆಂದಲ್ಲ. ಆದರೆ ಅವು ಸಾಹಿತ್ಯವೆಂದು ಕರೆಸಿಕೊಳ್ಳುವುದಿಲ್ಲ. ಅ
ಪ್ರಕರಣ ಗ್ರಂಥಗಳೋ ತತ್ತ್ವನಿರೂಪಣ ಗ್ರಂಥಗಳೋ ಆಗುತ್ತವೆ. ಅಲ್ಲಿ ಸಾಹಿತ್ಯ
ಆವರಣ ನಿರ್ಮಾಣವಾಗುವುದಿಲ್ಲ. ಆದುದರಿಂದ ನಾವು ಕನ್ನಡ ಸಾಹಿತ್ಯದಲ್ಲಿ ಪ್ರಾಚೀ
ಕಾಲದಲ್ಲಿ ಅದ್ವೈತವನ್ನು ಪ್ರತಿಪಾದಿಸುವ ಕವಿಕೃತಿಯಿದೆಯೇ ಎಂದು ಕೇಳಿದರೆ, ಇ
ಎಂದೇ ಉತ್ತರ ಹೇಳಬೇಕು. ಈಚೆಗೆ ಈ ಐವತ್ತು ವರ್ಷಗಳಲ್ಲಿ ಅದ್ವೈತ ತತ್ತ
ನಿರೂಪಣೆಗಾಗಿಯೇ ರಚಿತವಾದ ಗ್ರಂಥರಾಶಿಯೇ ಇದೆ. ಆದರೆ ಪ್ರಾಚೀನ ಸಾಹಿತ
ದಲ್ಲಿ ಇದು ಸ್ಪಷ್ಟವಾಗಿ ಎಲ್ಲೂ ಕಾಣಬರುವುದಿಲ್ಲ.

ಪ್ರಾಚೀನ ಕವಿಗಳು ತಾವು ನಂಬಿದ್ದ ದರ್ಶನಗಳ ತತ್ತ್ವಗಳನ್ನು ಅಲ್ಲಲ್ಲಿ ಸೂಚಿ
ಅದ್ವೈತ ತತ್ತ್ವದ ಸಂಬಂಧವನ್ನು ಸೂಚಿಸಿರುವುದು ಉಂಟು. ಅದ್ವೈತ ದರ್ಶನದ
ಆಗಾಗ ಉಪಯೋಗವಾಗುವ ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸಿರುವುದರಿಂ
ಆಯಾ ಕವಿಗಳು ಅದ್ವೈತ ತತ್ತ್ವದಲ್ಲಿ ನಂಬಿಕೆಯಿದ್ದವರೆಂದು ಮಾತ್ರ ಹೇಳಬಹುದು

ಹನ್ನೆರಡನೆಯ ಶತಮಾನಕ್ಕೆ ಮುಂಚೆ ಕನ್ನಡದಲ್ಲಿ ಅಂಥ ಗ್ರಂಥಗಳಿವೆಯೆ
ಎಂದು ಪರಿಶೀಲನೆ ಮಾಡುವುದು ಈ ಸಂದರ್ಭದಲ್ಲಿ ಸೂಕ್ತವಾಗುತ್ತದೆ.

ನಾಗವರ್ಮಕೃತವಾದ 'ಚಂದ್ರಚೂಡಾಮಣಿ ಶತಕ'ವೆಂಬ ಗ್ರಂಥವೊಂದಿದ
ಇದರ ಕರ್ತೃ ನಾಗವರ್ಮನಾದರೂ ಯಾವ ನಾಗವರ್ಮ ಎಂಬ ಬಗ್ಗೆ ಅಭಿಪ್ರಾಯ
ಭೇದವಿದೆ. ನಮಗೆ ಸದ್ಯದಲ್ಲಿ ಈ ಗ್ರಂಥದ ಕರ್ತೃತ್ವದ ವಿಚಾರದಲ್ಲಿ ಚರ್ಚೆ ಬೇಕಿಲ್ಲ
ಇದನ್ನು ಬರೆದ ನಾಗವರ್ಮ ಸುಮಾರು 12 ನೆಯ ಶತಮಾನದ ಮಧ್ಯಭಾಗದ
ಇದ್ದವನು.

ಈ ಚಂದ್ರಚೂಡಾಮಣಿ ಶತಕವು ಪ್ರಧಾನವಾಗಿ ವೈರಾಗ್ಯವನ್ನು ಕುರಿತ ಗ್ರಂಥ
ಇದರಲ್ಲಿ 103 ವೃತ್ತಗಳಿವೆ. ಇದು ಶಿವನನ್ನು ಕುರಿತು ಮಾಡಿರುವ ಪ್ರಾರ್ಥನ
ಪರಂಪರೆ. ಚಂದ್ರ ಚೂಡಾಮಣಿ ಶಿವ ತಾನೆ? ಆದರೆ ಈ ಗ್ರಂಥವನ್ನು ರಚಿಸಿದವನ
ವೀರಶೈವನೆಂಬ ಒಂದು ಅಭಿಪ್ರಾಯವನ್ನು ವಿದ್ವಾಂಸರೊಬ್ಬರು ಪ್ರಕಟಿಸಿದ್ದಾ
ಅದಕ್ಕೆ ಸಾಕಷ್ಟು ಆಧಾರ ಈ ಗ್ರಂಥದಲ್ಲಿ ದೊರಕುವುದಿಲ್ಲ. ಶೃಂಗಾರಕ್ಕೆ ಮಸೋ
ಮೋಕ್ಷಲಕ್ಷ್ಮಿಯನ್ನು ಕಳೆದುಕೊಳ್ಳಬಾರದೆಂಬ ಪ್ರಥಮ ವೃತ್ತದ—

"ಶ್ರೀರಾಮಾಜನಿತೋರ್ವ್ವವಕ್ಕೆ ಮನದೊಳ್ ಮುಯ್ಯಾಂತು ಶೃಂಗಾರದ
ಪ್ರಾರಂಭಕ್ಕೊಳಸೋದಿರ್"

ಎಂಬ ಭಾಗದಲ್ಲಿಯೇ ಕವಿಯ ವೈರಾಗ್ಯದೃಷ್ಟಿ ಸ್ಪಷ್ಟವಾಗುತ್ತದೆ. ಮುಂದೆ ಓದು
ಹೋದಂತೆಲ್ಲಾ ಇದನ್ನು ಅದ್ವೈತಿಯೊಬ್ಬ ರಚಿಸಿದನೆಂಬ ಭಾವ ಬಲಗೊಳ್ಳುತ್ತ
ಈ ಪದ್ಯವನ್ನು ನೋಡಿ :–

ದಿಟಮೇ ಭಾವಿಸಲಿಂದ್ರಜಾಲಮುದನೆಲ್ಲಂ ಕಂಡು ಕಣ್ಮಾಯೆಯಿಂ
ದಿಟವೆಂದಿರ್ದ್ದೆ ಭವತ್ಪ್ರಸಾದದೊಳೆ ಕಂಡಾ ಮಾಯೆಯುಂ ಚಿತ್ರದೊ
ಳ್ಪಿಟಮೆಂದಿರ್ದ್ದಱಿದೆಂ ಬೞಿಕ್ಕ ಪುಸಿಯೆಂಬಂತೆಲ್ಲಮಂ ಮಾಯೆಯುಂ
ದಿಟಮುಳ್ಳೆಂದಱಿದೆಂ ಬೞಿಕ್ಕ ತಿಳಿದೆಂ ಶ್ರೀಚಂದ್ರಚೂಡಾಮಣೀ (38)

ಅದ್ವೈತ ತತ್ತ್ವದ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ವಾಕ್ಯವನ್ನು ನೆನಪಿಗೆ ನೇರವಾಗಿ ತರುವ ಈ ವಾಕ್ಯದಿಂದ ಕವಿಯು ನಂಬಿಕೆ ಹೊರಸೂಸುತ್ತದೆ, ಇಲ್ಲಿಯ 'ಮಾಯಾ' ಶಬ್ದಕ್ಕೆ ಅದ್ವೈತತತ್ತ್ವದ ವಿವರಣೆ ಮಾತ್ರ ಸಾಧ್ಯ.

'ಸಲೆ ತನ್ನಿಂದವೆ ತನ್ನನೀಕ್ಷಿಸಿ' (76) ಎಂಬ ಮಾತು "ಆತ್ಮನಾ ಆತ್ಮಾನಂ ವಿದ್ಧಿ" ಎಂಬ ಉಕ್ತಿಯ ಕನ್ನಡ ಅನುವಾದವಲ್ಲವೆ ? 'ಸರ್ವಂ ಖಲ್ವಿದಂ ಬ್ರಹ್ಮ' ಎಂದೊಳ ಕೊಂಡಿರ್ಪುದಶೇಷವುಂ ಸಕಲಮುಂ ತಾನಕ್ಕುಂ" (79) ಎಂಬ ಮಾತೂ ಹೀಗೆ ಅದ್ವೈತದ ಪರವಾದ ಮಾತು. ತ್ರಿಮೂರ್ತಿ ಪೂಜೆಯ ಮಾತು 81ನೆಯ ಪದ್ಯ ದಲ್ಲಿದೆ. "ಸರ್ವಾತ್ಮ ಸಿದ್ಧಿಯ ನಾನೆಯ್ದಿದೆನೆಂಬ ನಿಮ್ಮನಱಿದಾಂ ನೀವಾದೆನ್ ಎಂದೆಂಬ ಬುದ್ಧಿಯನೇ ದೇವರ ದೇವ ಬೇಡಿದೆನ್" (99) ಎಂಬ ಮಾತಂತೂ ಸ್ಪಷ್ಟವಾಗಿ ಅದ್ವೈತದರ್ಶನದ ಪರವಾಗಿದೆ.

ಇಷ್ಟಾದರೂ ಈ ಗ್ರಂಥದಲ್ಲಿ ಅದ್ವೈತತತ್ತ್ವವು ಕಾವ್ಯಪಾಕವಾಗಿ ಮೂಡಿ ಬಂದಿದೆ ಎಂದು ಹೇಳುವುದು ಕಷ್ಟ.

ಅದೇ ಶತಮಾನದ ರುದ್ರಭಟ್ಟನ ಜಗನ್ನಾಥವಿಜಯವು ವಿಷ್ಣುಪುರಾಣದ ಕಥೆ ಯನ್ನೇ ಹೇಳುವ ಕಾವ್ಯ. ವಿಷ್ಣುಪುರಾಣದ ಐದು, ಆರನೆಯ ಅಂಶಗಳನ್ನು ಆರಿಸಿ ಕೊಂಡು ಕೃಷ್ಣನ ಸೂರೊಂದು ಸಾಹಸ ಕೃತ್ಯಗಳನ್ನು ವಿವರಿಸುವ ಗ್ರಂಥ.

ಕಥೆ ವಿಷ್ಣು ಪುರಾಣಂ ಸ
ತ್ಕೃತಿ ವೇಳ್ದಂ ಸುಕವಿ ರುದ್ರನೀ ಕೃತಿಗೆ ಕಥಾ
ಪತಿ ಕೃಷ್ಣಂ ಕೃತಿಯುಂ ಭೂ
ಸುತಮೆ ಜಗನ್ನಾಥ ವಿಜಯಮೆನೆ ಮೆಚ್ಚದರಾರ್

ಈ ಕಾವ್ಯದಲ್ಲಿ ಕೆಲವು ಕಡೆಗಳಲ್ಲಿ ಕೃಷ್ಣನ ಪ್ರಾರ್ಥನೆ ಬಂದಾಗ ಆ ಪದ್ಯಗಳಲ್ಲಿ ಅದ್ವೈತ ಪರವಾದ ವಿವರಣೆಗಳು ದೊರಕುತ್ತವೆ.

ಕಾಳಿಯನ ಹೆಂಡತಿಯರು ಕೃಷ್ಣನನ್ನು ಪ್ರಾರ್ಥಿಸುವ ಪದ್ಯಗಳನ್ನು ಗಮನಿಸಿ :

ಉದಯ ಸ್ಥಿತಿ ಸಂಹಾರ
ಪ್ರದಂ ಜಗಕ್ಕೆನಿಪ ಕಮಲಭವ ಹರಿ ಹರ ನಾ
ಮದ ಪುರುಷಾಕಾರತ್ರಯ
ಮುಮ ನಿನ್ನ ವಿಡಂಬಮಲ್ತೆ ಪರಮಜ್ಯೋತೀ (3-105)

ಕ್ಷಮಾರಾರಿತರರ್ ನಿಜಪದ
ಮುಮಸಱಿಯಲ್ ಪದ್ಮಭವನ ಮತಿಗಂ ಹರಿ ನಿ
ನ್ನ ಮಹತ್ವಂ ಪ್ರಥಿತಮಗಾ
ಧಮಗಾಧಮುಮುನ್ನತೋನ್ನತೋನ್ನತಮಲ್ತೇ. (3-106)

ವಿವಿಧ ಬ್ರಹ್ಮಾಂಡಂ ಮಾ
ಧವ ನಿನ್ನವಕಾಶಮದಱ ಸೂಕ್ಷ್ಮತರಾಂಶಾಂ
ಶವೆನಲ್ ನಿಜಸ್ವರೂಪದ
ಪವಣುಮನಾರ್ ಬಲ್ಲರೆಂತದಂ ಬಣ್ಣಿಸುವರ್ (3–107)

ಗೋವರ್ಧನೋದ್ಧರಣವಾದ ಮೇಲೆ ಗೋಪಾಲಕರಿಗೆಲ್ಲ ಕೃಷ್ಣನ ಬಗ್ಗೆ ಅತ್ಯಾಶ್ಚರ್ಯವಾಗುತ್ತದೆ. ಅವರೆಲ್ಲ ಕೃಷ್ಣನ ಎಲ್ಲ ಸಾಹಸ ಕಾರ್ಯಗಳನ್ನೂ ಕುರಿತು ಕೃಷ್ಣನನ್ನು ಕೈಮುಗಿದು ಕೇಳಿಕೊಳ್ಳುತ್ತಾರೆ:

ಪಸುಗೂಸುತನದೊಳಂ ಸಾ
ಹಸವತಿಮಾನುಷವತೀಂದ್ರಿಯಂ ನಿನಗವಱಿಂ
ಬೆಸನೊಂಡಪೆವೊಂದಂ ಬಂ
ಚಿಸದುಳ್ಳುದನೆಮಗೆ ಕೃಷ್ಣ ಪೇೞಲೆವೇೞ್ಕುಂ (4–109)

ಅದಕ್ಕೆ ಕೃಷ್ಣನು "ಆಸಾರುಮಲ್ಲೆಂ ಮದಾಚರಣಂ ದೂಷ್ಯಮೆ ಮಾಣ್ಬುದೆನ್ನ ಕೆೞೆಯುಂ ಮೇಣ್ ಮಚ್ಚರಿತ್ರಂ ಮನೋಹರಮೇ ಭಾವಿಪ್ಪುದೆನ್ನನಾತ್ಮಸಮನೆಂದೇಕನ್ಯಥಾ ಕಲ್ಪನಂ" (110) ಎನ್ನುತ್ತಾನೆ. ಕೃಷ್ಣನ ಮಾತಿನಲ್ಲಿ 'ಪರಮಾತ್ಮ ಪಾರಮ್ಯ'ದ ಸೂಚನೆ ಸ್ಪಷ್ಟವಾಗಿದೆ. 'ಆತ್ಮಸಮ' ಶಬ್ದದ ಶ್ಲೇಷೆ ರಮ್ಯವಾಗಿದೆ.

ಕಥೆ ಮುಂದುವರಿದಂತೆ ಮಥುರೆಯಿಂದ ಅಕ್ರೂರನು ಬಂದು ಕೃಷ್ಣ ಬಲರಾಮರನ್ನು ಮಥುರೆಗೆ ಕರೆತರುತ್ತಾನೆ. ಮಾರ್ಗ ಮಧ್ಯದಲ್ಲಿ ಯಮುನಾ ನದಿ ಸಿಕ್ಕುತ್ತದೆ. ಅಕ್ರೂರನು ಕೃಷ್ಣಬಲರಾಮರನ್ನು ತೇರಿನಲ್ಲೇ ಇರುವಂತೆ ಹೇಳಿ ತಾನು ಯಮುನೆಯಲ್ಲಿ ಸ್ನಾನ ಮಾಡುತ್ತಾನೆ. ಹಾಗೆ ಅವನು ನೀರಿನಲ್ಲಿ ಮುಳುಗಿರುವಾಗ ವಿಷ್ಣುವಿನ ದರ್ಶನವಾಗುತ್ತದೆ. ಅಲ್ಲಿ ವಿಷ್ಣುವಿನ ನಾಭಿಯಲ್ಲಿದ್ದ ಕಮಲನಾಳದ ಮಾರ್ಗವಾಗಿ ಒಳಹೊಗುತ್ತಾನೆ. ಅಲ್ಲಿ ಬ್ರಹ್ಮನ ಆಜ್ಞೆಯಂತೆ ಮನೋವೇಗದಲ್ಲಿ ಮುಂದೆ ಮುಂದೆ ನಡೆಯುತ್ತಾನೆ. ಅಲ್ಲಿ—

ಗೋಲೋಕ ಸತ್ಯಲೋಕ ತ
ಪೋಲೋಕ ಬ್ರಹ್ಮಲೋಕ ಜನಲೋಕ ದಿವಾ
ಕರಲೋಕ ಧ್ರುವಲೋಕ ಮ
[illegible]ಧರಲೋಕಮಂ ನೆಱೆ ಕಂಡಂ (5–106)

ಹೀಗೆ ಸಕಲ ಚರಾಚರವೂ ಸೇರಿರುವ ವಿಶ್ವರೂಪ ದರ್ಶನವು ಅವನಿಗೆ ಆಗುತ್ತದೆ. ಅಲ್ಲಿ ಶೇಷಶಯನನಾಗಿ ಕೃಷ್ಣನಿರುವುದನ್ನು ಕಾಣುತ್ತಾನೆ. ತೇರಿನಿಂದ ಎದ್ದು ಬಂದು ಕೃಷ್ಣನೇ ಪರಮಾತ್ಮನೆಂದರಿತು ಅವನನ್ನು ಸ್ತುತಿಮಾಡುತ್ತಾನೆ.

ಬಾಣಾಸುರನ ಕಥೆಗೆ ಸಂಬಂಧಿಸಿದಂತೆ ಒಂದು ಘಟನೆಯನ್ನು ರುದ್ರಭಟ್ಟನು ಚಿತ್ರಿಸಿದ್ದಾನೆ. ಕೃಷ್ಣನು ಸುದರ್ಶನವನ್ನು ಹಿಡಿದು ಬಾಣನನ್ನು ನಾಶಮಾಡಲು ಮುಂದೆ ಬಂದಾಗ, ಬಾಣಾಸುರನ ಅಭಿಮಾನಿ ದೇವತೆಯಾದ ಈಶ್ವರನೇ ಮುಂದೆ ಬಂದು—

ಉಡುಗುಡುಗು ಚಕ್ರಮಂ ನೀಂ
ಬಿಡದಿರ್ ಬಿಡದಿರ್ ಬಲೀಂದ್ರಸೂನುಗೆ ಮಾಣ್ ಮಾಣ್
ಪೊಡೆಯಲರ ಮನ್ನಿಸೆನ್ನಯ
ನುಡಿಯಂ ಗುಹನಿಂ ವಿಶೇಷನೆನಗೀ ಬಾಣಂ (18-65)

ದ್ವಯ ಭಾವಂ ನಮಗಿಲ್ಲ ಬಲ್ಲವರೆ ನಾನುಂ ನೀನುಮೀ ಮಾತು ನಿ
ಶ್ಚಯಮೆಂತೆಂದೆನಲೇಕಮೂರ್ತಿ ಮೊದಲೊಳ್ ಸಂದತ್ತದಿನ್ನೇಕ ಮೂ
ರ್ತಿಯೆ ಮೂರ್ತಿತ್ರಯವಾಯ್ತುದಲ್ಲದೆಯುಮಾ ತ್ರೈಮೂರ್ತಿಯೊಳ್ ಸತ್ವಮೂ
ರ್ತಿಯೆ ನೀಂ ರಕ್ಷಣವೃತ್ತಿ ನಿನ್ನದದಱಿಂದಂ ರಕ್ಷಿಸೀ ಬಾಣನಂ (18–66)

ಎಂದು ಹೇಳುತ್ತಾನೆ. ಆಗ ಕೃಷ್ಣನು

ಪರಮೇಶ ಭಕ್ತ ಜನಶಂ
ಕರ ಶಂಕರ ನಿನ್ನ ಮಾತನಾಂ ಮನ್ನಿಸಿದೆಂ
ತ್ವರಿತಂ ಚಕ್ರಮನುಪಸಂ
ಹರಿಸಿದೆನಿಂ ಬಾಣ ದೈತ್ಯನಂ ರಕ್ಷಿಸಿದೆಂ (18–67)

ಎನ್ನುತ್ತಾನೆ. ಹರಿಹರ ಸಾಮರಸ್ಯದ ಈ ಮಾತು ಕೂಡ ಅದ್ವೈತ ತತ್ತ್ವದ ಮರುದನಿ. ಹೀಗಾಗಿ ಈ ಜಗನ್ನಾಥ ವಿಜಯವು

"ವಿಷ್ಣು ತನ್ನಂಶದಂಶದೆ ಪುಟ್ಟಿರ್ದ ಕಥಾಂಶದಂಶದ
ಮಹತ್ವಾಂಶಾಂಶಮಿಂತೀ ಸ್ತವಂ"

ಇಷ್ಟು ಹೊರತು ಅದ್ವೈತ ದರ್ಶನದ ಇನ್ನಾವ ಪಾರಿಭಾಷಿಕ ನಿರೂಪಣೆಯೂ ಈ ದೊಡ್ಡ ಕಾವ್ಯದಲ್ಲಿ ಕೂಡ ಇಲ್ಲ.

ಅದ್ವೈತ ದರ್ಶನದಂತಹ ವ್ಯಾಪಕವಾದ ತತ್ತ್ವವನ್ನು ಸಾಹಿತ್ಯದಲ್ಲಿ ಸಾಕಾರವಾಗಿ ಮೂಡಿಸುವುದು ಸುಲಭ ಸಾಧ್ಯವಾದ ಮಾತಲ್ಲ. ತತ್ತ್ವಪ್ರಧಾನವಾದ ಪ್ರಕರಣಗ್ರಂಥಗಳ ಮೂಲಕವೇ ಅದನ್ನು ಮೊದಲು ಹೃದಯಗತ ಮಾಡಿಕೊಂಡ ಬಳಿಕ, ಪ್ರಸ್ಥಾನ ತ್ರಯದ ಶಂಕರ ಭಾಷ್ಯಗಳನ್ನು ಗುರುಮುಖೇನ ಅಭ್ಯಾಸ ಮಾಡುವುದೇ ಅದ್ವೈತ ದರ್ಶನ ಪರಿಚಯಕ್ಕೆ ಇರುವ ಏಕೈಕ ಮಾರ್ಗ.

ಕನ್ನಡದಲ್ಲಿ ಅದ್ವೈತ ಸಾಹಿತ್ಯಕ್ಕೆ ಶ್ರೀರಾಮಕೃಷ್ಣಾಶ್ರಮಗಳ ಕೊಡುಗೆ

—ಸ್ವಾಮಿ ನಿತ್ಯಸ್ಥಾನಂದಜೀ ಮಹಾರಾಜ್

ಕರ್ನಾಟಕ ಆಚಾರ್ಯತ್ರಯರ ದರ್ಶನಗಳ ತ್ರಿವೇಣೀ ಸಂಗಮ. ಮಧ್ವಾಚಾರ್ಯರು ಇಲ್ಲಿಯೇ ಜನಿಸಿ ಇಲ್ಲಿಯೇ ತಮ್ಮ ಮಠವನ್ನು ಸ್ಥಾಪಿಸಿದರು. ರಾಮಾನುಜಾಚಾರ್ಯರು ಇಲ್ಲಿಗೆ ಬಂದು ನೆಲಸಿ ತಮ್ಮ ಸಿದ್ಧಾಂತವನ್ನು ಬೋಧಿಸಿ ಮಠವನ್ನೂ ಸ್ಥಾಪಿಸಿದರು. ಹಾಗೆಯೇ ಶಂಕರಾಚಾರ್ಯರೂ ತಮ್ಮ ಪ್ರಥಮ ಮಠವನ್ನು ಶೃಂಗೇರಿಯಲ್ಲಿ ಸ್ಥಾಪಿಸಿದರು. ಇಷ್ಟೇ ಅಲ್ಲದೆ ಬಸವಣ್ಣನವರ ವೀರಶೈವ ಮತವೂ ಕರ್ನಾಟಕದಲ್ಲಿಯೇ ಹುಟ್ಟಿತು. ಹೀಗೆ ಅನೇಕ ಧಾರ್ಮಿಕ ಮತಪಂಥಗಳ ನೆಲೆವೀಡು ಕರ್ನಾಟಕ.

ಈ ಎಲ್ಲ ಮತಪಂಥಗಳಿಗೆ ಸಂಬಂಧಿಸಿದ ಹಲವಾರು ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ಪುರಂದರದಾಸ ಕನಕದಾಸರಂಥ ದಾಸಶ್ರೇಷ್ಠರು, ಬಸವಣ್ಣ, ಅಕ್ಕಮಹಾದೇವಿ ಮುಂತಾದ ವಚನಕಾರರು ಕನ್ನಡಸಾಹಿತ್ಯವನ್ನು ಇನ್ನೂ ಶ್ರೀಮಂತಗೊಳಿಸಿರುವರು. ಇವರುಗಳ ಧಾರ್ಮಿಕ ಕೊಡುಗೆಯು ಜತೆ ಸಾಹಿತ್ಯಕ ಕೊಡುಗೆಯೂ ಗಮನಾರ್ಹವಾದುದು, ಹಾಗೆಯೇ ಶಂಕರಾಚಾರ್ಯರ ಅದ್ವೈತ ಮತಕ್ಕೆ ಸಂಬಂಧಿಸಿದ ಗ್ರಂಥಗಳೂ ಬಹಳಷ್ಟಿವೆ. ಇದರಲ್ಲಿ ಶ್ರೀರಾಮಕೃಷ್ಣ ಆಶ್ರಮಗಳ ಕೊಡುಗೆಯೂ ಗಣನೀಯವಾದುದು. ಅದ್ವೈತಕ್ಕೆ ಸಂಬಂಧಿಸಿದ ಸ್ವತಂತ್ರ ಗ್ರಂಥಗಳಾವುವೂ ಕನ್ನಡದಲ್ಲಿ ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟವಾಗಿಲ್ಲ; ಪ್ರಕಟವಾಗಿರುವುದರಲ್ಲೆಲ್ಲ ಹೆಚ್ಚಿನವು ಮೂಲ ಸಂಸ್ಕೃತದ ಅನುವಾದಗಳು.

ಶ್ರೀರಾಮಕೃಷ್ಣಾಶ್ರಮದ ಮುಖ್ಯ ಚಟುವಟಿಕೆಗಳಲ್ಲಿ ಒಂದು—ವಿವಿಧ ಭಾಷೆಗಳಲ್ಲಿ ಧರ್ಮ ತತ್ತ್ವಶಾಸ್ತ್ರ ಮತ್ತು ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳ ಪ್ರಕಟಣೆಯ ಮೂಲಕ ಜನರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ಬರುವುದು. ವಿಶೇಷವಾಗಿ ಆಧುನಿಕ ಜೀವನಕ್ಕೆ ಹೊಂದಿಕೆಯಾಗುವಂತೆ ಮತ್ತು ಆಧುನಿಕ ವಿಚಾರವಂತರಿಗೆ ಮೆಚ್ಚಿಕೆಯಾಗುವಂತೆ ಧರ್ಮದ ಮೂಲತತ್ತ್ವಗಳನ್ನು ಜನರಿಗೆ ತಿಳಿಯಪಡಿಸುವುದು ಶ್ರೀರಾಮಕೃಷ್ಣ ಆಶ್ರಮದ ಉದ್ದೇಶವಾಗಿದೆ. ಯಾವುದೇ ಜಾತಿ, ಮತ, ಕೋಮುಗಳಿಗೆ ವಿರುದ್ಧವಾಗದ ರೀತಿಯಲ್ಲಿ ಧರ್ಮದ ಮುಖ್ಯ ಭಾವನೆಗಳನ್ನು ಅವು ಅನುಷ್ಠಾನಯೋಗ್ಯವಾಗುವಂತೆ ಅತ್ಯಂತ ವಿಶಾಲಾರ್ಥದಲ್ಲಿ ನಿರೂಪಿಸುವುದರ ಮೂಲಕ ಸಮಾಜದಲ್ಲಿ ಧಾರ್ಮಿಕ ಮತ್ತು ಮತೀಯ ಸೌಹಾರ್ದವುಂಟುಮಾಡಲು ಶ್ರೀರಾಮಕೃಷ್ಣ ಸಂಘ ಪ್ರಯತ್ನಿಸುತ್ತಿದೆ.

ಎಲ್ಲ ವೇದಾಂತ ಸಿದ್ಧಾಂತಗಳಿಗೂ ಮೂಲ ಆಧಾರಗ್ರಂಥಗಳು ಉಪನಿಷತ್ತು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆ. ಈ ಮೂರನ್ನು ಪ್ರಸ್ಥಾನತ್ರಯ ಎಂದು ಕರೆಯುತ್ತಾರೆ. ವೇದಾಂತದ ಎಲ್ಲ ಆಚಾರ್ಯರುಗಳೂ ಈ ಮೂರನ್ನು ಅವಲಂಬಿಸಿಯೇ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿರುವರು. ಎಲ್ಲರೂ ತಮ್ಮ ಮತಕ್ಕನುಗುಣವಾದ ಭಾಷ್ಯವನ್ನು ಈ ಮೂರರ ಮೇಲೆ ಬರೆದಿರುವರು. ಇವುಗಳಲ್ಲಿಯೂ ಅತ್ಯಂತ ಮುಖ್ಯವಾದ ಮೂಲ ಆಧಾರಗ್ರಂಥ ಶ್ರುತಿ ಎಂದು ಕರೆಯಲ್ಪಡುವ ಉಪನಿಷತ್ತುಗಳು. ಇವು ವೇದಗಳ ಭಾಗವಾಗಿದ್ದು ವೇದಾಂತದ ಮೂಲತತ್ತ್ವಗಳನ್ನು ಒಳಗೊಂಡಿವೆ. ಉಪನಿಷತ್ ವಾಕ್ಯಗಳನ್ನೆಲ್ಲ ಕ್ರೋಢೀಕರಿಸಿ ಅವುಗಳ ಆಧಾರದ ಮೇಲೆ ಯುಕ್ತಿಪೂರ್ಣವಾಗಿ ಒಂದು ಸಿದ್ಧಾಂತವನ್ನು ರೂಪಿಸಿ ಬ್ರಹ್ಮಸೂತ್ರಗಳನ್ನು ಬರೆದರು ಬಾದರಾಯಣರು. ಉಪನಿಷತ್ತುಗಳ ಸಾರಭೂತವಾದ ಇನ್ನೊಂದು ಗ್ರಂಥ ಶ್ರೀಮದ್ಭಗವದ್ಗೀತೆ. ಸಾಧನಪ್ರಧಾನವಾದ ಈ ಗ್ರಂಥ ಅನುಭೂತಿ ಎನಿಸಲ್ಪಟ್ಟಿದೆ. ಹೀಗೆ ಶ್ರುತಿ, ಯುಕ್ತಿ ಮತ್ತು ಅನುಭೂತಿ–ಇವು ಎಲ್ಲ ವೇದಾಂತ ತತ್ತ್ವಗಳ ಹಿನ್ನೆಲೆ. ಶಂಕರಾಚಾರ್ಯರು ಈ ಮೂರು ಗ್ರಂಥಗಳಿಗೆ ತಮ್ಮ ಅಮೋಘವಾದ ಭಾಷ್ಯಗಳನ್ನು ಬರೆದಿರುವರು. ಈ ಭಾಷ್ಯಗಳ ಕನ್ನಡಾನುವಾದ ಶ್ರೀರಾಮಕೃಷ್ಣಾಶ್ರಮದಿಂದ ಇನ್ನೂ ಪ್ರಕಟವಾಗಿರದಿದ್ದರೂ ಅವುಗಳನ್ನು ಆಧರಿಸಿದ ಮೂಲಗ್ರಂಥಗಳ ಅನುವಾದ ಆಗಲೇ ಪ್ರಕಟವಾಗಿದೆ.

ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಶ್ವೇತಾಶ್ವತರ, ಛಾಂದೋಗ್ಯ ಮತ್ತು ಬೃಹದಾರಣ್ಯಕ—ಈ ಹನ್ನೊಂದು ಮುಖ್ಯ ಉಪನಿಷತ್ತುಗಳಿಗೆ ಶಂಕರಾಚಾರ್ಯರು ಭಾಷ್ಯ ಬರೆದಿರುವರು. ಸ್ವಾಮಿ ಆದಿದೇವಾನಂದಜೀಯವರು ಈ ಭಾಷ್ಯವನ್ನು ಆಧರಿಸಿ ಅದ್ವೈತಪರವಾಗಿ ಪ್ರತಿಯೊಂದು ಮಂತ್ರದ ಪದಶಃ ಅರ್ಥ, ತಾತ್ಪರ್ಯ, ಮತ್ತು ಟಿಪ್ಪಣಿಗಳೊಡನೆ ಈ ಎಲ್ಲ ಉಪನಿಷತ್ತುಗಳನ್ನು ಕನ್ನಡಕ್ಕೆ ಭಾಷಾಂತರಿಸಿರುವರು. ಪ್ರತಿಯೊಂದು ಉಪನಿಷತ್ತಿಗೆ ಅವರು ಬರೆದಿರುವ ವಿದ್ವತ್ಪೂರ್ಣವಾದ ಪ್ರಸ್ತಾವನೆ ಆಯಾಯಾ ಉಪನಿಷತ್ತಿನ ಸಾರವನ್ನು ತಿಳಿಸುವುದು. ಇದರ ಜತೆಗೇ ಮಾಂಡೂಕ್ಯ ಉಪನಿಷತ್ತಿನ ಮೇಲೆ ಬರೆದಿರುವ ಗೌಡಪಾದಕಾರಿಕೆಯನ್ನೂ ಅವರು ಕನ್ನಡಕ್ಕೆ ಅನುವಾದಿಸಿರುವರು. ಈ ಎಲ್ಲ ಉಪನಿಷತ್ತುಗಳ ಅನೇಕ ಆವೃತ್ತಿಗಳು ಈಗಾಗಲೇ ಪ್ರಕಟವಾಗಿದ್ದು ಇವು ಅತ್ಯಂತ ಜನಪ್ರಿಯವಾಗಿರುವುವು ಸ್ವಾಮೀಜೀಯವರ ಸ್ತುತ್ಯರ್ಹ ಕೆಲಸದ ಗುರುತಾಗಿದೆ.

ಸ್ವಾಮಿ ಆದಿದೇವಾನಂದಜೀಯವರೇ ಶ್ರೀಮದ್ಭಗವದ್ಗೀತೆಯನ್ನೂ ಅದ್ವೈತಪರ ಅರ್ಥಟಿಪ್ಪಣಿಗಳೊಂದಿಗೆ ಅನುವಾದಿಸಿರುವರು. ಸರಳ ಅನುವಾದದಿಂದ ಕೂಡಿದ ಈ ಕೃತಿ ಕನ್ನಡ ನಾಡಿನಲ್ಲಿ ಗೀತಾಪ್ರಚಾರದ ಕಾರ್ಯದಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ.

ಸ್ವಾಮೀಜೀಯವರ ಇನ್ನೊಂದು ಅಮೂಲ್ಯ ಕೊಡುಗೆ – ಬ್ರಹ್ಮಸೂತ್ರಗಳ ಅನುವಾದ. ಇದರ ಒಂದು ವೈಶಿಷ್ಟ್ಯವೇನೆಂದರೆ ಶಂಕರ, ರಾಮಾನುಜ ಮತ್ತು ಮಧ್ವ– ಈ ಮೂವರು ಆಚಾರ್ಯರ ಭಾಷ್ಯಗಳ ತಾತ್ಪರ್ಯಾನುವಾದವನ್ನು ಕೊಟ್ಟಿರುವುದು. ಆದರೆ ಇದರಲ್ಲಿ ಶಂಕರಭಾಷ್ಯವೇ ಪ್ರಧಾನ. ಮೂರು ಭಾಷ್ಯಗಳ ತುಲನಾತ್ಮಕ ಅಧ್ಯಯನ ಮಾಡಬೇಕೆನ್ನುವವರಿಗೆ ಇದೊಂದು ಅತ್ಯುತ್ಕೃಷ್ಟ ಗ್ರಂಥವಾಗಿದೆ.

ಶಂಕರಾಚಾರ್ಯರ ಪ್ರಕರಣ ಗ್ರಂಥಗಳಲ್ಲಿ ಅನೇಕವು ಕನ್ನಡದಲ್ಲಿ ಅನುವಾದಿತವಾಗಿವೆ. ಇವುಗಳಲ್ಲಿ ಮುಖ್ಯವಾದುದು– 'ವಿವೇಕಚೂಡಾಮಣಿ.' ಈ ಕೃತಿ ಕಾವ್ಯಮಯವೂ ಮತ್ತು ತತ್ತ್ವಮಯವೂ ಆಗಿದ್ದು ಸುಪ್ರಸಿದ್ಧವೂ ಜನಪ್ರಿಯವೂ ಆಗಿದೆ, ಮತ್ತು ಮುಮುಕ್ಷುಗಳಿಗೆ ಹೃದಯಸ್ಪರ್ಶಿಯಾಗಿದೆ. ಪ್ರತಿಪದ ಅರ್ಥ ಮತ್ತು ತಾತ್ಪರ್ಯಗಳೊಡನೆ ಇದನ್ನು ಅನುವಾದಿಸಿರುವವರು ಸ್ವಾಮಿ ಆದಿದೇವಾನಂದಜೀಯವರು. ಸ್ವಾಮಿ ವಿಜ್ಞಾನಂದಜೀಯವರು ಶಂಕರಾಚಾರ್ಯರ ಇನ್ನೊಂದು ಪ್ರಸಿದ್ಧಕೃತಿಯಾದ 'ಉಪದೇಶಸಾಹಸ್ರೀ'ಯನ್ನು ಅನುವಾದಿಸಿರುವರು. ಇನ್ನುಳಿದ ಪ್ರಮುಖ ಪ್ರಕರಣ ಗ್ರಂಥಗಳು: 'ಆತ್ಮಬೋಧ', 'ಅಪರೋಕ್ಷಾನುಭೂತಿ', 'ವಾಕ್ಯವೃತ್ತಿ' ಮತ್ತು 'ಲಘುವಾಕ್ಯವೃತ್ತಿ'. 'ಆತ್ಮಬೋಧ'ದಲ್ಲಿ ಆತ್ಮಜ್ಞಾನಕ್ಕೆ ಪ್ರಾಮುಖ್ಯವನ್ನು ಕೊಟ್ಟಿದ್ದರೆ, 'ಅಪರೋಕ್ಷಾನುಭೂತಿ'ಯಲ್ಲಿ ಸಾಧನೆಗೇ ಪ್ರಾಧಾನ್ಯ. 'ವಾಕ್ಯವೃತ್ತಿ'ಯಲ್ಲಿ ತತ್ತ್ವಮಸಿ – ವಾಕ್ಯಾರ್ಥದ ವಿವರಣೆ ಮುಖ್ಯ ವಿಷಯ. 'ಲಘುವಾಕ್ಯವೃತ್ತಿ'ಯಲ್ಲಿ ತ್ರಿವಿಧ ಶರೀರಕ್ಕಿಂತ ಭಿನ್ನವಾದ ಆತ್ಮಚೈತನ್ಯದ ಪ್ರತಿಪಾದನೆಯಿದೆ. ಈ ನಾಲ್ಕು ಪ್ರಮುಖ ಕೃತಿಗಳನ್ನು ತಾತ್ಪರ್ಯ ಮತ್ತು ವಿವರಣಾತ್ಮಕ ಟಿಪ್ಪಣಿಗಳೊಡನೆ ಅತ್ಯಂತ ಸುಂದರವಾಗಿ ಕನ್ನಡಿಸಿದವರು ಸ್ವಾಮಿ ಹರ್ಷಾನಂದಜೀಯವರು.

ಶ್ರೀ ಶಂಕರಾಚಾರ್ಯರು ರಚಿಸಿದ ಅತ್ಯಂತ ಮುಖ್ಯವಾದ ಸ್ತೋತ್ರಗಳಲ್ಲೊಂದು ದಕ್ಷಿಣಾಮೂರ್ತಿ ಸ್ತೋತ್ರ. ಇದಕ್ಕೆ ಶ್ರೀ ಸುರೇಶ್ವರಾಚಾರ್ಯರು 'ಮಾನಸೋಲ್ಲಾಸ'ವೆಂಬ ವಾರ್ತಿಕವನ್ನು ಬರೆದಿರುವರು. ಅದ್ವೈತತತ್ತ್ವವನ್ನು ಬಹುಸುಂದರ ಕಾವ್ಯಮಯವಾಗಿ ವರ್ಣಿಸುವ ಸ್ತೋತ್ರವಿದು. ಈ ಸ್ತೋತ್ರ ಮತ್ತು ವಾರ್ತಿಕಗಳೆರಡನ್ನೂ ಪ್ರತಿಪದಾರ್ಥ– ತಾತ್ಪರ್ಯಗಳೊಡನೆ ಅನುವಾದಿಸಿ ಉಪಕರಿಸಿರುವವರು ಸ್ವಾಮಿ ಅಚಲಾನಂದ ಸರಸ್ವತಿಯವರು. 'ನಿರ್ವಾಣಾಷ್ಟಕ' 'ಮನೀಷಾಪಂಚಕ' ಮುಂತಾದ ಶಂಕರಾಚಾರ್ಯರ ಇನ್ನೂ ಅನೇಕ ಸ್ತೋತ್ರಗಳ ಸರಳಾನುವಾದವನ್ನು ಆಶ್ರಮದ ಪ್ರಕಟನೆಯಾದ 'ಸ್ತವಕುಸುಮಾಂಜಲಿ' ಎಂಬ ಪುಸ್ತಕದಲ್ಲಿ ಕಾಣಬಹುದು.

ಸ್ತೋತ್ರಸಾಹಿತ್ಯದಲ್ಲಿ ಬಹಳ ಜನಪ್ರಿಯವಾದುದು ಮಹಾಭಾರತದ ಒಂದು ಭಾಗವಾದ 'ವಿಷ್ಣುಸಹಸ್ರನಾಮ.' ಭಕ್ತಿಮಾರ್ಗವನ್ನು ಅನುಸರಿಸುವ ಸಾಧಕರನೇಕರ

ಇದರ ನಿತ್ಯಪಠನ ಮಾಡುತ್ತಾರೆ. ಇದಕ್ಕೂ ಶ್ರೀ ಶಂಕರಾಚಾರ್ಯರು ಒಂದು ಭಾಷ್ಯವನ್ನು ಬರೆದಿರುವುದು ವೈಶಿಷ್ಟ್ಯ. ಈ ಭಾಷ್ಯವನ್ನು ಆಧರಿಸಿ ಶ್ರೀವಿಷ್ಣುಸಹಸ್ರನಾಮವನ್ನು ಕನ್ನಡಕ್ಕೆ ಅನುವಾದಿಸಿರುವುದರಿಂದ ಇದನ್ನು ಅದ್ವೈತಗ್ರಂಥವೆಂದೇ ಪರಿಗಣಿಸಬಹುದು. ಅನುವಾದಕರು ಸ್ವಾಮಿ ವಿಜ್ಞಾನಂದಜೀಯವರು.

ಅದ್ವೈತಕ್ಕೆ ಸಂಬಂಧಿಸಿದ ವಿಚಾರಪೂರ್ಣ ಕಿರುಹೊತ್ತಗೆ 'ದೃಗ್–ದೃಶ್ಯವಿವೇಕ' ಇದನ್ನು ಬರೆದವರು ಯಾರೆಂದು ಇನ್ನು ನಿಚಿತವಾಗಿಲ್ಲ. ಕೆಲವು ವಿದ್ವಾಂಸರ ಪ್ರಕಾರ ಇದನ್ನು ರಚಿಸಿದವರೂ ಶಂಕರಾಚಾರ್ಯರೇ. ಇದು ಪದಶಃ ಅರ್ಥ, ತಾತ್ಪರ್ಯ ಮತ್ತು ವಿವರಣೆಗಳೊಂದಿಗೆ ಕನ್ನಡದಲ್ಲಿ ಪ್ರಕಟವಾಗಿದ್ದು ವಿಚಾರಮಾರ್ಗವನ್ನು ಅನುಸರಿಸುವವರಿಗೆ ಸಹಾಯಕವಾಗಿದೆ.

ಅದ್ವೈತತತ್ತ್ವವನ್ನು ಪ್ರತಿಪಾದಿಸಿ ಪ್ರಚಾರ ಮಾಡಿದ ಇನ್ನೊಬ್ಬರು ಮಹನೀಯರೆಂದರೆ ಕರ್ನಾಟಕದವರೇ ಆದ ಶ್ರೀವಿದ್ಯಾರಣ್ಯರು. ಇವರು ಅನೇಕ ಗ್ರಂಥಗಳನ್ನು ರಚಿಸಿರುವರು. ಇವುಗಳಲ್ಲಿ 'ಪಂಚದಶಿ' ಮತ್ತು 'ಜೀವನ್ಮುಕ್ತಿವಿವೇಕ' ಅದ್ವೈತಕ್ಕೆ ಸಂಬಂಧಿಸಿದ ಪ್ರಧಾನ ಕೃತಿಗಳು. ಇವುಗಳಲ್ಲಿ ಮೊದಲನೆಯದು ತತ್ತ್ವಪ್ರಧಾನವಾದುದು, ಮತ್ತು ಎರಡನೆಯದು ಸಾಧನ ಪ್ರಧಾನವಾದುದು. ಶ್ರೀವಿದ್ಯಾರಣ್ಯರು 'ಪಂಚದಶಿ'ಯಲ್ಲಿ ಉಪನಿಷತ್ತತ್ತ್ವಗಳನ್ನು ಸ್ಪಷ್ಟವಾಗಿಯೂ ಪ್ರಭಾವಪೂರ್ಣವಾಗಿಯೂ ಪ್ರತಿಪಾದಿಸಿರುವುದಲ್ಲದೆ ಅನೇಕ ಮನಮುಟ್ಟುವ ದೃಷ್ಟಾಂತಗಳ ಮೂಲಕ ವಿಷಯವನ್ನು ತುಂಬ ವಿಚಾರಪೂರ್ಣವಾಗಿ ಪ್ರತಿಪಾದಿಸಿರುವರು. ಈ ಅಪೂರ್ವಗ್ರಂಥವನ್ನು ಅರ್ಥ ಟಿಪ್ಪಣಿಗಳೊಡನೆ ಕನ್ನಡಕ್ಕೆ ಅನುವಾದಿಸಿ ಸ್ವಾಮಿ ಆದಿದೇವಾನಂದಜೀಯವರು ಅಮೂಲ್ಯ ಸೇವೆ ಸಲ್ಲಿಸಿರುವರು.

ಸಾಧನಪ್ರಧಾನವಾದ 'ಜೀವನ್ಮುಕ್ತಿವಿವೇಕ'ವನ್ನು ಕನ್ನಡ ಜನತೆಗಿತ್ತ ಕೀರ್ತಿ ಸ್ವಾಮಿ ಹರ್ಷಾನಂದಜೀಯವರಿಗೆ ಸಲ್ಲಬೇಕು. 'ಜೀವನ್ಮುಕ್ತಿವಿವೇಕ'ವು ಆಧ್ಯಾತ್ಮಿಕ ಸಾರಸ್ವತ ಪ್ರಪಂಚದಲ್ಲಿ ಒಂದು ಶ್ರೇಷ್ಠತರವಾದ ಗ್ರಂಥ. ವಿಶೇಷವಾಗಿ ಸಂನ್ಯಾಸಿಗಳಿಗೆ ಉತ್ತೇಜಕ ಗ್ರಂಥವಾಗಿದೆ. ಇದು ಸರಳಗದ್ಯರೂಪದಲ್ಲಿದ್ದು ಅಲ್ಲಲ್ಲಿ ಸುಂದರ ಶ್ಲೋಕಗಳನ್ನು ಉದಾಹರಿಸಿರುವರು. ಅನುವಾದವು ತುಂಬ ಸರಳವೂ ಸುಂದರವೂ ಆಗಿದ್ದು, ಟಿಪ್ಪಣಿ ವಿಷಯವನ್ನು ಇನ್ನೂ ಸ್ಪಷ್ಟಪಡಿಸುತ್ತದೆ.

ಸ್ವಾಮಿ ಹರ್ಷಾನಂದಜೀಯವರ ಇನ್ನೊಂದು ವಿಶೇಷ ಕೊಡುಗೆ 'ವೇದಾಂತಸಾರ'ದ ಅನುವಾದ. ಶ್ರೀಸದಾನಂದರಿಂದ ರಚಿತವಾದ ಈ ಗ್ರಂಥ ಚಿಕ್ಕದಾದರೂ ತುಂಬ ವೈಶಿಷ್ಟ್ಯಪೂರ್ಣವಾದುದು. ಅತ್ಯಂತ ಸರಳ ಭಾಷೆಯಲ್ಲಿ ಅದ್ವೈತ ಸಿದ್ಧಾಂತದ ಎಲ್ಲ ಅಂಶಗಳೂ ತುಂಬ ಕ್ರಮಬದ್ಧವಾಗಿ ನಿರೂಪಿಸಲ್ಪಟ್ಟಿದ್ದು ಅದ್ವೈತದ

ಮುಖ್ಯತತ್ತ್ವಗಳನ್ನು ಸಮಗ್ರವಾಗಿ ತಿಳಿಯಬಯಸುವವರಿಗೆ ತುಂಬ ಸಹಾಯಕವಾಗಿದೆ. ಅನುವಾದವು ಅಷ್ಟೇ ಸರಳವೂ ಸ್ಪಷ್ಟವೂ ಆಗಿದ್ದು, ವಿದ್ವತ್ಪೂರ್ಣವೂ ವಿಚಾರಪೂರ್ಣವೂ ಆದ ಸುದೀರ್ಘ ಟಿಪ್ಪಣಿ ವಿಷಯವನ್ನು ಹೆಚ್ಚು ವಿಶದಪಡಿಸುವುದರ ಜತೆಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತದೆ.

ಭಗವದ್ಗೀತೆಯಂತೆ ಮಹಾಭಾರತದ ಒಂದು ಮುಖ್ಯ ಅಂಗವಾಗಿರುವುದು 'ಸನತ್ಸುಜಾತೀಯ.' ಇದು ಉದ್ಯೋಗಪರ್ವದಲ್ಲಿ ಬರುತ್ತದೆ. ಸನತ್ಕುಮಾರನು ಧೃತರಾಷ್ಟ್ರನಿಗೆ ನೀಡಿದ ಅಧ್ಯಾತ್ಮಿಕ ಉಪದೇಶವೇ ಈ 'ಸನತುಜಾತೀಯ.' ಶ್ರೀಶಂಕರಾಚಾರ್ಯರು ಇದಕ್ಕೂ ತಮ್ಮ ಭಾಷ್ಯವನ್ನು ಬರೆದಿರುವರು. ಸ್ವಾಮಿ ವಿಜ್ಞಾನಂದಜೀಯವರು ಹೆಚ್ಚಾಗಿ ಶಾಂಕರಭಾಷ್ಯವನ್ನೇ ಅವಲಂಬಿಸಿ ಈ ಅಮೂಲ್ಯ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿರುವರು. ಅಲ್ಲಲ್ಲಿ ದೀರ್ಘ ಟಿಪ್ಪಣಿಗಳೊಂದಿಗೆ ಮೂಲಾರ್ಥವನ್ನು ಬಹಳ ಸ್ಪಷ್ಟವಾಗಿ ವಿವರಿಸಿ ಓದುಗರಿಗೆ ಸುಗಮವಾಗುವಂತೆ ಮಾಡಿರುವರು.

ಅನುಭವಪ್ರಧಾನವಾದ ಅದ್ವೈತಕ್ಕೆ ಸಂಬಂಧಿಸಿದ ಇನ್ನೊಂದು ಅತಿಮುಖ್ಯವಾದ ಕೃತಿ 'ಅವಧೂತಗೀತೆ.' ಅವಧೂತ ಒಬ್ಬ ಪರಿವ್ರಾಜಕ ಯತಿ. ಅನಸೂಯ ಮತ್ತು ಅತ್ರಿ ಮಹರ್ಷಿಗೆ ವಿಷ್ಣುವಿನ ಅಂಶದಿಂದ ಜನಿಸಿದ ದತ್ತಾತ್ರೇಯನೇ ಇಲ್ಲಿಯ ಅವಧೂತ. ತಾನನುಭವಿಸಿದ ಅದ್ವೈತಾನುಭವದ ಆನಂದವನ್ನು ಇಲ್ಲಿ ಮಾತಿನ ಮೂಲಕ ವಿವರಿಸಲು ಪ್ರಯತ್ನಿಸುತ್ತಾನೆ. ಸ್ವಾಮಿ ಸೋಮನಾಥಾನಂದಜೀಯವರು ಸರಳ ಭಾಷೆಯಲ್ಲಿ ಇದನ್ನು ಕನ್ನಡಿಸಿರುವರು.

ಅನುಭವ ಪ್ರಧಾನವಾದ ಇನ್ನೊಂದು ಅದ್ವೈತಕೃತಿ 'ಅಷ್ಟಾವಕ್ರಗೀತೆ.' ಇದು ಅಷ್ಟಾವಕ್ರಮುನಿ ಮತ್ತು ಜನಕಮಹಾರಾಜನ ನಡುವೆ ನಡೆದ ಸಂಭಾಷಣೆಯ ರೂಪದಲ್ಲಿದೆ. ಅದ್ವೈತಭಾವನೆಗಳು ತುಂಬ ರಸವತ್ತಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಮೂಡಿಬಂದಿವೆ. ಸ್ವಾಮಿ ಸೋಮನಾಥಾನಂದಜೀಯವರೇ ಇದನ್ನು ಸರಳವಾಗಿ ಕನ್ನಡಕ್ಕೆ ಅನುವಾದಿಸಿರುವರು.

ಅದ್ವೈತ ಸಿದ್ಧಾಂತಕ್ಕೆ ಸ್ವಾಮಿ ವಿವೇಕಾನಂದರ ಕೊಡುಗೆ ಅಮೋಘವಾದುದು. ಅವರು ಅದಕ್ಕೆ ಆಧುನಿಕ ವಿಜ್ಞಾನದ ಆಧಾರದ ಮೇಲೆ ನೂತನ ವಿವರಣೆಯನ್ನು ನೀಡಿರುವರು. ಆಧುನಿಕ ವಿಚಾರವಂತರಿಗೆ ಹೃದ್ಯವಾಗುವಂತೆ ಅವರು ಅದ್ವೈತಕ್ಕೆ ಒಂದು ಹೊಸ ನಿರೂಪಣೆಯನ್ನಿತ್ತಿರುವರು. ಅಷ್ಟೇ ಅಲ್ಲದೆ ಅದು ಹೇಗೆ ನಮ್ಮ ದೈನಂದಿನ ಜೀವನದಲ್ಲಿ ಅನುಷ್ಠಾನಯೋಗ್ಯವಾಗಬಲ್ಲದು ಎಂಬುದನ್ನೂ ತೋರಿಸಿ ಕೊಟ್ಟಿರುವರು. ಅದು ಕೇವಲ ಋಷಿಮುನಿಗಳ, ಅರಣ್ಯ ಗುಹೆ ಪರ್ವತಗಳಲ್ಲಿ

ಸಾಧಿಸುವ ತಪಸ್ವಿಗಳ ಸ್ವತ್ತಾಗಿರದೆ ಜನಸಾಮಾನ್ಯರ ಜೀವನದಲ್ಲಿಯೂ ಅದನ್ನು ಅಳವಡಿಸಿಕೊಳ್ಳಬಹುದೆಂಬುದನ್ನು ಅವರು ಸ್ಪಷ್ಟಪಡಿಸಿರುವರು. ಅದು ಕೇವಲ ಪಂಡಿತರ ತರ್ಕಸಿದ್ಧಾಂತವಲ್ಲ ಅನುಷ್ಠಾನ ವೇದಾಂತ ಎಂಬುದನ್ನು ಶ್ರುತಪಡಿಸಿರುವರು. ಅವರ ಜ್ಞಾನಯೋಗದ ಮೇಲಿನ ಉಪನ್ಯಾಸಗಳು, ಅನುಷ್ಠಾನವೇದಾಂತ, ಮತ್ತು ಇತರ ಅನೇಕ ಉಪನ್ಯಾಸ ಹಾಗೂ ಬರಹಗಳು ಅದ್ವೈತತತ್ತ್ವವನ್ನು ಆಧುನಿಕ ಭಾಷೆಯಲ್ಲಿ ಪ್ರತಿಪಾದಿಸುತ್ತವೆ. ಅವರ ಕೃತಿಗಳೆಲ್ಲ 'ಸ್ವಾಮಿವಿವೇಕಾನಂದ ಕೃತಿಶ್ರೇಣಿ' ಎಂಬ ಶೀರ್ಷಿಕೆಯಲ್ಲಿ ಹತ್ತು ಸಂಪುಟಗಳಲ್ಲಿ ಕನ್ನಡದಲ್ಲಿ ಪ್ರಕಟವಾಗಿವೆ. ಈ ಸ್ತುತ್ಯರ್ಹವಾದ ಬೃಹತ್ಕಾರ್ಯವನ್ನು ಮಾಡಿ ಕನ್ನಡ ಜನತೆಗೆ ಅಮೂಲ್ಯ ಸೇವೆಯನ್ನು ಸಲ್ಲಿಸಿದವರು ಸ್ವಾಮಿ ಸೋಮನಾಥಾನಂದಜೀಯವರು.

ಹೀಗೆ ಶ್ರೀರಾಮಕೃಷ್ಣಾಶ್ರಮಗಳು ಅನೇಕ ಪುಸ್ತಕಗಳನ್ನು ಪ್ರಕಟಿಸುವುದರ ಮೂಲಕ ಕನ್ನಡದಲ್ಲಿ ಅದ್ವೈತ ಸಾಹಿತ್ಯದ ಬೆಳವಣಿಗೆಗೆ ತಮ್ಮದೇ ಆದ ವಿಶೇಷ ಸೇವೆಯನ್ನು ಸಲ್ಲಿಸಿರುವುವು. ಈ ಮೇಲಿನ ಪುಸ್ತಕಗಳಷ್ಟೇ ಅಲ್ಲದೆ, ರಾಮಕೃಷ್ಣಾಶ್ರಮದ ಭಾವಧಾರೆಯಲ್ಲಿ ಅದ್ವೈತತತ್ತ್ವಕ್ಕೆ ಹೆಚ್ಚು ಪ್ರಾಧಾನ್ಯವಿರುವುದರಿಂದ, ಅಲ್ಲಿಂದ ಪ್ರಕಟವಾದ ಪುಸ್ತಕಗಳಲ್ಲೆಲ್ಲ ಅದ್ವೈತ ಭಾವನೆ ಓತಪ್ರೋತವಾಗಿರುವುದು ಸ್ವಾಭಾವಿಕವೇ ಆಗಿದೆ. ಆದರೆ ಒಂದು ವಿಶೇಷವೇನೆಂದರೆ ಇಲ್ಲಿಯ ಅದ್ವೈತದಲ್ಲಿ ಸಾಂಪ್ರದಾಯಿಕ ಮತೀಯ ಸಂಘರ್ಷಕ್ಕೆ ಎಡೆಯಿಲ್ಲ. ಈ ಅದ್ವೈತ ವೇದಾಂತದ ಎಲ್ಲ ಮತಗಳನ್ನೂ ಒಳಕೊಳ್ಳುತ್ತದೆ. ವೇದಾಂತದ ಎಲ್ಲ ಮತಗಳೂ ಪರಮಸತ್ಯವನ್ನು ನೋಡುವ ವಿವಿಧ ದೃಷ್ಟಿಕೋನಗಳು. ನಿಜವಾಗಿಯೂ ಇವು ಒಂದಕ್ಕೊಂದು ವಿರುದ್ಧವಾದವುಗಳಲ್ಲ, ಪೂರಕವಾದವುಗಳು— ಸತ್ಯವನ್ನು ತಲುಪಲು ಇರುವ ವಿವಿಧ ಹಂತಗಳು. ಆದ್ದರಿಂದ ಎಲ್ಲ ಮತಗಳನ್ನು ಎಲ್ಲ ಧರ್ಮಗಳನ್ನು ಗೌರವಿಸುವುದು ರಾಮಕೃಷ್ಣಾಶ್ರಮದ ಸಂಪ್ರದಾಯವಾಗಿದೆ. ಇದೇ ವಿಶಾಲ ಭಾವನೆಯೇ ಅಲ್ಲಿ ಪ್ರಕಟವಾಗುವ ಎಲ್ಲ ಸಾಹಿತ್ಯದಲ್ಲಿಯೂ ಅಭಿವ್ಯಕ್ತವಾಗಿದೆ.

—o—

ವಚನ ಸಾಹಿತ್ಯದಲ್ಲಿ ಅದ್ವೈತ

—ಡಾ॥ ಸಾ. ಶಿ. ಮರುಳಯ್ಯ

೧

ದೇಹ ಮನಸ್ಸುಗಳಿಗಿದ್ದಂತೆ ಆತ್ಮಕ್ಕೂ ಹಸಿವೆ ಎಂಬುದಿದೆ. ದೇಹ ಹಸಿವೆ ಅನ್ನ, ನಿದ್ರೆ, ಮೈಥುನಗಳಿಂದ ಇಂಗಿದರೆ, ಮನಸ್ಸಿನ ಹಸಿವೆ ಚಿತ್ರ, ಶಿಲ್ಪ, ನೃತ್ಯ, ಸಂಗೀತ ಮತ್ತು ಸಾಹಿತ್ಯ ಎಂಬ ಲಲಿತ ಕಲೆಗಳ (Fine Arts) ಮೂಲಕ ತೃಪ್ತವಾಗಬೇಕಾಗುತ್ತದೆ. ಆದರೆ ಉತ್ಕ್ರಮಿತ ಪ್ರಾಣಿ ಇಲ್ಲವೇ ಪತಿತ ದೇವತೆ ಎಂದೆನಿಸಿಕೊಂಡ ಮಾನವ ಅವಷ್ಟರಿಂದಲೇ ತೃಪ್ತನಾಗಲಾರ. ಅವನಿಗೆ ಲೋಕವನ್ನು ಅನುಭವಿಸುವ ಹೃದಯವಿದೆ, ತನ್ನ ಪರಿಸರದೊಡನೆ ಸ್ಪಂದಿಸುವ ಚೇತನವಿದೆ, ತನ್ನ ಅನುಭವದ ಕಕ್ಷೆಯಲ್ಲಿ ಅಳವಟ್ಟದ್ದನ್ನು ಕಲೆಯ ಮೂಲಕ ಅಭಿವ್ಯಕ್ತಪಡಿಸುವ ಸಾಮರ್ಥ್ಯವಿದೆ. ಮರಳಿನಲ್ಲಿ ಎಣ್ಣೆ ತೆಗೆವ, ಕಲ್ಲಲ್ಲಿ ನಾರೆತ್ತುವ, ಶೂನ್ಯದಲ್ಲಿ ಸೃಷ್ಟಿ ಮಾಡುವ ಗಾರುಡಿಗತನ ಇದೆ. ಕವಿಚೇತನದ ಸೌಂದರ್ಯಾನುಭೂತಿಯು ಕಾವ್ಯಾಭಿವ್ಯಕ್ತಿ ಪಡೆದಾಗ ಸಹೃದಯ ಚೇತನ ಅದನ್ನು ಆಸ್ವಾದಿಸಿ ಆನಂದಿಸುತ್ತದೆ. ಆ ಆನಂದವನ್ನು ಕಾವ್ಯಾನಂದ ಅಥವಾ ರಸ ಎಂದು ಕರೆದಿದ್ದಾರೆ ನಮ್ಮ ಭಾರತೀಯ ಕಾವ್ಯಮೀಮಾಂಸಕರು.

ಮಾನವನ ವಿಕಾಸಶೀಲ ಮನಸ್ಸು ಸದಾ ನವನವೋನ್ಮೇಷಶಾಲಿನಿಯಾದಂತೆ, ಸದಾ ಊರ್ಧ್ವಗಾಮಿಯೂ ನಕ್ಷತ್ರಯಾತ್ರಿಯೂ ಆಗಿದೆ. ಭೂಮಿಯಿಂದ ಭೂಮದವರೆಗೂ ವ್ಯಾಪಿತವಾಗಿ, ವಿಶ್ವದಾಚೆಗೂ ನಾಲ್ವೆರಳು ಎತ್ತರದಲ್ಲಿ ನಿಲ್ಲುವ, ನಿಂತು ನೋಡುವ ಅನ್ಯಾದೃಶ ದಕ್ಷತೆ ಇದೆ ಅದಕ್ಕೆ. ನಿರ್ಗುಣ ನಿರಾಕಾರ ಶಕ್ತಿಯನ್ನು ಸಗುಣ ಸಾಕಾರಗೊಳಿಸುವ, ಅಚಿಂತ್ಯ ಅನೂಹ್ಯ ಅಗೋಚರ ಎನ್ನಿಸಿದ್ದನ್ನು ಸಚಿಂತ್ಯ ಸದ್ರೂಪ ಸಗೋಚರಗೊಳಿಸುವ ಸಾಮರ್ಥ್ಯವೂ, ಅಗ್ರಾಹ್ಯವೆನಿಸಿದ್ದನ್ನು ಕಣ್ಣಾರ ಕಂಡು, ಕೈಯಾರ ಕಂಡರಿಸುವ ಚಾತುರ್ಯವೂ ಅದಕ್ಕಿದೆ; ಕಾವ್ಯಾನುಭೂತಿಗಿಂತಲೂ ಮಿಗಿಲಾದ ಆತ್ಮಾನುಭೂತಿ ಅದರದು. ಅದೇ ಮಾನುಕುಲ ಪ್ರಜ್ಞೆಯ ತುರೀಯಸ್ತರ. ಕವಿಚೇತನ ಸೌಂದರ್ಯದ ಸೀಮೆಯಲ್ಲಿ ವಸಂತವಿಹಾರ ಕೈಕೊಂಡಂತೆ, ಋಷಿಚೇತನ ಸತ್ಯ ಶಾಶ್ವತ ನಿತ್ಯಪರಿಪೂರ್ಣವಾದ ಅಧ್ಯಾತ್ಮವಲಯದಲ್ಲಿ ವಿಹರಿಸಿ, ವಿಶ್ರಾಂತಿ ಪಡೆಯುತ್ತದೆ. ಅಧ್ಯಾತ್ಮ ಲೋಕದ ಆತ್ಮಾನಂದ ಅಥವಾ ಬ್ರಹ್ಮಾನಂದವು ಕಲಾಲೋಕದ ಕಾವ್ಯಾನಂದಕ್ಕಿಂತಲೂ ಮಿಗಿಲಾದದ್ದು, ಬಹು ಮೌಲ್ಯವುಳ್ಳದ್ದು. ಕವಿ ಬೇಂದ್ರೆಯವರು ಹೇಳುವಂತೆ ಅದು, 'ಓಂಕಾ

ನಾದಕಿಂತ ಕಿಂಚಿದೂನ'ವಾದದ್ದು. ಇದು ಶಬ್ದಾರ್ಥ ಸಂಜನಿತ, ಅದು ನಾದಬಿಂದು ಕಳಾತೀತ; ಇದು ಸಹೃದಯ ಹೃದಯಾಹ್ಲಾದಕಾರಿಣಿ, ಅದು ಅಪರೋಕ್ಷ ಜ್ಞಾನಿಗಳ ಆತ್ಮಾನಂದ ಬೋಧಿನಿ. ಕಾವ್ಯಾನಂದವನ್ನು 'ಸಕಲ ಪ್ರಯೋಜನ ಮೌಲಿ ಭೂತಾಮ್' ಎಂತಲೂ, 'ಬ್ರಹ್ಮಾನಂದ ಸಹೋದರ' ಎಂತಲೂ ಕರೆದರು; ನಿಜ. ಕಾವ್ಯಾನಂದ ಬ್ರಹ್ಮಾನಂದದ ಸಹೋದರ ನಿಜ, ಆದರೆ ಬ್ರಹ್ಮಾನಂದ ಅಲ್ಲ. ಬ್ರಹ್ಮಾನಂದವೇ ಬೇರೆ. ಅದು ಕಾವ್ಯಾನಂದದ ಹಿರಿಯ ಅಣ್ಣ. ಅದರದು ಅನುಭೂತಿಯ ಮೊದಲ ದರ್ಜೆ, ಅಭಿವ್ಯಕ್ತಿಯ ತುರೀಯ ಸ್ತರ, ಆನಂದದ ಮಹಾ ಮಜಲು. ಆ ಮಜಲಿಗೇರಲು ಸಮೆದ ಸೋಪಾನವೆ ಆಧ್ಯಾತ್ಮಸಾಹಿತ್ಯ.

ಆಧ್ಯಾತ್ಮ ಸಾಹಿತ್ಯ ಆತ್ಮಶ್ರೀ ಪರವಾದದ್ದು. ಅದರಲ್ಲಿ ಕಾವ್ಯಾನಂದವೂ ಇದೆ, ಬ್ರಹ್ಮಾನಂದವೂ ಇದೆ. ಯಾವುದೇ ವಿಧದ ಸಾಹಿತ್ಯ ರಚನೆ ಇರಲಿ ಅದರಲ್ಲಿ ಆಧ್ಯಾತ್ಮಾಂಶವಿದ್ದರೇನೇ ಅದಕ್ಕೆ ತೂಕ ಬರುವುದು. ಸೌಂದರ್ಯಕ್ಕೆ ಶಿವದ ಸಂಸರ್ಗವೇರ್ಪಡಬೇಕು. ಆಗಲೇ ಅದರ ಘನತೆ ಹೆಚ್ಚುವುದು. ಸೌಂದರ್ಯ ಅಪರಂಜಿಯಾದರೆ, ಅದರ ಬೆನ್ನೆಲುಬಾಗಿ ನಿಲ್ಲುವ ಲೋಹವೇ ಶಿವ! ಅದು ಆತ್ಮ-ಪರಮಾತ್ಮ ಪರವಾದದ್ದು. ಖಂಡಕಾವ್ಯ ಮಹಾಕಾವ್ಯಗಳಲ್ಲಷ್ಟೇ ಅಲ್ಲ ಆಧುನಿಕ ಯುಗದ ರಮ್ಯ ನವ್ಯಗೀತಗಳಲ್ಲೂ ಆಧ್ಯಾತ್ಮದ ಅಂಶ ಬೆರೆತೇ ಇರುತ್ತದೆ. ಅಂತಹ ದ್ಯುತಿಪಡೆದ ದರ್ಶನದಿಂದಾಗಿ ಕಾವ್ಯಮೌಲ್ಯ ಹೆಚ್ಚಿದೆ ಎಂಬ ಭಾವನೆಯೂ ಇದೆ ನಮ್ಮಲ್ಲಿ. ನಮ್ಮ ಭಾರತೀಯ—ಅದರಲ್ಲೂ ಪ್ರಾಚೀನ ಕನ್ನಡ ಸಾಹಿತ್ಯ ಆಧ್ಯಾತ್ಮದ ಸಾಂಗತ್ಯವಿಲ್ಲದೆ ಸಾಗಿಲ್ಲ. ಸಾಗಿಲ್ಲವಲ್ಲ, ಹುಟ್ಟಿಯೇ ಇಲ್ಲ. ಅದು ಧರ್ಮದರ್ಶನಗಳನ್ನು ಹಾಸಿ ಹೊದ್ದು ಬೆಳೆದಿದೆ. ಅದರ ಬೇರು ಸೇರುಗಳೆರಡೂ ಆಧ್ಯಾತ್ಮವೆ. ಅವನ್ನೇ ಬದುಕಿದೆ ಅದು. ಜೈನ, ವೀರಶೈವ ಹಾಗೂ ವೈದಿಕ—ಈ ಮೂರೂ ರೂಪದ ಸಾಹಿತ್ಯಗಳೂ ಧರ್ಮವನ್ನು ದುಡಿಸಿಕೊಂಡು ಸುದೃಢವಾಗಿ ಬೆಳೆದು, ತಮ್ಮಲ್ಲಿನ ಪ್ರಾಂಜಲ ಸ್ವರೂಪದಿಂದಾಗಿ 'ತೀರ್ಥಸಾಹಿತ್ಯ' ಎಂಬ ಕೀರ್ತಿಗೆ ಭಾಜನವಾಗಿವೆ.

ಈ ಸಾಹಿತ್ಯ ಸದಾ ಶಿವ-ಜೀವರ ಜೈವಿಕ ಬಾಂಧವ್ಯವನ್ನು ತನ್ನ ಮೂಲದ್ರವ್ಯವಾಗಿಸಿಕೊಂಡಿರುತ್ತದೆ. ಇವೆರಡೂ ಚೇತನಗಳ ಸಂಬಂಧ ಸಾಮಾನ್ಯವಾಗಿ ದ್ವಿಮುಖವಾದದ್ದು: ಒಂದು ದ್ವಂದ್ವ, ಮತ್ತೊಂದು ಅದ್ವಂದ್ವ; ಒಂದರದು ವಿಯೋಗ, ಮತ್ತೊಂದರದು ಸಹಯೋಗ; ಅಲ್ಲಿನದು ಭಿನ್ನದರ್ಶನ, ಇಲ್ಲಿನದು ಐಕ್ಯಾನುಮೋದನ; ಅಲ್ಲಿ ಶಿವ ಜೀವರು ಯಾವಜ್ಜೀವವೂ ಒಬ್ಬರನ್ನೊಬ್ಬರು ಬೆರೆಯಲಾರರು, ಇಲ್ಲಿ ಅವರಿಬ್ಬರೂ ಅವಿನಾಭಾವದಿಂದ ಸಂದುಸುಳಿವಿಲ್ಲದೆ ಬೆಸುಗೆಗೊಂಡವರು; ಅಲ್ಲಿ ಸಾಲೋಕ್ಯ, ಸಾಮೀಪ್ಯ ಸಾಧ್ಯ, ಇಲ್ಲಿ ಸಾರೂಪ್ಯ, ಸಾಯುಜ್ಯ

ವೇದ್ಯ; ಒಂದರದು ತತ್ತ್ವವಾದ, ಮತ್ತೊಂದರದು ಮಿಥ್ಯಾವಾದ; ಒಂದು ದ್ವೈತ, ಮತ್ತೊಂದು ಅದ್ವೈತ.

ವ್ಯವಸ್ಥೆಯಲ್ಲಿ ಹೀಗೆ ಭಿನ್ನತೆ ಕಂಡುಬಂದರೂ, ಇವೆರಡರ ಫಲ ಒಂದೇ; ಅದು ಮುಕ್ತಿ! ಉಪನಿಷತ್ತಿನ ಶಾಂತಿಮಂತ್ರ ಹೇಳುವಂತೆ—

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಹೀಗೆ ಪರಮಾತ್ಮನಿಂದ ಬೇರೆಯಾಗಿ ಬಂದ ಜೀವಾತ್ಮ ಮತ್ತೆ ಪರಮಾತ್ಮನನ್ನೇ ಸೇರುವುದು. ಆದರೆ ಒಂದು ಸ್ತರದಲ್ಲಿ ಭಿನ್ನವಾಗಿ ಉಳಿಯುತ್ತೆ, ಮತ್ತೊಂದರಲ್ಲಿ ಅಭಿನ್ನವಾಗಿ ಬೆರೆಯುತ್ತೆ. ಅದ್ವೈತ ದರ್ಶನದ ಪ್ರಕಾರ ಸಮಸ್ತವೂ ಬ್ರಹ್ಮಮಯವು. ಯಾವುದೂ ಆ ಬ್ರಹ್ಮವಲ್ಲದೆ ಬೇರೆ ಅಲ್ಲ. ಈ ಪೂರ್ಣದರ್ಶನದ ಪ್ರಕಾಶ ಆ ಪರವಾದ ಸಾಹಿತ್ಯದಲ್ಲಿ ಓತಪ್ರೋತ.

೨

ಅದ್ವೈತದ ಆಲಕ್ಕೆ ಬಿಳಿಲುಗಳು ಹಲವು. ಅವುಗಳಲ್ಲಿ ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ ಮುಖ್ಯವಾದವುಗಳು. ಬಂಧನದಿಂದ ಬಿಡುಗಡೆ ಹೊಂದಿದ ಜೀವನು ನಿತ್ಯಮುಕ್ತನಲ್ಲಿ ಬೆರೆದು ಸಚ್ಚಿದಾನಂದ ಸ್ವರೂಪನಾಗಿ, ಏಕಮೇವಾದ್ವಿತೀಯ ಬ್ರಹ್ಮನೇ ಆಗಿಬಿಡುತ್ತಾನೆ. ಆದರೆ ವಿಶಿಷ್ಟಾದ್ವೈತದ ಪ್ರಕಾರ ಆ ಸಹಜಾನಂದದಲ್ಲಿ ಭಾಗಿಯೇ ಹೊರತು ಬೆರೆಯುಲರ್ಹನಲ್ಲ ಜೀವ. ಅಲ್ಲಿ ಜೀವನಿಗಿಂತ ದೇವ ಮಿಗಿಲಾದವನು. ಅವನ ವೈಭವೀಕರಣವೆ ಅಥವಾ ವೈಶಿಷ್ಟ್ಯವೆ ವಿಶಿಷ್ಟಾದ್ವೈತದ ತಿರುಳು. ಶಕ್ತಿ ವಿಶಿಷ್ಟಾದ್ವೈತ ಅಥವಾ ಶಿವಾದ್ವೈತವಲ್ಲಿ ಶಿವ-ಶಕ್ತಿಯರ ಅಥವಾ ಪುರುಷ ಪ್ರಕೃತಿಯರ ಅಥವಾ ಸ್ಥಾವರ (ಜಡ) ಮತ್ತು ಜಂಗಮ (ಚೇತನ) ಗಳ ಸಹಯೋಗ ಸಾಧನೆ ಸಿದ್ಧಿಗಳು ಚಿತ್ರಗೊಳ್ಳುತ್ತವೆ. ಅಲ್ಲಿ ಜೀವ-ದೇವರ ಐಕ್ಯಾನುಸಂಧಾನ ಸ್ವರೂಪ ಸ್ಪಷ್ಟವೇದ್ಯವಿದೆ. ಆದರೆ ಅಲ್ಲಿ ಜೀವ ಮತ್ತು ದೇವರುಗಳು ಅದ್ವೈತಗೊಂಡು ಮೂರನೆಯ 'ಶಿವ' ಅಥವಾ 'ಶೂನ್ಯ' ಆಗುತ್ತಾರೆ. ಅಲ್ಲಿರುವುದು ಲೋಕವ್ಯವಹಾರ ಅಲ್ಲ, ಒಂದು ಬಗೆಯ ಸಂಸ್ಕರಣೆ. ಕವಿಯ ಕಾವ್ಯಕ್ರಿಯೆಯಂತೆ ಅದು ವಿಶ್ವಾತ್ಮನ ವಿನೂತನ ಸೃಷ್ಟಿಕ್ರಿಯೆ. ಜಗದ್ವಿಖ್ಯಾತ ಕವಿ-ವಿಮರ್ಶಕ ಟಿ.ಎಸ್. ಎಲಿಯಟ್ ಕಾವ್ಯಮೀಮಾಂಸಾ ಸಂದರ್ಭದಲ್ಲಿ ಹೇಳುವ 'ವ್ಯಕ್ತಿತ್ವ ನಿರಸನ ಸಿದ್ಧಾಂತ' (Extinction of personality) ವನ್ನು ಇಲ್ಲಿ ಸ್ಮರಿಸಬಹುದು. ಅಲ್ಲಿ Extinct ಅಂದರೆ ಇಲ್ಲವಾಗುವುದಲ್ಲ

ಎಲ್ಲವಾಗುವುದು. ನೀರಿನ ಒಂದು ಹನಿಗೆ ಸ್ವತಂತ್ರ ಅಸ್ತಿತ್ವವಿದ್ದರೂ, ತನ್ನನ್ನು ತಾನು ಪ್ರದರ್ಶಿಸಿಕೊಳ್ಳುವ ಅಥವಾ ಸಂರಕ್ಷಿಸಿಕೊಳ್ಳುವ, ಇಲ್ಲವೇ ಸಮರ್ಥಿಸಿ ಕೊಳ್ಳುವ ಸಾಮರ್ಥ್ಯ ಅದಕ್ಕಿಲ್ಲ. ಆದರೆ ಅದೇ ಹನಿ ಸಾಗರದಲ್ಲಿ ಬೆರೆತರೆ ಸಾಗರದ ಸಾಮರ್ಥ್ಯ ಪಡೆಯುತ್ತದೆ, ಸಾಗರವೇ ತಾನಾಗುತ್ತದೆ. ಅದೇ ರೀತಿ ವ್ಯಷ್ಟಿ (Individual) ಸಮಷ್ಟಿ (universal) ಯಲ್ಲಿ ಬೆರೆದು, ನಿರಸನಗೊಂಡು (to become extinct) ಸಮನ್ವಯ ಸಾಧಿಸುತ್ತದೆ. ಅರ್ಥಾತ್ ಕವಿಚೇತನ ಮತ್ತು ವಿಶ್ವಚೇತನಗಳ ಸಹಯೋಗದಿಂದ ಕಾವ್ಯನೂತನ ನಿರ್ಮಾಣವಾಗುತ್ತದೆ. ಅಂಥದೇ ಪ್ರಕ್ರಿಯೆ ಶಿವಾದ್ವೈತ ಸಂದರ್ಭದಲ್ಲಿ ಆಗಿ ಮುಗಿಯುತ್ತದೆ. ಅಲ್ಲಿ 'ಜೀವ' ಮತ್ತು 'ದೇವ' ಇಬ್ಬರೂ ಸೇರಿ 'ಶಿವ' ಆಗುತ್ತಾರೆ : ನೀರು ಮತ್ತು ಅಲೆ ಸೇರಿ ಆದ ಸಾಗರ, ಕಿರಣ ಮತ್ತು ಕಾಂತಿ ಕೂಡಿ ಆದ ಸೂರ್ಯ, ದಳ ಮತ್ತು ಪರಿಮಳ ಬೆರೆತು ಆದ ಹೂವು. ಅದು ಭೇದದೊಳಗಣ ಅಭೇದ, ಶಬ್ದದೊಳಗಣ ನಿಶ್ಶಬ್ದ, ನಾದ ರೂಪ ಕ್ರೀ ಕಳಾಪ ವಿರಾಮ ಸ್ಥಿತಿ. ವೀರಶೈವ ಪರಿಭಾಷೆಯಲ್ಲಿ ಹೇಳುವುದಾದರೆ ಅದು ಅಂಗ ಮತ್ತು ಲಿಂಗ ಬೆರೆತಾದ ಸಾಮರಸ್ಯ ಸ್ವರೂಪ. ಅಲ್ಲಿ ರವಿಯ ತಾಪವೂ ಇಲ್ಲ, ಶಶಿಯ ಶೈತ್ಯವೂ ಇಲ್ಲ, ಅವೆರಡನ್ನೂ ಗರ್ಭೀಕರಿಸಿ ಕೊಂಡ ತೇಜೋರೂಪವುಂಟು. ಅದೇ ಶೂನ್ಯ; ಅದೇ ಶಿವಸಮಯದ ಮಹಾ ಮಜಲು ; ಮಹಾಬಯಲು !

ಈ ಬಯಲ ಗಳಿಕೆಗೆ ಷಟ್‌ಸ್ಥಲಗಳು ಸಿದ್ಧಸೋಪಾನಗಳು. ಅವುಗಳಲ್ಲಿ ಭಕ್ತ, ಮಾಹೇಶ್ವರ, ಪ್ರಸಾದಿ ಸ್ಥಲಗಳು ಜೀವ (ಅಂಗ) ಪರವಾದವುಗಳು ; ಪ್ರಾಣಲಿಂಗಿ, ಶರಣ, ಐಕ್ಯ ಸ್ಥಲಗಳು ದೇವ (ಲಿಂಗ) ಪರವಾದವುಗಳು. ಆದರೆ ಆ ಆರು ಮಜಲುಗಳಲ್ಲೇ ಶಿವ ಅಥವಾ ಶೂನ್ಯ ಸಿದ್ಧಿ ಸಾಧ್ಯವಿಲ್ಲ. ಅವು ಸಾಧನಾ ವೇದಿಕೆಗಳು, ಸಿದ್ಧಿಯ ನೆಲೆಗಳಲ್ಲ. ಆ ಆರು ಸ್ಥಲಗಳನ್ನು ದಾಟಿದ ಮೇಲೆ ಪ್ರಾಪ್ತವಾಗುತ್ತದೆ ಶೂನ್ಯಸ್ಥಿತಿ ಅಥವಾ ಶಿವದ ನೆಲೆ !

ಇಂತಹ ಶಿವಾದ್ವೈತದ ಸ್ಥೂಲವಿಶ್ಲೇಷಣೆಯ ಬೆಳಕಿನಲ್ಲಿ ಅದ್ವೈತದ ಕಿರಣ ಗಳನ್ನು ಬಿಡಿಸಿ ನೋಡಿದಾಗ ಅವು ಷಟ್‌ಸ್ಥಲದ ತುಂಬಾ ತುಂಬಿರುವುದು ಸ್ಪಷ್ಟ ಗೋಚರ. ಕಾರಣ ಶಿವಾದ್ವೈತಕ್ಕೆ ಅದ್ವೈತವೇ ಬುನಾದಿ. ವೀರಶೈವಕ್ಕೆ ಸಂಸ್ಕೃತದ ಆಗಮಗಳು ಹೇಗೆ ಪ್ರಮಾಣವೋ ಕನ್ನಡದ ವಚನಗಳೂ ಹಾಗೆ ಪ್ರಮಾಣ. ಅವು ಸಿದ್ಧಾಂತ ಸ್ಥಾಪನೆಗೈದರೆ, ಇವು ಅನುಭಾವವನ್ನು ಅನುವದಿಸಿ ಕೊಟ್ಟಿವೆ. ಇವುಗಳಲ್ಲಿ ಅದ್ವೈತದ ಸೆಲೆಗಳಿವೆ. ಅವುಗಳನ್ನು ಹೆಕ್ಕಿ ತೆಗೆಯುವ ಪ್ರಯತ್ನ ಈ ಪ್ರಬಂಧದ ಮೂಲ ಉದ್ದೇಶ.

೩

ಷಟ್‌ಸ್ಥಲವನ್ನಪ್ಪಿದ ಶಿವಾದ್ವೈತ, ದ್ವೈತ ಅದ್ವೈತಗಳನ್ನೂ ಒಪ್ಪಿದೆ. ಆದರಿಂದಲೆ ಇರಬೇಕು ಅದಕ್ಕೆ 'ದ್ವೈತಾದ್ವೈತ ದರ್ಶನ' ಎಂಬ ಪರ್ಯಾಯ ನಾಮವೂ ಇರುವುದು. ಷಟ್‌ಸ್ಥಲಗಳಲ್ಲಿ ಮೊದಲ ಮೂರು ಸ್ಥಲಗಳು ದ್ವೈತಕ್ಕೂ ಕಡೆಯ ಮೂರು ಸ್ಥಲಗಳು ಅದ್ವೈತಕ್ಕೂ ಮೀಸಲಿವೆ. ಭಕ್ತ, ಮಾಹೇಶ್ವರ, ಪ್ರಸಾದಿ—ಇವು ಅಂಗಸ್ಥಲಗಳು, ದ್ವೈತವನ್ನು ಗರ್ಭೀಕರಿಸಿಕೊಂಡು ವಿಕಾಸ ವಾದವುಗಳು. ಪ್ರಾಣಲಿಂಗಿ, ಶರಣ ಮತ್ತು ಐಕ್ಯಗಳು ಲಿಂಗಸ್ಥಲಗಳು ; ಅದ್ವೈತದ ಆವಿರ್ಭಾವದೊಂದಿಗೆ ಅಮೃತತ್ವವನ್ನೈದಿದವುಗಳು. 'ವನವೆಲ್ಲ ನೀವೆ, ವನದೊಳ ಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗಮೃಗವೆಲ್ಲ ನೀವೆ. ಚೆನ್ನಮಲ್ಲಿಕಾರ್ಜುನ, ಸರ್ವಭರಿತನಾಗಿ ಎನಗೆ ಮುಖದೋರ' ಎಂದು ಬೇಡುವೆಡೆ ಯಲ್ಲಿ ಭಕ್ತಚೇತನ ಇನ್ನೂ ಭಿನ್ನವಾಗಿ, ಬೇರೆಯಾಗಿ ಅಭವನಿಂದ ದೂರ ನಿಂತಿರು ತ್ತದೆ, ದ್ವೈತದೇಹಿಯಾಗಿ ದೈನ್ಯತೆ ವ್ಯಕ್ತಪಡಿಸುತ್ತ. ಆದರೆ ಶರಣ ಸ್ಥಲದ ಶರಣ, 'ನಾ ದೇವನಲ್ಲದೆ ನೀ ದೇವನೆ?...ನಾ ದೇವ ಕಾಣಾ ಗುಹೇಶ್ವರಾ!' ಎಂದು ಅದ್ವೈತದ ಸಾಕಾರಮೂರ್ತಿಯಾಗಿ ನಿಂತು 'ಅಹಂ ಬ್ರಹ್ಮಾಸ್ಮಿ' ಎಂಬ ಘೋಷಣೆ ಯನ್ನು ಉದ್ಘೋಷಿಸುತ್ತದೆ. ಅಂತೆಯೆ ಚಂದಿಮರಸನು ಹೇಳುವಂತೆ–

> ನಿಜವಸ್ತುವೊಂದೇ. ತನ್ನ ಲೀಲೆಯಿಂದ ಎರಡಾಗಬಲ್ಲುದೊಂದೇ.
> ಬೇರೆ ತೋರಬಲ್ಲುದದೊಂದೇ. ತನ್ನ ಮರೆಯಬಲ್ಲುದದೊಂದೇ.
> ಆ ಮರವೆಯ ಬಲ್ಲುದದೊಂದೇ.
> ತಾನಲ್ಲದನ್ಯವಿಲ್ಲೆಂದರಿದರಿವು ತಾನೆ ಚೆಮ್ಮಲಿಗೆಯ ಚೆನ್ನರಾಮನು.

ಪರವಸ್ತು ಏಕದಿಂದ ಅನೇಕವಾಗಿ, ಮತ್ತೆ ಏಕರೂಪಿಯಾಗುವ ಸ್ಥಿತಿಸ್ಥಾಪಕತ್ವವುಳ್ಳ ವಸ್ತು. ಅದರಲ್ಲಿ 'ತಾನಲ್ಲದನ್ಯವಿಲ್ಲ' ಎಂಬ ಪ್ರಜ್ಞೆ ಸದಾ ಜಾಗ್ರತವಿರುತ್ತದೆ. ಇದು ಅದ್ವೈತದ ಆವಿರ್ಭಾವ ಸ್ಥಿತಿ.

ಮೊದಲ ಸ್ತರ ಅಥವಾ ಸ್ಥಲಗಳಲ್ಲಿ ಅದ್ವೈತದ ಪ್ರವೇಶವಿಲ್ಲವಾದ್ದರಿಂದ ಕವಿದ್ರುಪ್ಪಾರ ಹೇಳುತ್ತಾನೆ–

> ದ್ವೈತಿಯುಲ್ಲ ಅದ್ವೈತಿಯುಲ್ಲ ಕಾಣಭೋ ಶರಣ
> ದ್ವೈತಾದ್ವೈತವೆಂಬ ಉಭಯ ಕಲ್ಪನೆಯನಳಿದುಳಿದ
> ವೀರಮಾಹೇಶ್ವರನು
> ಪರಶಿವನ ನಿರುತ ಸ್ವಯಾನಂದಸುಖಿ :

ಪರಶಿವನ ಪರಮ ತೇಜದಾದಿ ಬೀಜ ;
ಪರಶಿವನ ಪರಮಜ್ಞಾನ ಪ್ರಕಾಶಮಯ ಪರಮಾನಂದದ,
ನಿರುಪಮ ಲಿಂಗದ ಪ್ರಭಾಕಿರಣವೇ ತಾನಾದ ಶರಣನಯ್ಯ
ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೆ ॥

ಎಂದು.

ಆದರೆ ಐಕ್ಯಸ್ಥಲದ ಔನ್ನತ್ಯಕ್ಕೇರಿದ ಚೈತನ್ಯ 'ಗಾಳಿ ಗಂಧವನಪ್ಪಿದಂತೆ, ಬಯಲು ಬಯಲನಪ್ಪಿದಂತೆ, ಬೆಳಗು ಬೆಳಗನಪ್ಪಿ ಮಹಾ ಬೆಳಗಾದಂತೆ' ಅದ್ವೈತಾನಂದದಲ್ಲಿ ಪರಿಪೂರ್ಣವೆನಿಸುತ್ತದೆ.
ಆಗ ನುಡಿಯುತ್ತದೆ–

ಮಣ್ಣಿನಿಂದಾದ ಮಡಕೆ, ಚಿನ್ನದಿಂದಾದ ತೊಡಿಗೆ
ಕಂಚಿನಿಂದಾದ ತಳಿಗೆ ಬಟ್ಟಲು, ಕಬ್ಬುನದಿಂದಾದ ಕೊಡಲಿ ಕುಡನು
ಮೊದಲಾದವರ ಕಾರ್ಯಕಾರಣಕ್ಕೆ ಭಿನ್ನವುಂಟೆ ?
ಇಲ್ಲ ಎಂಬಂತೆ,
ಮಹಾಲಿಂಗದಲ್ಲಿ ಜ್ಯೋತಿಯಿಂದ ಜ್ಯೋತಿ ಉದಯಿಸಿದಂತೆ
ಉದಯಿಸಿದ ಶರಣಂಗೆ
ಭಿನ್ನವೆಲ್ಲಿಯದೊ ಶರಣಂಗೂ ಲಿಂಗಕ್ಕೂ !
ಅದ್ವೈತಾನಂದದಿಂದ ಸಂಪೂರ್ಣವನುಳ್ಳುದಲ್ಲದೆ
ಅಲ್ಲಿ ಮತ್ತೊಂದು ಸಂದೇಹವುಂಟೆ ?
ಅಲ್ಲಿ ಸಂಶಯವ ಕಲ್ಪಿಸುವ ಮಾಯಾಭ್ರಾಂತರ ತೋರದಿರಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ ;

ಎಂದು.

ಇಂತಹ ಶಿವಯೋಗದ ಸಿದ್ಧಶಿಲೆಯನ್ನು ಮೆಟ್ಟಿನಿಂತ ಮಹಾಯೋಗಿ ತನ್ನ ಸಾಹಸದಿಂದ 'ಶಿವ' ಅಥವಾ 'ಶೂನ್ಯ' ಆಗುತ್ತಾನೆ. ಆ ಪರಿಪೂರ್ಣತೆಗೆ ಅದ್ವೈತ ನೆರವಾಗುತ್ತದೆ. ಶಿವಯೋಗ ಸಾಧನೆಯ ಹಂತದಲ್ಲಿ ದ್ವೈತ ನೆರವಾದರೆ, ಸಿದ್ಧಿಯ ಪ್ರಾಪ್ತ ಸಂದರ್ಭದಲ್ಲಿ ಅದ್ವೈತ ಸಹಾಯಕ್ಕೆ ಬರುತ್ತದೆ. ಅಲ್ಲಿ—

ಚಂದ್ರನಿಂದಾದ ಕಲೆ ಚಂದ್ರನ ಬೆರಸಿ ಚಂದ್ರನಾದಂತೆ
ಸೂರ್ಯನಿಂದಾದ ಕಿರಣ ಸೂರ್ಯನ ಬೆರಸಿ ಸೂರ್ಯನಾದಂತೆ
ಅಗ್ನಿಯಿಂದಾದ ಕಾಂತಿ ಅಗ್ನಿಯನೆ ಬೆರಸಿ ಅಗ್ನಿಯಾದಂತೆ

ದೀಪದಿಂದಾದ ಬೆಳಗು ದೀಪವನೆ ಬೆರಸಿ ದೀಪವಾದಂತೆ
ಸಮುದ್ರದಿಂದಾದ ನದಿ ಸಮುದ್ರವನೆ ಬೆರಸಿ ಸಮುದ್ರವಾದಂತೆ
ಪರಶಿವತತ್ತ್ವದಲ್ಲಿ ನಾನುದಯಿಸಿ
ಆ ಪರಶಿವತತ್ತ್ವದಲ್ಲಿಯೆ ಬೆರಸಿ
ಪರಶಿವಯೋಗಿಯಾದೆನು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ ॥

ಈ ಪರಿಪೂರ್ಣ ಪ್ರಕ್ರಿಯೆ ಎಲ್ಲ ವಚನಕಾರರ ವಚನಗಳಲ್ಲೂ ಕಾಣಸಿಗುತ್ತದೆ. ಅದ್ವೈತಕ್ಕೆ ಸೀಮಿತವಾದಂತಹ ಕೆಲವು ವಚನಗಳನ್ನು ಇಲ್ಲಿ ವಿವೇಚಿಸಬಹುದು.

ಅಣ್ಣನ ಬದುಕಿನಲ್ಲಾದ ಘಟನೆ ಇದ್ದಿರಬೇಕು ಕಳ್ಳರು ಗೋವುಗಳನ್ನು ಅಪಹರಿಸಿದ್ದು. ಆಗ ಭೂತದಯಾಪರನಾದ ಬಸವಣ್ಣ ತನ್ನವರಿಗೆ ಹೇಳುತ್ತಾನೆ–

ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ ಧರ್ಮ!
ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ!
ಆಱಿಡದಿರಿಂ ಭೋ, ನಿಮ್ಮ ಧರ್ಮ!
ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ!
ಕೂಡಲಸಂಗಮದೇವ ಏಕೋಭಾವ ॥

ಎಂದು.

ಪೂರ್ಣದೃಷ್ಟಿಗೆ ಇಷ್ಟ ಅನಿಷ್ಟಗಳ ತಾರತಮ್ಯ ತಿಳಿದಿಲ್ಲವಾದ್ದರಿಂದ ಉಭಯವನ್ನೂ ಗೌರವಿಸುತ್ತದೆ. ಅರ್ಪಿತವಾದ ಅಂಶ ಅಲ್ಲಿ ಇಲ್ಲಿ ಎಲ್ಲೆಡೆಯೂ ಏಕರೂಪದಲ್ಲೇ ಸಲ್ಲುತ್ತದೆ. ದೇವನಿಗೆ ಮುಗಿದ ಕೈ ದೇಗುಲಕ್ಕೂ ಸಲ್ಲುವಂತೆ, ತಾಯಿ ಉಂಡರೆ ತನ್ನ ಗರ್ಭದಲ್ಲಿರುವ ಶಿಶು ತಣಿವಂತೆ, ಬೇರಿಗೆ ನೀರೆರೆದರೆ ವೃಕ್ಷದ ಶಾಖೋಪಶಾಖೆಗಳು ತಣಿವಂತೆ ಎಲ್ಲಿಗೇ ಎರೆಯಲಿ ಅದು ಸಂಗನಿಗೆ ಸಂದ ಶ್ರೇಯಾಂಶವಾಗುತ್ತದೆ. ಈ ಸದ್ಭಾವನೆ ಇದ್ದುದರಿಂದಲೇ. 'ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಅವನು ಕೂಡಲಸಂಗಮನಲ್ಲದೆ ಬೇರೆ ಅಲ್ಲ' ಎಂದು ನುಡಿದದ್ದು. ಇಲ್ಲಿ ಕಳ್ಳ ಮತ್ತು ಒಳ್ಳೆಯವ ಭಿನ್ನರಿದ್ದರೂ ಅವರ ಅಂತರಾತ್ಮಗಳು ಒಂದೇ ಅಲ್ಲದೆ ಎರಡಲ್ಲ. ಅವುಗಳಲ್ಲಿ ಯಾವುದೊಂದು ತಣಿದರೂ ಮತ್ತೊಂದು ತೃಪ್ತಗೊಂಡಂತೆ ಎಂಬ ಅದ್ವೈತ ಭಾವನೆ ಏಕೆಂದರೆ ಎರಡೂ ಒಬ್ಬನೇ ಪರಮಾತ್ಮನಿಂದಾದ ಚಿದ್ರೂಪ ಚೈತನ್ಯಗಳು. ಮತ್ತೊಂದು ವಚನ:

ಮೃತ್ತಿಕೆ ಒಂದರಲ್ಲಿ ಆದ ಭಾಂಡದಂತೆ,
ಚಿನ್ನ ಒಂದರಲ್ಲಿ ಆದ ಬಂಗಾರದಂತೆ,
ಉದಕ ಒಂದರಲ್ಲಿ ಆದ ವಾರಿಕಲ್ಲಂತೆ,
ಬ್ರಹ್ಮದಿಂದಲಾದ ಜಗವು ಭಿನ್ನವೆಲ್ಲಿಯದು ಸಕಳೇಶ್ವರಯ್ಯಾ ?

ಅಂದರೆ ಮಣ್ಣು-ಮಡಕೆ, ಚಿನ್ನ–ಒಡವೆ, ನೀರು–ಆಲಿಕಲ್ಲು ಹೇಗೆ ಅಭಿನ್ನ ಅಂಶಗಳೊ ಹಾಗೆ ಬ್ರಹ್ಮ ಮತ್ತು ಬ್ರಹ್ಮಸೃಷ್ಟಿ ಒಂದೇ ಧಾತುವುಳ್ಳವುಗಳು. ಆದರೆ ಆತ್ಮ ಪರಮಾತ್ಮರ ಐಕ್ಯಾನುಮೋದನ ಅಲ್ಲಮಪ್ರಭು ಹೇಳುವಂತೆ, 'ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ!' ಒಟ್ಟಿನಲ್ಲಿ, 'ಮಣ್ಣು ಬಿಟ್ಟು ಮಡಕೆ ಇಲ್ಲ. ನನ್ನ ಬಿಟ್ಟು ದೇವರಿಲ್ಲ' ಎಂಬ ಗಾದೆಮಾತಿಗೆ ಬಂದು ನಿಲ್ಲುತ್ತದೆ ಜಿಜ್ಞಾಸೆ.

ವನವೆಲ್ಲ ನೀವೆ
ವನದೊಳಗಣ ದೇವತರುವೆಲ್ಲ ನೀವೆ
ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.

ಎಂದು ಬೇಡಿದ, ಎಲ್ಲೆಡೆಯೂ ಅವನನ್ನೇ ಅರಸಿದ ಅಕ್ಕ ಬೆಡಗಿನಲ್ಲಿ ನುಡಿಯುತ್ತಾಳೆ–

ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ
ಆಲಿಕಲ್ಲ ಹಸೆಯ ಹಾಸಿ
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು
ಎಂದೆಂದಿಗೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

ಎಂದು.

ಅದ್ವೈತ ಪರವಾದ ಅಲೌಕಿಕ ವ್ಯಾಪಾರವನ್ನು ಅಕ್ಕ ಈ ಚೊಕ್ಕ ಪ್ರತಿಮೆಯ ಮೂಲಕ ಸ್ಪಷ್ಟೀಕರಿಸಿದ್ದಾಳೆ. ಜಲ ಅಂದರೆ ಜಡ, ಚಂಚಲ, ಅಸ್ಥಿರ ಎಂದೆಲ್ಲ ಅರ್ಥವುಂಟು, ಪ್ರಸಕ್ತ ಸಂದರ್ಭದಲ್ಲಿ 'ಜಲದ ಮಂಟಪದ ಮೇಲೆ' ಎಂದರೆ ಚಂಚಲ ಅಥವಾ ಅಸ್ಥಿರವಾದ ಈ ಭೌತಶರೀರದಲ್ಲಿ, 'ಉರಿಯ ಚಪ್ಪರವಿಕ್ಕಿ' ಅಂದರೆ ಜ್ಞಾನವೆಂಬ ತೇಜಸ್ಸನ್ನು ತುಂಬಿ, (ಉರಿ ಅಥವಾ ಜ್ಯೋತಿ ಜ್ಞಾನದ ಸಂಕೇತ) 'ಆಲಿಕಲ್ಲ ಹಸೆಯ ಹಾಸಿ' ಅಂದರೆ ತೃಪ್ತಿ ಎಂಬ ಮಂಗಳವಸ್ತುವನ್ನು ನೆಲಸುವಂತೆ ಮಾಡಿ (ತುಂಬು ತಂಪಿನಿಂದ ಕೂಡಿರುವ ಆಲಿಕಲ್ಲು ತೃಪ್ತಿಯ ಸಂಕೇತ), ಕಾಲಿಲ್ಲದ

ಹೆಂಡತಿಗೆ ಅಂದರೆ ಲೌಕಿಕದ ಹಂಗಿಲ್ಲದ ಆಸೆ, ಭಾಷೆ, ಮೋಸ, ಆಮಿಷ ಮೊದಲಾದ ಯಾವುದೇ ಕಾಮನೆ ಇಲ್ಲದ ಅಥವಾ ಮೋಹಮಂದಿರವೆನಿಸಿದ ಈ ಜಗತ್ತಿನಲ್ಲಿ, ಕಾಮದ ಕೆಸರಿನಲ್ಲಿ ಕಾಲೂರದ, ತಾವರೆಯ ಎಲೆಯ ಮೇಲಿನ ನೀರ ಹನಿಯಂತೆ ಅಂಟಿಯೂ ಅಂಟದಂತಿರುವ ಜೀವಾತ್ಮನು, 'ತಲೆಯಿಲ್ಲದ ಗಂಡ ಒಂದು ಮದುವೆ ಯಾದನು' ಅಂದರೆ ನಿರ್ಗುಣ ನಿರಾಕಾರನಾದ, ಅಚಿಂತ್ಯ, ಅನೂಹ್ಯ, ಅಗೋಚರ ನಾದ ದಿವ್ಯ ಮಹಾಚೈತನ್ಯವೆನಿಸಿದ ಪರಮಾತ್ಮನಲ್ಲಿ ಐಕ್ಯತೆಯನ್ನು ಪಡೆದಿದ್ದಾನೆ ಐಕ್ಯಸ್ಥಲದ ನಿಃಕಲ ಬ್ರಹ್ಮದಲ್ಲಿ. ಅದು ಎಂದೆಂದಿಗೂ ಬಿಡದ ಬಾಳುವೆ. ಅಂದರೆ ಜೀವ-ದೇವರ ಐಕ್ಯಾನುಸಂಧಾನದ ಅವಿಭಾಜ್ಯವಾದ ರಾಸಾಯನಿಕ ಕ್ರಿಯೆ. ಅದು ಶಿವಾದ್ವೈತದ ಪರಮಸಿದ್ಧಿ; ಅದು ಎಂದೆಂದಿಗೂ ಪ್ರತ್ಯೇಕಗೊಳ್ಳದ, ಲೌಕಿಕಕ್ಕೆ ಮತ್ತೆ ಮರಳದ ಶಾಶ್ವತ ಸ್ಥಿತಿ. ಅಂತಹ ನಿಚ್ಚಳ ಪ್ರಭೆಯಲ್ಲಿ ಬೆಳಗು ಬೆಳಗನ್ನು ಕೂಡಿ ಬಯಲಾಗಿದೆ. ಮಹಾದೇವಿ ಎಂಬ ಅಭಿಧಾನದ ಬೆಳಗು ಚೆನ್ನಮಲ್ಲಿಕಾರ್ಜುನ ನೆಂಬ ಜ್ಯೋತಿಯಲ್ಲಿ ಸಂಲಗ್ನವಾಗಿದೆ.

ಈ ಬಗೆಯ ಸಂಲಗ್ನ ಬರಿಯ ಸಹಯೋಗವಲ್ಲ ಸಮ್ಮಿಶ್ರಣ ಸಮ್ಮಿಲನವೂ ಹೌದು. ಹಾಲಿಗೆ ಹಾಲು ಬೆರೆತಂತೆ, ನೀರಿಗೆ ನೀರು ಸೇರಿದಂತೆ ಒಂದು ಮತ್ತೊಂದ ರಲ್ಲಿ ಅವಿಭಾಜ್ಯ ಸ್ವರೂಪದಲ್ಲಿ ಬೆರೆಗೊಳ್ಳುತ್ತವೆ. ಅಂತಾದಾಗ–

ಎನ್ನ ತನುವಿನೊಳಗೆ ತನುರೂಪವಾಗಿರ್ದಿರಯ್ಯಾ ನೀವು,
ಎನ್ನ ಮನದೊಳಗೆ ಮನರೂಪವಾಗಿರ್ದಿರಯ್ಯಾ ನೀವು,
ಎನ್ನ ಪ್ರಾಣದೊಳಗೆ ಪ್ರಾಣರೂಪವಾಗಿರ್ದಿರಯ್ಯಾ ನೀವು,
ಎನ್ನ ಭಾವದೊಳಗೆ ಭಾವರೂಪಾಗಿರ್ದಿರಯ್ಯಾ ನೀವು,
ಎನ್ನ ಇಂದ್ರಿಯಂಗಳೊಳಗೆ ಇಂದ್ರಿಯಂಗಳ ರೂಪಾಗಿರ್ದಿರಯ್ಯಾ ನೀವು,
ಎನ್ನ ವಿಷಯಂಗಳೊಳಗೆ ವಿಷಯಂಗಳ ರೂಪಾಗಿರ್ದಿರಯ್ಯಾ ನೀವು,
ಎನ್ನ ತನು ಮನ ಪ್ರಾಣ ಭಾವ ಇಂದ್ರಿಯಂಗಳೆಲ್ಲವು ನಿಮ್ಮವಾಗಿ,
ಇಂತು ಎನ್ನೊಳಗೆ ನೀವು ಈ ಪರಿಯಲ್ಲಿರ್ದಿರಾಗಿ,
ನಾ ನಿಮ್ಮೊಳಗೆ ಚಿನ್ನ ಬಣ್ಣದಂತೆ, ರತ್ನ ದೀಪ್ತಿಯಂತೆ,
ಜ್ಯೋತಿ ಪ್ರಭೆಯಂತಿರ್ದೆನಯ್ಯಾ ಅಖಂಡೇಶ್ವರಾ ॥

ಅಲ್ಲಿ ಚಿನ್ನ-ಬಣ್ಣ, ರತ್ನ-ದೀಪ್ತಿ, ಜ್ಯೋತಿ-ಪ್ರಭೆ ಇವು ಅವಿಭಾಜ್ಯ ಅಂಶಗಳು. ಅದೇ ಬಗೆಯದು ಜೀವ–ದೇವ ಇವರ ಸಂಲಗ್ನ ಸಂಬಂಧ. ಅವರಿಬ್ಬರೂ ಅಭಿನ್ನ ರಾಗಿ, ಅಭೇದ್ಯರಾಗಿ, ಅವಿಭಾಜ್ಯ ಅಂಶಗಳಾಗಿ ಶಿವಸ್ಥಿತಿಪಡೆಯುತ್ತವೆ. ಅ

ಅದ್ವೈತ ಸಿದ್ಧಿಯ ಆಚೆಗಿನ 'ಶಿವ'ದಲ್ಲಿ ಅನಿರ್ವಚನೀಯ ಸ್ಥಿತಿ! ಅಲ್ಲಿ ಶಬ್ದಮುಗ್ಧವಾಗುತ್ತದೆ, ಸಾಮರಸ್ಯದ ಸಚ್ಚಿದಾನಂದ ಸ್ವರೂಪ ಪ್ರಾಪ್ತವಾಗುತ್ತದೆ. ಆ ಅನುಭಾವವನ್ನು ಅಕ್ಕ ಹೀಗೆ ಹೇಳಿದ್ದಾಳೆ–

ಲಿಂಗವೆನ್ನೆ ಲಿಂಗೈಕ್ಯವೆನ್ನೆ. ಸಂಗವೆನ್ನೆ ಸಮರಸವೆನ್ನೆ.
ಆಯಿತ್ತೆನ್ನೆ ಆಗದೆನ್ನೆ. ನೀನೆನ್ನೆ ನಾನೆನ್ನೆ.
ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ!

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದ್ವೈತ: ಡಿ.ವಿ.ಜಿ. ಅವರ ಕೃತಿಗಳು

—ವಿದ್ವಾನ್ ಎನ್. ರಂಗನಾಥ ಶರ್ಮ

ಪ್ರತಿಯೊಬ್ಬ ಮಹಾಕವಿಯು ಎಲ್ಲ ಸಾಹಿತ್ಯಪ್ರಕಾರಗಳಲ್ಲಿಯೂ ಆತನು ನಂಬಿರುವ ಜೀವನಾದರ್ಶದ ಧಾರೆ ಅನುಸ್ಯೂತವಾಗಿ ಹರಿದಿರುತ್ತದೆ. ಇದು ಆ ಕವಿಗೆ ಆದರ್ಶವಾದ ಜೀವನಮೌಲ್ಯ. ಅದರ ಪ್ರತಿಪಾದನೆಯೇ ಕಾವ್ಯದ ಮುಖ್ಯೋದ್ದೇಶವಾಗದಿದ್ದರೂ ಆತನ ನಂಬಿಕೆ ಅಲ್ಲಲ್ಲಿ ಅಭಿವ್ಯಕ್ತವಾಗುವುದು ಸಹಜವಾಗಿದೆ. ಕೆಲವೆಡೆ ಅದು ಸ್ಪಷ್ಟವಾಗಿ, ಕೆಲವೆಡೆ ಅಸ್ಪಷ್ಟವಾಗಿ ಅದು ಕಾಣಿಸಿಕೊಳ್ಳಬಹುದು. ವರ್ಣನೀಯ ವಸ್ತುವಿಗೆ ಒಂದು ಹೋಲಿಕೆಯನ್ನು ಕೊಟ್ಟಾಗ, ದೃಷ್ಟಾಂತದಿಂದ ವಿವರಿಸಿದಾಗ, ಅರ್ಥಾಂತರನ್ಯಾಸದಿಂದ ಸಮರ್ಥಿಸಿದಾಗ ಕವಿಯ ಹೃದಯಾಂತರಾಳದಲ್ಲಿರುವ ವಿಶ್ವಾಸ ಎದ್ದು ಕಾಣಿಸಿಕೊಳ್ಳುತ್ತದೆ. ಏಕೆಂದರೆ, ಚಿತ್ತವೃತ್ತಿಯ ಸುಂದರವಾದ ಅಭಿವ್ಯಕ್ತಿಯೇ ಕಾವ್ಯ. ಹೀಗೆ ಅಭಿವ್ಯಂಜಿಸುವಾಗ ತನ್ನ ವಿಶ್ವಾಸದ ತಳಹದಿಯನ್ನವಲಂಬಿಸಿದ ಇತರ ಭಾವಗಳೂ ಪ್ರಕಟವಾಗಬಹುದು. ಕವಿಯು ನಂಬಿದ ದಾರ್ಶನಿಕ ತತ್ತ್ವಗಳೂ ಮತಧರ್ಮಗಳಲ್ಲಿರುವ ಕವಿಯ ವಿಶ್ವಾಸವೂ ಕೃತಿಗಳಲ್ಲಿ ಕಾಣಸಬಹುದು. ಕಾಳಿದಾಸನ ರಘುವಂಶ, ಕುಮಾರಸಂಭವ ಕಾವ್ಯಗಳಲ್ಲಿ ಏಕೇಶ್ವರವಾದವು ಸ್ಪಷ್ಟವಾಗಿ ಮೈದಳೆಯುತ್ತದೆ. ಬ್ರಹ್ಮ, ವಿಷ್ಣು, ಮಹೇಶ್ವರ–ಈ ತ್ರಿಮೂರ್ತಿಗಳನ್ನು ಸಮಾನ ಸ್ಥಾನದಲ್ಲಿಟ್ಟು ಮೂವರಿಗೂ ಸೃಷ್ಟಿ, ಸ್ಥಿತಿ, ಲಯಕರ್ತೃತ್ವಗಳನ್ನು ವರ್ಣಿಸಿ ಪರಮಾರ್ಥದಲ್ಲಿ ಮೂವರೂ ಒಂದೇ ವ್ಯಕ್ತಿಯೆಂದು ಕಾಳಿದಾಸನು ಸ್ತುತಿಸಿದ್ದಾನೆ. ಬಾಣನ ಕಾದಂಬರಿಯಲ್ಲಿ ವ್ಯಕ್ತಿಗತ ಸೌಜನ್ಯವು ಪ್ರಧಾನವಾಗಿ ಎದ್ದು ಕಾಣುತ್ತದೆ. ಅಲ್ಲಿ ಬರುವ ಪಾತ್ರಗಳಲ್ಲಿ ಪ್ರತಿಯೊಬ್ಬರೂ ಸೌಜನ್ಯದ ಮೂರ್ತಿಗಳು. ಒಬ್ಬರೂ ಒಂದು ಕೆಟ್ಟ ಮಾತನ್ನೂ ಆಡುವುದಿಲ್ಲ. ಪಂಪನ ಕಾವ್ಯಗಳಲ್ಲಿ ಜಿನಾಗಮದ ಪಾರಮ್ಯವೂ ಹರಿಹರ ರಾಘವಾಂಕರಲ್ಲಿ ಶೈವಭಕ್ತಿಯ ಉತ್ಕರ್ಷವೂ ಕಂಡುಬರುತ್ತವೆ. ಇದಿಷ್ಟು ಬರಿಯ ನಿದರ್ಶನ. ಡಾ॥ ಡಿ.ವಿ.ಜಿ.ಯವರ ಕೃತಿಗಳಲ್ಲಿ ಅದ್ವೈತದರ್ಶನವು ಸ್ಫುಟವಾಗಿ ಗೋಚರಿಸುತ್ತದೆ.

ಈ ಪ್ರಬಂಧದಲ್ಲಿ ಡಿ.ವಿ.ಜಿ.ಯವರ ನಾಲ್ಕು ಕೃತಿಗಳನ್ನು ಪರಿಶೀಲನೆಗಾಗಿ ತೆಗೆದುಕೊಂಡಿದೆ. ಶ್ರೀಮದ್ಭಗವದ್ಗೀತಾತಾತ್ಪರ್ಯ ಅಥವಾ ಜೀವನಧರ್ಮಯೋಗ, ಅದ್ವೈತತತ್ತ್ವ ಮತ್ತು ಅನುಷ್ಠಾನ—ಈ ಎರಡು ಗ್ರಂಥಗಳ ಜೊತೆಗೆ ಅವರು ರಚಿಸಿರುವ ಎರಡು ಕಗ್ಗಗಳು—ಇವೇ ಆ ನಾಲ್ಕು ಕೃತಿಗಳು. ಮೊದಲನೆಯದಾದ

ಜೀವನಧರ್ಮಯೋಗವು ವೇದಾಂತದ ಎಲ್ಲ ಜಾಡುಗಳನ್ನೂ ವಿಮರ್ಶಿಸಿ ನಿರೂಪಿಸುವ ಉದ್ಗ್ರಂಥ. ಎರಡನೆಯದು ನೇರವಾಗಿ ಅದ್ವೈತ ತತ್ತ್ವವನ್ನು ನಿರೂಪಿಸಿ ಅದರ ಅನುಷ್ಠಾನವಿಧಾನವನ್ನೂ ಅವಿರೋಧವಾಗಿ ದ್ವೈತ ವಿಶಿಷ್ಟಾದ್ವೈತಗಳೊಡನೆ ಸಮನ್ವಯ ಪ್ರಕಾರವನ್ನೂ ವಿಚಾರ ಮಾಡುತ್ತದೆ. ಉಳಿದ ಎರಡು ಕಗ್ಗಗಳು ಸುಭಾಷಿತ ಕೃತಿಗಳು. ದಾರ್ಶನಿಕ ಮೌಲ್ಯಗಳನ್ನೊಳಗೊಂಡ ಈ ಕೃತಿಗಳನ್ನು ದಾರ್ಶನಿಕ ಕಾವ್ಯಗಳೆಂದೋ ಶಾಸ್ತ್ರಕಾವ್ಯಗಳೆಂದೋ ಹೆಸರಿಸಬಹುದು. ಈ ಕಗ್ಗಗಳಲ್ಲಿ ಅದ್ವೈತ ಭಾವಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅದ್ವೈತದ ತಳಹದಿಯ ಮೇಲೆ ಸುಭಾಷಿತ ಕಾವ್ಯವು ವಿರಾಜಿಸುತ್ತಿದೆ.

ಡಿ.ವಿ.ಜಿ.ಯವರ ಹೃದಯಕ್ಕೆ ಸಂಮತವಾದದ್ದು ಅದ್ವೈತವಾದರೂ ಅವರು ದ್ವೈತ, ವಿಶಿಷ್ಟಾದ್ವೈತ ದರ್ಶನಗಳನ್ನು ತುಂಬ ಗೌರವದಿಂದ ಕಾಣುತ್ತಾರೆ. ಸಾಧಕರಿಗೆ ಅವೂ ಶ್ರೇಷ್ಠಮಾರ್ಗಗಳೆಂದು ತೋರಿಸಿಕೊಡುತ್ತಾರೆ. ಯಾವ ಮತ ಧರ್ಮಗಳ ವಿಷಯವಾಗಿಯೂ ಒಂದೇ ಒಂದು ನಿಂದನೆಯ ಮಾತನ್ನೂ ಅವರು ಆಡುವುದಿಲ್ಲ. ಎಲ್ಲ ಆಸ್ತಿಕದರ್ಶನಗಳೂ ಮತಗಳೂ ಭಗವಂತನಿಗೆ ಅರ್ಪಿಸಿದ ಮುತ್ತಿನ ಹಾರ. ಒಂದೊಂದು ದರ್ಶನವೂ ಒಂದೊಂದು ಮುತ್ತು. ಎಲ್ಲವೂ ಭಗವಂತನಿಗೆ ಪ್ರಿಯವಾದದ್ದು ಎಂಬುದೇ ಅವರ ನಿಲುವು. ಔಷಧದ ಅಂಗಡಿಯಲ್ಲಿ ನೂರೆಂಟು ಮದ್ದುಗಳಿರುತ್ತವೆ. ರೋಗಕ್ಕೆ ತಕ್ಕ ಮದ್ದು, ರೋಗಿಗೆ ಎಟಕುವ ಮದ್ದು, ಎಲ್ಲವೂ ಬೇಕು. ಯಾವುದೂ ಹೆಚ್ಚಲ್ಲ, ಯಾವುದೂ ಕಡಿಮೆಯಲ್ಲ. ಹೀಗೆ ಡಿವಿಜಿಯವರು ಸಮನ್ವಯದೃಷ್ಟಿಯನ್ನವಲಂಬಿಸಿದ್ದಾರೆ. ಎಲ್ಲ ದರ್ಶನಗಳೂ ಮತಧರ್ಮಗಳೂ ಹೇಗೆ ಶ್ರೇಷ್ಠವಾದವುಗಳು, ಹೇಗೆ ಉಪಯುಕ್ತವಾದವುಗಳು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಡಿ.ವಿ.ಜಿ.ಯವರ ಎರಡು ಕಗ್ಗಗಳಲ್ಲಿ ಅದ್ವೈತಭಾವಗಳು ಹೇಗೆ ಸ್ಫುರಿತವಾಗಿವೆಯೆಂಬುದನ್ನು ಮುಂದೆ ತೋರಿಸಿಕೊಡಲಾಗುತ್ತದೆ. ಅದಕ್ಕೆ ಮೊದಲು ಜೀವನ ಧರ್ಮಯೋಗ, ಅದ್ವೈತ ತತ್ತ್ವ ಮತ್ತು ಅನುಷ್ಠಾನ–ಎಂಬೆರಡು ಗ್ರಂಥಗಳನ್ನು ಸಮೀಕ್ಷಿಸುವುದು ಉತ್ತಮ. ಡಿ.ವಿ.ಜಿ.ಯವರು ನಂಬಿದ ಅದ್ವೈತದ ಸ್ವರೂಪವೇನು, ವ್ಯಾಪ್ತಿ ಎಷ್ಟು, ಜೀವನದಲ್ಲಿ ಅದನ್ನು ಹೊಂದಿಸಿಕೊಳ್ಳುವ ಬಗೆ ಹೇಗೆ, ಅನ್ಯ ದರ್ಶನಗಳೊಡನೆ ಇದರ ಸಂಬಂಧ ಸಮನ್ವಯಗಳೆಂತು–ಎಂಬುದು ಇವುಗಳ ಸಮೀಕ್ಷೆಯಿಂದ ಗೊತ್ತಾಗುತ್ತದೆ. ವಿಶೇಷವಾಗಿ ಅವರ ಮಾತುಗಳನ್ನೇ ಅಲ್ಲಲ್ಲಿ ಉದ್ಧರಿಸಲಾಗುವುದು.

ಜೀವನಧರ್ಮಯೋಗದಲ್ಲಿ ಗೀತೆಯ ಸಾರಾಂಶವನ್ನು ಹೀಗೆ ಹೇಳಿದ್ದಾರೆ: ಗೀತೋಪದೇಶದ ಸಾರಾಂಶವನ್ನು ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ,

ಆ ಮಾತು ಜೀವಸಂಸ್ಕಾರ. ಜೀವವನ್ನು ಪರಿಶೋಧಿಸುವುದು ಮತ್ತು ಜೀವವನ್ನು ಉತ್ತಮದಶೆಗೆ ತರುವುದು–ಇದನ್ನು ಕಲಿಸುವುದು ಗೀತೆಯ ಮುಖ್ಯೋದ್ದೇಶ. ಜೀವಪ್ರಗತಿ ಎಂದರೂ ಜೀವೋತ್ಕರ್ಷ ಎಂದರೂ ಇದೇ : ಜೀವಕ್ಕೆ ಅನಾದಿಯಾಗಿ ಬಂದು ಮುಸುಕಿರುವ ಮಾಯಾಮೋಹಗಳ ಪೊರೆಯನ್ನು ಕಳಚಿ, ಅದಕ್ಕೆ ಪರಮಾತ್ಮ ದರ್ಶನಾರ್ಹತೆಯನ್ನು ಕೊಡುವುದು. ಇದೇ ಧರ್ಮ" (ಜೀವ, ಪುಟ ೬೦೩). ಜೀವಾತ್ಮನೆಂದರೆ ಯಾರು ? ಮನುಷ್ಯನು 'ನಾನು' 'ನಾನು' ಎಂದು ನುಡಿಯುವಾಗ ಯಾವುದನ್ನು ಕುರಿತು ಹಾಗೆ ನುಡಿಯುತ್ತಾನೋ ಅದು ಆತ್ಮ. 'ಅಹಂ' ಪದಕ್ಕೆ ವಿಷಯವಾದದ್ದು ಆತ್ಮ. ಆತ್ಮವೆಂಬುದು ಸ್ವರೂಪ ಸ್ಥಿತಿಯಲ್ಲಿ ಚೈತನ್ಯ ; ಚಿಚ್ಛಕ್ತಿ. ಆ ಚೈತನ್ಯವು ದೇಹಾದಿಕರ್ಮಸಾಧನಗಳನ್ನು ಧರಿಸಿಕೊಂಡ ಅವಸ್ಥೆಯಲ್ಲಿ 'ಜೀವ' 'ಜೀವಾತ್ಮ' ಎನಿಸಿಕೊಳ್ಳುತ್ತದೆ....ಆತ್ಮಕ್ಕೆ ಉಪಾಧಿಯೊಂದು ಸೇರಿದಾಗ ಜೀವವಾಗುತ್ತದೆ" (ಜೀವ, ಪುಟ ೨೮೩). ಇದೆಲ್ಲವೂ ಅದ್ವೈತಮತವನ್ನವಲಂಬಿಸಿ ಬರೆದದ್ದೆಂಬುದು ಸ್ಪಷ್ಟವಾಗಿದೆ. ಮುಂದಿನ ಮಾತು ಇದನ್ನು ಇನ್ನೂ ದೃಢಪಡಿಸುತ್ತದೆ. "ಈಶ್ವರನೆಂಬುದು ಪರಬ್ರಹ್ಮಚೈತನ್ಯದ ಕಾರ್ಯರೂಪ. ಯಾವ ಚೈತನ್ಯವು ವ್ಯಷ್ಟಿರೂಪದಲ್ಲಿ–ಬಿಡಿಬಿಡಿಯಾಗಿ–ಜೀವವೆನಿಸಿಕೊಂಡು ಆತ್ಮಪ್ರಕಾಶವಾಗಿರುತ್ತದೆಯೋ ಅದೇ ಚೈತನ್ಯವು ಸರ್ವತ್ರ ವ್ಯಾಪಿಸಿ ಸಮಷ್ಟಿರೂಪದಲ್ಲಿ ಪರಮಾತ್ಮನೆನಿಸುತ್ತದೆ. ಅದೇ ಪರಮಾತ್ಮವಸ್ತುವೇ ಜಗಲ್ಲೀಲಾ ರೂಪದಲ್ಲಿ ಈಶ್ವರನೆನಿಸುತ್ತದೆ. ಜಗದತೀತದಶೆಯಲ್ಲಿ ಅದೇ ಪರಬ್ರಹ್ಮವೆನಿಸುತ್ತದೆ (ಜೀವ, ಪುಟ ೬೦೬)

ಮೋಕ್ಷಸುಖವನ್ನು ಕುರಿತು ಡಿ.ವಿ.ಜಿ.ಯವರು ಹೇಳಿರುವುದು ಅದ್ವೈತಾನುಸಾರಿಯಾದದ್ದು. ಅದನ್ನು ವಿಚಾರಮಾಡುತ್ತ ಹೀಗೆ ನುಡಿದಿದ್ದಾರೆ: "ಅಹಂತೆಯಿಂದ ಬಿಡುಗಡೆಯೇ ಮೋಕ್ಷ–ಎಂದು ಹೇಳುವುದು ಎಲ್ಲ ದೃಷ್ಟಿಗಳಿಂದಲೂ ಉಚಿತವಾದೀತು....ಎಲ್ಲ ಅನುಭವಗಳೂ ಮೇಲುಮೇಲಿನವು, ತನ್ನಿಂದ ಬೇರೆಯಾದ ಪ್ರಕೃತಿಯ ಚೇಷ್ಟಿತಗಳು ; ವಾಸ್ತವವಾಗಿ ಇರುವ ವಸ್ತು ಪರಮಾತ್ಮ ಒಂದೇ, ತಾನು ಸದಾ ಅದರಲ್ಲಿ ಇರತಕ್ಕವನೇ–ಎಂದು ಕ್ಷಣೇಕ್ಷಣೇ ಅನುಭವವಾಗುತ್ತಿದ್ದರೆ ಅವನ ಪಾಲಿಗೆ ಬಂಧವೂ ಇಲ್ಲ, ಮೋಕ್ಷವೂ ಇಲ್ಲ.

ಬಂಧಮೋಕ್ಷೌ ನ ವಿದ್ಯೇತೇ ನಿತ್ಯಮುಕ್ತತಯಾತ್ಮನಃ ।

ಸರ್ವಮೂಲವಾದ ಪರಬ್ರಹ್ಮವೊಂದೇ ಯಾರಿಗೆ ಸರ್ವದಾ ಸರ್ವತ್ರ ಅನುಭವವಾಗುತ್ತಿರುತ್ತದೆಯೋ, ಬ್ರಹ್ಮೇತರವಾದ ಯಾವುದೊಂದೂ ಮನಸ್ಸಿಗೆ ತೋರದೋ, ಕಣ್ಣಿಗೆ ತೋರುವುದೆಲ್ಲ ಯಾರಪಾಲಿಗೆ ಮಾಯಾಚೇಷ್ಟಿತವೋ,

ಆತ್ಮನಿಂದ ಬೇರೆಯಾದದ್ದೊಂದೂ ಇಲ್ಲವೆಂಬ ದೃಢವಾದ ನಂಬಿಕೆಯಿಂದ ಯಾರ ಮನಸ್ಸಿಗೆ ಭೀತಿವ್ಯಾಮೋಹಕಾರಣಗಳಿಲ್ಲದೆ ಪರಿಪೂರ್ಣ ಶಾಂತಿ ಬರುತ್ತದೆಯೋ ಆತನು ಮುಕ್ತಪುರುಷ" (ಜೀವ, ಪುಟ ೬೮೪–೬೮೫).

ಇಲ್ಲಿ ಡಿ.ವಿ.ಜಿ.ಯವರು ಹೇಳಿದ ಮೋಕ್ಷಸ್ವರೂಪವೂ 'ಆತನು ಮುಕ್ತ ಪುರುಷ' ಎಂದು ಜೀವನ್ಮುಕ್ತಿಯನ್ನು ಅಂಗೀಕರಿಸಿರುವುದೂ 'ಅವನ ಪಾಲಿಗೆ ಬಂಧವೂ ಇಲ್ಲ, ಮೋಕ್ಷವೂ ಇಲ್ಲ' ಎಂದು ಪರಮಾರ್ಥವನ್ನು ತಿಳಿಸಿರುವುದೂ ಅದ್ವೈತಸಿದ್ಧಾಂತವನ್ನನುಸರಿಸಿಯೇ–ಎಂದು ಮತ್ತೆ ಹೇಳಬೇಕಾದ್ದಿಲ್ಲ. ಈ ಸಮಯದಲ್ಲಿ ಗೌಡಪಾದರ ಮಾಂಡೂಕ್ಯಕಾರಿಕೆಯ ಈ ಶ್ಲೋಕವು ನೆನಪಿಗೆ ಬರುತ್ತದೆ.

ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥
—ಮಾಂ. ಕಾ. ೨–೩೨

ಶ್ರೀಮಾನ್ ಡಿ. ಆರ್. ವೆಂಕಟರಮಣನ್ ಅವರು ಕನ್ನಡಕ್ಕೆ ಅನುವಾದಿಸಿರುವ 'ಅದ್ವೈತತತ್ತ್ವ ಮತ್ತು ಅನುಷ್ಠಾನ' ಎಂಬ ಗ್ರಂಥದಲ್ಲಿ ಡಿ.ವಿ.ಜಿ.ಯವರು ಹೀಗೆ ಹೇಳಿದ್ದಾರೆ: "ನಮ್ಮ ಸುತ್ತಮುತ್ತ ನಮಗೆ ಕಾಣಬರುವುದು ದ್ವೈತವೇ. ಅದರ ತೋರಿಕೆ ಎಷ್ಟು ಮಟ್ಟಿನದೆಂದರೆ, ಅದು ನಮ್ಮನ್ನು ದಾರಿತಪ್ಪಿಸಿ, ನಮ್ಮ ಮೌಲ್ಯವಿವೇಕಕ್ಕೆ ಮಂಕುಕವಿಸುವಷ್ಟು ಪರಿಣಾಮಕಾರಿಯಾದದ್ದು, ಶಕ್ತಿಯುಳ್ಳದ್ದು. ಇದನ್ನು ನಿರಾಕರಿಸುವುದೇ ಅದ್ವೈತ" (ಅದ್ವೈತ, ಪುಟ ೩೧). ಪರಬ್ರಹ್ಮವು ನಿರ್ಗುಣವೂ ನಿರ್ವಿಶೇಷವೂ ಆಗಿದೆಯೆಂದೂ ಲೀಲಾರ್ಥವಾಗಿ ಅದು ಜಗದ್ರೂಪವನ್ನು ತಾಳುತ್ತದೆಯೆಂದೂ ಡಿ.ವಿ.ಜಿ. ಬರೆದಿದ್ದಾರೆ: "ಬ್ರಹ್ಮ ಅಥವಾ ಪರಬ್ರಹ್ಮ ಈ ವಿಶ್ವದ ಮೂಲ. ಅದು ದೇಹವಿಲ್ಲದ್ದು. ರೂಪವಿಲ್ಲದ್ದು. ಯಾವ ಗುಣ ವಿಶೇಷವೂ ಇಲ್ಲದ್ದು. ಅದಕ್ಕೆ ವಿಶಿಷ್ಟವಾದ ಯಾವ ಗುರುತೂ ಇಲ್ಲ. ಅದು ಕೇವಲ ಸತ್ತಾ, ಇರಕತ್ಕದ್ದು. ಅದು ಎಲ್ಲವನ್ನೂ ತಿಳಿದದ್ದು. ಎಲ್ಲ ಶಕ್ತಿಯುಳ್ಳದ್ದು. ಕೇವಲ ಆನಂದ.

ತನ್ನಲ್ಲಿರುವುದನ್ನು ಅನುಭವಿಸಿ ಆನಂದಿಸುವುದಕ್ಕಾಗಿ ಪರಬ್ರಹ್ಮವು ರೂಪವನ್ನು ತಾಳುತ್ತದೆ. ಸೃಷ್ಟಿ, ಕಾಪಾಡುವಿಕೆ, ಪ್ರಳಯ–ಎಂಬ ಮೂರು ವಿಧದ ಲೋಕಕ್ರಮದ ಆಟವನ್ನಾಡುತ್ತದೆ. ಆಯಾ ಕೆಲಸಗಳನ್ನು ನೆರವೇರಿಸುವ ಕಾರಣದಿಂದ ಪರಬ್ರಹ್ಮವು ಬ್ರಹ್ಮ, ವಿಷ್ಣು, ಶಿವ–ಎಂಬ ಹೆಸರುಗಳಿಂದ ಕರೆಯಲ್ಪಡುತ್ತದೆ" (ಅದ್ವೈ, ಪುಟ ೧೯).

ಒಳ್ಳೆಯದು. ಅದ್ವೈತದರ್ಶನವು ಉಪನಿಷತ್ತುಗಳ ಪರಮಸಿದ್ಧಾಂತವೇ ಆಗಿರಬಹುದು. ಅದರ ಸಾಧನೆಯಿಂದ ಒಬ್ಬ ವ್ಯಕ್ತಿಗೆ ಮುಕ್ತಿಯೂ ದೊರಕಬಹುದು. ಆದರೆ ಸಾಮಾನ್ಯ ಜನರಿಗೆ ಬ್ರಹ್ಮಜ್ಞಾನವು ಲಭ್ಯವಾದದ್ದಲ್ಲ. ದೇಹ ಇರುವವರೆಗೆ ಲೋಕಸಂಬಂಧ ಉಂಟಷ್ಟೆ? ಲೋಕಸಂಬಂಧವಿದ್ದಮೇಲೆ ಲೋಕ ವ್ಯವಹಾರ ತಪ್ಪದು. ಅದ್ವೈತದರ್ಶನದಿಂದ ಲೋಕವ್ಯವಹಾರಕ್ಕೆ ಉಪಯೋಗವಾದೀತೆ? ಎಂಬ ಪ್ರಶ್ನೆಗೆ 'ಉಪಯೋಗವಿದೆ' ಎನ್ನುತ್ತಾರೆ ಡಿ.ವಿ.ಜಿ.ಯವರು. ಅವರು ಹೀಗೆ ಬರೆದಿದ್ದಾರೆ: "ಈ ಪ್ರಪಂಚವನ್ನು ದೊಡ್ಡರಣರಂಗವನ್ನಾಗಿ ಮಾರ್ಪಡಿಸುವಂತೆ ಹೆದರಿಸುವ ದೇಶ ದೇಶಗಳ ನಡುವೆ, ಸಮಾಜ ಸಮಾಜಗಳ ನಡುವೆ ಇರುವ ಅಸೂಯೆ ಪೈಪೋಟಿಗಳೆಂಬ ಮದಗ್ರಂಥಿಗಳನ್ನು ಕರಗಿಸುವ ಶಕ್ತಿಯುಳ್ಳ ಭೇಷಜ ಅದ್ವೈತ. ಯೂರೋಪ್ ಖಂಡದಲ್ಲಿರುವ ರಾಜ್ಯಗಳು ಸಂಧಿಗಳನ್ನೂ ರಾಜಿಗಳನ್ನೂ ಮಾಡಿಕೊಳ್ಳುತ್ತಿವೆ. ಆದರೆ ಮನುಷ್ಯವರ್ಗಕ್ಕೆ ತೋರಿಸುತ್ತಿರುವ ಆಸೆಗಳನ್ನು ಅವು ಈಡೇರಿಸಲಾರವು. ಮನುಷ್ಯವರ್ಗವನ್ನೇ ಒಂದೇ ಎಂದೂ ಒಂದಕ್ಕೊಂದು ನಂಟುಳ್ಳದ್ದೆಂದೂ ಹೇಳುವ ಮಾರ್ಗವೇ ಅದ್ವೈತ. ನಿಜವಾಗಿ ಎಲ್ಲ ಜೀವವೂ ಒಂದೇ ಎನ್ನುತ್ತದೆ ಅದ್ವೈತ. "ಏಕಂ ಸತ್" ಮಾಸವನು ಈ ಸತ್ಯವನ್ನು ಅರಿಯುವಂತೆ ಅದರಂತೆ ನಡೆಯುವಂತೆ ಭಗವಂತನು ಅನುಗ್ರಹಿಸಲಿ.

ಉದಾತ್ತಗುಣ, ಸರ್ವಸಮಭಾವ, ಸಕಲ ಮಾನವ ಭ್ರಾತೃಭಾವ–ಇವೆಲ್ಲವೂ ಹರಿಜನರೆಂದು ಕರೆಯಲ್ಪಡುವ ನಮ್ಮ ಬಂಧುಗಳಿಗೂ ಯಾವ ಸಂದೇಹವೂ ಇಲ್ಲದೆ ಅನ್ವಯವಾಗುತ್ತದೆ" (ಅದ್ವೈ. ಪುಟ ೮೮). ಈ ವಿಷಯವನ್ನೇ ಮುಂದುವರಿಸುತ್ತ ಈ ರೀತಿ ಬರೆಯುತ್ತಾರೆ: "ನಿಜವಾದ ಅದ್ವೈತಿಯು ವಿಶ್ವಬಂಧು, ಜಗದ್ರಾಷ್ಟ್ರಕ. ಅವನು ತನ್ನದು ಇತರರದು ಎಂಬ ವಿಷಯದಲ್ಲಿ ತಾರತಮ್ಯಗಣನೆಯನ್ನೆಸಗುವುದಿಲ್ಲ.

> ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।
> ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥

ಅದ್ವೈತಿಯು ಯಾವ ಒಂದು ದೇಶವನ್ನೋ ಜನಸಮೂಹವನ್ನೋ ಜಾತಿಯನ್ನೋ ತನ್ನದೆಂದುಕೊಳ್ಳುವುದಿಲ್ಲ. ಎಲ್ಲ ಸಮಾಜಗಳೂ ಜಾತಿಗಳೂ ಜನಸಮೂಹಗಳೂ ಅವನವೇ. ಅವನು ಎಲ್ಲವನ್ನೂ ಸಮದೃಷ್ಟಿಯಿಂದ ನೋಡುತ್ತಾನೆ.

> ಮಾತಾ ಚ ಕಮಲಾದೇವೀ ಪಿತಾ ದೇವೋ ಜನಾರ್ದನಃ ।
> ಬಾಂಧವಾ ವಿಷ್ಣುಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥

ಅಥವಾ

ಮಾತಾ ಚ ಗಿರಿಜಾದೇವೀ ಪಿತಾ ದೇವೋ ಮಹೇಶ್ವರಃ ।
ಬಾಂಧವಾ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥

........ಅದ್ವೈತ ಭಾವನೆಯನ್ನು ಸರ್ವತ್ರ ಒಪ್ಪಿಕೊಂಡ ಪಕ್ಷಕ್ಕೆ ಎಲ್ಲ ವಿಧವಾದ ಹಗೆತನ, ಒಂದು ಜನಾಂಗ ಇನ್ನೊಂದರ ಮೇಲೆ ತೋರಿಸುವ ಶತ್ರುತ್ವ, ಒಬ್ಬ ಮನುಷ್ಯನು ಇನ್ನೊಬ್ಬನ ಮೇಲೆ ಕಾರುವ ದ್ವೇಷ–ಇವೆಲ್ಲ ಪರಿಹಾರವಾಗಿಬಿಡುತ್ತದೆ ಎಂದು ನನ್ನ ನಂಬಿಕೆ" (ಅದ್ವೈ, ಪುಟ ೮೯–೯೦).

ಅದ್ವೈತಿಯು ಲೋಕಸಂಪರ್ಕವನ್ನು ಬಿಟ್ಟುಬಿಡುತ್ತಾನೆಂಬುದನ್ನು ಡಿ.ವಿ.ಜಿ. ಯವರು ಒಪ್ಪುವುದಿಲ್ಲ. ಕುಟುಂಬವ್ಯವಹಾರ ಮಾತ್ರವಲ್ಲದೆ ಸಾರ್ವಜನಿಕ ವ್ಯವಹಾರಗಳಲ್ಲಿ ಸಹ ವೇದಾಂತಿಯು ಶ್ರದ್ಧೆಯಿಂದ ಕರ್ತವ್ಯವನ್ನು ನಿರ್ವಹಿಸುತ್ತಾನೆಂಬುದು ಅವರ ಅಭಿಪ್ರಾಯ. ಈ ವಿಷಯವಾಗಿ ಶ್ರೀ ವಿದ್ಯಾರಣ್ಯ ಸ್ವಾಮಿಗಳು ಪಂಚದಶಿಯಲ್ಲಿ ಹೇಳಿದ "ಜ್ಞಾನಿನಾಚರಿತುಂಶಕ್ಯಂ ಸಮ್ಯಗ್ರಾಜ್ಯಾದಿಲೌಕಿಕಮ್" (ಪಂಚ, ೯–೧೧೪) ಎಂಬ ವಚನವನ್ನು ಮತ್ತೆ ಮತ್ತೆ ಉದಾಹರಿಸಿದ್ದಾರೆ. ರಾಜಕೀಯದಲ್ಲಿ ತೊಡಗಲು ಜ್ಞಾನಿಯಾದವನೇ ಉತ್ತಮ ಅಧಿಕಾರಿಯೆಂದು ಈ ರೀತಿ ಸಮರ್ಥಿಸಿದ್ದಾರೆ "ರಾಜಕೀಯವೂ ಮತ್ತು ಇತರ ಲೌಕಿಕ ವ್ಯವಹಾರಗಳೂ ಸರಿಯಾಗಿ ನಿರ್ವಹಿಸಲ್ಪಡಬೇಕಾದರೆ – ಯಾವ ಪಕ್ಷಕ್ಕೂ ಅನ್ಯಾಯವಾಗದಂತೆ ತಿಳಿವಳಿಕೆಯಿಂದ ನಡೆಯಬೇಕಾದರೆ–ಅದು ಜ್ಞಾನಿಯಿಂದ ಮಾತ್ರ ಸಾಧ್ಯ. ಒಂದು ಸರಿಯಾದ ಮೌಲ್ಯಶ್ರೇಣಿಯನ್ನು ಹೊಂದಿರುವನೆಂದು ಜ್ಞಾನಿಯನ್ನು ಮಾತ್ರ ನಂಬಬಹುದು....ಅದ್ವೈತಿಗೆ ಯಾರೊಬ್ಬರ ವಿಚಾರದಲ್ಲಾಗಲಿ ಯಾವ ಸ್ಥಳಕ್ಕಾಗಲಿ ಅಂಟು ಇಲ್ಲ.......ಅವನು ಎಷ್ಟರಮಟ್ಟಿಗೆ ದೇಶಭಕ್ತನೋ ಅಷ್ಟರಮಟ್ಟಿಗೆ ವಿಶ್ವಭಕ್ತನೂ ಹೌದು. ಎಲ್ಲರೂ ಒಬ್ಬನೇ ಭಗವಂತನ ಸಂರಕ್ಷಣೆಯಲ್ಲಿರುವುದರಿಂದ, ಎಲ್ಲರಲ್ಲಿಯೂ ಅವರು ಗುರುತಿಸಲಿ ಗುರುತಿಸದೆ ಹೋಗಲಿ–ಒಂದೇ ಚೈತನ್ಯವು ವ್ಯಾಪಿಸಿರುವುದರಿಂದ ಅವನು ಒಂದಕ್ಕೂ ಇನ್ನೊಂದಕ್ಕೂ ವ್ಯತ್ಯಾಸವನ್ನು ಕಾಣನು. ಎಲ್ಲರೂ ಅವನಿಗೆ ಸೋದರರರೇ" (ಅದ್ವೈ, ೭೯–೮೦).

ಡಿ.ವಿ.ಜಿ.ಯವರು ಅದ್ವೈತದರ್ಶನದ ವಿಷಯವಾಗಿ ತಳೆದ ನಿಲುವನ್ನು ಇದುವರೆಗೆ ಸ್ಥೂಲವಾಗಿ ಹೇಳಿದ್ದಾಯಿತು. ಶಾಸ್ತ್ರೀಯ ಪರಿಭಾಷೆಗಳ ಗೊಂದಲದೊಳಕ್ಕಿಳಿಯದೆ ಅದ್ವೈತದ ಸ್ವರೂಪ, ಅದ್ವೈತಿಯ ವರ್ತನೆ, ಅದ್ವೈತ ಮತ್ತು ಲೋಕವ್ಯವಹಾರಗಳ ಸಂಬಂಧ, ಅದರಿಂದಾಗಬಹುದಾದ ಉಪಯೋಗ–ಇವನ್ನು ಸ್ವಲ್ಪಮಟ್ಟಿಗೆ ಅವರ ದೃಷ್ಟಿಯಲ್ಲಿಯೇ ವಿಚಾರಿಸಿದ್ದಾಯಿತು. ಡಿ.ವಿ.ಜಿ.ಯವರು

ದ್ವೈತ, ವಿಶಿಷ್ಟಾದ್ವೈತಗಳ ವಿಷಯವಾಗಿ ಯಾವ ಭಾವನೆಯನ್ನು ತಳೆದಿದ್ದರು, ಅವನ್ನು ಹೇಗೆ ಸಮನ್ವಯಗೊಳಿಸಿಕೊಂಡಿದ್ದರು, ಅನ್ಯ ಮತಧರ್ಮಗಳ ವಿಷಯದಲ್ಲಿ ಅವರ ಅಭಿಪ್ರಾಯವೇನು–ಎಂಬುದನ್ನು ನೋಡೋಣ.

ವೇದಾಂತದ ಮತಪ್ರಭೇದಗಳಾದ ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಎಂಬ ಸಿದ್ಧಾಂತಗಳು ವೇದಾಂತಪರ್ವತಶ್ರೇಣಿಯ ಮೂರು ಉನ್ನತ ಶಿಖರಗಳೆಂದು ಡಿ.ವಿ.ಜಿ.ಯವರು ಹೇಳಿದ್ದಾರೆ (ಜೀವ ಪು. ೬೪೮). ನಾನಾ ಸಂಸ್ಕಾರವಿಶೇಷಗಳಿಂದ ಮಾನವನ ಅಭಿರುಚಿಯೂ ಬುದ್ಧಿಸಾಮರ್ಥ್ಯವೂ ವಿಭಿನ್ನವಾಗುವುದರಿಂದ, ಆಸ್ತಿಕವರ್ಗದಲ್ಲಿ ಅಂತಃಕರಣಭೇದಗಳನ್ನು ಮೂರು ಗುಂಪುಗಳಾಗಿ ಅವರು ವಿಂಗಡಿಸುತ್ತಾರೆ.

೧. ಸ್ವತಾಸಮರ್ಪಣ ಸಂತೋಷದ್ದು–ಇದರಲ್ಲಿ ಜೀವನು ತನ್ನ ಸರ್ವಸ್ವವನ್ನೂ ಭಗವದರ್ಪಣ ಮಾಡುವುದರಲ್ಲಿ ಸಂತೋಷವನ್ನು ಕಾಣುತ್ತಾನೆ. ಇದರಲ್ಲಿ ಎರಡು ವಸ್ತುಗಳ ಇರುವಿಕೆ ಬೇಕು. ಸ್ವಾಮಿ–ಸೇವಕ ಅಥವಾ ಪೂಜ್ಯ–ಪೂಜಕ. ಇದು ದ್ವೈತ.

೨. ಸ್ವತಾಸಹಭಾಗ ಸಂತೋಷದ್ದು. ಜೀವನು ಭಗವಲ್ಲೀಲೆಯಲ್ಲಿ ಒಂದು ಅಂಶಪ್ರಾಯನಾಗಿ ಆ ಲೀಲಾನಂದದಲ್ಲಿ ಭಾಗಸ್ಥನಾಗಬೇಕೆನ್ನುವುದು. ಇದರಲ್ಲಿ ಸ್ವಾಮಿ-ಭೃತ್ಯ ಎಂಬ ಭೇದವು ಸೇವಾಕಾಲದಲ್ಲಿದ್ದರೂ ಆನಂದಾನುಭವದಲ್ಲಿ ದ್ವೈತವು ಹೋಗಿ ಏಕತ್ವದಲ್ಲಿ ಪರ್ಯವಸಾನ. ಇದು ವಿಶಿಷ್ಟಾದ್ವೈತ.

೩. ಸ್ವತಾವಿಲಯನ–ಜೀವನು ಯಾವುದನ್ನು ಸರ್ವವ್ಯಾಪಿಯೆಂದೂ ಸರ್ವರೂಪಿಯೆಂದೂ ಭಾವಿಸಿದ್ದಾನೋ ಅದರಲ್ಲಿ ಅವನು ಕರಗಿಹೋಗಿ ತಾನು ಬೇರೆಯೆಂಬ ತನ್ನತನವನ್ನೇ ಕಳೆದುಕೊಳ್ಳುವುದು. ಇದು ಅದ್ವೈತ (ಜೀವ, ಪುಟ ೬೫೬).

ಈ ವಿಷಯವನ್ನು ಡಿ.ವಿ.ಜಿ.ಯವರು ವಿಸ್ತಾರವಾಗಿ ವಿವೇಚಿಸಿದ್ದಾರೆ. ಅಭಿರುಚಿಯ ಭೇದದಿಂದ ಮತತ್ರಯಗಳು ಮೊದಲಿನಿಂದಲೂ ಇದ್ದವೆಂದೂ ಈ ವಿಷಯವಾಗಿ ಕಲಹವೂ ವಾದವೂ ನಿರರ್ಥಕವೆಂದೂ ಹೇಳಿದ್ದಾರೆ. ಇದನ್ನು ಪ್ರಾಚೀನರ ವಚನಗಳಿಂದ ಸಮರ್ಥಿಸುತ್ತ ಈ ವಚನವನ್ನು ಉದಾಹರಿಸುತ್ತಾರೆ–

ದೇಹಬುದ್ಧ್ಯಾ ತು ದಾಸೋಽಹಂ ಜೀವಬುದ್ಧ್ಯಾ ತ್ವದಂಶಕಃ ।
ಆತ್ಮಬುದ್ಧ್ಯಾ ತ್ವಮೇವಾಹಮಿತಿ ಮೇ ನಿಶ್ಚಿತಾ ಮತಿಃ ॥

(ಜೀವ, ಪುಟ ೬೭೫).

'ಅದ್ವೈತ ತತ್ತ್ವ ಮತ್ತು ಅನುಷ್ಠಾನ' ಎಂಬ ಗ್ರಂಥದಲ್ಲಿ ಅದ್ವೈತ ವೇದಾಂತವೇ ಪ್ರಧಾನವಾಗಿ ಪ್ರಸ್ತುತವಾಗಿದೆ. ಡಿ.ವಿ.ಜಿ.ಯವರ ಕೂಲಂಕಷವಾದ ವೇದಾಂತಚಿಂತನವನ್ನು ಈ ಗ್ರಂಥದಲ್ಲಿ ಕಾಣಬಹುದು. ಯಾವ ಪೂರ್ವಗ್ರಹವೂ ಇಲ್ಲದೆ ಮತತ್ರಯಗಳನ್ನು ತೂಗಿ ತೂಗಿ ಪ್ರತಿಯೊಂದರಿಂದಲೂ ಗುಣಗ್ರಹಣ ಮಾಡುವ ಔದಾರ್ಯವನ್ನಿಲ್ಲಿ ನೋಡಬಹುದು. ಅವರ ಈ ಮಾತುಗಳನ್ನು ಸರ್ವರೂ ಅವಶ್ಯವಾಗಿ ಮನನ ಮಾಡಬೇಕು–

"ನನ್ನ ಈ ಮಾತುಗಳನ್ನು ಮುಗಿಸುವುದಕ್ಕೆ ಮೊದಲು ಅದ್ವೈತ, ವಿಶಿಷ್ಟಾ-ದ್ವೈತ ಮತ್ತು ದ್ವೈತ. ಶೈವ ಮತ್ತು ವೈಷ್ಣವ–ಈ ಮತಗಳನ್ನು ಕುರಿತ ತಾರತಮ್ಯ ಗಣನೆಯಿಂದ ನಡೆಯುವ ಜಗಳಗಳಿಗೆ ಪಂಡಿತರುಗಳೂ ವೇದಾಂತಾ-ಚಾರ್ಯರುಗಳೂ ಪೂರ್ಣವಿರಾಮ ಹಾಕಬೇಕೆಂದು ಬೇಡಿಕೊಳ್ಳುತ್ತೇನೆ. ಈ ವಾದ ವಿವಾದಗಳು, ನೂರಾರು ವರ್ಷಗಳಿಂದಲೂ ಸಾಗಿಬರುತ್ತಿವೆ....ಇವು ಮೂರೂ ಆಸ್ತಿಕ ಮತಗಳೆಂದು ತಿಳಿಯಬೇಕಾದದ್ದು, ಸ್ಪಷ್ಟವಾಗಿ ತಿಳಿಯಬೇಕಾದದ್ದು. ಈ ಮೂರು ಮತಗಳೂ ಶ್ರುತಿಯ ತಳಪಾಯದ ಮೇಲೆ ನಿಂತಿರತಕ್ಕವು" (ಅದ್ವೈ ಪುಟ ೮೪).

"ವಾಸ್ತವವಾಗಿ ಈ ಮೂರು ಮತಗಳಿಗೂ ಆಸ್ತಿಕತೆಯಲ್ಲಿ ಸ್ಥಾನ ಉಂಟು. ಅವುಗಳಿಗೆಲ್ಲ ಸಮಾನವಾದ ಪ್ರಾಮಾಣ್ಯವಿದೆ. ಸಮಾನವಾದ ಗೌರವಸ್ಥಾನವಿದೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳೋಣ. ಇದರಲ್ಲಿ ಒಂದು ಹೆಚ್ಚು ಇನ್ನೊಂದು ಕಡಮೆ ಎಂಬ ಜಗಳಗಳು ವೇದಮತದಲ್ಲಿ ನಂಬಿಕೆಯುಳ್ಳ ಸಮಸ್ತ ಹಿಂದೂ ಸಮಾಜವನ್ನು ದುರ್ಬಲವನ್ನಾಗಿ ಮಾಡುವುದಕ್ಕೆ ಸಹಾಯವಾಗಿಬಿಟ್ಟಿವೆ"

ಡಿ.ವಿ.ಜಿ.ಯವರು ಹೇಳಿದ್ದು ವಾಸ್ತವವಾದ ಸಂಗತಿ. ಇನ್ನು ಸಾವಿರ ವರ್ಷಗಳವರೆಗೆ ಖಂಡನೆ ಮಂಡನೆಗಳು ನಡೆದರೂ ಸರ್ವಸಂಮತವಾದ ಒಂದು ಸಿದ್ಧಾಂತ ಬರಲಾರದು. ಖಂಡನೆಗಳು ಸರ್ವಥಾ ಯೋಗ್ಯವಲ್ಲವೆಂದು ವಿವೇಕಿಗಳು ಒಪ್ಪುತ್ತಾರೆ. ಜನರ ಅಭಿರುಚಿಗಳೂ ಅಧಿಕಾರಗಳೂ ಭಿನ್ನಭಿನ್ನವಾಗಿ ಯಾವಾಗಲೂ ಇರತಕ್ಕವೇ. ಸೂತಸಂಹಿತೆಯ ಯಜ್ಞವೈಭವ ಖಂಡದಲ್ಲಿರುವ ಈ ಶ್ಲೋಕವು ಇಲ್ಲಿ ಸ್ಮರಣೀಯ–

ತರ್ಕೈರೇತೇ ಹಿ ಮಾರ್ಗಾಸ್ತು ನ ಹಂತವ್ಯಾ ಮನೀಷಿಭಿಃ ।
ಸೋಪಾನಕ್ರಮತೋ ದೇವಾ ವೇದಮಾರ್ಗಸ್ಯ ಹೇತವಃ ॥

'ಬುದ್ಧಿಶಾಲಿಗಳಾದವರು ಈ ವಿಭಿನ್ನ ಮಾರ್ಗಗಳನ್ನು ತರ್ಕಬಲದಿಂದ

ಖಂಡಿಸುವುದಕ್ಕೆ ಹೋಗಬಾರದು. ಇವೆಲ್ಲವೂ ವೇದಮಾರ್ಗಕ್ಕೆ ಸೇರಿಸುವ ಮೆಟ್ಟಿಲುಗಳು'

ತಾತ್ಪರ್ಯವಿಷ್ಟು—

ನೂರಾರು ಮತವಿಹುದು ಲೋಕದುಗ್ರಾಣದಲ್ಲಿ
ಆರಿಸಿಕೊ ನಿನ್ನ ರುಚಿಗೊಪ್ಪುವುದನದರೊಳ್ ।
ಸಾರದಡುಗೆಯನೊಳವಿಚಾರದೊಲೆಯಲಿ ಮಾಡು
ಬೇರೆ ಮತಿ ಬೇರೆ ಮತ–ಮಂಕುತಿಮ್ಮ ॥

ಈಗ ಮಂಕುತಿಮ್ಮನ ಕಗ್ಗವನ್ನು ನೋಡಬಹುದು–ಮೊದಲಿನ ಮಂಗಳಪದ್ಯ ಹೀಗಿದೆ–

ಶ್ರೀವಿಷ್ಣು ವಿಶ್ವಾದಿಮೂಲ ಮಾಯಾಲೋಲ
ದೇವ ಸರ್ವೇಶ ಪರಬೊಮ್ಮನೆಂದು ಜನಂ ।
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ
ಆವಿಚಿತ್ರಕೆ ನಮಿಸೊ–ಮಂಕುತಿಮ್ಮ ॥

ಇಲ್ಲಿ ವಿಶ್ವಾದಿಮೂಲ, ಮಾಯಾಲೋಲ–ಎಂಬೆರಡು ಶಬ್ದಗಳು ಅದ್ವೈತ ಭಾವನೆಯಿಂದಲೇ ಬಂದಿವೆಯೆಂದು ನನ್ನ ತಿಳಿವಳಿಕೆ. ವಿಶ್ವಾದಿ ಅಥವಾ ವಿಶ್ವಮೂಲ ಎಂದರೆ ಸಾಕಾಗಿತ್ತು. ಆದಿಮೂಲವೆಂದರೆ ಆದಿಕಾರಣ ಎಂಬ ಅರ್ಥ ಸಾಮಾನ್ಯವಾಗಿ ಸ್ಫುರಿಸುತ್ತದೆಯಾದರೂ ಡಿ.ವಿ.ಜಿ.ಯವರ ಅಭಿಪ್ರಾಯ ಅನ್ಯಥಾ ಇದ್ದಿರಬೇಕೆಂದು ನನ್ನ ಊಹೆ. ಅದ್ವೈತಸಿದ್ಧಾಂತದಲ್ಲಿ ಪರಬ್ರಹ್ಮವು ಜಗತ್ತಿಗೆ ಉಪಾದಾನಕಾರಣವೂ ನಿಮಿತ್ತಕಾರಣವೂ ಆಗಿದೆಯೆಂದು ಒಪ್ಪಿದ್ದಾರೆ. ಗಡಿಗೆಗೆ ಮಣ್ಣು ಉಪಾದಾನಕಾರಣ. ಕುಂಬಾರನು ನಿಮಿತ್ತಕಾರಣ. ಬ್ರಹ್ಮವೇ ಜಗತ್ತಾಗಿ ತೋರುವುದರಿಂದ ಅದು ಉಪಾದಾನಕಾರಣ, ಮಣ್ಣು ಗಡಿಗೆಯಾಗಿ ತೋರುವಂತೆ. ಕುಂಬಾರನಂತೆ ಬೇರೊಬ್ಬ ಕರ್ತನೇ ಇಲ್ಲದಿರುವುದರಿಂದ ಬ್ರಹ್ಮವೇ ನಿಮಿತ್ತ ಕಾರಣವೂ ಆಗಿದೆ. ವಿಶ್ವಕ್ಕೆ ಆದಿಯೂ ವಿಶ್ವಕ್ಕೆ ಮೂಲವೂ ಆದದ್ದು ಬ್ರಹ್ಮವೆಂದು ಅಭಿಪ್ರಾಯ. ಇದು ಹೇಗೆ ಸಾಧ್ಯವೆಂಬುದನ್ನು ಮಾಯಾಲೋಲ ಎಂಬ ಶಬ್ದವು ಸ್ಪಷ್ಟಪಡಿಸುತ್ತದೆ. ಮಾಯಾಶಕ್ತಿಯಿಂದ ಇದೆಲ್ಲವೂ ಸಾಧ್ಯವೆಂದು ಆಶಯ. ಬ್ರಹ್ಮವೇ ಜಗತ್ತಾಗಿ ಜೀವವಾಗಿ ತೋರಿಕೊಳ್ಳುತ್ತದೆಯೆಂದು ಮೂರನೆಯ ಪದ್ಯದಲ್ಲಿ ಸ್ಪಷ್ಟವಾಗಿದೆ–

ಇಹುದೊ ಇಲ್ಲವೊ ತಿಳಿಯಗೊಡದೊಂದು ವಸ್ತು ನಿಜ
ಮಹಿಮೆಯಿಂ ಜಗವಾಗಿ ಜೀವವೇಷದಲಿ
ವಿಹರಿಪುದು...॥

'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ' ಎಂಬುದು ಅದ್ವೈತಸಿದ್ಧಾಂತ. ಈ ಸಿದ್ಧಾಂತಕ್ಕೆ ಸವಾಲನ್ನು ಹಾಕುವಂತಿದೆ ಈ ಪದ್ಯ–

ಬ್ರಹ್ಮವೇ ಸತ್ಯ ಸೃಷ್ಟಿಯು ಮಿಥ್ಯೆಯೆನ್ನುವೊಡೆ
ಸಂಬಂಧವಿಲ್ಲವೇನಾ ವಿಷಯುಯುಗಕೆ ?
ನಮ್ಮ ಕಣ್ಮನಸುಗಳೆ ನಮಗೆ ಸಟೆ ಪೇಳುವೊಡೆ
ನೆಮ್ಮುವುದದಾರನೋ ?–ಮಂಕುತಿಮ್ಮ ॥

ನಮ್ಮ ಕಣ್ಣಿಗೆ ಜಗತ್ತು ಸತ್ಯವಾಗಿ ಕಾಣಿಸುತ್ತಿದೆ. ಪ್ರತ್ಯಕ್ಷವಾಗಿ ಕಾಣುವುದನ್ನೇ ಸುಳ್ಳೆಂದು ಹೇಳಿದರೆ ನಿಮ್ಮ ಮಾತನ್ನು ನಂಬಲಾದೀತೆ ? ಎಂಬುದು ಪ್ರಶ್ನೆ. ಜಗತ್ತು ವ್ಯಾವಹಾರಿಕ ಸತ್ಯವೆಂದು ಅದ್ವೈತಿಯು ಉತ್ತರಿಸುತ್ತಾನೆ. ಇದು ವಿಸ್ತಾರವಾಗಿ ಉತ್ತರಿಸಬೇಕಾದದ್ದು. ಈ ಪ್ರಕರಣದಲ್ಲಿ ತಿಮ್ಮನು ಪ್ರಶ್ನೆಗಳ ಸರಮಾಲೆಯನ್ನೇ ಎತ್ತಿದ್ದಾನೆ. ಪ್ರಶ್ನೆಯೇ ಸಿದ್ಧಾಂತವಲ್ಲ. ಗುರುವೆನಿಸಿದವನು ಉತ್ತರ ಕೊಡಬೇಕು.

ಸುರಿದು ಪ್ರಶ್ನೆಗಳನುತ್ತರವ ಕುಡೆ ಬಾರದನ
ಗುರುವೆಂದು ಕರೆಯುವೆಯು–ಮಂಕುತಿಮ್ಮ ॥ (೩೩)

ಬ್ರಹ್ಮವಸ್ತು ಅನುಭವಕ್ಕೆ ಮಾತ್ರ ಗೋಚರವಾಗತಕ್ಕದ್ದು. ತರ್ಕದಿಂದ ಅದರ ಸ್ವರೂಪವನ್ನು ತಿಳಿಯಲಾಗುವುದಿಲ್ಲ. 'ನೈಷಾತರ್ಕೇಣ ಮತಿರಾಪನೇಯಾ' ಎನ್ನುತ್ತದೆ ಉಪನಿಷತ್ತು. ಅದನ್ನೇ ತಿಮ್ಮನು–

ತತ್ತ್ವ ನಿಲುಕದೆಮ್ಮಯ ತರ್ಕಕರ್ಕಶಾಂಕುಶಕೆ ।
ಸುಳಿವುದಾಗಿ ಗಳದು ಸೂಕ್ಷ್ಮಾನುಭವಗಳಲಿ
ತಿಳಿಮನದೆ ನೋಳ್ಪರ್ಗೆ ॥ (೫೪)

ಎನ್ನುತ್ತಾನೆ.

ಬ್ರಹ್ಮವು ತಾನು ಬಹುವಾಗಬೇಕೆಂದು ಬಯಸಿ ಜೀವರೂಪವನ್ನು ಜಗದ್ರೂಪವನ್ನು ತಳೆಯಿತಂತೆ. 'ಬಹುಸ್ಯಾಂ ಪ್ರಜಾಯೇಯೇತಿ' ಅದು ಬಹುವಾದರೂ ತನ್ನ ಸ್ವರೂಪದಲ್ಲಿ ಯಾವ ಮಾರ್ಪಾಡೂ ಆಗಲಿಲ್ಲ. ಅದು ಯಾವ ಲೇಪವೂ ಇಲ್ಲದೆ ಶುದ್ಧವಾಗಿಯೇ ಉಳಿದುಕೊಂಡಿದೆ. ಏಕೆಂದರೆ, ಅದ್ವೈತಿಗಳು ಕಾರ್ಯವು ವಿವರ್ತವೆಂದು ಹೇಳುತ್ತಾರೆ, ಪರಿಣಾಮವೆಂದಲ್ಲ. ಹಾಲು ಮೊಸರಾಗುವುದು ಪರಿಣಾಮ. ಹಗ್ಗವು ಹಾವಾಗಿ ತೋರುವುದೂ ಕಪ್ಪೆಚಿಪ್ಪು ಬೆಳ್ಳಿಯಾಗಿ

ತೋರುವುದೂ ವಿವರ್ತ. ವಿವರ್ತದಲ್ಲಿ ಹಗ್ಗಕ್ಕಾಗಲಿ ಕಪ್ಪೆಚಿಪ್ಪಿಗಾಗಲಿ ಯಾವ ವಿಕಾರವೂ ಉಂಟಾಗಿರುವುದಿಲ್ಲ.

ಬಹುವಾಗಲೆಳಸಿ ತಾನೊಬ್ಬಂಟಿ ಬೊಮ್ಮ ನಿಜ
ಮಹಿಮೆಯಿಂ ಸೃಜಿಸಿ ವಿಶ್ವವನಲ್ಲಿ ನೆಲೆಸಿ ।
ವಹಿಸಿ ಜೀವತೆಯು ಮಾಯೆಯು ಸರಸವಿರಸದಲಿ
ವಿಹರಿಪನು ನಿರ್ಲಿಪ್ತ—ಮಂಕುತಿಮ್ಮ ॥

'ತಸ್ಮಾದೇಕಾಕೀ ನ ರಮತೇ' ಎನ್ನುತ್ತದೆ ಉಪನಿಷತ್ತು. ಒಂಟಿಯಾದ ಬ್ರಹ್ಮವಸ್ತುವಿಗೆ ಆನಂದವಿಲ್ಲದ್ದರಿಂದ ಅದೇ ಬಹುವಾಯಿತಂತೆ. ಇಸ್ಪೀಟು ಆಡ ತಕ್ಕವನಿಗೆ ಆಡತಕ್ಕವರಿಲ್ಲದಾಗ ಬೇಸರವಾಗುತ್ತದೆ. ಒಬ್ಬನೇ ಇತರರ ಪಾತ್ರ ವನ್ನೂ ವಹಿಸಿ ಆಟವಾಡುತ್ತ ವಿನೋದಿಸುವುದುಂಟು. ಇದಕ್ಕೆ ಹೋಲಿಸಿ ಡಿವಿಜಿ ಯವರು ಬರೆಯುತ್ತಾರೆ.

ಚೀಟಿಯಾಟದ ಬಿನದಿ ತಾನೊರ್ವನಿರ್ವರವೊಲ್
ಆಟವಾಡುತಲಿ ತನ್ನೊರ್ತನವ ಮರೆವಾ ।
ಮಾಟದಲಿ ಬೊಮ್ಮನುಂ ತನ್ನೇಕತೆಯು ಜೀವ
ಪಾಟಿಯುಲಿ ಮರೆತಿಹನು—ಮಂಕುತಿಮ್ಮ ॥

'ತನ್ನೇಕತೆಯ ಜೀವಪಾಟಿಯುಲಿ ಮರೆತಿಹನು'. ಬ್ರಹ್ಮವು ವಿನೋದಕ್ಕಾಗಿ ಜೀವರೂಪವನ್ನು ತಳೆದಾಗ, ಜೀವನು ತಾನು ನಿಜವಾಗಿಯೂ ಯಾರು ಎಂಬುದನ್ನು ಮರೆತುಬಿಟ್ಟನಂತೆ. ಮರೆಯುವಂತೆ ಮಾಡಿದ ಮಾಯೆಯೇ ಅವನ ಉದ್ಧಾರಕ್ಕಾಗಿ ನರನಾರಿಯರ ಪರಸ್ಪರ ಮೋಹವನ್ನು ಸೃಷ್ಟಿಸಿದಳಂತೆ. ಜಗತ್ತಿನ ಸಮಸ್ತ ವ್ಯವಹಾರಗಳಿಗೂ ಈ ಮೋಹವೇ ಕಾರಣವಾಯಿತು. ಮೋಹದಿಂದ ವಂಶ, ಅದಕ್ಕಾಗಿ ಮನೆ, ನೆರೆಹೊರೆಗಳ್, ಊರು, ರಾಷ್ಟ್ರಗಳು, ಸಂಘಗಳು, ಅದರಿಂದ ನೀತಿ ನಯ, ಕುಲ ಗೋತ್ರ, ರಾಜ್ಯ, ಮಠ, ಧರ್ಮಸಂಸ್ಥೆಗಳು ನಿರ್ಮಿತವಾದವು. ಇದರಿಂದ ಜೀವಾತ್ಮನ ಉದ್ಧಾರ ಹೇಗೆ? ಎಂದರೆ 'ಅದರಿಂದೆ ಮಮತಾನಾಶದವ ಕಾಶವದರಿನಾತ್ಮವಿಕಾಸ ಮಂಕುತಿಮ್ಮ' (೪೦೭) ಎಂದು ಡಿವಿಜಿ ಹೇಳುತ್ತಾರೆ. ನನ್ನದು ಎಂಬ ಸಂಕುಚಿತವಾದ ಮಮತೆ ಹೆಂಡತಿ ಮಕ್ಕಳಲ್ಲಿ ಕುಟುಂಬದಲ್ಲಿ ಹರಡಿ, ಹಾಗೆಯೇ ಸಮಾಜ, ರಾಜ್ಯ, ರಾಷ್ಟ್ರಗಳಲ್ಲಿ ವಿಕಸಿತವಾಗಿ 'ವಸುಧೈವ ಕುಟುಂಬಕಂ' ಎಂಬ ವಿಶಾಲಭಾವನೆಗೆ ಅವಕಾಶವನ್ನೀಯುತ್ತದೆಯೆಂದು ಅವರ ಪ್ರತಿಪಾದನೆ ಇದೆ. ಅದ್ದರಿಂದಲೇ 'ಗೌರವಿಸು ಜೀವನವ' ಎಂದು ಮತ್ತೆ ಮತ್ತೆ ಹೇಳುತ್ತಾರೆ.

ತ್ಯಕ್ತವ್ಯೋ ಮಮಕಾರಸ್ತ್ಯಕ್ತುಂ ಯದಿ ಶಕ್ಯತೇ ನಾಸೌ ।
ಕರ್ತವ್ಯೋ ಮಮಕಾರಃ ಕಿಂತು ಸ ಸರ್ವತ್ರ ಕರ್ತವ್ಯಃ ॥

—ನೀಲಕಂಠ ದೀಕ್ಷಿತರು

ಆದರೆ ಈ ನರನಾರಿಯರ ವ್ಯಾಮೋಹದಿಂದಾದ ಸಂಸಾರವು ಎರಡು ಅಲಗಿನ ಕತ್ತಿ. ಇದನ್ನು ಸರಿಯಾಗಿ ವಿವೇಕದಿಂದ ಬಳಸಿದರೆ ಜೀವನಿಗೆ ಉತ್ಕರ್ಷ. ಇಲ್ಲದಿದ್ದರೆ ಅಧಃಪಾತವೇ ಎಂದು ಎಚ್ಚರಿಸಿಯೂ ಇದ್ದಾರೆ–

ಅರಿ ಮಿತ್ರ ಸತಿ ಪುತ್ರ ಬಂಧು ಬಳಗವದೆಲ್ಲ
ಕರುಮದವತಾರಗಳೊ, ಋಣಲತೆಯ ಚಿಗುರೊ ।
ಕುರಿಯನಾಗಿಸಿ ನಿನ್ನ ಕಾಪಿಡುವ ಸಂಸಾರ
ವುರಿಮಾರಿಯಾದೀತೊ–ಮಂಕುತಿಮ್ಮ ॥

ಮರುಳ ಮುನಿಯನ ಕಗ್ಗ : ಲೋಕಾನುಭವಗಳಿಂದಲೂ ಶಾಸ್ತ್ರಾವಲೋಕನಗಳಿಂದಲೂ ಒಬ್ಬ ಧೀಮಂತ ವ್ಯಕ್ತಿಯ ಚಿಂತನವು ಗಟ್ಟಿಯಾದ ಮೌಲ್ಯವನ್ನು ಗಳಿಸಿಕೊಂಡಿರುತ್ತದೆ. ಆ ವ್ಯಕ್ತಿಯ ವಯೋಮಾನದಿಂದ ವಿಚಾರವು ಬೆಳೆಯುತ್ತ ಚಿಂತನದಲ್ಲಿ ವಿಶಿಷ್ಟ ಪರಿಣಾಮ ಉಂಟಾಗಬಹುದು. ಪ್ರೌಢಾವಸ್ಥೆಯಲ್ಲಿ ಕಾಣಿಸುವ ಶಂಕೆಗಳಿಗೆ ಉತ್ತರವನ್ನು ಕಂಡುಕೊಂಡು ಅನಿಶ್ಚಯವು ನಿಶ್ಚಯರೂಪವನ್ನು ತಳೆದಿರುತ್ತದೆ. ಜ್ಞಾನವೃದ್ಧನ ಬೋಧೆ ಅರಳಿದ ಹೂ. ಜ್ಞಾನವೃದ್ಧನೂ ವಯೋವೃದ್ಧನೂ ಆದವನ ಬೋಧೆ ಮಾಗಿದ ಹಣ್ಣು. ಹೂ ಕಣ್ಣನ್ನು ತಣಿಸೀತು. ಹಸಿವನ್ನು ನೀಗಿಸಿ ಹೊಟ್ಟೆಗೆ ಶಾಂತಿಯನ್ನು ಕೊಡತಕ್ಕದ್ದು ಹಣ್ಣು. ಹಣ್ಣಿನ ಗುಣವಿರುವುದು ಮರುಳ ಮುನಿಯನ ಕಗ್ಗದಲ್ಲಿ.

ವಿಶಾಲವಾದ ವಿಶ್ವವೇ ಒಂದು ಕನ್ನಡಿ. ಜಗತ್ತಿನ ಎಲ್ಲ ಭೂತರಾಶಿಗಳೂ ಈ ಕನ್ನಡಿಯಲ್ಲಿ ಕಾಣುವ ಭಗವಂತನ ಪ್ರತಿಬಿಂಬಗಳು. ಮನುಷ್ಯನು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಸಂತೋಷಿಸುವಂತೆ ಭಗವಂತನು ತನ್ನ ಈ ಪ್ರತಿಬಿಂಬಗಳನ್ನು ನೋಡಿ ನಲಿಯುತ್ತಿರುವನಂತೆ. ಮರುಳ ಮುನಿಯನು ಕಗ್ಗವನ್ನಾರಂಭಿಸುವುದು ಹೀಗೆ—

ಶ್ರೀಮಜ್ಜಗನ್ಮುಕುರವಿಸ್ತರದೊಳಾರ್ ತನ್ನ
ಮೈಮೆಯ ಪ್ರತಿಬಿಂಬ ಚಿತ್ರಗಳ ನೋಡು- ।

ತಾನ್ವಮೋದಬಡುತಿಹನೊ ಆತನಡಿದಾವರೆಯು
ನಾಮುರಸುವಂ ಬಾರೊ–ಮರುಳಮುನಿಯಂ ॥

ಶ್ರೀ ಶಂಕರಾಚಾರ್ಯರ ದಕ್ಷಿಣಾಮೂರ್ತಿಸ್ತೋತ್ರದ ಆರಂಭದಲ್ಲಿರುವ—

ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ
ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಜಗನ್ನಿದ್ರಯಾ ॥

ಎಂಬ ಶ್ಲೋಕದ ಅಭಿಪ್ರಾಯವೇ ಇದು. ಬಿಂಬ ನಿತ್ಯ. ಪ್ರತಿಬಿಂಬ ಅನಿರ್ವಚನೀಯ; ಮಾಯಯಾ ಕಲ್ಪಿತ. ಈ ದೃಷ್ಟಾಂತವು ಡಿವಿಜಿಯವರಿಗೆ ಬಹಳ ಪ್ರಿಯವಾಗಿತ್ತೆಂದು ತೋರುತ್ತದೆ. ಈ ತಾತ್ಪರ್ಯವೇ ಇರುವ ಐದು ಪದ್ಯಗಳು ಈ ಕಗ್ಗದಲ್ಲಿವೆ. 'ಆ ವಿಚಿತ್ರಕೆ ನಮಿಸೊ' ಎಂದು ತಿಮ್ಮನು ತನ್ನ ಕಗ್ಗದಲ್ಲಿ ಹೇಳಿದ್ದಾನೆ.

ಶ್ರೀವಿಷ್ಣು ವಿಶ್ವಾದಿಮೂಲ ಮಾಯಾಲೋಲ
ದೇವ ಸರ್ವೇಶ ಪರಬೊಮ್ಮನೆಂದು ಜನಂ ।
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ
ಆ ವಿಚಿತ್ರಕೆ ನಮಿಸೋ–ಮಂಕುತಿಮ್ಮ ॥

ಮರುಳನಾದರೋ 'ಆತನಡಿದಾವರೆಯು ನಾಮುರಸುವಂ ಬಾರೊ' ಎನ್ನುತ್ತಾನೆ. ನಮಸ್ಕಾರವು ದೂರದಲ್ಲಿದ್ದು ನಡೆಯಬಹುದು. 'ನಮಿಸೊ' ಎಂದು ಇನ್ನೊಬ್ಬನಿಗೆ ಉಪದೇಶವಿದೆ. ಇದರಲ್ಲಿ 'ನಾಮುರಸುವಂ ಬಾರೊ' ಎಂದು ಸತ್ಯಾನ್ವೇಷಣೆಗೆ ಮುನಿಯನು ಉದ್ಯುಕ್ತನಾಗುತ್ತಾನೆ. 'ಅರಸುವಂ ಬಾರೊ' ಎಂದು ಸಹಭಾಗಿತ್ವ ಇದೆ. ಮುನಿಯನ ವಿಚಾರವು ಎಷ್ಟು ಪಕ್ವವಾಗಿದೆಯೆಂಬುದಕ್ಕೆ ಇದೊಂದು ನಿದರ್ಶನ ಸಾಕು. ಭಗವಂತನ ಅನ್ವೇಷಣೆಯೇ ಮರುಳಮುನಿಯನ ಕಗ್ಗದ ಸಾಲು–ಎಂದು ಇದರಿಂದ ಸೂಚಿತವಾಗುತ್ತದೆ.

ಲೋಕದಲ್ಲಿ ಘೋರ ವಿಷಮತೆ ಇದೆ. ರೌದ್ರ ಬೀಭತ್ಸಗಳೂ ಸಾವುನೋವುಗಳೂ ತುಂಬಿಕೊಂಡಿವೆ. ಕೊಲ್ಲು–ಕೊಲ್ಲಿಸಿಕೊ ಎಂಬುದು ನಿತ್ಯದ ವಹಿವಾಟಾಗಿದೆ. ಈಶ್ವರನು ಕರುಣಾಳುವಾಗಿದ್ದರೆ ಇಷ್ಟೊಂದು ಸಾವು ಸಂಕಟಗಳು ಲೋಕದಲ್ಲೇಕಿರಬೇಕು ? ಎಂದು ಕೆಲವರು ಪ್ರಶ್ನಿಸುತ್ತಾರೆ. ಅದಕ್ಕೆ ವೇದಾಂತಿ ಹೇಳುವುದೇನೆಂದರೆ: "ನಿಮ್ಮ ಕರ್ಮಫಲಗಳನ್ನು ನೀವು ಅನುಭವಿಸುತ್ತೀರಿ. ಈಶ್ವರನು ನ್ಯಾಯಾಧಿಪತಿ ಇದ್ದ ಹಾಗೆ. ಹಾಗಲ್ಲದಿದ್ದರೆ, ಸರ್ಕಾರವು ಕರುಣಾಳುವಾದರೆ ಜೈಲುಗಳನ್ನೂ ಪೋಲೀಸ್ ಇಲಾಖೆಯನ್ನೂ ವಜಾ ಮಾಡಲಿ ! ಎಂದು. 'ನ ಮೇ ದ್ವೇಷ್ಯೋऽ

ಸ್ತನಪ್ರಿಯಃ' ಎಂದು ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ್ದಾನೆ. 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' ಎನ್ನುತ್ತದೆ ಉಪನಿಷತ್ತು. ಇದನ್ನೇ ಮರುಳ ಮುನಿಯನು ತನ್ನದಾದ ಶೈಲಿಯಲ್ಲಿ ಹೇಳುತ್ತಾನೆ–

ಕಣ್ಣೀರ ಸುರಿ ಕೆರಳು ಕಾದು ಕೊಲ್ ಕೊಲ್ಲಿಸಿಕೊ
ಬಿನ್ನಣಿಸು ಹಂಬಲಿಸು ದುಡಿ ಬೆದರು ಬೀಗು ।
ಚಿಣ್ಣರಾಟವೆನೆ ನೋಡುತ ನಿನ್ನ ಪಾಡುಗಳ
ತಣ್ಣಗಿರುವನು ಶಿವನು–ಮರುಳ ಮುನಿಯ ॥

(ಬಿನ್ನಣಿಸು = ಪಾಂಡಿತ್ಯವನ್ನು ತೋರಿಸು.)

ಅದ್ವೈತಿಯು ಸಾಧನಮಾರ್ಗವೆಂದು ಭಕ್ತಿಗೆ ದೊಡ್ಡಸ್ಥಾನವನ್ನು ಕೊಟ್ಟಿದ್ದಾನೆ. ಉಪನಿಷತ್ತುಗಳು ಪ್ರತೀಕೋಪಾಸನೆಯನ್ನು ವಿಶೇಷವಾಗಿ ಉಪದೇಶಿಸಿವೆ. ಈ ಉಪಾಸನೆಯೇ ಭಕ್ತಿಪೂರ್ವಕವಾದ ಧ್ಯಾನ. ಪ್ರತೀಕ ಎಂದರೆ ಮೂರ್ತಿ. ಮೂರ್ತಿಯೇ ಭಗವಂತನೆಂದು ಧ್ಯಾನ ಮಾಡುವ ಜೀವಾತ್ಮ ಪರಮಾತ್ಮರ ಐಕ್ಯ ಜ್ಞಾನಕ್ಕೆ ಸಾಧನವಾಗುತ್ತದೆಯೆಂದು ವೇದಾಂತಶಾಸ್ತ್ರದಲ್ಲಿ ಪ್ರತಿಪಾದನೆ ಇದೆ. 'ಸೋಹಂ ಭಾವೇನ ಪೂಜಯೇತ್' ಎನ್ನುವುದರ ರಹಸ್ಯವೇ ಇದು. ಇದನ್ನು ಡಿ.ವಿ.ಜಿ. ಈ ಶ್ಲೋಕದಲ್ಲಿ ಸುಂದರವಾಗಿ ಪ್ರತಿಪಾದಿಸಿದ್ದಾರೆ–

ನಾನು ನಾನೆಂದು ನಿನ್ನೊಳುಸಿರ್ವಚೇತನವ
ಭಾನು ಶಶಿಗಳ ಮೀರ್ದ ವಿಶ್ವಚೇತನಕೆ ।
ಧ್ಯಾನಸೂತ್ರದೆ ಗಂಟಗಿಡುವ ಪ್ರತೀಕ ಸಂ-
ಧಾನವೇ ಪೂಜೆಯೆಲೊ–ಮರುಳ ಮುನಿಯ ॥

ಜಗತ್ತಿನಲ್ಲಿ ಸೆಣಸಾಟ–ಗುದ್ದಾಟಗಳು ಯಾವಾಗಲೂ ಇರತಕ್ಕವೇ. ಅದನ್ನು ಪೂರ್ತಿ ಹೋಗಲಾಡಿಸಿ ಶಾಂತಿಯನ್ನು ಸ್ಥಾಪಿಸುವುದು ಆಗತಕ್ಕದ್ದೇ ಅಲ್ಲ. ಆದ್ದರಿಂದ ಪರಮ ವೇದಾಂತಿಯಾದ ಮರುಳನ ಹಿತಬೋಧೆ ಹೀಗೆ–'ಶಾಂತಿ ಜಗಕಿಲ್ಲದ ಅಶಾಂತಿಯದು ನಿನಗೇಕೆ ? ಭ್ರಾಂತಿಯಳಿದೊಡೆ ಶಾಂತಿ. ಸ್ವಾಂತಸುಸ್ಥಿತಿ ಶಾಂತಿ' ಎಂದು. ಈ ಮಾತನ್ನು 'ಅಜ್ಞಾನನಾಶವೇ ಮೋಕ್ಷ, ಸ್ವಸ್ವರೂಪಾವಸ್ಥಾನವೇ ಮೋಕ್ಷ, ಪರಮಶಾಂತಿಯೇ ಮೋಕ್ಷ' ಎಂಬ ಅದ್ವೈತಿಗಳ ಮಾತುಗಳೊಡನೆ ಹೋಲಿಸಿ ನೋಡಬಹುದು.

'ಮರುಳ ಮುನಿಯನ ಕಗ್ಗ'ವಷ್ಟೂ ವೇದಾಂತಿಯಾಡುವ ಸುಭಾಷಿತಗಳು. ಅದ್ವೈತಾನುಸಂಧಾನಕ್ಕೆ ಎಲ್ಲವೂ ಪೋಷಕವಾದವುಗಳು. 'ಲೋಕವತ್ತು ಲೀಲಾ

ಕೈವಲ್ಯಂ' ಎಂದು ಬ್ರಹ್ಮಸೂತ್ರದಲ್ಲಿ ಬಾದರಾಯಣಾಚಾರ್ಯರು ಬೋಧಿಸಿದಂತೆ, ಡಿವಿಜಿಯವರು ಸಮಸ್ತ ಜಗದ್ವ್ಯಾಪಾರಗಳನ್ನೂ ಈಶ್ವರನ ಲೀಲೆಯೆಂದು ಹೇಳುತ್ತಾರೆ. 'ಭುವನ ಜೀವನವೆಲ್ಲ ಶಿವನ ಲೀಲಾರಂಗ, ಅವನು ಶಿವನಿವನು ಶಿವ ಶಿವ ನೀನು ನಾನು, ಲೀಲೆಯೋ ಜಗವೆಲ್ಲ ಲೋಕ ನಾಟಕ ಲೀಲೆ, ಜಗವೆಲ್ಲ ಲೀಲೆ ಶಿವಲೀಲೆ ಶಾಶ್ವತಲೀಲೆ, ಲೀಲೆಯೋ ಬರಿಲೀಲೆ ಸರ್ವತೋ ಲೀಲೆಯಿದು' ಎಂದು ಮತ್ತೆ ಮತ್ತೆ ಹೇಳಿ, ಮಾನವನು ಎಲ್ಲ ಕಷ್ಟಗಳನ್ನೂ ಕ್ರೀಡಾಮನೋಭಾವದಿಂದ ಎದುರಿಸಬೇಕೆಂದು ಸೂಚಿಸಿದ್ದಾರೆ. ಅದ್ವೈತಸಿದ್ಧಾಂತದ ಸಾರವನ್ನು ಹಿಡಿ ಕಾವ್ಯವಾಗಿ ನಿರ್ಮಿಸಿದಂತಿದೆ ಈ ಪದ್ಯ–

ಲೀಲೆಯಿಂ ಪಾರಾಗು ಲೀಲೆಯಿಂ ಮೇಲಾಗು
ಲೀಲೆಯೊಳಗೋಲಾಡು ಲೀಲೆಯಂ ನೋಡು ।
ಲೀಲೆಯೊಳ ಚಾಲಕನು ಪಾಲಕನು ನೀನಾಗಿ
ಮೂಲೋಕದಾನಂದಿ–ಮರುಳ ಮುನಿಯ ॥

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದ್ವೈತ

— ಡಾ|| ಎನ್. ಎಸ್. ತಾರಾನಾಥ್

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದ್ವೈತ ವಿಷಯ ಕುರಿತು ವಿಚಾರ ಮಾಡುವಾಗ ಎರಡು ಮುಖ್ಯ ಭೇದಗಳು ಎದ್ದು ಕಾಣುತ್ತವೆ. ಮೊದಲನೆಯದು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಲೆಂದೇ ರಚಿತವಾಗಿರುವ ಕೃತಿಗಳು. ಎರಡನೆಯದು ಅದ್ವೈತ ವಿಚಾರದ ಹೊಳಪನ್ನು ಹೊಂದಿರುವ ಕೃತಿಗಳು. ಮೊದಲು ಈ ಸಿದ್ಧಾಂತವನ್ನು ಪ್ರತಿಪಾದಿಸಲು ಹುಟ್ಟಿರುವ ಕೃತಿಪರಿಶೀಲನೆ ಮಾಡಬಹುದು.

ಆಧುನಿಕ ಕನ್ನಡದ ಅರುಣೋದಯದ ಕಾಲವೆಂದು ಪರಿಗಣಿತವಾಗಿರುವ 17–18ನೆಯ ಶತಮಾನದ ಕನ್ನಡ ಸಾಹಿತ್ಯದಲ್ಲಿ ಅದ್ವೈತಕ್ಕೆ ಪ್ರಾಮುಖ್ಯ ನೀಡಿದ ವ್ಯಕ್ತಿಗಳೆಂದರೆ ಅವಧೂತ ಸಾಹಿತಿಗಳು. ಇವರಲ್ಲಿ ಸಚ್ಚಿದಾನಂದರೆಂಬುವವರೇ ಈಗಿನ ತಿಳಿವಳಿಕೆಯ ಮಟ್ಟಿಗೆ ಈ ಪಂಥದ ಮೊದಲಿಗರೆಂದು ಭಾವಿಸಲಾಗಿದೆ. ಈ ಸಚ್ಚಿದಾನಂದನ ಕೃತಿಯೇನೋ ತಿಳಿಯದು. ಈತ 17ನೆಯ ಶತಮಾನದ ಉತ್ತರಾರ್ಧದಲ್ಲಿ (1622ರಿಂದ 1688) ಶೃಂಗೇರಿಯಲ್ಲಿ ಮಠಾಧಿಪತಿಯಾಗಿದ್ದ ಸಚ್ಚಿದಾನಂದ ಭಾರತಿಯೇ ಎಂದು ಕೆಲವರು ಸಮೀಕರಿಸಿದ್ದಾರೆ. ಈತನ ಶಿಷ್ಯನಾದ ಸಹಜಾನಂದ ಸು. 1750ರಲ್ಲಿ ಎಂದರೆ 18ನೆಯ ಶತಮಾನದ ನಡುಭಾಗದಲ್ಲಿದ್ದಾತ. ಈತ ಭಾಮಿನೀಷಟ್ಪದಿಯಲ್ಲಿ 'ಭಕ್ತಿರಸಾಯನ' ಎಂಬೊಂದು ಶಿವಸ್ತುತಿ ರೂಪಕ ಕೃತಿ ರಚಿಸಿದ್ದಾನೆ. "ಹಾದಿ ತಪ್ಪಿತು ನಿಮ್ಮ ಭಕ್ತಿಗೆ । ಭೇದಬುದ್ಧಿಯ ಕಳೆದು । ನಿಜ ಮಹ । ದಾದಿ ಸದ್ಗುಣವಿತ್ತು ರಕ್ಷಿಸು" ಎಂಬ ಈತನೊಂದು ಮಾತು, ಕೃತಿಯಲ್ಲಿ ಈತ ಪ್ರತಿಪಾದಿಸಿರುವ ಅದ್ವೈತತತ್ತ್ವದ ಸೂಚನೆ ನೀಡುತ್ತದೆ. 18ನೆಯ ಶತಮಾನದ ಆದಿಯಲ್ಲಿದ್ದ ಮಹಲಿಂಗರಂಗ ಈತನ ಶಿಷ್ಯ. ಮಹಲಿಂಗ ರಂಗನ ಕೃತಿ 'ಅನುಭವಾಮೃತ'. 11 ಅಧ್ಯಾಯ 801 ಪದ್ಯಗಳ ಈ ಕೃತಿಯಲ್ಲಿ ವೈರಾಗ್ಯ, ತ್ವಂಪದ, ತತ್ಪದ, ಅಸಿಪದ, ಸಪ್ತಭೂಮಿಕೆ, ಪರಮಾತ್ಮಪದ, ಮಾಯಾ ಮಿಥ್ಯಾತ್ವ, ಜೀವತ್ರಯ, ಜೀವನ್ಮುಕ್ತಿ, ನಿರ್ಗುಣಾರಾಧನೆಗಳನ್ನು ಕವಿ ವಿಸ್ತಾರವಾಗಿ ಹೇಳಿಕೊಂಡು ಹೋಗಿದ್ದಾನೆ. ಕೃತಿಯನ್ನು ವೇದವ್ಯಾಸ ಶುಕನಿಗೆ ಬೋಧಿಸಿದ ಕ್ರಮದಲ್ಲಿ ಕವಿ ನಿರ್ವಹಿಸಿದ್ದಾನೆ. "ಅಖಿಲ ವೇದಾಂತಾರ್ಥವನು ಸಂಗ್ರಹಿಸಿ ಪೇಳುವೆ ಸಕಲರಿಗೆ ತಿಳಿವಂತೆ" ಎಂಬುದು ಕವಿಯ ಉದ್ದೇಶವಾಗಿದೆ. ಸುಜ್ಞಾನವಿಲ್ಲದ ಧ್ಯಾನ–ಮೌನಗಳು ಎಷ್ಟು ನಿರರ್ಥಕ ಎಂಬುದನ್ನು ಕವಿ ಹೀಗೆ ಹೇಳಿದ್ದಾನೆ.

ಮೀನು ನೀರೊಳಗಿದ್ದೊಡೇನೈ
ಧ್ಯಾನವನು ಬಕ ಮಾಡಲೇನದು
ಕಾನನವನಾಶ್ರಯಿಸಿ ಮರ್ಕಟವಿದ್ದೊಡೇನಲ್ಲಿ
ಮೌನದಲಿ ಕೋಗಿಲೆಯಿರಲ್ಕದ
ಕೇನು ಫಲ ಸುಜ್ಞಾನವಿಲ್ಲದೆ
ಮೌನ ಮೊದಲಾದವಜಿತೊಳೇನೆಲೆ ಮಗನೆ ಕೇಳೆಂದ ॥

ಈತನ ತರುವಾಯ ಈ ಸಂಘವನ್ನು ಈತನ ಶಿಷ್ಯ ಶಂಕರಾನಂದ ಹಾಗೂ ಆತನ ಮುಂದಿನ ಶಿಷ್ಯ ಪರಂಪರೆಗೆ ಸೇರಿದ ಬ್ರಹ್ಮಾನಂದ, ನಿಜಾನಂದ, ಚಿದಾನಂದ ಇವರುಗಳು ಮುಂದುವರಿಸಿಕೊಂಡು ಹೋದರೆಂದು ತಿಳಿಯುತ್ತದೆ. ಈ ಪಂಥಕ್ಕೇ ಸೇರಿದ 18ನೆಯ ಶತಮಾನದ ಉತ್ತರಾರ್ಧದ ಕವಿ ಚಿದಾನಂದಾವಧೂತ. ಈತನ ತುಂಬ ಪ್ರಸಿದ್ಧ ಕೃತಿ 'ಜ್ಞಾನ ಸಿಂಧು'. ಅದ್ವೈತ ವೇದಾಂತವು ಸುವಿಸ್ತಾರವಾಗಿ ಈ ಕೃತಿಯ 49 ಅಧ್ಯಾಯಗಳ 3621 ಪದ್ಯಗಳಲ್ಲಿ ನಿರೂಪಿಸಲ್ಪಟ್ಟಿದೆ. ಚಿದಾನಂದಾವಧೂತನ ಈ ಕೃತಿ ಹಲವಾರು ಮುದ್ರಣಗಳನ್ನು ಪಡೆದುಕೊಂಡಿದೆ. ಈತನ ಭಕ್ತಿ, ವೈರಾಗ್ಯ ಸಂಬಂಧವಾದ ಘಟನೆಗಳು, ಐತಿಹ್ಯದಂತ ಕಥೆಗಳ ರೂಪದಲ್ಲಿ ಜನರಲ್ಲಿ ಹರಡಿತ್ತು ಎಂದು ವಿದ್ವಾಂಸರು ಹೇಳುತ್ತಾರೆ. ಅಯ್ಯಪ್ಪನೆಂಬುವವನು ಇವನ್ನಾಧರಿಸಿ ಇವರ ಬಾಲಲೀಲೆ ಹೇಳಿದ್ದಾನೆ. "ತಾನೆ ತನ್ನನು ತಿಳಿದು ತಾನೆತಾನೆಯಾಗಿಯೆ ತನ್ನಯನುಭವ ತುಂಬಿಕೊಂಡಿರಲು ಜ್ಞಾನ ಸಿಂಧುವು ಎಂಬ ಪೆಸರಾಯ್ತು" ಎಂದೂ "ಸರ್ವಶಾಸ್ತ್ರಾರ್ಥವನು ಪೇಳುವೆ ಸರ್ವ ಗೀತೆಗಳರ್ಥಸಾರವನಿದಜಿತೊಳಿರಿರ್ಪೆಂ" ಎಂದೂ ಹೇಳಿಕೊಂಡಿರುವ ಈತನ ನಿರೂಪಣೆಯಲ್ಲಿ ಸರಳತೆಯಿದೆ. ಶಿವನು ಷಣ್ಮುಖನಿಗೆ ಹೇಳಿದ ಅಧ್ಯಾತ್ಮಬೋಧೆಯನ್ನು ತಾನು ವಿವರಿಸುವುದಾಗಿ ಹೇಳಿಕೊಂಡಿದ್ದಾನೆ. "ಅಚ್ಚ ಬೆಳುದಿಂಗಳಿನ ಪ್ರಭೆಗಳ ಮುಚ್ಚಿಸಿಯೆ ಆನಂದಸುಖವನು । ಹೆಚ್ಚಿಸಿಯೆ ಚಿಟ್ಟಿರಿದು ಕಳೆಗಳ ಕವಚ ತೊಡಿಸಿಯೆ ಮೇಣ್ ॥ ಎಚ್ಚಜಿನು ಮಜಿಸಿಯೆ ಅವಿದ್ಯೆಯ । ಕೊಚ್ಚಿಸಿಯೆ ಪರಿಪೂರ್ಣ ಪರವಶ । ದಚ್ಚರಿಯ ಮಾಟ್ಪಾತನೆ ಸದ್ಗುರುವು ಕೇಳೆಂದ ॥" –ಎಂಬ ಈತನ ಒಂದು ಪದ್ಯವೇ ಈತನ ನಿರೂಪಣಾಕ್ರಮ ತೋರುತ್ತದೆ. ಈತನೇ ಬರೆದಿರುವ ಮತ್ತೊಂದು ಕೃತಿಯ ಹೆಸರು 'ತತ್ವಚಿಂತಾಮಣಿ'. ಇದೊಂದು ಗದ್ಯರೂಪದ ಕೃತಿ. ಧ್ಯಾನಪರತತ್ವ ಚಂದ್ರೋದಯ, ವಿಶ್ವವಿರಾಟ್ಪುರುಷ ವಿವರ, ಜೀವೇಶ್ವರೈಕ್ಯ ವಿಚಾರ ಎಂಬವು ಇಲ್ಲಿಯ ಮುಖ್ಯ ವಿಭಾಗಗಳು, ಇಲ್ಲಿ ಪ್ರಣವನಾದಬಿಂದು, ಮಾಯೆ, ಈಶ್ವರ, ಆತ್ಮ, ಪರಬ್ರಹ್ಮ, ಮೋಕ್ಷ ಮುಂತಾದವುಗಳ ಸ್ವರೂಪ ನಿರ್ಣಯ ಮಾಡಲಾಗಿದೆ. 'ಗುರುಚಿದಾನಂದ' ಎಂಬ ಅಂಕಿತದಲ್ಲಿ ಈತ ಕೆಲವು ಹಾಡುಗಳನ್ನೂ ರಚಿಸಿದ್ದಾನೆ. ಒಂದೆಡೆ ನೋಡಲು ದೊರೆಯದ

ಅವುಗಳಲ್ಲಿ ಅದ್ವೈತದ ಹಿನ್ನೆಲೆಯಿದೆ ಎಂದು ಊಹಿಸಲಾಗಿದೆ. ಚಿದಾನಂದಾವಧೂತನ 'ಜ್ಞಾನಸಿಂಧು'ವಿಗೆ ಮಹಲಿಂಗರಂಗನ 'ಅನುಭವಾಮೃತ'ವೇ ಪ್ರಧಾನ ಆಕರವೆಂದು ಹೇಳಬಹುದು. ಎರಡೂ ಕೃತಿಗಳ ಕೆಲವು ಪದ್ಯಗಳನ್ನು ಹೋಲಿಸಿದರೂ ಯಾರಿಗಾದರೂ ಕೂಡಲೇ ಅದು ಹೊಳೆಯುತ್ತದೆ.

ಈ ಆರಂಭದ ಹಿನ್ನೆಲೆಯನ್ನು ಕೊಡುವ ಉದ್ದೇಶ ಇಷ್ಟೆ. 19 ನೆಯ ಶತಮಾನದಲ್ಲಿ ಶಿಶುನಾಳ ಶರೀಫರಿಗಿಂತ ಮುಂಚೆ ಗುರುಕೃಷ್ಣ ಎಂಬೊಬ್ಬ ಭಾಗವತ ಪಂಥದ ಕವಿಯಿದ್ದ. ಮುಮ್ಮಡಿ ಕೃಷ್ಣರಾಜನ ಕಿರಿಸಮಕಾಲಿಕನಾಗಿ ಈತನಿದ್ದಿರಬೇಕು ಎಂದು ಕವಿಚರಿತೆಕಾರರು ಊಹಿಸಿದ್ದಾರೆ. 'ಕೃಷ್ಣ ಬಾಲಲೀಲೆ', 'ಕೃಷ್ಣಸ್ವಾಮಿಯ ದಾನಕೊಟ್ಟ ಪದ' ಎಂಬ ಕೃತಿಗಳ ರಚಕನಾದ ಈತ 1000ಕ್ಕೂ ಹೆಚ್ಚು ಹಾಡುಗಳನ್ನು ರಚಿಸಿದ್ದಾನೆ ಎಂದು ತಿಳಿದುಬಂದಿದೆ. 'ಗುರುಕೃಷ್ಣ' ಎಂಬ ಅಂಕಿತದಲ್ಲಿ ಈತ ಹಾಡುಗಳನ್ನು ರಚಿಸಿರುವುದರಿಂದ ಈತನ ಹೆಸರನ್ನು ಅದೇ ಇರಬೇಕೆಂದು ತಿಳಿಯಲಾಗಿದೆ. ಚಿದಾನಂದಾವಧೂತನ 'ಜ್ಞಾನಸಿಂಧು'ವನ್ನು ಈತ ಅನುಸರಿಸಿದ್ದಾನೆ ಎಂದು ವಿದ್ವಾಂಸರು ಖಚಿತಪಡಿಸಿದ್ದಾರೆ. 'ಜ್ಞಾನಸಿಂಧು'ವನ್ನು ಈತ ಅನುಸರಿಸಿದ್ದಾನೆ ಎಂದು ವಿದ್ವಾಂಸರು ಖಚಿತಪಡಿಸಿದ್ದಾರೆ. 'ಜ್ಞಾನಸಿಂಧು'ವಿಗೆ ಹಾಡಿನ ರೂಪದ ಒಂದು ವ್ಯಾಖ್ಯಾನ ದೊರೆತಿದ್ದು, ಅದು ಈತನದೇ ಇರಬೇಕು ಎಂದು ಆರ್. ನರಸಿಂಹಾಚಾರ್ಯರು ಹೇಳುತ್ತಾರೆ.

ಈ 'ಅವಧೂತ' ಪಂಥೀಯರಂತೆ ಕೆಲವರು ಆನಂದಪಂಥೀಯರೂ 20ನೆಯ ಶತಮಾನದ ಆರಂಭ ದಶಕಗಳಲ್ಲಿ ಕಾಣುತ್ತಾರೆ. ಗಗನಾನಂದ, ನಿರಂಜನಾನಂದ, ಶಿವಾನಂದ, ಶಂಕರಾನಂದ ಈ ಕೆಲವರನ್ನು ಇಲ್ಲಿ ಉಲ್ಲೇಖಿಸಬಹುದು. ನಿರಂಜನಾನಂದ ಗಗನಾನಂದರ ಶಿಷ್ಯ. ಈತನ 'ನಿಷ್ಕಾಮವಚನ', 'ಗಗನಾರ್ಯರ ತತ್ವ' ಹಾಡುಗಳನ್ನು ಒಳಕೊಂಡಿರುವ ಕೃತಿಗಳು. ವೇದಾಂತಬೋಧಕ ಹಾಡುಗಳೇ ಇಲ್ಲಿ ಹೆಚ್ಚು. 'ಗಗನಾರ್ಯ' ಎಂಬ ಅಂಕಿತ ಇಲ್ಲಿ ಸಾಮಾನ್ಯ. "ಬಹು ಕಷ್ಟಪಟ್ಟೆ ನಾ ಭವದಿ । ಸಾಕಿನ್ನಹಹ ನಾನೈಕ್ಯವಾಗುವೆ ನಿಮ್ಮ ಪದದಿ" ಎಂದು ಆರಂಭವಾಗುವ ಹಾಡೊಂದು "ಒಲ್ಲೆ ನಾನಿನ್ನು ಜನ್ಮಗಳ। ಒಲ್ಲೆನೊಲ್ಲೆ ನಾನಿಹಪರಭೋಗ ಸೌಖ್ಯಗಳ। ಒಲ್ಲೆ ನಾ ನಾನಾವಿಷಯಗಳ ಎನ್ನ । ಸೊಲ್ಲನಾಲಿಸೊ ಗಗನಾರ್ಯ ಸುಶೀಲ" ಎಂದು ಅಂತ್ಯವಾಗುತ್ತದೆ. ಈ ಪಂಥದಲ್ಲೇ ಬರುವ ಮತ್ತೊಬ್ಬ ವ್ಯಕ್ತಿ 'ಕೈವಲ್ಯ ನವನೀತ' ರಚಿಸಿದ ಶಂಕರಾನಂದ ಯೋಗಿ. 'ಮುಕ್ತಿಕಾಂತಾ ಕಲ್ಯಾಣ', 'ಹರಿಹರ ಲೀಲಾಮೃತ', 'ರಾಮತತ್ವಾಮೃತ' ಇತ್ಯಾದಿ ಕೃತಿರಚಕನಾದ ಈತನೂ ಅನೇಕ ಹಾಡು ರಚಿಸಿದ್ದಾನೆ. ಈತ ತಾನೂ ಒಬ್ಬ ಮಹಲಿಂಗಯತಿ ವರೇಣ್ಯನ ಶಿಷ್ಯನೆಂದು ಹೇಳಿಕೊಳ್ಳುತ್ತಾನೆ. ಈ ಮಹಲಿಂಗ 'ಅನುಭವಾಮೃತ'ದವನಲ್ಲ. ಏಕೆಂದರೆ ಇವರಿಬ್ಬರ ಕಾಲ ಹಾಗೂ ಗುರುಪರಂಪರೆ ಬೇರೆಯಾಗುತ್ತವೆ. ಈ ಪರಂಪರೆ

ಯಲ್ಲಿಯೇ ಬರುವವನು ಅರಕಲಗೂಡು ಕೃಷ್ಣಪ್ಪ. 1826ರಿಂದ 1906ರವರೆಗೆ ಈತನ ಜೀವಿತ ಕಾಲ. ವೇದಾಂತದ ಶಿವರಾಮಶಾಸ್ತ್ರಿ ಈತನ ಆಧ್ಯಾತ್ಮ ಗುರು. ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ಈತನದು ಅಪ್ರತಿಮ ಪಾಂಡಿತ್ಯ. ಈತನು ವಕೀಲ ಹಾಗೂ ವಂಶಪಾರಂಪರ್ಯದ ಪಾಳೆಯಗಾರನಾಗಿದ್ದ. ಸಂಗೀತ, ನಾಟ್ಯ ಕೂಡ ಕಲಿತಿದ್ದ. ಅದ್ವೈತ ತತ್ತ್ವದ ಹಿನ್ನೆಲೆಯಲ್ಲಿ ಈತ ಕೂಡ ಅನೇಕ ಹಾಡುಗಳನ್ನು ರಚಿಸಿದ್ದಾನೆ. 'ಭಗವದ್ಗೀತಾರ್ಥಸಾರ' ಎಂಬ ಹೆಸರಲ್ಲಿ ಈತ ಗೀತೆಯನ್ನು ಕನ್ನಡಕ್ಕೆ ಸುಲಭಶೈಲಿಯಲ್ಲಿ ತಂದಿದ್ದಾನೆ. ಇಪ್ಪತ್ತು ವಿವಿಧ ರಾಗಗಳಲ್ಲಿ ಗೀತಾಸಾರ ತಂದಿರುವ ಈತನ ಪ್ರಯತ್ನ ನವೀನವಾದ್ದಾಗಿದೆ. ಗೀತೆಯ ಪ್ರಸಾರದಲ್ಲಿ ಇದೊಂದು ಹೊಸಬಗೆ ಎನ್ನಬಹುದು. ಈ ಪರಂಪರೆಯ ಮತ್ತೊಬ್ಬ ಮುಖ್ಯ ವ್ಯಕ್ತಿ ರಾಮಬ್ರಹ್ಮಾನಂದ. ಈತನ ಕಾಲ 19ನೆಯ ಶತಮಾನದ ಕೊನೆಯ ಭಾಗ. ತನ್ನನ್ನು ರಾಮಮೋಹನಾಚಾರ್ಯನ ಶಿಷ್ಯ ಎಂದು ಹೇಳಿಕೊಂಡಿದ್ದಾನೆ. 'ಭಕ್ತಿಸುಧಾರಸ' ಎಂಬ ಶತಕರೂಪದ ಷಟ್ಪದೀ ಕೃತಿ, 'ಭಾಷಾ ಕುಸುಮ ಮಂಜರಿ' ಎಂಬ ಗದ್ಯರೂಪದ ಟೀಕಾ ಗ್ರಂಥ ಮುಖ್ಯವಾದುವು. ಇದರಲ್ಲಿ ಅದ್ವೈತ ತತ್ತ್ವದ ನಿರೂಪಣೆಯಿದೆ.

ಇಲ್ಲಿಯೇ ಗಮನಿಸಬೇಕಾದ ಇನ್ನಿಬ್ಬರು ನಮ್ಮ ಹಿರಿಯ ಸಮಕಾಲಿಕರಾದ ಪ್ರಮುಖರಿದ್ದಾರೆ. ಅವರಲ್ಲಿ ಮೊದಲನೆಯವರು ಹೊಸಕೆರೆ ಚಿದಂಬರಯ್ಯನವರು. 1870ರಿಂದ 1938ರವರೆಗೆ ಇವರ ಜೀವಿತಾವಧಿ. ಸ್ವಪ್ರಯತ್ನದಿಂದಲೇ ಕನ್ನಡ, ಸಂಸ್ಕೃತಗಳಲ್ಲಿ ಅಗಾಧ ಪಾಂಡಿತ್ಯ ಗಳಿಸಿಕೊಂಡರು. ಬಹಳ ಕಾಲ ಮೈಸೂರಿನ ವಿದ್ಯಾಭ್ಯಾಸ ಇಲಾಖೆಯಲ್ಲಿ ಉಪಾಧ್ಯಾಯರಾಗಿದ್ದರು. 'ಪರಮಾರ್ಥ', 'ಭಕ್ತಬಂಧು' ಎಂಬ ಮಾಸಪತ್ರಿಕೆಗಳ ಸಂಪಾದಕರಾಗಿದ್ದರು. ಭಗವದ್ಗೀತೆಯನ್ನು ಕುರಿತು ಹಲವು ಕೃತಿಗಳನ್ನು ರಚಿಸಿದ್ದಾರೆ. 'ಗೀತಾರ್ಥ ಚಂದ್ರಿಕೆ', 'ಗೀತಾರ್ಥ ವಿವರಣೆ', 'ಗೀತೆಯ ಕೈಗನ್ನಡಿ', ಗೀತೆಯ ತಿರುಳು', 'ಪಂಚದಶೀ ತತ್ತ್ವಾರ್ಥ', 'ಬ್ರಹ್ಮಸೂತ್ರಗಳ ಬೆಳಕು', 'ಭಗವದ್ಗೀತಾಸಾರವಿಚಾರ' ನಿದರ್ಶನಕ್ಕೆ ಕೆಲವು. ಇವರ 'ವೇದಾಂತದ ಜೀವಾಳ', 'ಶಂಕರ ಕಥಾಮೃತ'ಗಳಲ್ಲಿ ಕೂಡ ಅದ್ವೈತದ ಪ್ರಸ್ತಾಪವಿದೆ. ಇವರ 'ನೀತಿಸಾರ' ಮತ್ತು 'ರಾಜಭಕ್ತಿ ಕಾವ್ಯ'ಗಳಲ್ಲಿ ಅದ್ವೈತದ ಹೊಳಹಿದೆಯೋ ಎಂಬುದು ಪರಿಶೀಲನಾರ್ಹವಾಗಿದೆ. ಗಮನಿಸಬೇಕಾದ ಮತ್ತೊಬ್ಬ ಮುಖ್ಯರು ಎಲ್ಲಂಬಳಸೆ ಸುಬ್ರಹ್ಮಣ್ಯಶರ್ಮಾ ಅವರು. 1881ರಲ್ಲಿ ಜನಿಸಿದ ಇವರು 90ಕ್ಕೂ ಹೆಚ್ಚು ವರ್ಷ ಬದುಕಿದ್ದು ಕಳೆದ ದಶಕದ ಕೊನೆಗೆ ತೀರಿಕೊಂಡರು. ವಿದ್ಯಾ ಇಲಾಖೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಇವರು ಕೂಡಲಿ ಜಗದ್ಗುರು ವಿರೂಪಾಕ್ಷ ಶಾಸ್ತ್ರಿಗಳಲ್ಲಿ ಶಾಂಕರವೇದಾಂತವನ್ನು ತಲಸ್ಪರ್ಶಿಯಾಗಿ ಅಭ್ಯಸಿಸಿದ್ದರು. ಶಾಂಕರಾದ್ವೈತ ವೇದಾಂತದಲ್ಲಿ ಭಾಷ್ಯ ಮತ್ತು ಪ್ರಸ್ಥಾನಗಳ ನಡುವಣ ವ್ಯತ್ಯಾಸ ತಿಳಿಸುವ

'ಮೂಲ ಅವಿದ್ಯಾ ನಿರಾಸಃ' ಎಂಬ ಸಂಸ್ಕೃತ ಕೃತಿ ರಚಿಸಿದ್ದರು. ಹೊಳೇನರಸೀಪುರದಲ್ಲಿ 'ಅಧ್ಯಾತ್ಮ ಪ್ರಕಾಶ ಕಾರ್ಯಾಲಯ' ಎಂಬುದೊಂದನ್ನು ಸ್ಥಾಪಿಸಿದರು. 'ಅಧ್ಯಾತ್ಮ ಪ್ರಕಾಶ' ಎಂಬ ಇವರ ಮಾಸಪತ್ರಿಕೆ ಪ್ರಸಿದ್ಧವಾದದ್ದೇ. ಸಚ್ಚಿದಾನಂದ ಸರಸ್ವತೀ ಸ್ವಾಮಿ ಎಂದು ತಮ್ಮ ಹೆಸರನ್ನು ಆಶ್ರಮಾನುಗುಣವಾಗಿ ಬದಲಿಸಿಕೊಂಡಿರುವರು. ಅಕ್ಷರಶಃ ನೂರಾರು ಕೃತಿಗಳನ್ನು ರಚಿಸಿರುವ ಇವರು ಅದ್ವೈತ ಸಿದ್ಧಾಂತದ ಪ್ರಚಾರಕ್ಕೆ ಶ್ರದ್ಧೆ, ಶ್ರಮಗಳಿಂದ ದುಡಿದಿದ್ದಾರೆ. 'ಅದ್ವೈತ ಸಿದ್ಧಾಂತ', 'ಆತ್ಮಬೋಧೆ', 'ಗೀತಾಭಾಷ್ಯ', 'ಬ್ರಹ್ಮಸೂತ್ರಸಭಾಷ್ಯ', 'ಶ್ರೀಮದ್ಭಗವದ್ಗೀತಾಭಾಷ್ಯ', 'ಶಂಕರ ಸಿದ್ಧಾಂತ', 'ಶಂಕರ ಮಹಾಮನನ' ಉಲ್ಲೇಖಿಸಬಹುದಾದ ಇವರ ಕೆಲವು ಕೃತಿಗಳು. ಇವೆಲ್ಲ ಬಲುಮಟ್ಟಿಗೆ ಗದ್ಯದಲ್ಲೇ ಇರುವ ಕೃತಿಗಳು ಎಂಬುದನ್ನೂ ಹೇಳಬೇಕು.

ಈವರೆಗಣ ಸಮೀಕ್ಷೆಯಿಂದ ಈ ಕೆಲವು ಸಂಗತಿಗಳು ಹೊರಪಡುತ್ತವೆ: (i) ಕನ್ನಡದಲ್ಲಿ ಅದ್ವೈತ ಸಿದ್ಧಾಂತವನ್ನು ಕುರಿತು 17–18ನೆಯ ಶತಮಾನದಿಂದಲೇ ಕೃತಿಗಳು ರಚನೆಯಾಗತೊಡಗಿದವು. ಮಹಲಿಂಗರಂಗನ 'ಅನುಭವಾಮೃತ'ವೇ ಈ ದಿಸೆಯ ಅವಧೂತ ಪಂಥದ ಮೊದಲ ಕೃತಿ. (ii) ಅನುಭವಾಮೃತ, ಜ್ಞಾನಸಿಂಧು, ಮುಕ್ತಿಕಾಂತಾ ಕಲ್ಯಾಣ, ಭಗವದ್ಗೀತಾರ್ಥಸಾರ ಪದ್ಯರೂಪದ ಸಿದ್ಧಾಂತ ಕೃತಿಗಳು. 'ತತ್ತ್ವ ಚಿಂತಾಮಣಿ', 'ಭಾಷಾಕುಸುಮ ಮಂಜರಿ' ಗದ್ಯರೂಪದ ಸಿದ್ಧಾಂತ ಕೃತಿಗಳು. (iii) ಚಿದಾನಂದಾವಧೂತ, ಗುರುಕೃಷ್ಣ ನಿರಂಜನಾನಂದ, ಶಂಕರಾನಂದರು ತತ್ವದ ಹಾಡುಗಳನ್ನು ರಚಿಸಿದ್ದಾರೆ. (iv) 20ನೆಯ ಶತಮಾನದಲ್ಲಿ 'ಭಗವದ್ಗೀತೆ'ಗೆ ಹಲವಾರು ಗದ್ಯಟೀಕೆ, ವ್ಯಾಖ್ಯಾನ, ವಿವರಣೆಗಳು ರಚನೆಯಾಗಿವೆ. (v) ಅದ್ವೈತ ಸಿದ್ಧಾಂತದ ಪ್ರತಿಪಾದನೆ, ಪ್ರಸಾರಗಳಿಗೆಂದೇ ಕೆಲವು ನಿಯತಕಾಲಿಕೆಗಳು ಹೊರಟಿವೆ.

* * *

19ನೆಯ ಶತಮಾನದ ಕೊನೆಯ ದಶಕ, 20ನೆಯ ಶತಮಾನದ ಪೂರ್ವಾರ್ಧದಲ್ಲಿ ಹೊಸಗನ್ನಡ ಸಾಹಿತ್ಯದಲ್ಲಿ ಹೊಸ ಚಳವಳಿಯೊಂದು ಸದ್ದಿಲ್ಲದೆ ನಡೆಯಿತು. ಇದೇ ನವೋದಯ ಚಳವಳಿ. ಈ ಚಳವಳಿಗೆ ಆಂಗ್ಲಕಾವ್ಯ, ಜನಪದ ಶೈಲಿಯ ಗೀತರಚನೆ, ಆದರ್ಶ - ಕನಸುಗಾರಿಕೆ ಇಂಥವು ಪ್ರೇರಣೆಯನ್ನಿತ್ತುವೇ ವಿನಾ ಯಾವುದೇ ಧಾರ್ಮಿಕ ಹಿನ್ನೆಲೆ ಸ್ಫೂರ್ತಿ ನೀಡಲಿಲ್ಲ. ಅಷ್ಟೇ ಅಲ್ಲ ಈ ಅವಧಿಯಿಂದ ಉದ್ದಕ್ಕೂ ರಚಿತವಾದ ಕನ್ನಡ ಸಾಹಿತ್ಯ 'ಧರ್ಮರಹಿತ'ವಾದ ರೀತಿಯಲ್ಲೇ ರಚನೆಯಾಯಿತು. ಹೀಗಾಗಿ ಸಹಜವಾಗಿಯೇ ಅದ್ವೈತಸಿದ್ಧಾಂತವಾಗಲಿ, ಅದ್ವೈತ ದರ್ಶನವಾಗಲಿ ಈ ಕಾಲದ ಸಾಹಿತ್ಯಕ್ಕಾಗಲಿ, ಯಾವುದೇ ಸಾಹಿತಿಗಾಗಲಿ ಒಂದು

ಹಿನ್ನೆಲೆಯಾಗಿ ನಿಲ್ಲಲಿಲ್ಲ. ನವೋದಯ ಕಾಲದಲ್ಲೇ ಇದ್ದರೂ, ನವೋದಯ ಲಕ್ಷಣಗಳಿಂದ ದೂರವೇ ಇರುವ ಡಿ ವಿ ಜಿ ಅವರನ್ನುಳಿದರೆ ಇತರರಾರೂ ಅದ್ವೈತದ ಹಿನ್ನೆಲೆಯಲ್ಲಿ ತಮ್ಮ ಸಾಹಿತ್ಯ ರಚನೆ ಮಾಡಿಲ್ಲ. ಕುವೆಂಪು, ಬೇಂದ್ರೆ ಇವರಂಥ ಕವಿಗಳಲ್ಲಿ ಕೆಲವೆಡೆ ಅದ್ವೈತದ ಹೊಳಹು ಗೋಚರಿಸಿದರೂ ಅದು ಆನುಷಂಗಿಕ, ಆಕಸ್ಮಿಕ ಎಂದೇ ಹೇಳಬೇಕು. ಈ ಕಾಲದ ಯಾವುದೇ ಕವಿಗೆ ತಮ್ಮ ಸಾಹಿತ್ಯದಲ್ಲಿ ನೇರವಾಗಿ ಅದ್ವೈತ ಸಿದ್ಧಾಂತದ ಪ್ರತಿಪಾದನೆ ಮಾಡುವ ಬಯಕೆಯಿಲ್ಲ. ಕುವೆಂಪುಗೆ ರಾಮಕೃಷ್ಣಾಶ್ರಮದ ಸಂಪರ್ಕದ ದೆಸೆಯಿಂದ ಲಭ್ಯವಾದ ಹಿಂದೂ ದರ್ಶನದ ಫಲವಾಗಿ, ಬೇಂದ್ರೆಯವರಿಗೆ ಅರವಿಂದರ ತತ್ತ್ವದರ್ಶನದ ಪ್ರಭಾವದಿಂದ ಲಭ್ಯವಾದ ದಾರ್ಶನಿಕ ಹಿನ್ನೆಲೆ ಕಾರಣವಾಗಿ ಅವರ ಕೃತಿಗಳಲ್ಲಿ ಅವರಿಗೇ ಅರಿಯದಂತೆ ಅದ್ವೈತ ಕಲ್ಪನೆ ಹೊಳಹುಗೊಂಡಿದೆ. ಇದನ್ನು ಸಿದ್ಧಾಂತ ಅಥವಾ ದರ್ಶನ ಪ್ರತಿಪಾದನೆ ಎನ್ನಲಾಗದು. ಕಲ್ಪನೆಯ ಹೊಳಹು ಎನ್ನಬಹುದು ಅಷ್ಟೆ. ಈಗ ನವೋದಯ ಕೇಂದ್ರಗಳಾದ ಮೈಸೂರು–ಧಾರವಾಡ ಎಂಬ ಹಿನ್ನೆಲೆಯಲ್ಲಿ, ದಕ್ಷಿಣ ಕರ್ನಾಟಕ–ಉತ್ತರ ಕರ್ನಾಟಕ ಎಂಬ ಪ್ರಾದೇಶಿಕ ಭೇದದ ಹಿನ್ನೆಲೆಯಲ್ಲಿ, ಆಂಗ್ಲ ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳಿಂದ ಪ್ರಭಾವಿತರಾಗಿರುವ ಕವಿಗಳು ಎಂಬ ಹಿನ್ನೆಲೆಯಲ್ಲಿ ಪ್ರಾತಿನಿಧಿಕವಾಗಿ ಕುವೆಂಪು ಮತ್ತು ಬೇಂದ್ರೆ ಅವರ ಕೆಲವು ರಚನೆಗಳನ್ನು ನೋಡಬಹುದು.

ಪುಟ್ಟಪ್ಪನವರ ಆರಂಭದ ಕವನ ಸಂಕಲನಗಳಲ್ಲಿ ಒಂದಾದ 'ಕೊಳಲು'ವಿನಲ್ಲಿ ಅದ್ವೈತದ ಮಾತು, ಹೊಳಹು ಅಷ್ಟಾಗಿ ಏನೂ ಗೋಚರಿಸುವುದಿಲ್ಲ. ಆದರೆ ಅಲ್ಲಿಯ 'ಗೋಮಟೇಶ್ವರ' ಎಂಬ ಕವಿತೆಯ ಕೊನೆಯ ಪದ್ಯದಲ್ಲಿ 'ಬ್ರಹ್ಮಸೃಷ್ಟಿ'. ವಿಶ್ವಭಾವ, ಬ್ರಹ್ಮಧ್ಯಾನ, ಬ್ರಹ್ಮಸಾಕ್ಷಾತ್ಕಾರ, ಯೋಗಸಾಧನೆ, ಬ್ರಹ್ಮಯೋಗ ಇತ್ಯಾದಿ ಮಾತುಗಳು ಬರುತ್ತವೆ. 'ಅಂತೆ' ಎಂಬ ಕವಿತೆಯಲ್ಲಿ ಕೂಡ ಮಾಯಾತೀತ, ಮಾಯಾರೂಪಿ ಎಂಬ ಶಬ್ದಗಳ ಬಳಕೆಯಿದೆ. ಆದರೆ ನಿಜಕ್ಕೂ ಅದ್ವೈತದ ಕಲ್ಪನೆಯ ಹೊಳಹು ವ್ಯಕ್ತವಾಗುವುದು ಅವರ ಈ ಸಂಕಲನದ 'ವೇದಾಂತ ಕೇಸರಿ' ಎಂಬ ಪದ್ಯದಲ್ಲಿ. ಲೋಕಾರಣ್ಯದಲ್ಲಿ ಅಲೆದಾಡುವ ಮಾನವನಿಗೆ ವೇದಾಂತ ಕೇಸರಿಯಾಗು ಎಂದು ಬೋಧಿಸುವ ಕವಿ ಸ್ಪಷ್ಟವಾಗಿ,

ಸೋಹಂ! ಸೋಹಂ ಗರ್ಜನೆಯಿಂದ । ಜಗದಾರಣ್ಯವ ತಲ್ಲಣಿಸೊ!
'ಬ್ರಹ್ಮಾಸ್ಮಿ' ಎಂಬುದು ಮರುದನಿಗೈಯಲಿ। ಅಂಬರಕೇರಲಿ 'ತತ್ತ್ವಮಸಿ!'

ಎನ್ನುತ್ತಾರೆ. 'ಪಾಂಚಜನ್ಯ' ಸಂಕಲನದಲ್ಲಿ ಕೂಡ ಇದೇ ಬಗೆಯಿದೆ. 'ವಿಪ್ಲವ ಮೂರ್ತಿ' ಎಂಬ ಕವನದಲ್ಲಿ ವಿಪ್ಲವಮೂರ್ತಿ ಮಾತನಾಡುತ್ತ, ತಾನು ಅವ್ಯಕ್ತ ಬ್ರಹ್ಮ, ವ್ಯಕ್ತ ಬ್ರಹ್ಮ, ಮಾಯಿ–ಮಾಯಾತೀತ, ಕಾಲ–ದೇಶ–ನಿರ್ಗುಣಿ, ಸೃಷ್ಟಿ

ಸ್ಥಿತಿ ಲಯ, ಪರಶಿವ–ಶ್ರೀಹರಿ ಎನ್ನುತ್ತ ಹೋಗುತ್ತಾನೆ. ಇಲ್ಲಿ ಅದ್ವೈತ ಸಂಬಂಧದ ಕೆಲವು ಪರಿಭಾಷೆ ಬಳಕೆಯಾಗಿವೆ ಎನ್ನಬೇಕು ಅಷ್ಟೆ. ಆದರೆ ಇದೇ ಸಂಕಲನದ 'ಆತ್ಮ ಶ್ರದ್ಧೆ' ಎಂಬುದರಲ್ಲಿ "ಎಷ್ಟು ದೇವರ ನೀನೆಷ್ಟು ನಂಬಿದರೇ ನೊಂದಿಪ್ಪ ನೀ ನಂಬದಿರೆ ನಿನ್ನ ನೀನು?" ಎಂದು ಪ್ರಶ್ನಿಸಿ ಶ್ರದ್ಧೆ ಬದುಕಿನಲ್ಲಿ ಮುಖ್ಯ ಎಂದು ಹೇಳಿ

ಮಾನವನೆ ದೇವತೆಯು, ನರನೆ ನಾರಾಯಣನು
ನಮ್ಮ ವಿಶ್ವಕೆ ನಾವೆ ನಿರುಪಮಾದ್ಭುತವಯ್ಯ!
ಕ್ರಿಸ್ತ ಬುದ್ಧರು ಎಲ್ಲ 'ಅಹಮಸ್ಮಿ' ಸಾಗರದಿ
ಮಿಂಚಿ ಮುಳುಗುವ ಬರಿಯ ಕಿರಿಯ ಬುದ್ಬುದವಯ್ಯ

ಎನ್ನುತ್ತಾರೆ. ಇದು ಅದ್ವೈತ ಸಿದ್ಧಾಂತದ ಕಲ್ಪನೆ ಎಂಬುದು ಸ್ಪಷ್ಟವೇ ಇದೆ. ಕ್ರಿಸ್ತ, ಬುದ್ಧರ ವಾದ ಕೂಡ 'ಅಹಮಸ್ಮಿ'ಯ ಮುಂದೆ ಮುಳುಗಿಹೋಗುತ್ತದೆ ಎಂಬುದನ್ನು ಗುರುತಿಸಬೇಕು. ಈ ದೃಷ್ಟಿಯಿಂದ ಕುವೆಂಪು ಅವರ 'ಅಗ್ನಿಹಂಸ' ಒಂದು ಮುಖ್ಯ ಸಂಗ್ರಹ. ಶಂಕರಾಚಾರ್ಯರ 'ನಿರ್ವಾಣಷಟ್ಕ'ವನ್ನು ಅನುವಾದಿಸಿದ ಒಂದು ಪದ್ಯಗುಚ್ಛವೇ ಇಲ್ಲಿದೆ. ಈ ಸಂಕಲನದ 'ಸಂನ್ಯಾಸಿ ಗೀತೆ', 'ಮುಕ್ತ ಮಹಾಪುರುಷನಿಗೆ', 'ಬಲ್ಲವರಾದರು' ಎಂಬ ಮೂರು ಕವನಗಳು ಮುಖ್ಯವಾಗುತ್ತವೆ. 'ಸಂನ್ಯಾಸಿ ಗೀತೆ' ವಿವೇಕಾನಂದರದೇ ಒಂದು ದೀರ್ಘಾನುವಾದ. ಈ ಪದ್ಯದ ಭಾವ, ಭಾಷೆ, ಲಯ, ನಡಿಗೆಗಳೆಲ್ಲ ಗಂಭೀರವೂ ಗಾನಮಯವೂ ಆಗಿವೆ. ಹುತ್ತರಿ ಹಾಡಿನ ಲಯ ಕವನದುದ್ದಕ್ಕೂ ಚಲಿಸಿದೆ. 'ವೀರ ಸಂನ್ಯಾಸಿ' ತ್ಯಾಗದ ಹಾಡನ್ನು ಹಾಡುತ್ತ ಮಲಗಿರುವ ಈ ತಾಯ್ನಾಡನ್ನು ಮುಕ್ತಿಯ ಗಾನದಿಂದ ಎಚ್ಚರಿಸು ಎಂದು ಪ್ರೇರೇಪಿಸುವ ಭಾವವಿದೆ. ಮಾಯೆಯ ಹಗ್ಗ ಕತ್ತರಿಸು, ಹೊನ್ನು ಹೆಣ್ಣು ಮಣ್ಣುಗಳ ಕಗ್ಗ ಕಿತ್ತುಬಿಸುಡು. ದ್ವಂದ್ವರಾಜ್ಯವ ಬಿಟ್ಟುಕಳೆ ಎಂದು ಕವನದಲ್ಲಿ ಹೇಳುತ್ತ ನಡುವೆ ಹೀಗೆ ಹೇಳಲಾಗಿದೆ–

"ಬೆಳೆಯ ಕೊಯ್ವನು ಬಿತ್ತಿದಾತನು; ಪಾಪ ಪಾಪಕೆ ಕಾರಣ;
ವೃಕ್ಷ ಕಾರ್ಯಕೆ ಬೀಜ ಕಾರಣ; ಪುಣ್ಯ ಪುಣ್ಯಕೆ ಕಾರಣ;
ಹುಟ್ಟಿ ಮೈವಡೆದಾತ್ಮ ಬಾಳಿನ ಬಲೆಯ ತಪ್ಪದೆ ಹೊರುವುದು
ಕಟ್ಟು ಮೀರಿಹನಾವನಿರುವನು? ಕಟ್ಟು ಕಟ್ಟನೆ ಹೆರುವುದು!"
ಎಂದು ಪಂಡಿತರೆಂಬರು–ಮೇಣ್
ತತ್ತ್ವದರ್ಶಿಗಳೆಂಬರು
ಆದೊಡೇಸಂತಾತ್ಮವೆಂಬುದು ನಾಮರೂಪಾತೀತವು;
ಮುಕ್ತಿಬಂಧಗಳಿಲ್ಲದಾತ್ಮವು ಸರ್ವನಿಯಮಾತೀತವು!

ತತ್ತ್ವಮಸಿ ಎಂದರಿತು, ಸಾಧುವೆ, ಹಾಡು ಜಾಗಿಯು ಹಾಡನು!
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!

ತಂದೆ ತಾಯಿಯು ಸತಿಯು ಮಕ್ಕಳು ಗೆಳೆಯರೆಂಬುವರ್ಯಾರು ;
ಕನಸು ಕಾಣುತಲವರು ಸೊನ್ನೆಯೆ ಸರ್ವವೆನ್ನುತ ಮೆರೆವರು
ಲಿಂಗವರಿಯದ ಆತ್ಮವಾರಿಗೆ ಮಗುವು ? ಆರಿಗೆ ತಾತನು ?
ಆರ ಮಿತ್ರನು ? ಆರ ಶತ್ರುವು ? ಒಂದೆಯಾಗಿರುವಾತನು ?
    ಆತ್ಮವೆಲ್ಲಿಯು ಇರುವುದು; ಮೇಣ್
    ಆತ್ಮವೊಂದಾಗಿರುವುದು
ಭೇದವೆಂಬುವ ತೋರಿಕೆಯು ನಮ್ಮಾತ್ಮನಾಶಕೆ ಹೇತುವು
ಭೇದವನು ತೊರೆದೊಂದೆಯೆಂಬುದನರಿಯೆ ಮುಕ್ತಿಗೆ ಸೇತುವು

ಇರುವುದೊಂದೇ ! ನಿತ್ಯಮುಕ್ತನು, ಸರ್ವಜ್ಞಾನಿಯು ಆತ್ಮನು !
ನಾಮರೂಪಾತೀತನಾತನು ; ಪಾಪ ಪುಣ್ಯಾತೀತನು !
ವಿಶ್ವಮಾಯಾಧೀಶನಾತನು ; ಕನಸು ಕಾಣುವನಾತನು !
ಸಾಕ್ಷಿಯಾತನು ; ಪ್ರಕೃತಿ ಜೀವರ ತೆರದಿ ತೋರುವನಾತನು !
    ಎಲ್ಲಿ ಮುಕ್ತಿಯ ಹುಡುಕುವೆ ? ಏ-
    ಕಿಂತು ಸುಮ್ಮನೆ ದುಡುಕುವೆ.......

ಇದೇ ಕವನ ಸಂಕಲನದ ‘ಮುಕ್ತ ಮಹಾಪುರುಷನಿಗೆ’ ಎಂಬ 18 ನುಡಿಯ ಕವಿತೆಯಲ್ಲೂ ಈ ಅದ್ವೈತ ವಿಚಾರವಿದೆ. ಶಿವಾನಂದರ ಮಹಾಸಮಾಧಿಯ ವಾರ್ತೆ ಕೇಳಿ ರಚಿತವಾದ ಪದ್ಯ ಇದು. ಕವನದ ಆರಂಭದ ನುಡಿಗಳಲ್ಲಿ ಶಿವಾನಂದರ ಎತ್ತರದ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಕೀರ್ತಿಸಲಾಗಿದೆ. ಇಲ್ಲಿ ನಡುವೆ ಎರಡೆನಲು ಅದು ‘ಸುಳ್ಳು’ ಎಂದೂ, ಒಂದೆನಲು ಅದು ‘ಟೊಳ್ಳು’ ಎಂದು ಮನಸ್ಸೆನ್ನುತ್ತದೆ. ಮುಂದುವರಿಯುತ್ತ ಕವಿ “ಏಕವಾಗಿರೆ ನನ್ನಿಯುದು ನನ್ನ ಮತಿಯರಿತ । ಏಕತೆಯು ಮಲ್ಲ: ಬಹುವಾಗಿರಲು ನಾನರಿತನೇಕತೆಯುಮಲ್ಲ; ತರ್ಕವ ಮೀರಿದಾ ತತ್ತ್ವ ತಾನೆ ತಾನಾಗಿ ‘ಇಹುದು’ !” ಎನ್ನುತ್ತಾರೆ. “ತತ್ತ್ವಮಸಿ ! ತತ್ತ್ವಮಸಿ ನೀನಿಂದು ಓ, ಗುರುವೆ । ತತ್ತ್ವವೆಂತೋ ಏನೊ ? ಅಂತು ನೀಂ ತತ್ತ್ವಮಸಿ । ತತ್ತ್ವಮಸಿ ನಾನಾಗುವನ್ನೆಗಂ ನಿನ್ನಡಿಗೆ ತತ್ತ್ವಮಸಿ ಎಂದೆರಗುವೆ” ಎನ್ನುತ್ತಾರೆ. ‘ತತ್ತ್ವಮಸಿ’ ಎಂಬ ಒಂದೇ ಶಬ್ದದ ಮೇಲೆ ಆಟವಾಡಿ 2–3 ಅರ್ಥಛಾಯೆ ಹೊರಡಿಸಿರುವುದನ್ನು ಇಲ್ಲಿ ಕಾಣಬಹುದು. ಅವರ ‘ಕಿಂಕಿಣಿ’ ಸಂಕಲನದಲ್ಲಿ ಕೂಡ ‘ತತ್‌ತ್ವಮಸಿ’ ಎಂಬೊಂದು ವಚನವಿದೆ. ಹೊಳೆವ ತರಣಿ, ಸುತ್ತುವ ಧರಣಿ, ಬೀಸುವ ಗಾಳಿ, ಉರಿವ ಬೆಂಕಿ, ಜಡದಿಂದೆದ್ದ ಚೈತನ್ಯ ಎಲ್ಲ ನಿನಗಾಗಿ ಕಾದಿದೆ ಏಳು ಎನ್ನುತ್ತಾರೆ ಕವಿ:

"ನನ್ನ ವಾಣಿಯು ಕೇಳಿ ನಿನಗೆ ಕೆಚ್ಚು ದಿಸಲಿ; ನಿನ್ನಾತ್ಮದಲಿ ನೆಚ್ಚು ದಿಸಲಿ; ಎದ್ದೇಳು ನಿನ್ನ ಮಹಿಮೆಯು ಕಾಣು; ತತ್‌ತ್ವಮಸಿ! ತತ್ವಮಸಿ!" ಎನ್ನುತ್ತಾರೆ.

ಕುವೆಂಪು ಕಾವ್ಯರಾಶಿಯನ್ನು ಹುಡುಕಿದರೆ ಇಂಥ ಭಾವವಿರುವ ಇನ್ನೂ ಅನೇಕ ಕವನಗಳು ದೊರೆಯಬಹುದು. ಆದರೆ ಅದ್ವೈತವನ್ನೇ ಅವರು ಒಂದು ಕಾವ್ಯ ಪ್ರಕ್ರಿಯೆಯಾಗಿ ಬಳಸಿಕೊಂಡಿದ್ದಾರೆಯೇ ಎಂಬುದು ಕುತೂಹಲಕರವಾದ ಅಂಶ. ಈ ದಿಶೆಯಲ್ಲಿ "ಶ್ರೀ ರಾಮಾಯಣ ದರ್ಶನಂ"ನ ರಾಮ, ರಾವಣರ ಪಾತ್ರ ಕಲ್ಪನೆಯಲ್ಲಿ ಸತ್ ಮತ್ತು ಅಸತ್ ಭಾವಗಳನ್ನು ತಂದಿದ್ದಾರೆ. ರಾಮ-ರಾವಣ ರನ್ನು ವರ್ಣಿಸುವಾಗ ರಾಮನಂಶ ರಾವಣನಲ್ಲಿದೆ; ರಾವಣನಂಶ ರಾಮನಲ್ಲಿದೆ ಎನ್ನುವ ಭಾವ ತರುತ್ತಾರೆ. ರಾವಣತ್ವ ರಾಮತ್ವದಲ್ಲಿ ಲೀನವಾದುದೇ ರಾವಣಾಂತ್ಯ ಎಂಬುದು ಅವರ ಭಾವನೆಯಾಗಿದೆ. "ಇದು ರಹಸ್ಯಮಾಲಿಸು, ನಾನೆ ಆ ರಾವಣನ ಮೂಲಬಲಶಕ್ತಿ. ನನ್ನ್ ಅಸತ್ ಶಕ್ತಿಯಂ ಗೆಲಲರಿದು ನನಗಲ್ಲದಿತರರಿಗೆ" ಎಂಬ ರಾಮನ ಮಾತು ಈ ದಿಕ್ಕಿನೆಡೆ ಚಿಂತನಸೂಚಿಯಾಗಿದೆ. ಈ ಸಿದ್ಧಾಂತದ ಹಿನ್ನೆಲೆಯಲ್ಲಿ ಒಂದು ವಿಸ್ತೃತ ಪರಿಶೀಲನೆ ಆಗಬೇಕಾಗಿದೆ.

ಬೇಂದ್ರೆಯವರ ಕೆಲವು ಕವನಗಳನ್ನು ಈಗ ಪರಿಶೀಲಿಸಲು ತೊಡಗಬಹುದು. ಅವರ 'ಸೂರ್ಯಪಾನ' ಸಂಕಲನದ ಉಪಮಾನಿಷ್ಠವಾದ 'ಅಂತೆವೋಲ್' ಎಂಬ ಕವನದಲ್ಲಿ ಇದು ಕಾಣುತ್ತದೆ. "ನಾನು ನಿನ್ನಂತೆವೋಲ್ । ನೀನು ನನ್ನಂತೆವೋಲ್" "ನಾನು ಹೇಳಿ ನೀನು ಕೇಳಿ ನೀನು ಆಡಿ ನಾನು ನೋಡಿ" "ಒಂದು ಇದ್ದಂತೆವೋಲ್ ಎರಡು ಆದಂತೆವೋಲ್" "ನನ್ನ ರುಚಿಯು ನೀನು ಕಂಡು । ನಿನ್ನ ಸವಿಯು ನಾನು ಉಂಡು । ಎರಡರಲ್ಲೆ ಎಲ್ಲವಾಗಿ। ಎರಡೆಂಬುದೆ ಅಲ್ಲವಾಗಿ । ದ್ವಂದ್ವದಲ್ಲಿ ದಂಪತಿ। ವಿಶ್ವವಾದ ಶಿವಸತಿ" ಎಂಬ ವಾಕ್ಯಗಳಲ್ಲಿ ಆ ಭಾವ ಮಿಂಚಿದೆ. ಸತ್ ಮತ್ತು ಚಿತ್ ಗಳನ್ನು ಕುರಿತ 'ಇರುವೆ-ಅರಿವೆ' ಎಂಬ ಕವನದಲ್ಲಿ ಬರುವ

"ನಿನಗೆ ನೀನನನ್ಯ ನೇನಲೊ?
ನನಗೇ ನಾನನ್ಯ?
ಅಹಂಮನ್ಯ ವಿಶ್ವಜನ್ಯ
ಹೇಳು ಸ್ವಯಂ ಧನ್ಯ!"

ಎಂಬುದು ಅದ್ವೈತದ ಹೊಳಹು ತೋರುತ್ತದೆ. ಬೇಂದ್ರೆಯವರು ತಮ್ಮ ಪದ್ಯರಾಶಿಯಲ್ಲಿ ಮರಾಠಿಯ ಜ್ಞಾನೇಶ್ವರರ ಅಮೃತಾನುಭವ ಆಧರಿಸಿ ಅನೇಕ ಗೀತ ರಚನೆ ಮಾಡಿದ್ದಾರೆ. "ಮುಕ್ತಕಂಠ' ಸಂಕಲನದ ಅಮೃತಾನುಭವ 'ಹೃದಯ ಸಮುದ್ರ'ದ ಆತ್ಮಪ್ರಜ್ಞೆ, 'ಸಂಚಯ'ದ 'ಚಾಂಗದೇವ ಪಾಸಷ್ಟಿ' ಈ ದಿಕ್ಕಿನ ಕೆಲವು

ಉದಾಹರಣೆಗಳು. ಇವೆಲ್ಲ ಅನುಭಾವದ ನೆಲೆಯಲ್ಲಿರುವ, ಅದ್ವೈತ ಸ್ಪರ್ಶದ ಗೀತಗಳು ಎನ್ನಬಹುದು. ಕೆಲವು ಪದ್ಯಗಳನ್ನು ನೋಡಬಹುದು :

ಎರಡು ದಂಡೆಗೂ ಒಂದೆ ಶ್ರುತಿಯು, ಹೂವೆರಡಕೊಂದೆ ಗಂಧ
ಎರಡು ದೀಪದಲಿ ಒಂದೆ ಬೆಳಕು ಬೆಳಗುವದು ಎನಿತು ಚಂದ!
ಎರಡು ತುಟಿಗಳೊಳಗೊಂದೆ ಮಾತು, ಕಣ್ಣೆರಡಕೊಂದೆ ನೋಟ
ಎರಡರಲ್ಲಿ ಒಂದಾಗಿ ನಡೆದಿಹುದು ಸೃಷ್ಟಿಯೆಂಬ ಮಾಟ

(ಅಮೃತಾನುಭವ)

ತಾನಿರುವದೊಂದು ತಾನರಿವದೊಂದು ಎರಡೊಂದು ಕೂಡಗೊಂಡು
ಮುದವಾಗಿ ನಲಿದು, ತಕ್ಕೈಸಿ ಒಲಿದು, ಎದೆಹಾಲನುಂಡುಕೊಂಡು
ಸ್ಥಿತಪ್ರಜ್ಞೆಯಲ್ಲಿ ಸಂಚರಿಸಲೆಂದು ವಿಜ್ಞಾನ ನೇತ್ರವಾಗಿ
ಮನ ಪ್ರಾಣಗಳಲಿ ಮೈಯಾಡಿಸುವದು ಸುಜ್ಞಾನಕ್ಷೇತ್ರವಾಗಿ

(ಆತ್ಮಪ್ರಜ್ಞೆ)

ಏನಾಗದೇನೆ ತಾನೆಲ್ಲವಾಗಿ
ಮೌನವನೆ ಸೊಲ್ಲ ಮಾಡ
ತಾನಿಲ್ಲದನ್ನೆ ತಾ ಪಡೆಯಬೇಕು
ತಾನಾಗದೇನೆ ಕೂಡ

ನಾ ನಿನ್ನ ನುಂಗಿ, ನೀ ನನ್ನ ನುಂಗಿ
ಇಂಗಿತ್ತು ಸರ್ವನಾಮ
ಆತ್ಮಾರ್ಥವಾಗಿ ಆ ನಾನು ನೀನು
ತಣಿಸಿತ್ತು ಆತ್ಮಕಾಮ

ಬೇಂದ್ರೆಯವರ ಇಂಥ ಪದ್ಯಗಳಲ್ಲಿ ಗಮನಿಸಬೇಕಾದ ಒಂದು ಸಂಗತಿಯಿದೆ. ಅದು ಈ ಕವನಗಳ ಮುಕ್ತ ಚೌಕಟ್ಟಿನ ಗುಣ. ಪ್ರತಿಯೊಂದು ಪದ್ಯವೂ ಒಂದೊಂದು ಅದ್ವೈತದ ಹರಳಂತೆ ಹೊಳೆಯುತ್ತದೆ. ಆದರೆ ಒಂದೇ ಭಾವ ಎಲ್ಲ ಪದ್ಯಗಳಲ್ಲಿ ಪುನರುಕ್ತಗೊಂಡಂತೆ ಭಾಸವಾಗುತ್ತದೆ. ಕೆಲವೆಡೆ ಮಾತಿನ ಚಮತ್ಕಾರವೇ ಪದ್ಯಕ್ಕೆ ರುಚಿ ತಂದುಕೊಟ್ಟಿರುವುದೂ ಉಂಟು. ಎಂ. ವಿ. ಸೀತಾರಾಮಯ್ಯನವರಂಥ ಕವಿಗಳು ಕೆಲವು ಕವಿತೆಗಳಲ್ಲಿ ಸಾಂದರ್ಭಿಕವಾಗಿ ಈ ತತ್ತ್ವವನ್ನು ಹೊಳೆಸುವುದೂ ಉಂಟು. ನಿದರ್ಶನಕ್ಕೆ ಕರ್ನಾಟಕ ರಾಜ್ಯೋತ್ಸವ ಸಂದರ್ಭದ 'ನಾವೆಂಬರು ಒಂದು' ಎಂಬೊಂದು ಕವಿತೆಯಲ್ಲಿ ಇದನ್ನು ಹೊಳೆಸಿದ್ದಾರೆ. "ಒಂದೆಂದರೆ ಬಾಳು। ಎರಡಾದರೆ ಹೋಳು। ಕಾಣಾನೇಕದಲ್ಲಿ ಏಕ–ಅದೇ ದಿವ್ಯ ಲೋಕ. ನಾಕ।" ಎಂಬ ಮಾತುಗಳಲ್ಲಿ ಐಕ್ಯಭಾವ, ಒಗ್ಗಟ್ಟು ಕುರಿತು ಹೇಳುವಾಗ

ಈ ಸಂಗತಿಯನ್ನೂ ಮಿಂಚಿಸಿದ್ದಾರೆ. ಈ ಸಂಬಂಧದ ಅನುಮಾನ ಪರಿಹಾರಕ್ಕೋ ಎಂಬಂತೆ ಕವನದ ನಾಲ್ಕನೆಯ ಭಾಗದ "ಏಕಂ ಸತ್ ವಿಪ್ರಾಃ ಬಹುಧಾ ವದಂತಿ । ಏಕದಲ್ಲನೇಕತೆಯು ಜೀವಭಾವವೊಡೆದು ರಮ್ಯ । ಏಕ ಸತ್ಯ, ಅದೇ ಕಾವ್ಯ । ಅನೇಕತೆಯು ಮಣಿಗಣದಲಿ । ಏಕಸೂತ್ರ ಪರಬ್ರಹ್ಮ । ಸೀಮಿತ ತ್ರಿಗುಣದಲಿ । ನಿರ್ಗುಣದಲಿ ನಿಸ್ಸೀಮ । ಮರೆಯಾಗಿಹ ಒಳತನದಲಿ। ಕಾಣಬೇಕು ನಾವು ನಮ್ಮ । ಒಂದುತನವ, ಬಂಧುತನವ ।" ಎಂಬ ಮಾತುಗಳಲ್ಲಿ ತಾತ್ವಿಕತೆಯ ಕಿಡಿಯನ್ನು ಉಜ್ವಲಗೊಳಿಸಿದ್ದಾರೆ. ಜಗತ್ತು–ಮಾಯೆ ಎಂಬ ಅದ್ವೈತದ ಕಲ್ಪನೆ ಎಂ.ವಿ.ಸೀ. ಅವರ "ಚಿತ್ತೆ ಸತ್ಯ" ಎಂಬ ಕವನದಲ್ಲಿ ಮೂರ್ತಗೊಂಡಿದೆ. ಸುಪ್ತಮನಸ್ಸು ಕಾಣುವ ಬಾನು, ಮಿಂಚು, ಮಳೆ, ಕಣ್ಣು, ಮೆಯ್ಯಿಗಳ ಕನಸು ಕವಿಗೆ "ಚಿತ್ತದೊಳೇ ಸಿಡಿಲು, ವೃಷ್ಟಿ । ಚಿತ್ತದೊಳೇ ಜಡದ ಸೃಷ್ಟಿ । ಆ ಪರಾತ್ ಪರಮಚಿತ್ತ ಕಂಡ ಕನಸೊ ಈ ಸಮಸ್ತ । ಕಾಂಬ ಸೃಷ್ಟಿ ಚಿತ್ತೆ ಸತ್ಯ" ಎಂಬ ಅನುಭವ ಉಂಟು ಮಾಡುತ್ತದೆ. ಇಂಥ ಭಾವವಿರುವ ಪದ್ಯಗಳು ಇತರ ಕೆಲವು ಕವಿಗಳಲ್ಲೂ ಹುಡುಕಿದರೆ ದೊರೆಯಬಹುದು.

ಈ ವರೆಗಣ ಪರಿಶೀಲನೆಯಿಂದ ಈ ಕೆಲವು ಸಂಗತಿಗಳು ಹೊರಪಡುತ್ತವೆ: (೧) ನವೋದಯ ಸಾಹಿತ್ಯದಲ್ಲಿ ಅದ್ವೈತವನ್ನೇ ಪ್ರೇರಣೆಯಾಗಿಸಿಕೊಂಡು ಡಿವಿಜಿಯವರನ್ನುಳಿದು ಇತರರಾರೂ ಸಾಹಿತ್ಯರಚನೆ ಮಾಡಿಲ್ಲ. (೨) ಕುವೆಂಪು, ಬೇಂದ್ರೆ, ಎಂ.ವಿ.ಸೀ. ಇಂಥ ಕವಿಗಳಲ್ಲಿ ಬರುವ ಅದ್ವೈತದ ಹೊಳಹು ಅವರಲ್ಲಿ ಸಿದ್ಧಾಂತವಾಗಿಯಾಗಲಿ, ಸಾಹಿತ್ಯಿಕ ಧೋರಣೆಯಾಗಿಯಾಗಲಿ ಬರುವುದಿಲ್ಲ. (೩) ನಮ್ಮ ನವೋದಯ ಪಂಥದ ಎಲ್ಲ ಹಿರಿಯ ಕವಿಗಳಿಗಿರುವ ಸಾಮಾನ್ಯವಾದ ಹಿಂದೂ ದರ್ಶನದ ಫಲವಾಗಿ ಇಂಥ ಭಾವಗಳು ಇವರ ಸಾಹಿತ್ಯದಲ್ಲಿ ಕಾಣಿಸಿಕೊಂಡಿವೆ. (೪) ಕವನಗಳಲ್ಲಿ ಸ್ವಲ್ಪಮಟ್ಟಿಗೆ ಬೇಂದ್ರೆಯವರನ್ನುಳಿದು ಇತರರಲ್ಲಿ ಇದೊಂದು 'ಸಂಚಾರಿ'ಭಾವವಾಗಿ ಮಾತ್ರ ಬರುತ್ತದೆ.

ಅದ್ವೈತ ತತ್ತ್ವವನ್ನು ಪ್ರತಿಪಾದಿಸುವ ಕನ್ನಡ ಗ್ರಂಥಗಳು

—ಡಿ. ಆರ್. ವೆಂಕಟರಮಣನ್

ಕವಿಚರಿತ್ರೆಗಳಲ್ಲಿ ಕನ್ನಡದಲ್ಲಿರುವ ಅದ್ವೈತ ಗ್ರಂಥಗಳ ಉಲ್ಲೇಖವಿದ್ದರೂ ಅಂಥ ಗ್ರಂಥಗಳನ್ನು ಕುರಿತ ಪ್ರತ್ಯೇಕವಾದ ಪರಿಶೀಲನೆ ನಡೆದಿಲ್ಲವೆಂದು ತೋರುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದವರು ಪ್ರಕಟಿಸಿದ "ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ" ಗ್ರಂಥಮಾಲೆಯಲ್ಲಿ "ಶಾಸ್ತ್ರ ಸಾಹಿತ್ಯ"ವನ್ನು ಕುರಿತು ಬರೆಯುವಾಗ (1975) ಶ್ರೀ ಎಂ. ವಿ. ಸೀತಾರಾಮಯ್ಯನವರು ಅದ್ವೈತ ಗ್ರಂಥಗಳನ್ನು ಕುರಿತು ಸಂಕ್ಷೇಪವಾಗಿ ಬರೆದಿದ್ದಾರೆ. ಹಾಗೆಯೇ ಅವರು "ಉತ್ತರೋತ್ತರ ಕಾಲೀನ ಹರಿದಾಸರು ಮತ್ತು ಅನುಭಾವ ಕವಿಗಳು" ಎಂಬ ಗ್ರಂಥದಲ್ಲಿ (1988) ಈ ಬಗೆಯ ಗ್ರಂಥಗಳನ್ನು ಕುರಿತು ಇನ್ನು ಸ್ವಲ್ಪ ಹೆಚ್ಚು ವಿವರ ನೀಡಿ ತುಂಬ ಉಪಕಾರ ಮಾಡಿದ್ದಾರೆ.

ಕನ್ನಡದಲ್ಲಿ ಬಂದಿರುವ ಅದ್ವೈತ ಗ್ರಂಥಗಳನ್ನು ಕುರಿತು ಹೇಳುವುದಕ್ಕೆ ಮುಂಚೆ, ಪೀಠಿಕಾರೂಪವಾಗಿ, ಅವುಗಳಲ್ಲಿ ಕಾಣಬರುವ ಕೆಲವು ಸಾಮಾನ್ಯ ಗುಣಗಳನ್ನು ಹೀಗೆ ಗುರುತಿಸಬಹುದು:

1) "ಲೋಕೋಪಕಾರದ ವಿಸ್ತೀರ್ಣವನ್ನು ಅಳೆದು ನೋಡಿದರೆ ಬಸವಣ್ಣ ಅಲ್ಲಮರುಗಳಿಂದಲೂ ಪುರಂದರ ಕನಕರುಗಳಿಂದಲೂ ಆಗಿರುವಷ್ಟು ವೇದಾಂತ ತತ್ತ್ವಪ್ರಚಾರವು ಅನೇಕ ಉಪನಿಷದ್ವ್ಯಾಖ್ಯಾತರುಗಳಿಂದ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು." ಎಂದು ಡಿ.ವಿ.ಜಿ.ಯವರು ಅಭಿಪ್ರಾಯಪಟ್ಟಿದ್ದಾರೆ. ಕನ್ನಡದಲ್ಲಿರುವ ಅದ್ವೈತ ಗ್ರಂಥಗಳು ಹಾಗೆ ವೇದಾಂತ ಮತವನ್ನು ಸಾಮಾನ್ಯ ಜನರ ಹತ್ತಿರಕ್ಕೆ ತಂದಂಥವುಗಳು.

2) ಆ ಗ್ರಂಥಕರ್ತರು ಭಾಷೆಯನ್ನು ಹದಮಾಡುವುದರಲ್ಲಿ ಸಹಾಯ ಮಾಡಿದ್ದಾರೆ. ಸಂಸ್ಕೃತದಲ್ಲಿದ್ದ ವಿಚಾರಗಳನ್ನು ಜನರಿಗೆ ತಿಳಿಸುವುದಕ್ಕಾಗಿ ಕನ್ನಡವನ್ನು ಪಳಗಿಸಿಕೊಂಡು ಭಾಷೆಯ ಬೆಳವಣಿಗೆಗೂ ಉಪಕರಿಸಿದ್ದಾರೆ.

3) ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು "ತಮ್ಮ ವೇದಾಂತ ವಿಚಾರದ ಇತಿಹಾಸ" ಗ್ರಂಥದಲ್ಲಿ ವೇದಾಂತ ಶಾಸ್ತ್ರಕ್ಕೆ ಬಂದ ದುರ್ದಶೆಯನ್ನು ವಿವರಿಸುತ್ತಾ, "ವೇದಾಂತ ವಿಚಾರವು ಮೊದಮೊದಲು ಅನುಭವ ಪ್ರಧಾನವಾಗಿರುತ್ತಿದ್ದು ಬರುಬರುತ್ತಾ ಶುಷ್ಕತರ್ಕ ಪ್ರಧಾನವಾಗಿಯೂ, ಹುರುಳಿಲ್ಲದ ಶಬ್ದಾರ್ಥ ವಿಚಾರ ಮಾತ್ರವಾಗಿಯೂ ಮಾರ್ಪಡುತ್ತಾ ಬಂದಿದೆಯೆಂಬುದು,

ವೇದಾಂತ ವಿಚಾರದ ಇತಿಹಾಸದಲ್ಲಿ ನಮಗೆ ತಿಳಿದುಬರುವ ಒಂದು ಮುಖ್ಯ ವಿಷಯ ವಾಗಿದೆ" ಎಂದಿದ್ದಾರೆ. ಆದರೆ ಕನ್ನಡ ಅದ್ವೈತ ಪ್ರತಿಪಾದಕ ಗ್ರಂಥಗಳು ಇದಕ್ಕೆ ವಿನಾಯಿತಿಯಾಗಿವೆ ಎಂದು ಹೇಳಬಹುದು. ಅವುಗಳಲ್ಲಿ "ಥಿಯೋರಿ"ಗಿಂತ ಅನುಭವಕ್ಕೆ ಹೆಚ್ಚು ಪ್ರಾಶಸ್ತ್ಯ ಮತ್ತು ವಾದ ವಿವಾದಗಳೋ ಖಂಡನೆಗಳೋ ಇರುವ ಗ್ರಂಥಗಳು ಬಹು ಸ್ವಲ್ಪ.

4) ಅದ್ವೈತ ತತ್ತ್ವ ಮಾತುಗಳಿಗೆ ಎಟುಕದ ವಿಷಯ. ಕೇನೋಪನಿಷತ್ತಿನ ಋಷಿಯೇ "ನ ವಿದ್ಮೋ ನ ವಿಜಾನೀಮೋ ಯಥೈತದನು ಶಿಷ್ಯಾತ್" (ಇದನ್ನು ನಾವರಿಯೆವು. ಹೇಗೆ ತಿಳಿಯ ಹೇಳಬೇಕೋ ನಮಗೆ ತಿಳಿಯದು) ಎಂದಿದ್ದಾರೆ. "ಒರಟು ಮಾನವ ಭಾಷೆ" ಎಂಬ ಮಾತುಗಳು ಇಲ್ಲಿ ಸಂಪೂರ್ಣವಾಗಿ ಅನ್ವಯಿಸು ತ್ತವೆ. ಆದರೆ ತತ್ತ್ವವನ್ನು ತಿಳಿಸಲು ಇರುವ ಸಾಧನ ಒಂದೇ, ಅದು ಭಾಷೆ. ಆದ್ದರಿಂದ ಅದ್ವೈತವನ್ನು ಕುರಿತು ಹೇಳಲು ಹೊರಟ ಮಹಾಪುರುಷರು ತತ್ತ್ವ ವನ್ನೂ ಅನುಭವವನ್ನೂ ವಿಧವಿಧವಾಗಿ, ದೃಷ್ಟಾಂತ ಉಪಮೆಗಳ ಸಹಾಯದಿಂದ ವಿವರಿಸಿದ್ದಾರೆ. ಕೆಲವು ಸಲ ಪುನರುಕ್ತಿ ಹೆಚ್ಚಾಯಿತೋ ಎನ್ನಿಸುವಷ್ಟರ ಮಟ್ಟಿಗೆ ವಿವರಣೆ ಆಗಿದೆ. ಆದರೆ ಇಲ್ಲಿ ಪುನರುಕ್ತಿ ದೋಷವಲ್ಲ.

5) ಇಲ್ಲಿ ಎಲ್ಲರು ಶ್ರುತಿಯ ಪ್ರಾಮಾಣ್ಯವನ್ನು ಅಂಗೀಕರಿಸಿದವರೇ. ಗುರು ಮುಖದಿಂದ ತತ್ತ್ವೋಪದೇಶವಾಗಬೇಕೆಂದು ಹೇಳುವವರೇ.

6) ಅದ್ವೈತದ ಗುರಿ ಬ್ರಹ್ಮವಸ್ತುವಿನ ಸಾಕ್ಷಾತ್ಕಾರವಾದರೂ, ಅದಕ್ಕಾಗಿ ಸಾಧಕರು ಅನುಸರಿಸುವ ಮಾರ್ಗ ಅವರವರ ಅಂತರಂಗ ಸಿದ್ಧತೆ, ಸಾಮರ್ಥ್ಯ ಮತ್ತು ಒಲವುಗಳನ್ನು ಅವಲಂಬಿಸಿರುತ್ತದೆ. ಹಾಗೆ ಉಪಾಸನೆ, ಭಕ್ತಿ, ಜ್ಞಾನ, ಯೋಗ, ಮುಂತಾದ ಮಾರ್ಗಗಳ ವಿವರಣೆ ಒಂದೊಂದು ಗ್ರಂಥದಲ್ಲೂ ಬರುತ್ತದೆ. ಮತ್ತು ಅದ್ವೈತಿಗೆ ಶಿವ-ವಿಷ್ಣು ಭೇದವಿಲ್ಲ.

7) ಅದ್ವೈತ ತತ್ತ್ವ ಪ್ರತಿಪಾದನೆ ಅನುಷ್ಠಾನ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿಲ್ಲ. ಎಲ್ಲ ವರ್ಣಗಳ ಸಾಧಕರನ್ನೂ ಇಲ್ಲಿ ನಾವು ಕಾಣಬಹುದು.

8) ಕನ್ನಡದಲ್ಲಿ ಅದ್ವೈತವನ್ನು ಕುರಿತು ಬರೆದ ಅನೇಕ ಕವಿಗಳು ಪ್ರಾಯಿಕ ವಾಗಿ ನಿಜಗುಣ ಶಿವಯೋಗಿಗಳಿಂದ ಮತ್ತು ಮಹಲಿಂಗರಂಗನಿಂದ ಪ್ರಭಾವಿತ ರಾದವರು.

ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿರುವ ಅದ್ವೈತ ಪ್ರತಿಪಾದಕ ಗ್ರಂಥಗಳನ್ನೂ ಅದರ ಕರ್ತೃಗಳನ್ನೂ ನೋಡಬಹುದು.

ಅನುಭವ ಮುಕುರ

1450ರ ಸುಮಾರಿನಲ್ಲಿದ್ದ ಪರಂಜ್ಯೋತಿ ಕವಿ 'ಅನುಭವ ಮುಕುರ' ಎಂಬ ಅದ್ವೈತ ಸಿದ್ಧಾಂತ ಗ್ರಂಥವನ್ನು ಬರೆದಿದ್ದಾನೆ. ತತ್ತ್ವಪ್ರಧಾನವಾಗಿರುವುದರಿಂದ ತ್ರಿಪದಿಯಲ್ಲಿ ರಚಿತವಾಗಿದ್ದರೂ ಇದರ ಶೈಲಿ ಸಾಮಾನ್ಯ ಜನರಿಗೆ ಸ್ವಲ್ಪ ದೂರವೆನಿಸುತ್ತದೆ. ಆದರೆ ಇದರ ಚಿಂತನೆ ನಿಜಗುಣ ಶಿವಯೋಗಿಗಳನ್ನೂ ಮಹಲಿಂಗರಂಗನನ್ನೂ ಪ್ರಚೋದಿಸಿದೆ ಎನ್ನಬಹುದು.

ಅನುಭವಾಮೃತ

ಕನ್ನಡದಲ್ಲಿ ಜನಪ್ರಿಯವಾದ ಅದ್ವೈತ ಪ್ರತಿಪಾದಕ ಗ್ರಂಥಗಳಲ್ಲಿ ಅಗ್ರಸ್ಥಾನ 'ಅನುಭವಾಮೃತ'ಕ್ಕೆ ಸಲ್ಲುತ್ತದೆ. ಈ ಜನಪ್ರಿಯವಾದ ಗ್ರಂಥದ ಕರ್ತೃ ರಂಗನಾಥ. ಅವನ ತಂದೆಯ ಹೆಸರು ಮಹಲಿಂಗ ದೇವ. ಈತನು 17ನೆಯ ಶತಮಾನದ ಮಧ್ಯಭಾಗದಲ್ಲಿದ್ದವನು. ಹೊಸಕೆರೆ ಚಿದಂಬರಯ್ಯನವರು ಇದಕ್ಕೆ "ಸರ್ವಾರ್ಥ ಸಂದರ್ಶಿನೀ" ಎಂಬ ಟೀಕೆಯನ್ನು ಬರೆದಿದ್ದಾರೆ. ಶ್ರೀಮತ್ಪರಮಹಂಸ ಬಾಲಕೃಷ್ಣ ಬ್ರಹ್ಮಾನಂದ ರಾಜಯೋಗಿಗಳು ಈ ಗ್ರಂಥವನ್ನು ಸಂಸ್ಕೃತಕ್ಕೂ, ಕರಣಂ ಅಶ್ವತ್ಥರಾವ್ ಅವರು ತೆಲುಗಿಗೂ ಈ ಗ್ರಂಥವನ್ನು ಅನುವಾದ ಮಾಡಿದ್ದಾರೆ.

'ಅನುಭವಾಮೃತ' ಅದ್ವೈತವನ್ನು ಕುರಿತ ಒಂದು ಸಮಗ್ರ ಗ್ರಂಥ. ಯಾವ ವಿವರಗಳನ್ನೂ ಬಿಡದೆ, ವಿವಾದಗಳಿಗೆ ಹೋಗದೆ, ತತ್ತ್ವವನ್ನೂ ಅನುಷ್ಠಾನದ ಬಗೆಯನ್ನೂ ಬಹು ಲಲಿತವಾದ ಶೈಲಿಯಲ್ಲಿ ತಿಳಿಸುವ ಗ್ರಂಥ. ಈ ಗ್ರಂಥದಲ್ಲಿ 804 ಭಾಮಿನೀ ಷಟ್ಪದಿಯ ಪದ್ಯಗಳಿವೆ.

ಕೈವಲ್ಯ ನವನೀತ

19ನೆಯ ಶತಮಾನಕ್ಕೆ ಸೇರಿದವರೆಂದು ಊಹಿಸಲಾಗಿರುವ ಶಂಕರಾನಂದ ಯೋಗೀಶ್ವರರಿಂದ ವಿರಚಿತವಾದ ಗ್ರಂಥ ಕೈವಲ್ಯ ನವನೀತ. 1928ರ ಹೊತ್ತಿಗೇ ಇದು 10ನೆಯ ಮುದ್ರಣವನ್ನು ಕಂಡಿದೆಯೆಂದರೆ ಇದರ ಅಂದಿನ ಜನಪ್ರಿಯತೆಯನ್ನು ಊಹಿಸಿಕೊಳ್ಳಬಹುದು. ಈ ಗ್ರಂಥದಲ್ಲಿ "5 ಪ್ರಕರಣಂಗಳಿಂದ ತತ್ತ್ವಂಗಳು 126, 581 ವೃತ್ತಗಳು, 20 ಸೀಸಗಳು 20 ಕಂದವಚನ ಮುಂತಾಗಿ 83 ಶ್ಲೋಕ 21ಕ್ಕೆ ಒಪ್ಪುವ 265_725 ವಚನಂಗಳಿವೆ". ಶಂಕರಾನಂದರು "ಉತ್ತರ ಕೈವಲ್ಯ ನವನೀತ", "ರಾಮ ತತ್ತ್ವಾಮೃತ", "ರಾಮಭಕ್ತಿಸಾರ", "ಭಕ್ತಿಕಲ್ಪದ್ರುಮ", "ಪಾರ್ವತೀ ಪಂಚರತ್ನ", "ಮುಕ್ತಿಕಾಂತಾ ಕಲ್ಯಾಣ", "ಹರಿಹರ ಲೀಲಾಮೃತ" ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆಂದು ಹೊಸಕೆರೆ ಚಿದಂಬರಯ್ಯನವರು

"ಅನುಭವಾಮೃತ"ದ ಮುನ್ನುಡಿಯಲ್ಲಿ ಸೂಚಿಸಿದ್ದಾರೆ. ಶಂಕರಾನಂದರದು ವಿಚಾರಮಾರ್ಗವಾದರೂ ಅಲ್ಲಿ ಸಾಂಖ್ಯ ಯೋಗಗಳ ಮಿಶ್ರಣವೂ ಕಂಡುಬರುತ್ತದೆ.

ತಿಮ್ಮಪ್ಪದಾಸ

ವೇದಾಂತ ವಿಚಾರಮಾರ್ಗದೊಂದಿಗೆ ಉಪಾಸನಾಮಾರ್ಗವನ್ನು ಸಮನ್ವಯ ಮಾಡಿಕೊಂಡ ವಾಗ್ಗೇಯಕಾರ, ಭಕ್ತ, ಸಾಹಿತಿ, ಮಹಾಸಾಧಕ ತಿಮ್ಮಪ್ಪದಾಸರು. ತಿಮ್ಮಪ್ಪದಾಸರು 1770 ರಿಂದ 1860 ಎಂದು ತಿಮ್ಮಪ್ಪದಾಸರ ಸಂತತಿಗೆ ಸೇರಿದ ಎಂ. ವಿ. ಸೀತಾರಾಮಯ್ಯನವರು ಊಹಿಸಿದ್ದಾರೆ. ಸೀತಾರಾಮಯ್ಯನವರು ತಿಮ್ಮಪ್ಪದಾಸರ 'ಅರ್ಚನ' ಎಂಬ ಪೂಜಾವಿಧಾನದ ಕೀರ್ತನಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ 108 ಪೂಜಾವಿಧಾನದ ಕೀರ್ತನೆಗಳು ಶ್ರೀ ಕೃಷ್ಣಾಷ್ಟೋತ್ತರದ 108 ನಾಮಗಳಿಗೆ ಸರಿಯಾಗಿ ರಚಿಸಲ್ಪಟ್ಟಿವೆ. ಆದಿತ್ಯ ವಾರದಿಂದ ಶನಿವಾರದವರೆಗೂ ದಿನದಿನವೂ ಅರ್ಚನೆಗೆ ಅನುಕೂಲಿಸುವಂತೆ ಕೀರ್ತನೆ ಗಳು ರಚಿತವಾಗಿವೆ, ಪರತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲು ಹೃದಯದ ಮಾರ್ಗ ವನ್ನು ಕಂಡುಕೊಂಡ ಸಾಧಕರೊಬ್ಬರು ತಿಮ್ಮಪ್ಪದಾಸರು. ಅವರ ಇನ್ನೊಂದು ಬೃಹದ್ಗ್ರಂಥ "ಶ್ರೀಕೃಷ್ಣಲೀಲೆ" ಈಗಾಗಲೇ ಪ್ರಕಟವಾಗಿದೆ, ಅವರ "ಪರಬ್ರಹ್ಮ ಪ್ರಕಾಶಿಕೆ" ಗದ್ಯಗ್ರಂಥ ಇನ್ನೂ ಮುದ್ರಣವಾಗಿಲ್ಲ. ತಿಮ್ಮಪ್ಪದಾಸರ ಮಗ ನಾರಾಯಣದಾಸರೂ (1823-1902) ವಾಗ್ಗೇಯಕಾರರೇ. ಅವರ ಕೀರ್ತನೆ ಗಳಲ್ಲಿ ಸ್ಪಷ್ಟವಾಗಿ ಅದ್ವೈತ ತತ್ತ್ವ ಪ್ರತಿಪಾದನೆ ಕಂಡುಬರದಿದ್ದರೂ ಅನನ್ಯ ಭಕ್ತಿ ಯಿಂದ ಭಗವದಾರಾಧನೆ ಮಾಡಿದ ಹೃದಯ ಸ್ಪಂದನಗಳನ್ನು ನಾವು ಅವರ ಕೀರ್ತನೆಗಳಲ್ಲಿ ಕಾಣುತ್ತೇವೆ.

ಶಂಕರಾನಂದ

ಶಂಕರಾನಂದರೆಂದು, ಶಂಕರ ದಾಸರೆಂದು ಪ್ರಖ್ಯಾತರಾಗಿದ್ದ ಮೈಸೂರು ವೇದಾಂತ ಶಿವರಾಮ ಶಾಸ್ತ್ರಿಗಳು ಅದ್ವೈತ ತತ್ತ್ವ ಪ್ರಚಾರಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದ ಮಹಾಪುರುಷರು. ಗದ್ಯಪದ್ಯಗಳಲ್ಲಿ ಅವರು ರಚಿಸಿದ ಗ್ರಂಥಗಳು ಅನೇಕ. ತತ್ತ್ವಪದಗಳನ್ನು ಕೀರ್ತನೆಗಳನ್ನು ರಚಿಸಿದ್ದಾರೆ. ಅವರ ಗ್ರಂಥಗಳೆಲ್ಲವೂ ಜನಪ್ರಿಯವಾಗಿದ್ದುವು. "ಬ್ರಹ್ಮಾನಂದ ಬೋಧೆ", "ಶಂಕರಾನಂದ ಪದ್ಧತಿ", "ವೇದಾಂತ ಜ್ಞಾನರತ್ನಪ್ರಭಾ" "ಅಮನಸ್ಕ ರಾಜ ಯೋಗಾನಂದ ಬೋಧೆ" ಮುಂತಾದ ಅನೇಕ ಗ್ರಂಥ ಕರ್ತೃಗಳು ಅವರು.

ಇತರ ಗ್ರಂಥಗಳು

1909ರಲ್ಲಿ ಮದರಾಸಿನಲ್ಲಿ "ಗರ್ಭಗೀತೆ" ಎಂಬ 102 ಭಾಮಿನಿ ಷಟ್ಪದಿ

ಗಳಲ್ಲಿ ಗ್ರಂಥ ಪ್ರಕಟವಾಗಿದೆ. [illegible] (1888 [illegible]) ಕೃಷ್ಣ[illegible]ರಿಂದ ರಚಿತವಾಗಿದೆ. "[illegible]" ಎಂಬ [illegible] ಅದ್ವೈತದ ಪ್ರತಿಪಾದಿಸಿರುವುದು. [illegible] "ತತ್ತ್ವ [illegible]" (1914) ಎಂಬ ಗ್ರಂಥ ಅದ್ವೈತದ [illegible] ಗಳನ್ನು ವಿವರಿಸುತ್ತದೆ. 126 ಪುಟಗಳ [illegible] ಅದ್ವೈತದ [illegible] ಮಾಡುತ್ತದೆ. [illegible] "[illegible]" ಎಂಬ ಗ್ರಂಥವನ್ನು [illegible] (1875).

[illegible] "ವೇದಾಂತ [illegible]". [illegible] "ಅದ್ವೈತ [illegible]". [illegible] "ಅಧ್ಯಾತ್ಮ [illegible]" (19[illegible]) [illegible] "ಅದ್ವೈತ ದರ್ಶನ" (1979) ಗ್ರಂಥಗಳನ್ನು ಇಲ್ಲಿ [illegible]. "[illegible]" ಎಂಬ ಗ್ರಂಥ ಅಧ್ಯಾತ್ಮ [illegible]. [illegible] ಅದ್ವೈತ [illegible] ಗ್ರಂಥಗಳನ್ನು ಪ್ರಕಟಿಸಿದ್ದನ್ನು ಇಲ್ಲಿ ಹೇಳಬಹುದು. [illegible] "[illegible]", "[illegible]" ಗ್ರಂಥಗಳನ್ನು [illegible] ಅನುವಾದಿಸಿದ್ದಾರೆ.

ಹೊಸತಲೆ ಲೇಖಕರು

[illegible] ಗ್ರಂಥಗಳಿಂದ ಅನುವಾದಗಳಿಂದ [illegible] ಅಧ್ಯಾತ್ಮ [illegible] ಶ್ರೀ [illegible] ಸಂಸ್ಕೃತ [illegible]. [illegible] ಅಧ್ಯಾತ್ಮದಲ್ಲಿ [illegible] ಹೊಸತಲೆ ಲೇಖಕರು [illegible]. [illegible] 1938ರ [illegible]. [illegible] ಗ್ರಂಥಗಳು [illegible] "[illegible]". "[illegible]" "[illegible]" "ವೇದಾಂತದ [illegible]". "[illegible]". "ಭಾರತದ [illegible]" "[illegible]" ಮುಂತಾದವು.

ಗ್ರಂಥ ವಿಮರ್ಶೆ

1. ಸ್ವಾಮಿ ನಿರ್ಮಲಾನಂದ (ಸತ್ಯಶೋಧಕನ ಜೀವನ ಕಥಾವಳಿ)
ಲೇ : ಶಂಸ ಐತಾಳ; ಪ್ರ : ವಿಶ್ವಶಾಂತಿ ನಿಕೇತನ, ಅಂಚೆ : ಬಿ. ಆರ್. ಹಿಲ್ಸ್, ಚಾಮರಾಜನಗರ, 571313, ಪುಟಗಳು viii + 64. ಬೆಲೆ 10 ರೂ ; 1989.

2. Swamy Nirmalananda (A life in quest of truth) by K. S. Ramakrishna Rao, P. 41, Rs. 10.

ಈ ಎರಡು ಪುಸ್ತಕಗಳೂ ಸ್ವಾಮಿ ನಿರ್ಮಲಾನಂದರ ಜೀವನವನ್ನು ಕುರಿತ ಗ್ರಂಥಗಳು. ವಿಷಯ ನಿರೂಪಣೆಯೂ ಒಂದೇ ಬಗೆಯದಾಗಿರುವುದರಿಂದ ಕನ್ನಡದ ಪುಸ್ತಕವನ್ನು ಮಾತ್ರ ಇಲ್ಲಿ ಪರಿಶೀಲನೆಗೆ ಆರಿಸಿಕೊಂಡಿದೆ. ಕನ್ನಡದ ಪುಸ್ತಕದಲ್ಲಿ ಮೂರು ಭಾಗಗಳಿವೆ. ಜೀವನ, ವಿಚಾರ ಧಾರೆ ಮತ್ತು ನಾದಬ್ರಹ್ಮ ಉಪಾಸನೆ.

ಮೊದಲ ಭಾಗದಲ್ಲಿ ಸ್ವಾಮಿ ನಿರ್ಮಲಾನಂದರ ಜೀವನವಿಚಾರದ ದೀರ್ಘ ನಿರೂಪಣೆಯಿದೆ. ಕೇರಳದಲ್ಲಿ ಹುಟ್ಟಿ, ಅಂಚೆಯ ಇಲಾಖೆಯಲ್ಲಿ ಸೇವಾನಿರತ ರಾಗಿದ್ದು, ಎರಡನೆಯ ಮಹಾಯುದ್ಧ ಸಮಯದಲ್ಲಿ ಯೂರೋಪಿನಲ್ಲಿದ್ದು, ಮತ್ತೆ ಎಂಟು ವರ್ಷಕಾಲ ಭಾರತದ ವಿವಿಧ ಭಾಗಗಳಲ್ಲಿ ಸೇವೆಯಲ್ಲಿದ್ದು, ಅಂತರಂಗದಲ್ಲಿ ಆಧ್ಯಾತ್ಮಿಕ ಆಸಕ್ತಿಯನ್ನು ಬೆಳೆಸಿಕೊಂಡ ಸಾಧಕರು ಶ್ರೀ ನಿರ್ಮಲಾನಂದರು. ಭೂದಾನ ಚಳವಳಿಯ ಕಾಲದಲ್ಲಿ ವಿನೋಬಾ ಅವರ ಜೊತೆಯಲ್ಲಿ ಆಂಧ್ರಪ್ರದೇಶ ದಲ್ಲಿ ಪಾದಯಾತ್ರೆ ಮಾಡಿದರು.

ಅಧ್ಯಾತ್ಮದ ಶೋಧನೆಯು ಅವರನ್ನು ದೇಶವಿದೇಶಗಳಿಗೆ ಕರೆದೊಯ್ದಿತು. ಸುಮಾರು ಹದಿನೈದು ವರ್ಷಗಳ ಕಾಲ ವಿದೇಶಗಳಲ್ಲಿ ಆಧ್ಯಾತ್ಮಿಕ ವಿಷಯಗಳಿಗೆ ಪ್ರಾಧಾನ್ಯವಿದ್ದ ಕಡೆಗಳಲ್ಲೆಲ್ಲಾ ಸುತ್ತಾಡಿ, ವಾದವಿವಾದಗಳಲ್ಲಿ ಭಾಗವಹಿಸಿ. ಅನುಭಾವ ವಿಷಯದಲ್ಲಿ ತೀವ್ರಾನುಭವ ಪಡೆದ ಮಹಿಮಾವಂತರೊಡನೆ ಇದ್ದು, 1990ರ ವೇಳೆಗೆ ಯಾವುದೋ ಬೆಳಕು ಕಂಡ ಅನುಭವವನ್ನು ಪಡೆದರು. ಬಳಿಕ ಸ್ವದೇಶಕ್ಕೆ ಹಿಂದಿರುಗಿ ಬಿಳಿಗಿರಿರಂಗನ ಬೆಟ್ಟದಲ್ಲಿ ವಾಸಿಸತೊಡಗಿದರು. ಗಿರಿವನಗಳ ಆ ಪರಿಸರದಲ್ಲಿ ಹನ್ನೊಂದು ವರ್ಷಗಳವರೆಗೆ ಮೌನವ್ರತಧಾರಣೆಮಾಡಿ, ತಮ್ಮ ಆಂತರಿಕ ಶೋಧನೆಗೆ ಒಂದು ನಿಲುವನ್ನು ಅವರು ಕಂಡುಕೊಂಡಿದ್ದಾರೆ. ಭಾರತೀಯ ರಾದ ಪ್ರಾಚೀನ ದ್ರಷ್ಟಾರರ ಅಭಿಪ್ರಾಯಗಳಿಗೆ ಬೇರೆಯಲ್ಲದ, ವಿಶ್ವದೃಷ್ಟಿ ಯಿಂದಲೂ ಸಮರ್ಥಿಸಬಲ್ಲ ತಮ್ಮ ನಿಲುವಿಗೆ ಒಂದು ಪರಿಣಾಮವನ್ನು ಅವರು ಕಾಣುತ್ತಾರೆ.

ನಿರ್ಮಲಾನಂದರ ಆಶ್ರಮ ಪ್ರಾಚೀನ ಋಷಿಗಳ ಆಶ್ರಮಗಳನ್ನ ನೆನಪಿಗೆ ತರುತ್ತದೆ, ಎನ್ನುತ್ತಾರೆ ಶಂಸ ಐತಾಳರು. ಈ ಭಾಗದ ವಿವರಣೆ ತುಂಬ ಸ್ವಾರಸ್ಯವಾಗಿದೆ. ಸರಳಜೀವನದ ನಿರೂಪಣೆ ಹೃದಯಸ್ಪರ್ಶಿಯಾಗಿದೆ. ಅನೇಕ ಗ್ರಂಥಗಳನ್ನು ಬರೆದಿರುವ ಸ್ವಾಮೀಜೀ ತಮ್ಮ ಬರಹದಲ್ಲಿ ಜೆನ್ ಬೌದ್ಧಮತಕ್ಕೆ ಪ್ರಾಧಾನ್ಯ ನೀಡಿದ್ದಾರೆ. 'ಕಾವ್ಯಮತ' ಎಂಬ ಮತ್ತೊಂದು ಗ್ರಂಥ ಇದೇ ಬಗೆಯ ಬೇರೊಂದು ತತ್ವದ ನಿರೂಪಣೆಗೆ ದಾರಿಮಾಡಿದೆ.

ಎರಡನೆಯ ಭಾಗವಾದ 'ವಿಚಾರಧಾರೆ', ಈ ಗ್ರಂಥದ ಕೇಂದ್ರ, ಸ್ವಾಮೀಜೀ ತಮ್ಮ ವಿಚಾರದ ನಿರೂಪಣೆಗೆ ವಿವರಣೆ ನೀಡುತ್ತಾರೆ, ಹೀಗೆ:

"ಈ ಪುಸ್ತಕದಿಂದ ಗರಿಷ್ಠ ಪ್ರಯೋಜನ ಪಡೆಯಬಯಸುವಿರಾದರೆ ಗಮನಿಸಿ: ನಿಧಾನವಾಗಿ, ಲಕ್ಷ್ಯವಿಟ್ಟು ಓದಿ. ಇಲ್ಲಿ ಹೇಳಲಾದ ವಿಚಾರಗಳು ಮೊದಲ ನೋಟಕ್ಕೆ ಅತಿ ಸಾಮಾನ್ಯವೆನ್ನಿಸಬಹುದು. ಆದರೂ ನಿಮ್ಮ ಹಿಂದಿನ ಅನುಭವ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಯಾವುದೇ ಒಂದು ನಿರ್ದಿಷ್ಟ ವಿಚಾರ ಥಟ್ಟನೆ ನಿಮ್ಮ ಹೃದಯ–ಮನಸ್ಸುಗಳಿಗೆ ತಟ್ಟಿದರೆ ಆಗ ಕೆಲಕ್ಷಣ ಓದು ನಿಲ್ಲಿಸಿ. ಅದೇ ವಿಚಾರವನ್ನು ಕುರಿತು ಮರು ಚಿಂತನೆಮಾಡಿ. ಆ ಬಗೆಗಿನ ಈಗಿನ ನಿಮ್ಮ ಪ್ರತಿಕ್ರಿಯೆಗಳನ್ನು ಗುರುತುಹಾಕಿಕೊಳ್ಳಿ. ಮತ್ತೆ ಮತ್ತೆ ವಿಚಾರಮಾಡಿ. ಆ ವಿಚಾರ ಪೂರ್ತಿ ಮನದಟ್ಟಾದ ಅನಂತರವೇ ಮತ್ತೆ ನಿಮ್ಮ ಓದನ್ನು ಮುಂದುವರಿಸಿ."

ಈ ವಿವೇಕದ ಮಾತುಗಳು ಎಲ್ಲ ಚಿಂತನಶೀಲ ಬರಹಗಳಿಗೂ ಅನ್ವಯಿಸುವ ಮಾತುಗಳು. ಯಾವುದು ತತ್ವಪೂರ್ಣವೋ, ಯಾವುದು ಸಂಗ್ರಹ ಗುಣವುಳ್ಳದ್ದೋ, ಯಾವುದು ವಿಚಾರ ಪ್ರಚೋಧಕವೋ ಮತ್ಯಾವುದು ನೂತನ ಮಾರ್ಗದರ್ಶನವೋ, ಅಲ್ಲಲ್ಲಿ ಓದುಗ ತಾನೇ ತಾನಾಗಿ ಈ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಇಲ್ಲದಿದ್ದರೆ ಅದು ವಾಚನವಾಗುವುದಿಲ್ಲ: ಪುಟ ತಿರುಗಿಸುವ ಕ್ರಿಯೆ ಮಾತ್ರವಾಗುತ್ತದೆ. ಮನಸ್ಸಿಗೆ ಬೇಕಾದ ಶಿಕ್ಷಣ, ಮೌನಧ್ಯಾನ, ಆಲೋಚನೆ, ಧರ್ಮ, ಸಾಧನೆ, ಸಾಕ್ಷಾತ್ಕಾರ, ತಪಸ್ಸು, ನಿಸರ್ಗ, ಸಂಗೀತ ಮತ್ತು ನಾಟ್ಯ–ಮುಂತಾದ ಹಂತಗಳಲ್ಲಿ ದೊರಕುವ ಸ್ವಾಮೀಜೀಯವರ ಚಿಂತನೆಗಳು ಗಾಢವಾದ ಪ್ರಭಾವವುಳ್ಳವು. ಇವನ್ನು ಬರಹದಲ್ಲಿ ತಿಳಿಸಲಾಗುವುದಿಲ್ಲ. ಅವು ಅನುಭಾವವೇದ್ಯ – ಎಲ್ಲ ಆಧ್ಯಾತ್ಮಿಕ ಅನುಭವಗಳಂತೆ. ಮಾತಿಗೆ ದೊರಕುವುದಾದರೆ ಅದು ಇನ್ನೂ ಉನ್ನತಮಟ್ಟವನ್ನು ಮುಟ್ಟಿಲ್ಲವೆಂದೇ ತೀರ್ಮಾನ. ಈ ಭಾಗದ ಓದು ತುಂಬ ಪ್ರಯೋಜನಕರವಾಗಿದೆ.

ನಾದಬ್ರಹ್ಮದ ಉಪಾಸನೆ ಸಂಗೀತದ ಪ್ರಭಾವವನ್ನು ಕುರಿತ ವಿವರಣೆ. ಇದು ಬೇರೆ ಕಡೆಗಳಲ್ಲಿ ದೊರಕುವ ವಿಷಯಗಳ ನೂತನ ನಿರೂಪಣೆಯಾಗಿದೆ.

ನಾನು ಈ ಕನ್ನಡ ಗ್ರಂಥವನ್ನು ಓದಿ ಪ್ರಯೋಜನ ಹೊಂದಿದ್ದೇನೆ. ಆಸಕ್ತರು ಓದಿದರೆ ಇದೇ ಬಗೆಯ ಪ್ರಯೋಜನ ಲಭ್ಯ.

ಜಿ. ವೆಂಕಟಸುಬ್ಬಯ್ಯ

ಆವಿಷ್ಕರಣ (ಕವಿ ವಿನಾಯಕರ "ಭಾರತ ಸಿಂಧುರಶ್ಮಿ"ಯನ್ನು ಬಿಟ್ಟು ಅವರ ಉಳಿದ ಎಲ್ಲ ಕಾವ್ಯದ ಸಮೀಕ್ಷೆ) ಪ್ರಕಾಶಕರು: ವಿನಾಯಕ ವಾಙ್ಮಯ ಟ್ರಸ್ಟ್, ಬೆಂಗಳೂರು. ಪುಟ 5 + 398. ಬೆಲೆ : 100/- ರೂ.

ಇದು ಡಾ॥ ವಿನಾಯಕ ಕೃಷ್ಣ ಗೋಕಾಕರ 80ನೇ ಹುಟ್ಟುಹಬ್ಬಕ್ಕೆ ಅವರಿಗೆ ಅರ್ಪಿಸಿದ ವಿಮರ್ಶಗ್ರಂಥವೆಂದು ಹೇಳಲಾಗಿದೆ. ಮುನ್ನುಡಿ, ಪ್ರಸ್ತಾವನೆಗಳಲ್ಲಿಯೂ ಈ ಬರಹಗಳನ್ನು ವಿಮರ್ಶೆಗಳೆಂದೂ, "ಮಣ್ಣನ್ನು ಮಣ್ಣೆಂದೂ ಚಿನ್ನವನ್ನು ಚಿನ್ನವೆಂದೂ ಹೇಳುವದು ವಿಮರ್ಶೆಯ ಕರ್ತವ್ಯ"ವೆಂದೂ ಹೇಳಲಾಗಿದೆ. ಇಂತಹ ವಿಮರ್ಶೆ ಮಾಡುವವರು ಪಾಂಡಿತ್ಯದಲ್ಲಿಯೂ ಅನುಭವದಲ್ಲಿಯೂ ಮೂಲ ಲೇಖಕರಿಗೆ ಸಮಾನಸ್ಕಂಧರಾಗಿದ್ದರೆ ಮಾತ್ರ "ವಸ್ತುನಿಷ್ಠ ವಿಮರ್ಶೆ" ಸಾಧ್ಯ. ಇಲ್ಲಿ ಬರೆದಿರುವ ಮೂವತ್ತೆರಡು "ವಿಮರ್ಶೆ"ಗಳ ಲೇಖಕರಲ್ಲಿ ಯಾರೂ ಇಂತಹ ಪಾಂಡಿತ್ಯವನ್ನೂ ಅನುಭವವನ್ನೂ ಉಳ್ಳವರೆಂದು ಹೇಳುವಂತಿಲ್ಲ. ಅವರೆಲ್ಲರೂ ತಾವು "ವಿನಾಯಕ"ರ ಶಿಷ್ಯರೆಂದೂ ಆರಾಧಕರೆಂದೂ ಭಾವಿಸುತ್ತಾರೆಂದು ನನ್ನ ತಿಳುವಳಿಕೆ. ಕನ್ನಡದಲ್ಲಿ ವಿಮರ್ಶ ಸಾಹಿತ್ಯವಿಲ್ಲವೆಂಬ ಸಂಪಾದಕರ "ಪ್ರಲಾಪ"ವೂ ಸತ್ಯವಾದದ್ದೇ. ಏಕೆಂದರೆ ಅಂತಹ ವಿಮರ್ಶೆಗಳನ್ನು ಮಾಡುವವಕ್ಕೆ ತಕ್ಕ ವಿದ್ವತ್ತು, ಅನುಭವ, ರಸಗ್ರಹಣ ಶಕ್ತಿಯುಳ್ಳವರು ವಿಮರ್ಶೆಗಳನ್ನು ಬರೆಯುವದು ತಮ್ಮ ಗೌರವಕ್ಕೆ ಕಡಮೆಯೆಂದು ತಿಳಿಯುತ್ತಿರುವಂತೆ ತೋರುತ್ತದೆ. ಅಂಥವರು ಸಾಹಿತ್ಯ ಸೌಂದರ್ಯಗಳ ಮೀಮಾಂಸೆಗಳನ್ನು ಬರೆದಿರುವರೇ ಹೊರತು ಇನ್ನೊಬ್ಬರ ಕೃತಿಗಳ ಮೌಲ್ಯಮಾಪನಕ್ಕೆ ಕೈಹಚ್ಚಿಲ್ಲ. ಕ್ವಚಿತ್ತಾಗಿ ಹಿರಿಯ ಸಾಹಿತಿಗಳು ಬರೆದಿದ್ದರೂ ಅಂತಹ ಬರಹಗಳು ಕಿರಿಯರಿಗೆ ಉತ್ತೇಜನವೆಂದೋ ಆಶೀರ್ವಾದಗಳೆಂದೋ ಬರೆದಿರುವರಲ್ಲದೆ. ಬರಹಗಾರರೇ ಕಡಮೆಯಾಗಿರುವಲ್ಲಿ ಇದ್ದವರಲ್ಲಿಯೇ ದೋಷಾವಿಷ್ಕರಣ ಮಾಡುವದು ತರವಲ್ಲವೆಂದೂ ಪ್ರತಿಪಾದಿಸಿದ್ದಾರೆ.

ಈ ಸಂದರ್ಭದಲ್ಲಿ ಇಲ್ಲಿನ ಬರಹಗಳನ್ನು ಸಂಪಾದಕರು ವರ್ಣಿಸಿರುವ ರೀತಿಯ ವಿಮರ್ಶೆಗಳೆಂದು ಹೇಳಲಾಗುವದಿಲ್ಲ. ಅವನ್ನು ಪರಿಚಯಗಳೆಂದೋ, ಪ್ರಶಸ್ತಿಗಳೆಂದೋ. ಗೌರವಾರ್ಪಣೆಗಳೆಂದೋ ಮಾತ್ರ ಹೇಳಬಹುದು. "ಆವಿಷ್ಕರಣ" ಎಂಬ ಹೆಸರನ್ನು ಸಮರ್ಥಿಸುವದಕ್ಕೆ ಸಂಪಾದಕರು ಇಲ್ಲಿರುವವು "ವಿನಾಯಕರ ಕಾವ್ಯಾಂತರಂಗದ ಅನಾವರಣ"ವೆಂದು ಹೇಳಿದ್ದಾರೆ. ಇದು ಎಷ್ಟುಮಟ್ಟಿಗೆ ಸಾರ್ಥಕವೆಂಬುದನ್ನು ಮುಂದಿನ ಉದಾಹರಣೆಗಳಿಂದ ತಿಳಿಯಬಹುದು.

ಜಿ. ಎ. ಕುಲಕರ್ಣಿಯವರ ಪ್ರಬಂಧ ಇಲ್ಲಿರುವ ಎಲ್ಲ ಬರಹಗಳಲ್ಲಿಯೇ ಹೆಚ್ಚು ಸ್ಫುಟವಾದದ್ದು. ವಿನಾಯಕರ ಮೊದಲನೇ ಕಾವ್ಯಸಂಗ್ರಹದಲ್ಲಿ ಯಾವ ಕೃತಿಯಲ್ಲಿ ಯಾವ ವಸ್ತುವಿದೆ ಎಂಬ ಪರಿಚಯವನ್ನು ಮಾಡಿಕೊಡುವವರಲ್ಲಿ

ಸಫಲವಾಗಿದೆ. ಅಂತರಂಗದ ಆವಿಷ್ಕರಣದ ಮಾತು ಬೇರೆ. ವಿನಾಯಕರ ಎಲ್ಲ ಕೃತಿಗಳ ಅಂತರಂಗದಲ್ಲಿರುವ ಅರವಿಂದರ ದರ್ಶನದ ಅಂತರಂಗ ಎಷ್ಟು ಜನಗಳಿಗೆ ತಿಳಿದಿದೆ? ಜೀವೀಯವರು ಬೇಂದ್ರೆಯವರ ಪ್ರಸ್ತಾವನೆಯಿಂದ ಎತ್ತಿ ಹೇಳಿದ ವಾಕ್ಯದಲ್ಲಿಯೇ "ಎತ್ತರದಲ್ಲಿರುವವನಿಗೆ ಕಾಣುವದು ಹೆಚ್ಚು. ಆದರೆ ಅಸ್ಪಷ್ಟವೂ ಹೆಚ್ಚು" ಎಂದು ಹೇಳಿಬಿಟ್ಟಿದ್ದಾರೆ!

ಎರಡನೆಯ ಪ್ರಬಂಧದಲ್ಲಿ ಬಾನ್‌ನೆಲಗಳ ಮರುಮಾತು ಎಂಬ ಕವನದ ವಿವರಣದಲ್ಲಿ "ಸೃಷ್ಟಿಯ ರಹಸ್ಯವೇ ಹೀಗೆ. ಅದರ ಕರ್ತನೊಬ್ಬನಿಗೇ ತಿಳಿದಿದೆ–ಅಥವಾ ಅವನಿಗೂ ತಿಳಿದಿಲ್ಲವೊ?" ಎಂದರೆ ಏನು ಹೇಳಿದಂತಾಯಿತು? ಮೂರನೆಯದರಲ್ಲಿ "ಪ್ರೀತಿ"ಯಲ್ಲಿ ನೈಜ ಪ್ರೀತಿಯ ಅರ್ಥವನ್ನು ಶೋಧಿಸುವ ಪ್ರಯತ್ನ ಇದೆ. ಪ್ರೀತಿ–ಎಂಬ ಕಮಲ ಅದರ ಸರಿಯ ಹೂವ ಕಾಣೆ, ಎಂದು ಬೇರೊಂದು ಕವನದಲ್ಲಿ ಸಾಂಕೇತಿಕವಾಗಿ ಹೇಳಿದ ಕವಿ ಆತ್ಮಾನುರಾಗದ ಅಮರ ಪ್ರಭುವೇ ಪ್ರೀತಿ ಎಂದು ನಂಬಿದ್ದಾರೆ" ಎಂಬದೇ ವಿವರಣ. ಪು. 229ರಲ್ಲಿ ಇಂಗ್ಲಂಡನ್ನು ಶ್ರೀರಾಮನಿಗೆ ಹೋಲಿಸಿ ನಮ್ಮನ್ನು ದಸ್ಯುಗಳಿಗೆ ಹೋಲಿಸಿದುದರ ಔಚಿತ್ಯವೇನೆಂದರೆ ಆರ್ಯವಂಶದ ಶ್ರೀರಾಮ ಬಿಳಿಯ ಬಣ್ಣದವ (ಅಹುದೆ?) ಬಣ್ಣದ ನಾವು ದಸ್ಯುಗಳು; ದಸ್ಯುವೆಂದರೇನು? ಎಂಬ ಅರ್ಥ ಬಂದರೂ, ಇಲ್ಲಿರುವ ಒಳ ಅರ್ಥ ಅರ್ಥಗರ್ಭಿತವಾದುದು" (ಅದಾವುದು?). ಪುಟ 240ರಲ್ಲಿ "ದೇವಕರುಣೆಯಿಂದ ಹಾಗೂ ಚೈತ್ರ ಪುರುಷನ ಧೀರೋದಾತ್ತ ಸಂಕಲ್ಪದಿಂದ ಕವಿ ಪರಿವರ್ತಕನಾಗುತ್ತಾನೆ. ಚೈತ್ರ–ದೃಷ್ಟಿಯ ರುಚಿಯನ್ನು ಪಡೆದ ನವ ನೀರದ ಘನಮನದ ಪ್ರಜ್ಞೆಯನ್ನೂ ಪಡೆಯುತ್ತಾನೆ". ಪುಟ 252ರಲ್ಲಿ "ಗ್ರೀಕ್ ಹಾಗೂ ಭಾರತೀಯ ಪುರಾಣ ಕಲ್ಪನೆಗಳ ಒಂದು ಸಮನ್ವಯದ ಪ್ರತಿಮೆ, ಅಧ್ಯಾತ್ಮಿಕ ಒಲುಮೆ, ಶ್ರೀ ಅರವಿಂದರ ದಿವ್ಯ ದರ್ಶನದ ಪ್ರೇರಣೆ, ಶೆಲ್ಲಿ ಶೇಕ್ಸ್‌ಪಿಯರರ ಸ್ಫೂರ್ತಿ ಇವೆಲ್ಲವೂ ಈ ಕಾವ್ಯಕಲ್ಪನೆಯಲ್ಲಿ ವೇದ್ಯವಾಗುತ್ತವೆ." ಪುಟ 381ರಲ್ಲಿ "ಜಗತ್ತನ್ನೇ ವ್ಯಾಪಿಸುವ ಈ ಊರ್ಣನಾಭ ಅಥವಾ ಆದಿ ಜೇಡ ಮಾನವನ ಜಾಡ್ಯ, ಅಜ್ಞಾನ ಹಾಗೂ ಜಗತ್ತಿನಲ್ಲಿನ ದೈತ್ಯಶಕ್ತಿಯ (ಈವಿಲ್) ಪ್ರತೀಕವಾಗಿದೆ, ಇದಕ್ಕೆ ವಿರೋಧವಾದ ಕಮಲನಾಭ ದೈವೀಶಕ್ತಿಯ ಪ್ರತೀಕವಾಗಿದೆ: ಈ ಎರಡೂ ಶಕ್ತಿಗಳ ನಡುವೆ ತಿರೆ ತಿರುಗುತ್ತಿದೆಯೆಂದು ಕವಿ ಕಲ್ಪಿಸುತ್ತಾರೆ." ಇಂತಹ ಉದಾಹರಣಗಳು ಪುಟ ಪುಟಗಳಲ್ಲೂ ತುಂಬಿವೆ. ಅವು ಮಾಡಬಲ್ಲ ಆವಿಷ್ಕರಣವೆಂತಹದು ಎಂಬದು ಬರೆದವರಿಗಾದರೂ ತಿಳಿದಿದೆಯೆ?

ಈ ವಿಪ್ರತಿಪತ್ತಿಯ ಮೂಲವಿರುವದು ವಿಮರ್ಶಕರ ಅಕ್ಷಮತೆಯಲ್ಲಿಯೋ ಮೂಲ ಲೇಖಕರ ಅಸ್ಫುಟತೆಯಲ್ಲಿಯೋ ಎಂದು ಕೇಳಬೇಕಾಗುತ್ತದೆ. ಕವಿಗಳ ಮೂಲ ಕೃತಿಗಳು ಇಲ್ಲಿ ವಿಮರ್ಶೆಗೆ ವಿಷಯವಾಗಿಲ್ಲ. ಆದರೆ ಇಲ್ಲಿ ಉದಾಹರಿಸಿರುವ

ಕೆಲವೇ ಪದ್ಯಗಳನ್ನು ನೋಡಿದರೂ ಈ ವಿಪ್ರತಿಪತ್ತಿಯು ಉಗಮ ಮೂಲದಲ್ಲೇ ಎಂದು ತೋರುತ್ತದೆ. ಈ ಗುರುಶಿಷ್ಯರೆಲ್ಲರೂ ಉಪಮೆ ಉತ್ಪ್ರೇಕ್ಷೆಗಳ ಶಬ್ದಜಾಲದಲ್ಲಿ ಸಿಲುಕಿ ತಮಗೆ ಸತ್ಯದ ದರ್ಶನವೇ ಆಯಿತೆಂದು ಸಾರುತ್ತಾರೆ. ಇದಕ್ಕೆ ಊರ್ಣನಾಭ ಎಂಬ ಒಂದೇ ಉದಾಹರಣೆಯನ್ನಿಲ್ಲಿ ವಿವರಿಸಬಹುದು. ಕ್ಷೀರ ಸಾಗರದಲ್ಲಿ ಕಮಲನಾಭ ಶೇಷನ ಮೇಲೆ ಮಲಗಿರುವನಂತೆ. ಶೇಷನ ಬುಡದಲ್ಲಿ ಒಂದು ಬಂಡೆಯಿದೆಯಂತೆ. ಆ ಬಂಡೆಯ ಹೊದರಿನಲ್ಲಿ ಊರ್ಣನಾಭವೆಂದು ಇವರು ಕರೆಯುವ ಆದಿಜೇಡವಿದೆಯಂತೆ. ಅದು ಕೆಡುಕಿನ (ಈವಿಲ್) ಶಕ್ತಿಗಳ ಮೂಲವಂತೆ. ಕಮಲನಾಭನ ಎದುರಾಳಿಯಂತೆ! ಸಂಸ್ಕೃತ ಪದಗಳನ್ನು ಬಳಸಿದ ಮಾತ್ರಕ್ಕೆ ಅದು ಭಾರತೀಯ ದರ್ಶನವಾಗುವದಿಲ್ಲ. ಭಾರತೀಯ ದರ್ಶನದಲ್ಲಿ ಊರ್ಣನಾಭ (ಜೇಡರ ಹುಳು) ಒಂದು ಉಪಮೆ ಮಾತ್ರ. ಸೃಷ್ಟಿಕರ್ತನು ತನ್ನ ಕಾರ್ಯಾರಂಭ ಮಾಡುವಾಗ ಸೃಷ್ಟಿಗೆ ಆಧಾರವೆಲ್ಲಿತ್ತು ? ಉಪಾದಾನ ವಸ್ತುವೆಲ್ಲಿತ್ತು ! ಉಪಕರಣಗಳೇನಿದ್ದವು? ಯಾವವೂ ಇರಲಿಲ್ಲ ಎಂದು ಹೇಳುವ ಮಂತ್ರವನ್ನು ಆಧರಿಸಿ ಈ ಉಪಮೆಯ ಬಳಕೆ ಆಯಿತು. ಜೇಡರ ಹುಳು ತನ್ನೊಳಗಿಂದಲೇ ಎಳೆಯನ್ನು ತೆಗೆದು ತನ್ನ ಜಾಲವನ್ನು ಹೆಣೆಯುವಂತೆ ಸೃಷ್ಟಿಕರ್ತನು ತನ್ನೊಳಗಿಂದಲೇ ಈ ಸೃಷ್ಟಿಯ ನಿರ್ಮಾಣಕ್ಕೆ ಬೇಕಾದದ್ದನ್ನೆಲ್ಲ ತೆಗೆಯುತ್ತಾನೆ ಎಂದು ತಿಳಿಸುವದು ಉಪಮೆಯ ಉದ್ದೇಶ. ಜೇಡರ ಹುಳು ದರ್ಶನವಲ್ಲ! ನಿಮ್ಮ ದರ್ಶನದಲ್ಲಿ ಶೇಷನಿಗೆ ಬಂಡೆ ಆಧಾರವಾದರೆ ಆ ಬಂಡೆಗೆ ಏನು ಆಧಾರ ? ಮತ್ತು ಭಾರತೀಯ ದರ್ಶನದಲ್ಲಿ ಪರಮಾತ್ಮ ಶಕ್ತಿಗೆ ಎದುರಾಳಿಯಿಲ್ಲ. ರಾಕ್ಷಸ ಶಕ್ತಿಗಳೆಲ್ಲ ಅವನ ಅಧೀನದಲ್ಲಿಯೇ ಕೆಲಸ ಮಾಡುತ್ತವೆ. ಸತ್ತ್ವರಜಸ್ತಮೋಗುಣಗಳೆಲ್ಲವೂ ಸೃಷ್ಟಿಯ ಮೂಲವಸ್ತುಗಳೇ. ಪರಮಾತ್ಮನ ಶಕ್ತಿಯಾದ ಪ್ರಕೃತಿಯೇ ಶ್ರೀಭೂದುರ್ಗಾರೂಪಗಳಿಂದ ಅವನ್ನು ನಿಯಮಿಸುತ್ತಾಳೆ. ಹೀಗೆ ವಾಗಲಂಕಾರವಾದ ಉಪಮೆಯನ್ನು ಅಸನ್ವಿತವಾಗಿ ಹಿಂಜಿದರೆ ಸತ್ಯದರ್ಶನವಾಗಬಲ್ಲದೆ ? ಉದಾಹರಣೆಗಳನ್ನು ಬೆಳೆಸುವದಕ್ಕೆ ಇಲ್ಲಿ ಸ್ಥಳಾವಕಾಶವಿಲ್ಲ. ಉಪಮೆ ಉತ್ಪ್ರೇಕ್ಷೆಗಳ ದೊರೆಯಾದ ಕಾಲಿದಾಸನು ತನ್ನ ರಮಣೀಯವಾದ ಮೇಘದೂತವನ್ನು ಕಲ್ಪಿಸುವಾಗಲೂ ಹೊಗೆ ಮಿಂಚು ನೀರು ಗಾಳಿಗಳ ಸಮುದಾಯವಾದ ಮೋಡವೆತ್ತ, ಇಂದ್ರಿಯ ಪಾಟವ (ಚೈತನ್ಯ) ಉಳ್ಳ ಪ್ರಾಣಿಗಳು ಮಾತ್ರ ತಲುಪಿಸಬಹುದಾದ ಸಂದೇಶಗಳೆತ್ತ ? ಆದರೆ ಕಾಮಾರ್ತನಾದ ಯಕ್ಷನಿಗೆ ಈ ವಿವೇಕವಿರಲಿಲ್ಲ ಎಂದು ಆ ಭ್ರಾಂತಿ ಯಕ್ಷನದು ಕವಿಯದಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಇಲ್ಲಿಯ ಮೂಲ ಲೇಖಕರಿಗೆ ಪ್ರಿಯನಾದ ಮತ್ತು ಇವರಂತೆಯೇ ಉಪಮೆ ಉತ್ಪ್ರೇಕ್ಷೆಗಳ ಸರಮಾಲೆಗಳನ್ನೇ ವಿಸ್ತರಿಸುವ ಕವಿ ಶೆಲ್ಲಿಯ ಕಾವ್ಯವನ್ನು ಕುರಿತು ಅಲಿಸ್‌ಮೇನೆಲ್ ಎಂಬ ಕವಯಿತ್ರಿ ಹೇಳುತ್ತಾಳೆ– "ಕಲ್ಪನೆಗಳನ್ನೇ ವಿಸ್ತರಿಸುವ ಕಾವ್ಯ ತರುಣ ಓದುಗರಿಗೆ ಕಾವ್ಯಗಳ ಕಾವ್ಯ–ಸರ್ವೋತ್ಕೃಷ್ಟವಾದದ್ದು, ಅನನ್ಯವಾದದ್ದು ಎಂದು

ತೋರಬಹುದು....ಆದರೆ ಅದಕ್ಕಿಂತಲೂ ಉತ್ತಮವಾದ ಕಾವ್ಯರಚಿಸಿ ಕವಿಗಳ ಕವಿಗಳೆನಿಸುವದಕ್ಕೆ ಅರ್ಹರಾದವರ ಕಾವ್ಯವು ಈ ಕಲ್ಪನೆಯ ಸುಂದರಲೋಕವನ್ನು ದಾಟಿ ಸತ್ಯಸೃಷ್ಟಿಯನ್ನೇ ಒಂದು ವಿಸ್ಮಯಕಾರಿಯಾದ ರೀತಿಯಲ್ಲಿ ತೋರಿಸುತ್ತದೆ. ವಿಮರ್ಶೆಯ ಪ್ರಪಂಚದಲ್ಲಿ ಶೆಲ್ಲಿಯನ್ನು ಎರಡನೆಯ ದರ್ಜೆಯ ಕವಿಯೆಂದು ಪರಿಗಣಿಸಲಾಗಿದೆ". ಆದ್ದರಿಂದ ಉಪಮೆ ಉತ್ಪ್ರೇಕ್ಷೆಗಳ ಹಂದರ ಸತ್ಯದರ್ಶನ ವೆಂದಿಗೂ ಆಗದು. ಇಲ್ಲಿ ಇತ್ತೀಚೆಗೆ ಕಾಲವಶನಾದ ಫ್ರೆಂಚ್ ನಾಟಕಕಾರ ಬೆಕೆಟ್ಟನನ್ನು ಕುರಿತ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಒಂದು ಟಿಪ್ಪಣಿ ನೆನಪಾಗುತ್ತದೆ–ಬೆಕೆಟ್ಟನ ಕೀರ್ತಿಯನ್ನು ಹೆಚ್ಚಿಸಿದ ಅವನ ಅನೇಕ ವಿಮರ್ಶಕರು ತಮಗೆ ಅರ್ಥವಾಗದ ಕೃತಿಯನ್ನು ಕಂಡಾಗ ತಮಗಾದ ದಿಗಿಲನ್ನು ಮರೆಮಾಚು ವದಕ್ಕಾಗಿ "ಅದರ ಅರ್ಥ ತುಂಬ ನಿಗೂಢ"ವೆಂದು ಸಾರಿದರಂತೆ !

ಕೊನೆಯದಾಗಿ ಕನ್ನಡ ಸಾಹಿತ್ಯ ವಿಮರ್ಶೆಗಳನ್ನು ಓದುವವರಿಲ್ಲವೆಂಬ ಪ್ರಲಾಪ ಎಲ್ಲ ಲೇಖಕ ಸಂಪಾದಕ ಪ್ರಕಾಶಕರಿಗೆ ಸಾಧಾರಣವಾದದ್ದು. ಅದಕ್ಕೆ ಕಾರಣ ಅವರೇ ಓದುಗರಲ್ಲಿ ತೋರುವ ಉಪೇಕ್ಷೆ ಎಂಬದು ಅವರಿಗೇಕೆ ಹೊಳೆಯು ವದಿಲ್ಲ? ಮೇಲ್ನೋಟಕ್ಕೆ ಬಹು ಆಕರ್ಷಕವಾಗಿ ತೋರುವ ಈ ಪುಸ್ತಕದ ಸಂಪಾದಕರು ಪ್ರಸ್ತಾವನೆಯಲ್ಲಿ "ಅಚ್ಚಿನ ದೋಷಗಳು ಇರಬಾರದೆಂದೂ ಮೊಸರನ್ನ ದಲ್ಲಿ ಕಲ್ಲು ಸಿಕ್ಕಂತೆ ಆಗಬಾರದೆಂದೂ ಆದಷ್ಟೂ ಎಚ್ಚರ ವಹಿಸಿದ್ದೇವೆ" ಎಂಬ ಆಶ್ವಾಸನೆಯನ್ನು ನೀಡಿದ್ದಾರೆ. ಆದರೆ ಇಲ್ಲಿಯ 393 ಪುಟಗಳಲ್ಲಿ ಐದು ನೂರಕ್ಕೂ ಹೆಚ್ಚು ಕಲ್ಲುಗಳನ್ನು ಕಡಿದಿದ್ದೇನೆ! ಅವುಗಳಲ್ಲಿ ಅಚ್ಚಿನ ದೋಷಗಳು ಮಾತ್ರವಲ್ಲದೆ ಲೇಖಕರ ಅಜಾಗರೂಕತೆಯ ದೋಷಗಳೂ, ಅಪಪ್ರಯೋಗಗಳೂ ಸೇರಿಕೊಂಡಿವೆ. ಅವುಗಳನ್ನೆಲ್ಲ ಬೇರೆಬೇರೆಯಾಗಿ ಉದಾಹರಿಸಿ ವಿವರಿಸುವದಕ್ಕೆ ಇಲ್ಲಿ ಸ್ಥಳಾವಕಾಶವಿಲ್ಲ. ಇದನ್ನು ಓದುಗರ ಬಗ್ಗೆ ಲೇಖಕ ಸಂಪಾದಕ ಪ್ರಕಾಶಕರ ಉಪೇಕ್ಷೆಯೆಂದಲ್ಲದೆ ಏನೆನ್ನಬಹುದು ?

ಪ್ರ. ವೆಂ. ಜೋಷಿ

ಹೊಸಗನ್ನಡ ಕವಿತೆ (ನವೋದಯ, ನವ್ಯ, ಬಂಡಾಯ, ಮಾರ್ಗಗಳ ಕವಿತೆಗಳ ಸಂಕಲನ) ಪ್ರ. : ಕನ್ನಡ ಸಾಹಿತ್ಯ ಪರಿಷತ್ತು ೧೯೮೫.

ಈ ಸಂಕಲನದಲ್ಲಿಯ ಯಾವ ಕೃತಿಗಿಂತಲೂ ಹೆಚ್ಚಾಗಿ ಓದಲೇಬೇಕಾದ ಭಾಗ ಸಂಪಾದಕರು ಬರೆದ ಎರಡು ಪ್ರಬಂಧಗಳು–ಆಯ್ಕೆಯನ್ನು ಕುರಿತು ಮತ್ತು ಪ್ರಸ್ತಾವನೆ. ಇತ್ತೀಚೆಗೆ ನಾನು ನೋಡಿದ ಈ ವರ್ಗದ ಬರವಣಿಗೆಯಲ್ಲಿ ಇಂತಹ ತೂಕವಾದ ಮಾತು, ಸೂಕ್ಷ್ಮವಾದ ವಿಶ್ಲೇಷಣ, ಕ್ಲಿಷ್ಟವಾದ ಕಲ್ಪನೆಗಳನ್ನು ಸ್ಪಷ್ಟ

ಪಡಿಸುವದಕ್ಕೆ ಮಾಡುವ ಯತ್ನಗಳನ್ನು ನಾನು ಕಂಡಿಲ್ಲ. ಪ್ರಧಾನ ಸಂಪಾದಕರು ಇಲ್ಲಿಯ ವಿವಿಧ ಕೃತಿಗಳ "ಬಿಗಿ ಬನಿ ಭಾವ ಭಾಷೆಗಳ ಸಂಪತ್ತು, ವಿಲಾಸ" ಎಂಬ ಪದಗಳನ್ನು ಬಳಸಿದರೆ ಸಂಪಾದಕರು ಇಂತಹ ಯಾವ ಆಕಾಂಕ್ಷೆಗಳನ್ನೂ ಉತ್ತೇಜಿಸದೆ ಕೇವಲ ವಸ್ತುಸತ್ಯವನ್ನು ಹೇಳುವ "ಮಾರ್ಗ, ಪ್ರಯೋಗ, ಪ್ರಕಾರ, ವಸ್ತು, ಭಾಷೆ, ಛಂದಸ್ಸು, ತಂತ್ರ, ಧೋರಣೆ, ಚಾರಿತ್ರಿಕತೆ" ಎಂಬ ಪದಗಳನ್ನು ಬಳಸುತ್ತಾರೆ. ಅಷ್ಟು ಮಾತ್ರವಲ್ಲ, ಇಲ್ಲಿ "ಸೇರ್ಪಡೆಯಾಗಿರುವ ಕವನ ಮತ್ತು ಕಾವ್ಯ ಭಾಗಗಳೆಲ್ಲ ಶ್ರೇಷ್ಠವಾದುವಲ್ಲ" ಎಂದು ಎಚ್ಚರಿಸುತ್ತಾರೆ. ಆದರೂ ಅವುಗಳ ಆಯ್ಕೆಗೆ ಮೇಲೆ ಹೇಳಿದ "ಮಾರ್ಗ ಪ್ರಯೋಗ" ಇತ್ಯಾದಿಗಳನ್ನು ಪ್ರತಿನಿಧಿಸುವ ಉದ್ದೇಶವೇ ಕಾರಣ ಎಂದು ಹೇಳುತ್ತಾರೆ. ಪ್ರಸ್ತಾವನೆಯಲ್ಲಿ ಅವರ ಎಲ್ಲ ಹೇಳಿಕೆಗಳನ್ನೂ ಎಲ್ಲರೂ ಒಪ್ಪದೆ ಇರಬಹುದು. ಆದರೆ ಅವರು ಮೌಲಿಕವಾದ ವಿಚಾರಗಳನ್ನು ಮಂಡಿಸುತ್ತಾರೆನ್ನುವದನ್ನೂ ತಮ್ಮ ಚಿಂತನದ ದಿಕ್ಕಿನಲ್ಲಿ ಹೆಚ್ಚಿನ ವಿಚಾರಕ್ಕೆ ಪ್ರಚೋದಿಸುತ್ತಾರೆನ್ನುವದನ್ನೂ ಅಲ್ಲಗಳೆಯುವಂತಿಲ್ಲ. "ಭಾಷಾಂತರ್ಗತವಾದ ನಾದವು ಕಾವ್ಯಕ್ಕೆ ಅಗತ್ಯವಷ್ಟೆ ಅಲ್ಲ, ಅನಿವಾರ್ಯ ಕೂಡ" ಎಂದು ಸಮರ್ಥವಾಗಿ ಪ್ರತಿಪಾದಿಸಿದ್ದರೂ ಅದನ್ನು ಉದಾಹರಣೆಗಳಿಗೆ ಅನ್ವಯಿಸುವದರಲ್ಲಿ ಅವರು ಮಾಡುವ ಕೆಲವು ವಿಧಾನಗಳನ್ನು ನೋಡಿದರೆ, ಅವರು ಗಮಕಿಗಳ ಕಾವ್ಯವಾಚನವನ್ನು ಹೆಚ್ಚಾಗಿ ಕೇಳಿಲ್ಲವೆನಿಸುತ್ತದೆ. ಉದಾ : ಹಳಗನ್ನಡ ವ್ಯಂಜನಾಂತ ರೂಪಗಳು ನಾದಾನುಕೂಲತೆ ಪಡೆದಿಲ್ಲ ಎನ್ನುವದು. ಆ ವ್ಯಂಜನಗಳು ಹೆಚ್ಚಾಗಿ ಅನುನಾಸಿಕಗಳೇ ಇರುತ್ತವೆ, ಅವು ಗಮಕದಲ್ಲಿ ವೀಣೆಯ ನುಡಿತದೊಡನೆ ನುಡಿಯುತ್ತವೆ ಎಂಬದನ್ನು ಅವರು ಗಮನಿಸಿದಂತಿಲ್ಲ. ಗೋವಿಂದ ಪೈಗಳು ಹಳಗನ್ನಡವನ್ನು ತಮ್ಮ ಕೆಲವು ಗೀತಗಳಲ್ಲಿ ಎಷ್ಟು ಮಧುರವಾಗಿ ನುಡಿಸಿದ್ದಾರೆಂಬದನ್ನು ನೋಡಬೇಕು. ಉದಾ : ಬಲ್ಲಿನೆ ಇಂತೊದವುರ್ದೇಕೆ ಮುಖರಮೆನ್ನ ಮನಂ ಎಂಬ ಗೀತ, ಹಳೆಯ ನಾಟಕ ಕಂಪನಿಗಳಲ್ಲಿ ಕೆಲವು ನಟರು ವೃತ್ತಗಳನ್ನೂ ಕಂದ ಪದ್ಯಗಳನ್ನೂ ಎಷ್ಟು ಸುಶ್ರಾವ್ಯವಾಗಿ ಹೇಳುತ್ತಿದ್ದರೆಂಬದನ್ನು ಕೇಳದಿದ್ದವರ ನಷ್ಟ ಬಲು ದೊಡ್ಡದು. ಹಾಗೆಯೇ "ಕುಮಾರವ್ಯಾಸ ಭಾರತ, ಭರತೇಶ ವೈಭವಗಳಂಥ ಕಾವ್ಯಗಳು...ಏಕತಾನ ಮಾಂದ್ಯಕ್ಕೆ ಗುರಿಯಾಗಿವೆ" ಎನ್ನುವ ಮಾತು. ಅವೇ ಪದ್ಯಗಳನ್ನು ಇಂದಿಗೂ ಯಕ್ಷಗಾನದಲ್ಲಿಯೂ ಹರಿಕಥೆಗಳಲ್ಲಿಯೂ ಎಷ್ಟು ರಾಗಗಳಲ್ಲಿ, ಎಷ್ಟು ತಾಳಗಳಲ್ಲಿ ಕತೆ ಹೇಳುವದಕ್ಕೂ ಭಾವಾಭಿವ್ಯಕ್ತಿಗೂ ಬಳಸುತ್ತಾರೆಂಬದು ಕಿವಿಮುಟ್ಟಿ ಕೇಳದೆ ತಿಳಿಯಲಾರದು.

"ಭಾಷಾಂತರ್ಗತವಾದ ನಾದವು ಕಾವ್ಯಕ್ಕೆ ಅಗತ್ಯವಷ್ಟೆ ಅಲ್ಲ ಅನಿವಾರ್ಯ ಕೂಡ" ಎಂದು ಸಂಪಾದಕರೇ ವಿಧಿಸಿದ ಟೆಸ್ಟಿನಿಂದಲೇ ಯಾವುದು ಕಾವ್ಯ, ಯಾವುದು ಕಾವ್ಯವಲ್ಲ ಎಂಬದನ್ನು ಈ ಸಂಕಲನವೇ ವಿಶದವಾಗಿ ತೋರಿಸುತ್ತದೆ.

ಹೊಸಗನ್ನಡ ಕವಿತೆಗಳಲ್ಲಿ ಅಪರಿಚಿತ ಪದ್ಯಗತಿಗಳನ್ನು ಬಳಸಿದವರಲ್ಲಿ ಮೊದಲಿಗರು ಬಿಎಂಶ್ರೀ ಅವರು ಎಂದು ತಿಳಿದಿದ್ದೇನೆ. ಅವರ ಪದ್ಯಗಳಲ್ಲಿಯ ವರ್ಣವಿನ್ಯಾಸ-ವನ್ನು–ಸ್ವರವ್ಯಂಜನ ಒತ್ತಕ್ಷರಗಳ ವಿನ್ಯಾಸವನ್ನು, ಕಂಡಕೂಡಲೆ ಎಂಥವರಿಗೂ ಅವನ್ನು ಗಟ್ಟಿಯಾಗಿ ಹೇಳಿಕೊಳ್ಳುವ ಚಪಲವುಂಟಾಗುತ್ತದೆ. ಇದೇ ಸಂಪಾದಕರು ಹೇಳಿದ ಟೆಸ್ಟ್ ಎಂದು ನಾನು ತಿಳಿದಿದ್ದೇನೆ. ನವೋದಯದ ಕವಿಗಳ ಎಲ್ಲ ಕೃತಿಗಳಲ್ಲಿಯೂ ಸಾಮಾನ್ಯವಾಗಿ ಈ ಗುಣವನ್ನು ಕಾಣಬಹುದು. ಇಲ್ಲಿಯ ಆಯ್ಕೆ ಪ್ರಾತಿನಿಧಿಕವೆನ್ನುವದಕ್ಕೆ ನನಗೆ ತೋರುವ ಕೆಲವು ಆಕ್ಷೇಪಗಳು—ಬಿ.ಎಂ.ಶ್ರೀ. ಅವರ "ಇವಳ ತೊಡಿಗೆ ಅವಳಿಗಿಟ್ಟು ನೋಡಬಯಸಿದೆ" ಎಂಬ ಸಂಕಲ್ಪವನ್ನು ಆಯ್ದುಕೊಳ್ಳದೆ ಆ ಸಂಕಲ್ಪವು ಕಾರ್ಯಗತವಾಗಿದ್ದ ಒಂದೆರಡು ಗೀತಗಳನ್ನು ಆಯ್ದಿದ್ದರೆ ಹೆಚ್ಚು ಸಮರ್ಪಕವಾಗಿರುತ್ತಿತ್ತು. ಉದಾ: "ಅಡವಿಮರದಡಿಯಲ್ಲಿ", "ಮುಗಿಲಿನಲಿ ಮಳೆಬಿಲ್ಲ" ಇತ್ಯಾದಿ, ನರಸಿಂಹಸ್ವಾಮಿಯವರ ಲಲಿತಗೀತಗಳ ಸೇರ್ಪಡೆಗೆ ಕಾಪಿರೈಟ್ ಅಡ್ಡಿಯಾದದ್ದು ದುರ್ಭಾಗ್ಯ. ನರಸಿಂಹಸ್ವಾಮಿಗಳಂತೆಯೇ ಅಡಿಗರೂ ನವೋದಯದಿಂದ ಆರಂಭಿಸಿ ನವ್ಯ, ಬಂಡಾಯದವರೆಗೆ ಬೆಳೆದಿದ್ದಾರೆ. ಅವರ ನವೋದಯ ಕಾಲದ ಕೃತಿಗಳಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆತಿಲ್ಲವೆನಿಸುತ್ತದೆ.

ಮೇಲೆ ಹೇಳಿದ ಟೆಸ್ಟಿನಿಂದ ಕಾವ್ಯವೆಂದು ಕರೆಯಿಸಿಕೊಳ್ಳುವದಕ್ಕೆ ಅರ್ಹವಾದೆ ಕೃತಿಗಳನ್ನು ನವ್ಯ ಬಂಡಾಯ ಪ್ರಕಾರಗಳಲ್ಲಿ ಅಪರೂಪವಾಗಿ ಕಾಣಬಹುದು. ಅವರಲ್ಲಿ ಕೆಲವರು ತಮ್ಮ ಕೃತಿಗಳನ್ನು ಸಭೆಗಳಲ್ಲಿ ತಾವೇ ಓದುತ್ತಾರಂತೆ. ಅಂತಹ ಸಂದರ್ಭಗಳಲ್ಲಿ ಶ್ರೋತೃಗಳು ಕಾಣುವದು ಒಂದು ಗ್ರಾಮ್ಯ ನಾಟಕೀಯತೆಯೇ ಹೊರತು ಸಂಪಾದಕರು ಹೇಳುವ ಭಾಷಾಂತರ್ಗತವಾದ ನಾದವಲ್ಲ. ಇದನ್ನು ಪರೀಕ್ಷಿಸುವದು ಸುಲಭ. ಹಳೆಯ ವೃತ್ತ ಕಂದ ಷಟ್ಪದಿಗಳನ್ನಾಗಲಿ, ನವೋದಯ ದವರ "ಹೊಸ" ಛಂದಸ್ಸುಗಳ ಸಾಲುಗಳನ್ನಾಗಲಿ ಓದಿದವರು, ಕೇಳಿದವರು ಸ್ವಾಂತಃ ಸುಖಾಯ ಗುಣುಗುಣಿಸುವುದನ್ನು ಕಾಣಬಹುದು. ಹಾಗೆ ನವ್ಯಬಂಡಾಯ ಪ್ರಕಾರದ "ಪದ್ಯ"ಗಳನ್ನು ಗುಣುಗುಣಿಸುವದನ್ನು ನಾನಂತೂ ಕಂಡಿಲ್ಲ. ಅಷ್ಟೇ ಏಕೆ? ಆ ಪದ್ಯಗಳನ್ನು ಬರೆದವರೇ ಅವುಗಳ ಹಸ್ತಪ್ರತಿಯನ್ನೋ ಅಚ್ಚಾದ ಪುಸ್ತಕ ವನ್ನೋ ಹಿಡಿಯದೆ ಹೇಳಲಾರರು!

ಸುದೈವದಿಂದ ಇಲ್ಲಿ ಸೇರ್ಪಡೆಯಾದ ಕೃತಿಗಳಲ್ಲಿ ಅಡಿಗರ "ಅರ್ಥವಾಗುವ ಹಾಗೆ ಬರೆಯಬೇಕು" ಎಂಬುದರಲ್ಲಿ ನವ್ಯರ ಕೈಫಿಯತ್ತೇ ಇದೆ. ಅದರಲ್ಲಿಯ ಅವರ ಹೇಳಿಕೆಗಳು ಎಷ್ಟು ಸಮರ್ಥನೀಯವೆಂಬುದು ಮೇಲಿಯೇ ಕಾಣುವಂತಿದೆ. "ತಮಗೆ" ಅಂದರೆ ಸಂಪ್ರದಾಯಸ್ಥರಿಗೆ ಅರ್ಥವಾಗುವದಿಲ್ಲ ಎಂಬುದು ನವ್ಯರ ದೃಷ್ಟಿಯಿಂದ ದೋಷವಲ್ಲ. ಬೇರೆಯವರಿಗಾದರೂ ಅರ್ಥವಾಗುತ್ತದೆಯೆ? "ಕಾಡಿನೊಳಹೊಕ್ಕು ಪೊದೆ ಪೊದರು ಗಿಡಗಂಟೆ ಮುಳ್ಳುಗಳ ನಡುವೆ ಹೊಕ್ಕು ಹೊಸ

ಹಾದಿ ಕಡಿವವರು" ತಾವೇ ಒಬ್ಬರು ಕಡಿದ ಹಾದಿಯಲ್ಲಿ ಇನ್ನೊಬ್ಬರು ಹೋಗು ವದಿಲ್ಲ ಎಂದಾಯಿತು. ಅಂದಮೇಲೆ ಆ ದಾರಿಗಳು ಹೋಗುವುದೆಲ್ಲಿಗೆ ? ಕಡಿದವರ ಹಿಂದೆ ಬೇರೆಯವರಾರಾದರೂ ಬರುತ್ತಾರೆಯೆ ಎಂದು ಅವರು ತಿರುಗಿ ನೋಡಿ ದ್ದಾರೆಯೆ ? ಆ ದಾರಿಗಳನ್ನು ಕಡಿದದ್ದು ಎಲ್ಲಿ ಹೋಗುವದಕ್ಕೆ ಎನ್ನುವದೇ ತಿಳಿಯದಿದ್ದರೆ ಬೇರೆಯವರು ಅಲ್ಲಿ ಹೋಗುವರೇಕೆ ? ದಾರಿಯಾಗುವುದು ಅನೇಕರು ಅದನ್ನು ತುಳಿಯುವುದರಿಂದಲೇ. ಅದೇ ಸಂಪ್ರದಾಯ. ಇನ್ನೊಂದು—"ಹಳಸಿ ಕೊಳೆವ ಬದುಕಿಗೆ ಎಷ್ಟುದಿನ ಲೊಭಾನ ಊದಿನಕಡ್ಡಿ ಹಚ್ಚುತ್ತ ಇರಬೇಕು ?" ಎನ್ನುವದು. ಪಂಪರನ್ನರು ಹರಿಹರ ರಾಘವಾಂಕರು ಕುಮಾರವ್ಯಾಸ ಲಕ್ಷ್ಮೀಶರು ಚಿತ್ರಿಸುವದು, ಈಚಿನವರಲ್ಲಿ ಬೇಂದ್ರೆ ಕುವೆಂಪು ಚಿತ್ರಿಸುವದು ಹಳಸಿ ಕೊಳೆವ ಬದುಕೆ? ಅವರಲ್ಲೇ ಸಂಪ್ರದಾಯ ಎಷ್ಟು ಬದಲಾಗುತ್ತ ಬಂದಿಲ್ಲ? 'ನವನವೋನ್ಮೇಷ ಶಾಲಿನೀ ಪ್ರತಿಭಾ' ಎನ್ನುವದೇ ಅದು. "ಸಹಜದ ಶುದ್ಧ ಪ್ರಾಣ ಹರಿವ ಪಥ" ಯಾವದು ? ನಿಮ್ಮ ವಾಂತಿ, ಕೀವು, ಕೊಚ್ಚೆ ಇನ್ನೂ ಅವಾಚ್ಯವಾದ ಪದಗಳು ನಿರ್ದೇಶಿಸುವ ನಿಮ್ಮ ಪಥ ಶುದ್ಧ ಪ್ರಾಣ ಹರಿವ ಪಥವೇ ? ಇಂತಹ ವಿತಂಡಗಳ ಖಂಡನೆಯನ್ನು ಬೆಳಸುವದರಲ್ಲಿ ಪ್ರಯೋಜನವಿಲ್ಲ.

ನವ್ಯರು ಪ್ರಾಸಗಳನ್ನೂ ಪದ್ಯರಚನೆಯ ಯಾವದೇ ಕಟ್ಟುಪಾಡುಗಳನ್ನೂ ಸ್ವೀಕರಿಸದೇ ಇರುವದಕ್ಕೆ ಅವರ ಅಕ್ಷಮತೆಯೇ ಕಾರಣ : ಕಡಿವಾಣಕ್ಕೆ ಮಣಿಯದ ಸ್ಫೂರ್ತಿಯ ಒತ್ತಡ ಎನ್ನುವದು ಬರಿ ಬೊಗಳೆ. ಇತ್ತೀಚೆಗೆ ಟೈಮ್ಸ್ ಪತ್ರಿಕೆಯಲ್ಲಿ ಗೋಪಾಲನಾಯರ ಎಂಬವರು ಉರ್ಮಿಳಾ ವಿಜಯಕೃಷ್ಣನ್ ಎಂಬ ೧೨ ವರ್ಷದ ಬಾಲಿಕೆಯ ಕವಿತೆಗಳ ಪರಿಚಯ ಮಾಡಿಸುತ್ತ "ಅವಳ ರಚನೆಗಳಲ್ಲಿ ಗಮನ ಸೆಳೆಯುವ ಒಂದು ಅಂಶವೆಂದರೆ ಶೈಲಿ, ವೃತ್ತ ಬಂಧ, ಲಯ, ಪ್ರಾಸಗಳು ಅನಾಯಾಸವಾಗಿ ಹರಿದು ಬರುತ್ತವೆ" ಎನ್ನುತ್ತಾರೆ. ಅದೂ ಇಂಗ್ಲಿಷಿನಲ್ಲಿ! ಅವಳ ಕಾವ್ಯಸಂಗ್ರಹ ಈಗಾಗಲೇ ಪ್ರಕಟವಾಗಿ ಸಾನ್‌ಫ್ರಾನ್ಸಿಸ್ಕೋದಲ್ಲಿಯ ವರ್ಲ್ಡ್ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಕಲ್ಚರ್ ಎಂಬ ಸಂಸ್ಥೆಯ ಗಮನ ಸೆಳೆದು ಅವರು ಬ್ಯಾಂಕೋಕ್‌ನಲ್ಲಿ ಕರೆದಿರುವ ಜಾಗತಿಕ ಸಮ್ಮೇಳನಕ್ಕೆ ಆಮಂತ್ರಿತ ಳಾಗಿದ್ದಾಳೆ. ಒಂದು ಕವನವೆನ್ನುವದು ಅವಿಭಾಜ್ಯ ಸ್ವಾಭಾವಿಕ ಘಟಕ. ಕವಿಯು ಅದರ ವಸ್ತು ಶೈಲಿ ಪ್ರಾಸ ಲಯ ಎಲ್ಲವನ್ನೂ ಏಕಕಾಲಕ್ಕೆ ಕಾಣುತ್ತಾನೆ ಎನ್ನು ವದನ್ನು ಬೇಂದ್ರೆಯವರ ಕವನಗಳಲ್ಲಿ ಕಾಣಬಹುದು. ಸಾಂಬಾರಕ್ಕೆ ಬೇಳೆಯನ್ನಿಟ್ಟು ಅದಕ್ಕೆ ಬೇರೆ ಬೇರೆ ಮಸಾಲೆಗಳನ್ನು ಸೇರಿಸಿದಂತಲ್ಲ. ಅಕ್ಷಮತೆಗೆ ಉದಾಹರಣೆ ಗಳು—ಹಾಡುವ ಕೋಕಿಲ ಗಂಡು. ಪುಂಸ್ಕೋಕಿಲ ಎಂದು ಸಂಸ್ಕೃತ ಕವಿಗಳು ಹೇಳು ತ್ತಾರೆ. ಕನ್ನಡ ಕವಿಗಳು ಭಾಷೆಯ ರೂಢಿಯಂತೆ ಗಂಡು ಹೆಣ್ಣು ಮನುಷ್ಯ ಜಾತಿಯನ್ನು ಬಿಟ್ಟು ಉಳಿದ ಎಲ್ಲ ನಾಮಗಳು ನಪುಂಸಕಲಿಂಗದುವೆಂದೇ ವ್ಯವಹರಿಸು

ತ್ತಾರೆ. ವಿನಾಯಕರು ಅದನ್ನು ಯೋಗಿನಿ, ಪರಿತ್ಯಾಗಿನಿ, ಉನ್ಮಾದಿನಿ, ಎಂಬ ಸ್ತ್ರೀಲಿಂಗ ವಾಚಕಗಳಿಂದ ವರ್ಣಿಸಿದ ಪದ್ಯದಲ್ಲಿಯೇ "ಬೇಕಿಲ್ಲದಕೆ" ಸವಿಗೊಳಿಸುತಿದೆ" ಎಂದು ನಪುಂಸಕ ಲಿಂಗವನ್ನು ಬಳಸುತ್ತಾರೆ (ಪು. ೧೮೭). ಎಕ್ಕುಂಡಿಯವರು "ಗೋಪಾಂಗನೆಯರು" ಎಂಬ ಪದವನ್ನು "ಗೋಪಂಗನೆಯರು" ಎಂದು ಮೊಟಕು ಮಾಡುವದಕ್ಕೆ ಕಾರಣವೇನು ? (ಪು. ೨೪೬). ಚಿತ್ತಾಲರವರು "ಕಾಮಸೂತ್ರ" ಎಂದು ಹೆಸರಿಸಿದ್ದು "ಭೋಗ ಸ್ತೋತ್ರ"ವಾಗಿದೆ. ಕಾಮ, ಪ್ರೇಮ, ಭೋಗಗಳಲ್ಲಿ ವ್ಯತ್ಯಾಸವೇ ಇಲ್ಲವೆ ? (ಪು. ೨೫೭) ಅಕಬರ ಅಲಿ ಅವರು ವೈಕುಂಠದಲ್ಲಿ ಆದಿಶೇಷ ನನ್ನು ಕೂರಿಸಿದ್ದಾರೆ! ಶ್ವೇತದ್ವೀಪ, ಅನಂತಾಸನ, ವೈಕುಂಠವೆಂಬಲ್ಲಿ ಇರುವ ನಾರಾಯಣನ ಮೂರು ರೂಪಗಳು ಬೇರೆ ಬೇರೆ. ಆದಿಶೇಷನಿರುವ ಸ್ಥಾನ ವೈಕುಂಠವಲ್ಲ, ಇತ್ಯಾದಿ.

ನವ್ಯರ ಕಲ್ಪನೆಗಳೂ ಪ್ರತಿಮೆಗಳೂ ಬೇರೆಯವರಿಗೆ ಅರ್ಥವಾಗದಿರುವದ ರಿಂದ ತಪ್ಪೆಂದು ಕಂಡದ್ದು ಕವಿಯದೋ ಮುದ್ರಣದ್ದೊ ಎಂಬದೂ ತಿಳಿಯುವದಿಲ್ಲ. ಉದಾ: ಪು. ೨೦೩ರಲ್ಲಿ "ಕೋಟೆಯೂ ಕರಡಿಯೋ" ಎಂದಿರುವದು "ಕೋತಿ-ಯೋ ಕರಡಿಯೋ" ಇರಬೇಕಲ್ಲವೆ ? ಮುದ್ರಣದೋಷಗಳನ್ನು ಸೂಕ್ಷ್ಮವಾಗಿ ಅರಸಿ ತಿದ್ದುಪಡಿ ಮಾಡಿದವರಿಗೂ ಸಂಶಯವಿರಬೇಕು. ಪು. ೨೪೨–೪೩ರಲ್ಲಿ ನಾಲ್ಕು ಸಲ "ವಿಧಿಯ ಕಾಯುವ ಸರ್ಪ" ಎಂದಿದೆ. "ನಿಧಿಯ ಕಾಯುವ ಸರ್ಪ" ಎಲ್ಲರಿಗೂ ಗೊತ್ತು : ಆದರೆ ಕವಿಗಳ ಆಶಯವೇನೋ ! ಪು. ೨೯೯ರಲ್ಲಿ "ದರಿದ್ರ ಪಾಣಿಗಳಿ" ಎಂಬದು ಪ್ರಾಣಿಗಳೆಂದಿರಬೇಕಿತ್ತೆ ? ಪುಟ ೨೭೩ರಲ್ಲಿ ಬಣ್ಣದ ಕಾಜು ತೊಟ್ಟು ನೋಡುವ ತನಕ" ಎಂದಿರುವಲ್ಲಿ "ನೋಡುತ್ತಿರುವ ತನಕ" ಎಂದರೆ ಸರಿಯಾದ ಅರ್ಥವಾಗುತ್ತದೆ ; ಈಗಿರುವದು ವಿಪರೀತಾರ್ಥವನ್ನು ಕೊಡುತ್ತದೆ, ಇತ್ಯಾದಿ.

ಒಟ್ಟಿನಲ್ಲಿ ಹೇಳುವದಾದರೆ ಐತಿಹಾಸಿಕ ದಾಖಲೆಯೆಂದು ಪುಸ್ತಕ ಸಂಗ್ರಾಹ್ಯ ವಾಗಿದೆ. ಎಲ್ಲ ಕಾವ್ಯವೂ ಉತ್ತಮ ದರ್ಜೆಯದೇ ಇಲ್ಲವೆಂದು ಸಂಪಾದಕರೇ ಹೇಳಿದ್ದರೂ ಓದುಗರ ಅದೃಷ್ಟ ಚೆನ್ನಾಗಿರುವದರಿಂದ ಉತ್ತಮವಾದ ಕವನಗಳೂ ಕಾವ್ಯಖಂಡಗಳೂ ಸಾಕಷ್ಟಿವೆ.

ಪ್ರ. ವೆಂ. ಜೋಶಿ

ಹಟ್ಟಿಯಂಗಡಿ ನಾರಾಯಣರಾಯರ "ಆಂಗ್ಲ ಕವಿತಾವಳಿ" (ಗ್ರಂಥ ಸಂಶೋಧನ)–
ಸಂಶೋಧಕರು ಮತ್ತು ಸಂಪಾದಕರು : ಎಂ. ಎನ್. ವಿ. ಪಂಡಿತಾರಾಧ್ಯ.
ಪ್ರಕಾಶಕರು : ಪ್ರಬೋಧ ಪುಸ್ತಕಮಾಲೆ, ಮೈಸೂರು.

ಡಾ॥ ಶ್ರೀನಿವಾಸ ಹಾವನೂರರೂ ಮತ್ತು ಈ ಪುಸ್ತಕದ ಸಂಪಾದಕರೂ ಸೇರಿ ಪ್ರಕಟಿಸಬೇಕಾಗಿದ್ದ ನಾರಾಯಣರಾಯರ ಜೀವನ ಮತ್ತು ಕೃತಿಗಳನ್ನು ಕುರಿತ ಸಮಗ್ರ ಗ್ರಂಥ ಅನೇಕ ಕಾರಣಗಳಿಂದ ಪೂರ್ತಿಯಾಗದೆ ಇದ್ದ ಕಾರಣ ಈ ಸಂಪಾದಕರು ತಾವು ಒಪ್ಪಿಸಿಕೊಂಡಷ್ಟೇ ಸಂಶೋಧನವನ್ನು ಇಲ್ಲಿ ಪ್ರಕಟಿಸಿದ್ದಾರೆ. ಅನುಬಂಧ 3ರಲ್ಲಿ ಪ್ರಕಟಿಸಲಾದ ಶ್ರೀ ನಾರಾಯಣರಾಯರ ಒಂದು ಲೇಖನದಲ್ಲಿ (ಕ.ಸಾ.ಪ.ಪ. 1919) ಅವರೇ ಹೇಳಿದ ಒಂದು ಮಾತು "ಈಗಿನ ಶಿಕ್ಷಿತ ಕರ್ಣಾಟಕರು ತಮ್ಮ ಭಾಷೆಯ ಕಾವ್ಯಗಳನ್ನು ಅಭಿಮಾನದಿಂದ ಪಠಿಸಬೇಕಲ್ಲದೆ ಅಭಿರುಚಿಯಿಂದ ಓದುವುದಿಲ್ಲವೆಂದು ಅನೇಕರ ಅಭಿಪ್ರಾಯವಿದೆ" ಎಂಬುದು ಬಹು ಮಟ್ಟಿಗೆ ಇಂದಿಗೂ ಅನ್ವಯಿಸುವದು ವಿಷಾದಕರ. ಅಂದಿನಿಂದ ಇಂದಿಗೆ ಕಳೆದ ಎಪ್ಪತ್ತು ವರ್ಷಗಳಲ್ಲಿ ಪ್ರಕಟವಾದ ಕನ್ನಡದ ಪ್ರಾಚೀನ ಕಾವ್ಯಗಳೂ ಇತ್ತೀಚಿನ ಕವಿಗಳಲ್ಲಿ ಬಿ.ಎಂ.ಶ್ರೀ., ಮಾಸ್ತಿ, ಬೇಂದ್ರೆ, ಕುವೆಂಪು ಮೊದಲಾದ ಬೆರಳೆಣಿಕೆಯಲ್ಲಿ ಎಣಿಸಬಹುದಾದ ಕೆಲವೇ ಕವಿಗಳ ಕೃತಿಗಳೂ ಈ ಮಾತಿಗೆ ಅಪವಾದವಾಗಿದ್ದರೂ ನಮ್ಮ ಶಿಕ್ಷಣ ಪದ್ಧತಿಯ ದೋಷಗಳಿಂದಾಗಿ ನಮ್ಮ ತಲೆಮಾರಿನವರಿಗೆ ಕನ್ನಡ ಕಾವ್ಯಗಳಲ್ಲಿ ಆಸ್ಥೆ ಇದ್ದಷ್ಟು ಇಂದಿನವರಿಗಿಲ್ಲ ಎಂದು ನಾನು ಸ್ವಂತ ಅನುಭವದಿಂದ ಹೇಳಬಲ್ಲೆ. ಇಂದು ಸಿನೆಮಾ ಸಂಗೀತದಂತೆ ಆರ್ಕೆಸ್ಟ್ರಾ ಎನ್ನುವ ಗೊಂದಲಮಯ ಸದ್ದುಗಳ ನಡುವೆ ಒಂದೊಂದು ಸಾಲು ಹೊಸ ಕವಿತೆಗಳನ್ನು ಹೇಳುವ ಗಮಕಿಗಳಿಗೆ ಬೇಡಿಕೆಯಿದ್ದರೂ, ಸ್ವಾಂತಃ ಸುಖಾಯ ಕನ್ನಡ ಪದ್ಯಗಳನ್ನು ಹೇಳಿಕೊಳ್ಳುವವರನ್ನೂ ಮಾತಿನಲ್ಲಿ ಉದಾಹರಿಸಬಲ್ಲವರನ್ನೂ ನಾನು ಹೊಸ ತಲೆಮಾರಿನವರಲ್ಲಿ ಕಂಡಿಲ್ಲ.

ಆದ್ದರಿಂದ ಇದನ್ನೂ ಸಂಶೋಧನಗ್ರಂಥವೆಂಬ ಅಭಿಮಾನದಿಂದಲೇ ಓದಬೇಕು. ಇಲ್ಲಿಯ ಕವಿತೆಗಳನ್ನು ಲೇಖಕರೇ ಅನುವಾದಗಳೆಂದು ವರ್ಣಿಸಿದ್ದರೂ ಮತ್ತು ಛಂದಸ್ಸಿನಲ್ಲಿ ಹಳೆಯ ಸಂಪ್ರದಾಯಕ್ಕೆ ಕಟ್ಟುಬೀಳದೆ ತಮಗೆ ವಿಹಿತವೆಂದು ಕಂಡ ಪದ್ಯಗತಿಗಳನ್ನು ಅನುಸರಿಸಿರುವರೆಂದು ಹೇಳಿಕೊಂಡಿದ್ದರೂ, ಮೂಲಕೃತಿಗಳ ಓಜಸ್ಸು ಅನುವಾದಗಳಲ್ಲಿ ಸ್ವಲ್ಪವೂ ಕಾಣಿಸುವದಿಲ್ಲ ಮತ್ತು ಆಯ್ದುಕೊಂಡ ಪದ್ಯಗತಿಯೂ ಅದಕ್ಕೆ ಅನುಕೂಲವಾಗಿಲ್ಲ. ಉದಾ : ಶೇಕ್ಸ್‌ಪಿಯರನ—

"Last scene of all,
That ends this strange event ful history
Is second childishness and mere oblivion :
Sans teeth, sans eyes, sans taste, sans everything.

ಇದರ ಅನುವಾದ—

ಎರಡನೆಯ ಕೌಮಾರತನ ಜರಮುಪ್ರವೇಶದಲಿ
ಬರಿ ಮರವೆಕವಿದೆಲ್ಲ ನಷ್ಟವಹುದು ;
ಇರದು ಹಲ್ಲಿರದು ಕಣ್ಣಿರದು ರುಚಿ ಜರಣದಲಿ
ನರದಶಾಸಪ್ತಕ ಸಮಾಪ್ತವಹುದು.

ಮಿಲ್ಟನ್ನಿನ ಎಷ್ಟೋ ಕವಿತೆಗಳಲ್ಲಿ ನಲವತ್ತು ಸಾಲುಗಳ ಆಶಯವನ್ನು ನಾಲ್ಕಾರು ಸಾಲುಗಳಲ್ಲಿ ಪೂರೈಸಿಬಿಟ್ಟರೆ ಅದು ಅನುವಾದ ಹೇಗಾದೀತು ? ಪ್ರಸಿದ್ಧ ಇಂಗ್ಲಿಷ್ ಗೀತ–Rule Brittannia rule the waves ಎಂಬದನ್ನು ಬಿ.ಎಂ.ಶ್ರೀ. ಯವರು "ಆಳು ಬ್ರಿಟಾನಿಯಾ ಆಳು ತೆರೆಗಳನು" ಎಂದಿದ್ದರೆ ಈ ಲೇಖಕರು "ಆಳು ಜೀರತನೇ ಆಳು ವೀಚಿನಿಷ್ಮರಾಷ್ಟ್ರವ" ಎನ್ನುತ್ತಾರೆ. Character of a happy life ದಂತಹ ನೀತಿ ಪದ್ಯಗಳನ್ನು ಸುಲಭವಾಗಿ ಅನುವಾದಿಸಬಹು ದಾದರೂ ಇವರು ಆರು ಪದ್ಯಗಳಲ್ಲಿ ಮೂರನ್ನು ಬಿಟ್ಟೇಬಿಟ್ಟಿದ್ದಾರೆ !

ಆದ್ದರಿಂದ ಈ ಕವಿತಾವಳಿಯನ್ನು ಸಾಹಿತ್ಯವೆಂದು ಓದಲಾಗದಿದ್ದರೂ ಸಂಶೋಧನೆಯೆಂದು ಓದುವುದರಲ್ಲಿ ತುಂಬ ಸ್ವಾರಸ್ಯವಿದೆ. ಅನುಬಂಧಗಳಲ್ಲಿ ಸಂಗ್ರಹಿತವಾಗಿರುವ ಅಂದಿನವರ ಅಭಿಪ್ರಾಯಗಳು ಮನನೀಯವಾಗಿವೆ. ಎಲ್ಲಕ್ಕೂ ಹೆಚ್ಚಾಗಿ ಈ ಶತಕದ ಎರಡನೆ ದಶಕದಲ್ಲಿ ಕನ್ನಡ ಕವಿತೆ ಇದ್ದ ಸ್ಥಿತಿಯನ್ನೂ ಮೂರನೆಯ ನಾಲ್ಕನೆಯ ದಶಕಗಳಲ್ಲಿ ಅದು ಮುಟ್ಟಿದ ಎತ್ತರವನ್ನೂ ನೋಡಿದರೆ ನಮ್ಮ ನವೋದಯ ಕವಿಗಳ ಕಾಣಿಕೆ ಎಷ್ಟು ಬೆಲೆಯುಳ್ಳದ್ದೆಂದು ಅವರ ಬಗ್ಗೆ ಅಪಾರವಾದ ಗೌರವ ಮೂಡುವಂತಿದೆ.

ಪ್ರ. ವೆಂ. ಜೋಶಿ

ಸಾರಸ : ತಾಳ್ತಜೆ ವಸಂತಕುಮಾರ ಅವರ ಸಂಶೋಧನ ಮತ್ತು ಗ್ರಂಥಾವಲೋಕನ ಬರಹಗಳ ಸಂಗ್ರಹ. ಪ್ರ : ಚಿರಸಾಹಿತ್ಯ ಪ್ರಕಾಶನ, ಬೆಂಗಳೂರು–70.

ಮೊದಲನೆಯ ಪ್ರಶ್ನ : ಸಂಕಲನದ ಹೆಸರನ್ನು ಕುರಿತು "ಸಾರಸ" ಶಬ್ದದ ಪ್ರಸಿದ್ಧಾರ್ಥ ನೀರಗೋಳಿಯ ಜಾತಿಯ ಒಂದು ದೊಡ್ಡ ಪಕ್ಷಿ. ಶಬ್ದರೂಪದಿಂದ ಕಲ್ಪಿಸುವದಾದರೆ "ಸರೋವರಕ್ಕೆ" ಸಂಬಂಧಿಸಿದ್ದು. ಈ ಎರಡೂ ಅರ್ಥಗಳು ಇಲ್ಲಿ ಪ್ರಸ್ತುತವೆಂದು ತೋರುವದಿಲ್ಲ. ಇದಕ್ಕೆ ಮುನ್ನುಡಿ ಬರೆದವರು ಲೇಖಕರಿಗೆ "ರಸ"ದಲ್ಲಿ ಆಸಕ್ತಿ ಆದ್ದರಿಂದ "ಸಾರಸ" ಎನ್ನುತ್ತಾರೆ. ಈ ವ್ಯುತ್ಪತ್ತಿಗೆ ಆಧಾರ ವೇನೋ ತಿಳಿಯುವಂತಿಲ್ಲ.

ಇಲ್ಲಿರುವ ಹನ್ನೆರಡು ಬರಹಗಳಲ್ಲಿ ಮೂರು ಸಂಶೋಧನ ಪ್ರಪಂಚಕ್ಕೆ ಸೇರಿದುವು, ಒಂದು ಸಾಹಿತ್ಯದ ಇತಿಹಾಸಕ್ಕೆ ಸೇರಿದ್ದು. ಮೂರು ಪ್ರಾಚೀನ

ಕಾವ್ಯಗಳ ರಸಗ್ರಹಣ, ಮೂರು ಸಮಕಾಲೀನ ಕಾದಂಬರಿ, ನಾಟಕಗಳ ವಿಮರ್ಶೆಗಳು, ಎರಡು ಈ ಯಾವ ವರ್ಗಕ್ಕೂ ಸೇರದವು. ಇವನ್ನೆಲ್ಲ ಒಂದೇ ಕಟ್ಟಿನಲ್ಲಿ ಸೇರಿಸುವದಕ್ಕೆ ಅವು ಏಕಕರ್ತೃಕವೆಂಬದೊಂದೇ ಕಾರಣ. ಅಭ್ಯಾಸಿಗಳು ಅಥವಾ ಓದುಗರ ದೃಷ್ಟಿಯಿಂದ ಒಬ್ಬೊಬ್ಬರಿಗೂ ಇರುವ ಪ್ರಯೋಜನಕ್ಕೆ ಇಪ್ಪತ್ತು ರೂಪಾಯಿ ಬೆಲೆ ಜಾಸ್ತಿ.

ಮೊದಲಿನ ಎರಡು ಪ್ರಬಂಧಗಳಲ್ಲಿ ಮಂಗಳೂರು ನಗರ ಮತ್ತು ಜಿಲ್ಲೆಯಲ್ಲಿ ಬೌದ್ಧಧರ್ಮದ ಅವಶೇಷಗಳನ್ನು ಕುರಿತು ಸಂಗ್ರಹಿಸಿರುವ ಮಾಹಿತಿ ಉಪಯುಕ್ತವಾಗಿದೆ. ಮೂರನೆಯದರಲ್ಲಿ "ತೆಗಲೆ" ಶಬ್ದ ಅರ್ಥವನ್ನು ಕುರಿತು ಮಾಡಿರುವ ಊಹೆಗಳಿಗೆ ಫೊನೆಟಿಕ್ಸ್ ಶಾಸ್ತ್ರದಿಂದ ಸಿದ್ಧಿಸಬಹುದಾದ ತೆಗಲ್–ಸೆಗಲ್–ಹೆಗಲ್ ಸೇರಬಹುದು. ಎದೆಯ ಮೇಲ್ಭಾಗಕ್ಕೂ ಹೆಗಲಿಗೂ ದೂರವೇನಲ್ಲ. ಸಂಸ್ಕೃತದಲ್ಲಿ ದ್ವಂದ್ವಯುದ್ಧದ ಪ್ರಹಾರಗಳನ್ನು ವರ್ಣಿಸುವವರು ಅದನ್ನು "ಜತ್ರು" ಎನ್ನುತ್ತಾರೆ. ಕನ್ನಡದಲ್ಲಿ ಬೌದ್ಧಸಾಹಿತ್ಯದ ಸಮೀಕ್ಷೆ ಪ್ರಾಚೀನ ಕಾಲದಿಂದ ನಮ್ಮ ಸಮಕಾಲೀನರವರೆಗೆ ವ್ಯಾಪಿಸಿದ್ದು ಉಪಯುಕ್ತವಾದ ಸಂಗ್ರಹ.

ಪಂಪ ರನ್ನ ಹರಿಹರರ ಒಂದೊಂದು ಪ್ರಮುಖ ಗ್ರಂಥಗಳ ಗುಣದೋಷಗಳ ವಿಮರ್ಶೆ ವಸ್ತುನಿಷ್ಠವಾಗಿದೆ. ಹಾಗೆಯೇ ಮಾಸ್ತಿಯವರ ಇನಾಂದಾರರ ಬಿಎಂಶ್ರೀ ಅವರ ಒಂದೆರಡು ಕಾದಂಬರಿ ನಾಟಕಗಳ ವಿಮರ್ಶೆ ಕೂಡ.

"ಜಾನಪದ" ಶಬ್ದದ ಅರ್ಥ ಪ್ರಸಿದ್ಧವಾದದ್ದು. ಅದಕ್ಕೆ ಕೊಟ್ಟ ವಿವರಣ ಅನವಶ್ಯಕವಾದದ್ದು ಮತ್ತು ಅದು ಸಮರ್ಪಕವಾಗಿಯೂ ಇಲ್ಲ. ಅದರ ವಸ್ತು ಇತಿಹಾಸ ಇಲ್ಲವೆ ದಂತಕತೆಯಿಂದಲೇ ಪಡೆದದ್ದಿರಬೇಕಾಗಿಲ್ಲ. ಬಿಜಾಪುರ ಬೆಳಗಾವ ಜಿಲ್ಲೆಗಳಲ್ಲಿ ಗಾಂಧೀಜಿಯವರ ಜೀವನ ಮತ್ತು ಕಾರ್ಯಗಳನ್ನು ಕುರಿತು ಸಿಂಧೂರ ಲಕ್ಷ್ಮಣನೆಂಬ "ಉದಾರ" ಡಕಾಯಿತನ ಕಾರ್ಯಗಳನ್ನು ಕುರಿತು ಸಮಕಾಲೀನ ವಸ್ತುಗಳುಳ್ಳ ಲಾವಣಿಗಳು ಪ್ರಚಾರದಲ್ಲಿವೆ. "ಶಿಷ್ಟ" ಸಾಹಿತ್ಯ ಮತ್ತು ಜನಪದ ಸಾಹಿತ್ಯ ಎಂಬಲ್ಲಿ "ಶಿಷ್ಟ" ಪದ ಅಯುಕ್ತ: ಜಾನಪದ ಕಾವ್ಯವೆಲ್ಲ "ಅಶಿಷ್ಟ"ವೆ? ಇವರು "ಶಿಷ್ಟ"ವೆಂದು ಕರೆಯುವದನ್ನು "ಪಂಡಿತ", "ಗ್ರಂಥಸ್ಥ", "ನಾಗರಿಕ" ಎಂದು ಕರೆದಿದ್ದರೆ ಪ್ರಮಾದ ಇರುತ್ತಿರಲಿಲ್ಲ. ವ್ಯಾಖ್ಯೆಯಲ್ಲಿ ವೀರರಸವನ್ನು ಪ್ರಸ್ತಾಪಿಸಿದ್ದರೂ ದೃಷ್ಟಾಂತಗಳಲ್ಲಿ ಅದಿಲ್ಲವೇ ಇಲ್ಲ.

"ಜಾನಪದ" ಶಬ್ದಕ್ಕೆ ಅನವಶ್ಯಕವಾಗಿ ವಿವರಣ ಕೊಟ್ಟವರು "ಐತಿಹ್ಯ" ಶಬ್ದಕ್ಕೆ ಅಂತಹ ವಿವರಗಳನ್ನೇಕೆ ಕೊಡಲಿಲ್ಲ?

ಕನ್ನಡದಲ್ಲಿ ಪ್ರಕಟವಾಗುವ ಗ್ರಂಥಗಳನ್ನು ಓದಬೇಕೆಂಬ ಅಭಿಮಾನದಿಂದ ಓದುವವರನ್ನು ಕೊರೆಯುವ ಒಂದು ಪ್ರಶ್ನೆ—ವಿದ್ವಾಂಸರೆನಿಸಿಕೊಳ್ಳುವವರು

ಕೊಡ ಸಾಕಷ್ಟು ಸಿದ್ಧತೆಯಿಲ್ಲದೆ ಬರೆಯುವದಕ್ಕೂ ಬರೆದದ್ದನ್ನು ಪ್ರಕಟಿಸುವದಕ್ಕೂ
ಇಷ್ಟು ಅವಸರ ಪಡುವದೇಕೆ? ಕನ್ನಡದ ಬರವಣಿಗೆಯಲ್ಲಿ ಏಕರೂಪತೆಯನ್ನು
ಸಾಧಿಸುವದಕ್ಕೆ ಪ್ರಯತ್ನ ಮೊದಲಾದದ್ದು ಮಂಗಳೂರು ಜಿಲ್ಲೆಯಲ್ಲಿ. ಅಂತಹ
ಒಂದು ಭಾಷೆಯಲ್ಲಿ ಸಾಕಷ್ಟು ಬರವಣಿಗೆಯೂ ಆಗಿದೆ: ಜಯ ಕರ್ನಾಟಕ ಪ್ರಬುದ್ಧ
ಕರ್ನಾಟಕ ಪತ್ರಿಕೆಗಳು, ಮಾಸ್ತಿ, ಗುಂಡಪ್ಪ, ವಿ.ಸೀ. ಆದ್ಯರಂಗಾಚಾರ್ಯ,
ಕಾರಂತ ,ಇನಾಮದಾರ ಮುಂತಾದವರ ಬರಹಗಳು. ಇಂತಹ ಬರವಣಿಗೆಯನ್ನು
ಸಾಕಷ್ಟು ಓದಿದವರು ತಮ್ಮ ತಮ್ಮ ಆಡುಮಾತಿನ ಶಬ್ದಗಳನ್ನೂ ಸಂಸ್ಕೃತ ಕನ್ನಡ
ವ್ಯಾಕರಣದ ಬಲವಿಲ್ಲದೆ ಕಲ್ಪಿತ ಶಬ್ದಗಳನ್ನೂ ಬಳಸುವದೇಕೆ? ಇಲ್ಲೇ ಮೇಲೆ
ಹೇಳಿದ "ಶಿಷ್ಟ" ಪದ ಪ್ರಯೋಗವನ್ನು ನೋಡಬಹುದು. ಹಾಗೇ "ಸಾರಸ"
"ಬತ್ತಲೆ ನಿಂತಿಹ ಬುದ್ಧ" ಪ್ರಯೋಗವನ್ನು "ವಿರಕ್ತ ಪಂಥ" ಎಂದು ವಿವರಿಸು
ವವರು (ಪು. ೧) ಭಾಗವತ ಪುರಾಣವನ್ನು ನೋಡಿಲ್ಲವೆಂಬುದು ಸ್ಪಷ್ಟ. ಅಲ್ಲಿ
"ಬುದ್ಧೋ ನಾಮ್ನಾ ಜಿನಸುತಃ ಕೀಕಟೇಷು ಭವಿಷ್ಯತಿ" ಎಂಬ ವಾಕ್ಯವನ್ನು ನೋಡಿ
ದರೆ ಅಲ್ಲದೆ ಅನೇಕ ಸಂದರ್ಭಗಳನ್ನು ನೋಡಿದರೆ, ಆ ಗ್ರಂಥಕರ್ತರಿಗೆ ಜೈನ ಬೌದ್ಧ
ಧರ್ಮಗಳೆರಡೂ ಅವೈದಿಕವೆಂದಷ್ಟೇ ಹೊರತು ಹೆಚ್ಚಿನ ವಿವರಗಳು ತಿಳಿದಿರಲಿಲ್ಲ
ವೆಂದು ತೋರುತ್ತದೆ. ಆದಿರಾಜ, ಋಷಭದೇವರನ್ನು ಪರಮಾತ್ಮನ ಅವತಾರ
ಗಳಲ್ಲಿ ಎಣಿಸಿದ ಭಾಗವತಕಾರರು ಮಹಾವೀರನ ಮತ್ತು ಬುದ್ಧನ ಹೆಸರುಗಳನ್ನೇ
ಹೇಳಲಿಲ್ಲ. ಕೊಡುಕೊಳ್ಳುವುದು ಎನ್ನುವದಕ್ಕೆ "ಕೊಡುಕೊಳೆ" ರೂಪ ಹೇಗೆ
ಸಿದ್ಧಿಸುತ್ತದೆ? "ಜನಪ್ರಿಯವಾಗಲು" ಎಂಬ ಸಿದ್ಧಪ್ರಯೋಗವಿರುವಾಗ "ಜನಪ್ರಿಯ
ಗೊಳಿಸಿಕೊಳ್ಳಲು" ಏಕೆ? "ಬೋಧಿಯ ಅಡಿಯಲ್ಲಿ ಬುದ್ಧನಾಗುತ್ತಾನೆ" (ಪು. ೨೩)
ಅಂದರೇನು? ಯಾವ ವೃಕ್ಷದ ಬುಡದಲ್ಲಿ ಅವನಿಗೆ ಬೋಧ: ಜ್ಞಾನೋದಯ
ವಾಯಿತೋ ಅದು ಬೋಧಿ ವೃಕ್ಷವಾಯಿತು ಅವನು ಬುದ್ಧನಾದನು, ಅವನಿಗಿಂತ
ಮೊದಲು ಆ ವೃಕ್ಷಕ್ಕೆ "ಬೋಧಿ" ಹೆಸರಿರಲಿಲ್ಲ. ಒಟ್ಟು ೧೪ ಪುಟಗಳಲ್ಲಿ
ನಲವತ್ತಕ್ಕೂ ಹೆಚ್ಚು ಇಂತಹ ಆಕ್ಷೇಪಣೀಯವಾದ ಪ್ರಯೋಗಗಳಿವೆ, ಇಂಗ್ಲೀಷಿನ
ವಾಕ್ಯ ರಚಿಸಿ ಕನ್ನಡಕ್ಕೆ ಪರಿವರ್ತಿಸಿದಂತೆ ಓದುವ ಸಾಮಾನ್ಯ ಶೈಲಿಯ ದೋಷಗಳ
ನ್ನೆಣಿಸದೆ ಇದ್ದರೂ.

ಪ್ರ. ವೆಂ. ಜೋಷಿ

ವಸ್ತು ಸಂಗ್ರಹ

ಸಾಹಿತ್ಯ ಸಮ್ಮೇಳನ

ಅಖಿಲ ಭಾರತ ೫೯ನೇ ಕನ್ನಡ ಸಾಹಿತ್ಯ ಸಮ್ಮೇಳನ, ೧೯೯೦, ಫೆಬ್ರವರಿ ೧೬, ೧೭, ೧೮–ಈ ಮೂರು ದಿನ ಹುಬ್ಬಳ್ಳಿಯಲ್ಲಿ ಯಶಸ್ವಿಯಾಗಿ ನೆರವೇರಿದೆ. ಖ್ಯಾತ ಸಂಶೋಧಕ, ಭಾಷಾಶಾಸ್ತ್ರಜ್ಞ, ಸಾಹಿತಿ ಹಾಗೂ ಕರ್ನಾಟಕ ವಿಶ್ವವಿದ್ಯಾ-ಲಯದ ನಿವೃತ್ತ ಪ್ರಾಧ್ಯಾಪಕ ಡಾ॥ ಆರ್. ಸಿ. ಹಿರೇಮಠರು ಸಮ್ಮೇಳನಾಧ್ಯಕ್ಷರು. ಎಂಟು ಗೋಷ್ಠಿಗಳಲ್ಲಿ ಕಾರ್ಯಕಲಾಪಗಳು ನಡೆದಿವೆ. ಈ ಸಂದರ್ಭದಲ್ಲಿ ಸಾಹಿತ್ಯ ಪರಿಷತ್ತು ಮೊದಲ ಬಾರಿಗೆ ಬಾವುಟವೊಂದನ್ನು ಅಂಗೀಕರಿಸಿದೆ. ಇದರಲ್ಲಿ ಹಸಿರು, ಹಳದಿ, ಕೇಸರಿ ಬಣ್ಣಗಳ ಮೂರು ಓರೆಪಟ್ಟಿಗಳಿದ್ದು. ಉಳಿದ ಅರ್ಧಭಾಗ ಬಿಳಿಯದಾಗಿದ್ದು ಅದರ ನಡುವೆ ಕರ್ನಾಟಕ ರಾಜ್ಯದ ಭೂಚಿತ್ರವಿರುತ್ತದೆ. ನಮ್ಮ ನಾಡು, ನುಡಿ, ಗಡಿಗಳಿಗೆ ಮತ್ತು ಸಾಹಿತ್ಯಕ್ಕೆ ಒದಗಿಬಂದಿರುವ ಗಂಡಾಂತರಗಳೇನು, ಅದರ ಪರಿಹಾರದಲ್ಲಿ ನಮ್ಮ ಪಾತ್ರವೇನಿರಬೇಕೆಂಬ ಎಚ್ಚರಿಕೆ ಅಧ್ಯಕ್ಷ ಭಾಷಣದಲ್ಲಿ ಬಂದಿದೆ. "ನಮ್ಮ ಪ್ರಾಚೀನ ಪರಂಪರೆಯ ವಿದ್ವತ್ತನ್ನು ಉಳಿಸಿಕೊಳ್ಳುವುದು ಅವಶ್ಯ. ಕನ್ನಡಿಗನು ಮೊದಲು ಕನ್ನಡಿಗನಾಗಿ, ಆಮೇಲೆ ಭಾರತೀಯತೆಗೇರಿ ಮುಂದೆ ಜಾಗತಿಕ ದೃಷ್ಟಿಯನ್ನಿಟ್ಟುಕೊಳ್ಳಬೇಕು"–ಎಂಬ ಕರೆ ಅದರಲ್ಲಿ ಅಡಗಿದೆ.

ಜಾಗೃತ ಸಾಹಿತ್ಯ ಸಮ್ಮೇಳನ

ಹುಬ್ಬಳ್ಳಿಯಲ್ಲಿ ಈ ಸಮ್ಮೇಳನ ನಡೆಯುತ್ತಿರುವಾಗಲೇ ಇತ್ತ ಬೆಂಗಳೂರಿನಲ್ಲಿ ಪರ್ಯಾಯ ಸಾಹಿತ್ಯ ಸಮಾವೇಶವೊಂದು ನಡೆಯಿತು. ಈ ಬಾರಿಯ ಸಾಹಿತ್ಯ ಸಮ್ಮೇಳನ ಹಲವಾರು ಗೊಂದಲ, ವಿವಾದ, ವಿರೋಧಗಳೊಂದಿಗೆ ನಡೆದದ್ದು ಕನ್ನಡದ ದೌರ್ಭಾಗ್ಯ.

ಬೆಂಗಳೂರಿನ ಈ ಸಮಾವೇಶ ಸಾಹಿತ್ಯದಲ್ಲಿ ಶ್ರೇಷ್ಠತೆ, ಮೌಲ್ಯವಿವೇಚನೆ ಇತ್ಯಾದಿಗಳ ಕುರಿತ ಗಂಭೀರ ಮತ್ತು ಅರ್ಥಪೂರ್ಣ ಚರ್ಚೆಯಾಗಿ ಪರಿಣಮಿಸಿದ್ದು ಒಂದು ರೀತಿಯಲ್ಲಿ ಸೂಕ್ತವಾಗಿಯೇ ಇತ್ತು.

ಜಾಗೃತ ಸಮಾವೇಶದಲ್ಲಿ ಸಾಹಿತ್ಯದ ಶ್ರೇಷ್ಠತೆಗೆ ಕೇವಲ ಒಂದು ಪ್ರಕಾರದ ಸಾಹಿತ್ಯವನ್ನೇ ಚರ್ಚೆಗೆ ಸ್ವೀಕರಿಸಿದ್ದು ಮತ್ತು ಅದೊಂದೇ ಸಾಹಿತ್ಯ ಎನ್ನುವ ಅವರ ನಿಲುವು ಸಮರ್ಥನೀಯವಲ್ಲ. ಸೃಜನಶೀಲ ಸಾಹಿತ್ಯ ಎಷ್ಟು ಮಹತ್ವವನ್ನು ಪಡೆಯುತ್ತದೋ ಸೃಜನೇತರ ಸಾಹಿತ್ಯ ಪ್ರಕಾರವೂ ಅಷ್ಟೇ ಮಹತ್ವಪೂರ್ಣವಾಗಿರುತ್ತದೆ. ಆಧುನಿಕ ಬರಹಗಾರರಲ್ಲಿ ಸೃಜನೇತರ ಸಾಹಿತ್ಯ ಶಿಸ್ತುಗಳ ಬಗೆಗೆ (ಉದಾ: ಸಂಶೋಧನೆ, ಛಂದಸ್ಸು, ಗ್ರಂಥಸಂಪಾದನೆ, ಕವಿ ಕಾಲ ದೇಶ ಕುರಿತ

ವಿವೇಚನೆ ಇತ್ಯಾದಿಗಳು) ಅಷ್ಟಾಗಿ ಒಲವಿಲ್ಲದಿರುವುದು ದುರದೃಷ್ಟಕರ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ದಿವಂಗತ ಎಂ. ವಿ. ಸೀತಾರಾಮಯ್ಯನವರ ಒಂದು ಸೂಕ್ತಿಯನ್ನು ನಾವು ಸ್ಮರಿಸಬೇಕು– "ಪಾಂಡಿತ್ಯ ಕನ್ನಡ ವೃಕ್ಷದ ಬೇರು; ಕಾವ್ಯ ಅದರ ಹೂವು." ಸಮ್ಮೇಳನಾಧ್ಯಕ್ಷರಾದ ಡಾ॥ ಆರ್. ಸಿ. ಹಿರೇಮಠರು ತಮ್ಮ ಅಧ್ಯಕ್ಷ ಭಾಷಣದಲ್ಲಿ ವಿದ್ವತ್ತಿನ ಕ್ಷೇತ್ರಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ಸೂಕ್ತವಾಗಿದೆ.

ನಿರ್ಣಯಗಳ ಅನುಷ್ಠಾನಕ್ಕೆ ಸಮಿತಿ

ಕನ್ನಡ ನೆಲ, ಜಲ, ಸಂರಕ್ಷಣೆಯ ಬಗೆಗಿನ ಕಳಕಳಿಯನ್ನು ಅಧ್ಯಕ್ಷರು ವ್ಯಕ್ತಪಡಿಸಿದ್ದಾರೆ. ಸಮ್ಮೇಳನದ ಬಹಿರಂಗ ಸಭೆಯ ನಿರ್ಣಯಗಳಲ್ಲೂ ಇದೇ ಅಂಶ ವ್ಯಕ್ತವಾಗಿದ್ದರೂ ಎಲ್ಲ ಸಮ್ಮೇಳನಗಳ ನಿರ್ಣಯಗಳು ಕೇವಲ ನಿರ್ಣಯಗಳಾಗಿಯೇ ಉಳಿಯುತ್ತಿವೆ. ಅವುಗಳ ಅನುಷ್ಠಾನಕ್ಕೆ, ಪರಿಷತ್ತು ಒಂದು ಶಾಶ್ವತ ವ್ಯವಸ್ಥೆ ಮಾಡಬೇಕಾಗಿದೆ. ದಿನೇ ದಿನೇ ಕರ್ನಾಟಕದಲ್ಲಿ ಕನ್ನಡದ ಸ್ಥಿತಿ ಅಧೋಗತಿಗಿಳಿಯುತ್ತಿರುವ ಈ ಸಂದರ್ಭದಲ್ಲಿ ಈ ಬಗ್ಗೆ ಪರಿಷತ್ತು ಕ್ರಿಯಾತ್ಮಕವಾಗಿ ಕೆಲಸ ಮಾಡಬೇಕಾಗಿದೆ. ಸಮ್ಮೇಳನದ ನಿರ್ಣಯಗಳ ಕಾರ್ಯರೂಪಕ್ಕಾಗಿ ಸಮ್ಮೇಳನಾಧ್ಯಕ್ಷರ ಅಧ್ಯಕ್ಷತೆಯಲ್ಲೇ ಒಂದು ತಜ್ಞ ಸಮಿತಿಯನ್ನು ರಚಿಸಿ ಆ ಸಮಿತಿಗಾಗಿ ಪರಿಷತ್ತಿನ ಕಾರ್ಯಾಲಯದಲ್ಲಿ ಒಂದು ಕಛೇರಿಯನ್ನು ವ್ಯವಸ್ಥೆ ಮಾಡಿ ಮುಂದಿನ ಸಮ್ಮೇಳನದ ವೇಳೆಗೆ ಅವುಗಳಲ್ಲಿ ಕೆಲವಾರು ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವಂಥ ವ್ಯವಸ್ಥೆ ಮಾಡಬಹುದಾಗಿದೆ. ಇದರಿಂದ ಸಮ್ಮೇಳನಾಧ್ಯಕ್ಷರ ಸ್ಥಾನ ಇನ್ನಷ್ಟು ಮಹತ್ವತೆಯನ್ನು ಪಡೆಯುವುದರ ಜೊತೆಗೆ ಸರ್ಕಾರದ ಮೂಲಕ ನಿರಂತರವಾದ ಕನ್ನಡದ ಕೆಲಸವನ್ನು ಮಾಡಿಸುವುದು ಮತ್ತು ಕನ್ನಡದ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವುದು ಸುಲಭವಾಗುತ್ತದೆ.

'ವಿಜಯಲಿಪಿ' ಅಗತ್ಯವಿಲ್ಲ

ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿರುವ ಸಮಾನ ಅಂಶಗಳ ಆಧಾರದ ಮೇಲೆ ಈ ಎರಡೂ ಭಾಷೆಗಳಿಗೂ ಒಂದೇ ಲಿಪಿಯನ್ನು ರೂಢಿಗೆ ತರಬೇಕೆಂಬ ಒಂದು ಆಲೋಚನೆಯ ಫಲವಾಗಿ ಇತ್ತೀಚೆಗೆ ಡಾ॥ ಎಂ. ಚಿದಾನಂದಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ಸಮಿತಿಯೊಂದು ಸರ್ಕಾರಕ್ಕೆ 'ವಿಜಯಲಿಪಿ' ಯನ್ನು ಸಲ್ಲಿಸಿದ್ದು ಆ ಬಗ್ಗೆ ಹಲವಾರು ಅಭಿಪ್ರಾಯಗಳು ಮೂಡಿಬಂದಿವೆ. ಅವುಗಳಲ್ಲಿ ಹೆಚ್ಚಿನವು 'ವಿಜಯಲಿಪಿ ಏಕೆ ಬೇಕು' ಎಂಬಂಥವುಗಳೇ. ಯಾವುದೇ ಒಂದು ಸಾಹಿತ್ಯ, ಸಂಸ್ಕೃತಿ, ಜನಪದಕ್ಕೆ ಅದರ ಮಹತ್ವದ, ಪ್ರಾಚೀನತೆಯ, ಪರಂಪರೆಯ ಅರಿವಿರುವುದು ಅದರ ಭಾಷೆಯಿಂದ, ಅದರ ಪ್ರಾಚೀನ ರೂಪಗಳಿಂದ.

ಅದನ್ನು ಯಾವುದೇ ಕಾರಣಕ್ಕೂ ಯಾವ ಕಾಲಕ್ಕೂ ಬದಲಾಯಿಸಬಾರದು. ಅದು ಇರುವಂತೆಯೇ ಉಳಿಸಿಕೊಂಡು ಬರಬೇಕು. ಒಂದು ವೇಳೆ ಬದಲಾಯಿಸಿದ್ದೇ ಆದರೆ ಈ ದೇಶದ ಸಂಸ್ಕೃತಿಯನ್ನು ನಾಶ ಮಾಡಿದಂತೆ ಎಂಬುದನ್ನು ನಾವು ಮರೆಯಬಾರದು. ಇಂಥ ಸುಧಾರಣೆಗಳು ಮತ್ತು ಅವುಗಳ ಅನುಷ್ಠಾನ ಇಂದಿನ ಸಂದರ್ಭದಲ್ಲಿ ಸಾಧ್ಯವೇ ಎಂಬುದನ್ನು ನಾವು ದೀರ್ಘವಾಗಿ ಆಲೋಚಿಸಬೇಕಾಗಿದೆ. ಆಧುನಿಕ ಸೌಲಭ್ಯಗಳಿಗಾಗಿ ಏಕಲಿಪಿಯಾಗಬೇಕೆಂಬ ಧೋರಣೆಯೇ ಅಷ್ಟು ಸಾಧು ವಲ್ಲ. ಆಧುನಿಕ ಸೌಲಭ್ಯಗಳನ್ನು ಇರುವ ವ್ಯವಸ್ಥೆಗಳಿಗೇ ಹೊಂದಿಸಿಕೊಳ್ಳಬೇಕೇ ವಿನಾ ವ್ಯವಸ್ಥೆಯನ್ನೇ ಬದಲಿಸಬೇಕಾದ ಅಗತ್ಯ ಇರುವುದಿಲ್ಲ.

ಕನ್ನಡ ಲಿಪಿಯ ಅಂದ ಪ್ರಾಯಶಃ ಬೇರೆ ಯಾವ ಲಿಪಿಗೂ ಇರಲಾರದು. ಅಂತಹ ಅಂದವನ್ನು ಕಳೆದುಕೊಂಡಿರುವ ಕನ್ನಡ ಲಿಪಿಯನ್ನು ಊಹಿಸುವುದೂ ಸಾಧುವಲ್ಲ. ಇದರ ಅನಾನುಕೂಲತೆಗಳ ಬಗೆಗೆ ಈಗಾಗಲೆ ಹುಬ್ಬಳ್ಳಿ ಸಾಹಿತ್ಯ ಸಮ್ಮೇಳನದಲ್ಲಿ ಮತ್ತು ಹಾ. ಮಾ. ನಾಯಕರ ಸಂಪ್ರತಿಯಲ್ಲಿ ವಿವರವಾಗಿಯೇ ನಡೆದಿರುವ ಚರ್ಚೆ, ವಿಶ್ಲೇಷಣೆ ಸೂಕ್ತವಾಗಿಯೇ ಇದೆ.

ಕನ್ನಡದಲ್ಲಿ ಮಹಾಕಾವ್ಯ ರಚನೆಯ ಕಾಲ ಮುಗಿದಿಲ್ಲ

ಕನ್ನಡದಲ್ಲಿ ಮಹಾಕಾವ್ಯಗಳ ರಚನೆ ನಿರಂತರವಾಗಿ ನಡೆಯುತ್ತಲೇ ಇದೆ ಎಂಬುದೊಂದು ಒಳ್ಳೆಯ ಲಕ್ಷಣ. ಇತ್ತೀಚೆಗೆ ಚಿಕ್ಕಮಗಳೂರಿನ ಶ್ರೀ ಕಾಶಿ ವಿಶ್ವನಾಥ ಶೆಟ್ಟಿ ಅವರ 'ಬುದ್ಧಚರಿತ ಮಹಾಮಧು' ಎಂಬ ಮಹಾಕಾವ್ಯ ಬಿಡುಗಡೆಯಾಯಿತು. ಮಹಾಕಾವ್ಯ ಪ್ರಕಾಶನ ಸಮಿತಿ ಅದ್ದೂರಿಯಿಂದ ಬಿಡುಗಡೆ ಮಾಡಿಸಿದ ಈ ಕೃತಿಯನ್ನು ಚಿಕ್ಕಮಗಳೂರಿನಲ್ಲಿ ಆನೆಯ ಮೇಲೆ ಮೆರವಣಿಗೆ ಯನ್ನೂ ಮಾಡಲಾಯಿತು. ಈವರೆಗೆ ರಚನೆಯಾಗಿರುವ ಸುಮಾರು ಆರೇಳು ಮಹಾಕಾವ್ಯಗಳ ಸಾಲಿಗೆ ಈ ಮಹಾಕಾವ್ಯವೂ ಸೇರಿತು. ಶ್ರೀ ಹಿ. ಮ. ನಾಗಯ್ಯ ಅವರ ಮಹಾಕಾವ್ಯವೊಂದೂ ಈ ಸಾಲಿಗೆ ಸೇರುವ ಹಾದಿಯಲ್ಲಿದೆ.

ಕುವೆಂಪು ಅವರ ಮಹಾಕಾವ್ಯ 'ರಾಮಾಯಣ ದರ್ಶನಂ'ಗೆ ಕಳೆದ ವರ್ಷ ಪಂಪ ಪ್ರಶಸ್ತಿ ಸಂದ ಸವಿನೆನಪಿಗಾಗಿ ನಗರದ ಶೇಷಾದ್ರಿಪುರಂ ಕಾಲೇಜಿನ ಕನ್ನಡ ಸಂಘ ವ್ಯವಸ್ಥೆ ಮಾಡಿದ 'ಆಧುನಿಕ ಕನ್ನಡ ಮಹಾಕಾವ್ಯ'ಗಳನ್ನು ಕುರಿತ ವಿಚಾರ ಸಂಕಿರಣ ಅರ್ಥಪೂರ್ಣವಾಗಿತ್ತು. ಸಮ್ಮೇಳನವನ್ನು ಉದ್ಘಾಟನೆ ಮಾಡಿದ ಡಾ॥ ಜಿ. ಎಸ್. ಶಿವರುದ್ರಪ್ಪ, ಗೋಷ್ಠಿಗಳ ಅಧ್ಯಕ್ಷರಾದ ಪ್ರೊ॥ ಎಲ್. ಎಸ್. ಶೇಷಗಿರಿರಾವ್ ಮತ್ತು ಪ್ರೊ. ಎಂ. ವಿ. ಸೀತಾರಾಮಯ್ಯ ಮುಂತಾದವರೆಲ್ಲ ಕನ್ನಡದ ಮಹಾಕಾವ್ಯ ಪರಂಪರೆಯನ್ನು ಕುರಿತು ವಿಚಾರಪೂರ್ಣವಾದ ಚರ್ಚೆಯನ್ನು ನಡೆಸಿದರು.

ಶತಮಾನೋತ್ಸವ ಸ್ಮರಣೆ

ಇತ್ತೀಚಿನ ವರ್ಷಗಳಲ್ಲಿ ಕನ್ನಡ ನಾಡು ನುಡಿಗಾಗಿ ಸೇವೆ ಸಲ್ಲಿಸಿದ ಕನ್ನಡವನ್ನು ಕಿಂಚಿತ್ತಾದರೂ ಮೇಲೆತ್ತಲು ಅಪಾರವಾಗಿ ಶ್ರಮಿಸಿದ ಮಹನೀಯರ ಶತಮಾನೋತ್ಸವಗಳು ಒಂದಾದ ಮೇಲೊಂದರಂತೆ ಬರುತ್ತಲೇ ಇವೆ. ಪ್ರತಿಷ್ಠಾನ ಪ್ರಾರಂಭದಲ್ಲಿ ಫ. ಗು. ಹಳಕಟ್ಟಿಯವರ ಶತಮಾನ ಸ್ಮರಣೆ ಮಾಡುವುದರ ಮೂಲಕ ಈ ಸರಣಿಯಲ್ಲಿ ತನ್ನನ್ನು ತೊಡಗಿಸಿಕೊಂಡು ಈ ಮಹನೀಯರ ಸೇವೆಯನ್ನು ಸ್ಮರಿಸಬೇಕಾದ ಕನ್ನಡಿಗರ ಕರ್ತವ್ಯವನ್ನು ಸ್ವಲ್ಪಮಟ್ಟಿಗಾದರೂ ಪಾಲಿಸುತ್ತಲೇ ಇಂದಿನ ಪೀಳಿಗೆಯವರಲ್ಲಿ ಅವರುಗಳ ಸ್ಮರಣೆಯ ಮೂಲಕ ಕನ್ನಡದ ಜಾಗೃತಿಯನ್ನೂ ಮೂಡಿಸುತ್ತಿದೆ ಎಂದರೆ ತಪ್ಪಾಗಲಾರದೆಂದುಕೊಂಡಿದ್ದೇವೆ.

ಎ. ಆರ್. ಕೃ. ಜನ್ಮಶತಮಾನೋತ್ಸವ

ಬಿ.ಎಂ.ಶ್ರೀ. ಅವರಿಗೆ ಹೆಗಲೆಣೆಯಾಗಿದ್ದ ಕನ್ನಡದ ಅಶ್ವಿನಿ ದೇವತೆಗಳೆನಿಸಿದ್ದ ಟಿ. ಎಸ್. ವೆಂಕಣ್ಣಯ್ಯನವರ ಜನ್ಮಶತಮಾನೋತ್ಸವ ಮುಗಿಯುತ್ತಿದ್ದಂತೆಯೇ ಎ. ಆರ್. ಕೃ. ಅವರ ಜನ್ಮಶತಮಾನೋತ್ಸವವೂ ಪ್ರಾರಂಭವಾಗಿದೆ. ಪ್ರತಿಷ್ಠಾನ ಟಿ. ಎಸ್. ವೆಂಕಣ್ಣಯ್ಯನವರ ಶತಮಾನ ಸ್ಮರಣೆಯನ್ನು ಕೈಲಾದ ಮಟ್ಟಿಗೂ ಮಾಡಿತು. ಎ.ಆರ್.ಕೃ. ಅವರ ಶತಮಾನ ಸ್ಮರಣೆಯನ್ನು ಎ.ಆರ್.ಕೃ. ಸಂಸ್ಕೃತಿ ಪೀಠ ಕೈಗೆತ್ತಿಕೊಂಡಿದೆ. ಕೂಡಿದ ಮಟ್ಟಿಗೂ ಮಹತ್ವಪೂರ್ಣವಾಗಿ ಇವರ ಸ್ಮರಣೆಯನ್ನು ಮಾಡಿ ಕನ್ನಡಿಗರು ತಮ್ಮ ಕರ್ತವ್ಯವನ್ನು ಪಾಲಿಸಬೇಕಾಗಿದೆ. ಇಂಥ ಮಹನೀಯರ ಜೀವನ, ಸಾಧನೆಗಳು ಕನ್ನಡಕ್ಕೆ ಅಪೂರ್ವವಾದವುಗಳು. 'ಕನ್ನಡವನ್ನು ಕಟ್ಟುವ' ಕೆಲಸದಲ್ಲಿ ಇವರುಗಳ ಪಾಲು ಯಾರೂ ಎಂದಿಗೂ ಮರೆಯಲಾಗದಂತಹುದು. ಇಂಥವರ ಸ್ಮರಣೆಯನ್ನು ನಾವು ಸರಿಯಾದ ರೀತಿಯಲ್ಲಿ ಮಾಡದೆ ಹೋದಲ್ಲಿ ಮುಂದಿನ ಪೀಳಿಗೆಯವರ ದೃಷ್ಟಿಯಲ್ಲಿ ನಾವು ಕರ್ತವ್ಯಹೀನರಾಗುತ್ತೇವೆ ಎಂಬುದನ್ನು ಮರೆಯಬಾರದು.

ದಿನಾಂಕ 12-2-1990ರಿಂದ ಎ.ಆರ್.ಕೃ. ಜನ್ಮಶತಮಾನೋತ್ಸವ ವರ್ಷ ಪ್ರಾರಂಭವಾಯಿತು. ಅಂದೇ ಎ.ಆರ್.ಕೃ. ಸಂಸ್ಕೃತಿ ಪೀಠ ಮತ್ತು ಕರ್ನಾಟಕ ಲೇಖಕರ ಸಂಘಗಳು ಸಂಯುಕ್ತವಾಗಿ ಎ.ಆರ್.ಕೃ. ಅವರ ಜನ್ಮಸ್ಥಳವಾದ ಚಿಕ್ಕಮಗಳೂರು ಜಿಲ್ಲೆಯ ಅಂಬಳೆಯಲ್ಲಿ ಈಗಾಗಲೆ ಸರ್ಕಾರ ನಿರ್ಮಿಸಿರುವ ಎ.ಆರ್.ಕೃ ಸ್ಮಾರಕ ಭವನದಲ್ಲಿ ಶತಮಾನೋತ್ಸವದ ಉದ್ಘಾಟನೆಯನ್ನು ನಡೆಸಿತು. ಇಲ್ಲಿಂದ ನಾಡಿನ ಉದ್ದಗಲಕ್ಕೂ ಈ ಕಾರ್ಯಕ್ರಮಗಳು ಹಬ್ಬಬೇಕು. ಕನ್ನಡ ಸಂಘಗಳು, ಶಾಲೆ ಕಾಲೇಜುಗಳೂ ಈ ಕಾರ್ಯದಲ್ಲಿ ಭಾಗಿಯಾಗಬೇಕು.

ಸುಬೋಧ ರಾಮರಾಯರ ಜನ್ಮಶತಮಾನೋತ್ಸವವೂ 25-8-1989ರಿಂದಲೇ ಆರಂಭವಾಗಿದೆ. 'ಸುಬೋಧ' ಪತ್ರಿಕೆಯ ಮೂಲಕವೇ ಜನಪ್ರಿಯರಾಗಿದ್ದ ರಾಮರಾಯರು ಕನ್ನಡ ಸಾಹಿತ್ಯಕ್ಕೆ ಹಲವಾರು ಪುಸ್ತಕಗಳ ಪ್ರಕಟನೆಯ ಮೂಲಕ ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯ ರಾಮರಾವ್ ಅವರು ಹಲವಾರು ವರ್ಷಗಳ ಕಾಲ ಉಪಾಧ್ಯಾಯ ವೃತ್ತಿಯಲ್ಲಿದ್ದು ನಂತರ ರಾಷ್ಟ್ರೀಯ ಆಂದೋಳನದಲ್ಲಿ ಭಾಗವಹಿಸಿ 1926ರಲ್ಲಿ ಸುಬೋಧ ಪ್ರಕಟನಾಲಯವನ್ನು ತೆರೆದು 'ಸುಬೋಧ' ಪತ್ರಿಕೆಯನ್ನು ಪ್ರಕಟಿಸಿದರು. ಕೀರ್ತನೆಗಳನ್ನು ಪರಿಷ್ಕರಿಸಿ ಪ್ರಕಟಿಸುವುದರ ಜೊತೆಗೇ ರಾಮಾಯಣ ಕಥಾ ಸಾರ, ಸುಬೋಧ ಕುಸುಮಾಂಜಲಿ ಮುಂತಾದ ಮಾಲಿಕೆಗಳಲ್ಲಿ ಧಾರ್ಮಿಕ ಮತ್ತು ನೀತಿ ಸಾಹಿತ್ಯವನ್ನೂ ಅನೇಕ ಮಹಾಪುರುಷರ ಜೀವನಚರಿತ್ರೆಗಳನ್ನೂ ಪ್ರಕಟಿಸಿದರು. ಇವರ ಪುತ್ರರು, ಬಂಧುವರ್ಗ ಮತ್ತು ಅಭಿಮಾನಿಗಳು ಇವರ ಜನ್ಮಶತಮಾನೋತ್ಸವವನ್ನು ಇತ್ತೀಚೆಗೆ ನಗರದ ಕೇಶವಶಿಲ್ಪದಲ್ಲಿ ನೆರವೇರಿಸಿದರು. ಆ ಸಂದರ್ಭದಲ್ಲಿ ಎಲ್. ಎಸ್. ಶೇಷಗಿರಿರಾವ್ ಅವರು ಬರೆದ 'ಸಾರ್ಥಕ ಸುಬೋಧ' ಗ್ರಂಥವನ್ನು ಬಿಡುಗಡೆ ಮಾಡಲಾಯಿತು. ಸುಬೋಧ ರಾಮರಾಯರ ಕೆಲವು ಪ್ರಮುಖ ಗ್ರಂಥಗಳನ್ನು ಶತಮಾನ ಸ್ಮರಣೆಯ ಸಂದರ್ಭದಲ್ಲಿ ಪುನರ್ಮುದ್ರಿಸುತ್ತಿರುವುದು ಅತ್ಯಂತ ಸೂಕ್ತವಾದದ್ದಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಈ ಇಬ್ಬರು ಹಿರಿಯರ ಜನ್ಮಶತಮಾನೋತ್ಸವವನ್ನು ಸೂಕ್ತರೀತಿಯಲ್ಲಿ ಆಚರಿಸಬೇಕು. ಕರ್ನಾಟಕ ಸರ್ಕಾರ ಎ.ಆರ್.ಕೃ. ಅವರ ವಚನಭಾರತವನ್ನು ಸುಲಭ ಬೆಲೆಗೆ ಹೆಚ್ಚಿನ ಸಂಖ್ಯೆಯ ಪ್ರತಿಗಳಲ್ಲಿ ಪ್ರಕಟಿಸಬೇಕು. ಡಿ.ವಿ.ಜಿ. ಕೃತಿಶ್ರೇಣಿಯಂತೆ ಎ. ಆರ್. ಕೃ. ಅವರ ಸಮಗ್ರ ಕೃತಿ ಸಂಪುಟವನ್ನು ಸರ್ಕಾರ ತಾನೇ ಪ್ರಕಟಿಸಿದರೂ ಸರಿಯೆ ಅಥವ ಪ್ರಕಟಿಸುವವರಿಗೆ ಅನುದಾನ ನೀಡಿದರೂ ಸರಿಯೇ ಪ್ರಕಟಿಸಬೇಕಾಗಿದೆ. ಬಿ.ಎಂ.ಶ್ರೀ. ಪ್ರತಿಷ್ಠಾನವೂ ಸೂಕ್ತ ರೀತಿಯಲ್ಲಿ ಈ ಇಬ್ಬರು ಮಹನೀಯರ ಶತಮಾನ ಸ್ಮರಣೆ ಕಾರ್ಯಕ್ರಮವನ್ನು ಯೋಜಿಸುತ್ತದೆ.

ದಶಮಾನೋತ್ಸವಗಳು

ವ್ಯಕ್ತಿಯ ಹುಟ್ಟುಹಬ್ಬಗಳಿಗೆ ಮಹತ್ವವಿರುವಂತೆಯೇ ಸಂಸ್ಥೆಗಳ ಹುಟ್ಟುಹಬ್ಬಗಳಿಗೂ ಮಹತ್ವವಿರುತ್ತದೆ. ಆ ಸಂದರ್ಭದಲ್ಲಿ ಅವುಗಳು ಅವರೆಗಿನ ತಮ್ಮ ಕಾರ್ಯ ಸಾಧನೆಗಳನ್ನು ಸ್ಮರಿಸುವುದರ ಜೊತೆಗೆ ಅಲ್ಲಿಂದ ಮುಂದೆ ಯಾವ ರೀತಿ ನಡೆಯಬೇಕೆಂಬ ಬಗೆಗೆ ಸಿದ್ಧತೆಗಳನ್ನು ನಡೆಸುತ್ತವೆ. ಅಂಥ ಸಂದರ್ಭಗಳಲ್ಲಿ ನೆನಪಿನಲ್ಲಿ ನಿಲ್ಲುವಂತಹ ವಿಶಿಷ್ಟ ಕಾರ್ಯಗಳನ್ನು ನಡೆಸುತ್ತವೆ. ಈ ಎಲ್ಲ ದೃಷ್ಟಿಯಿಂದ ಸಂಸ್ಥೆಗಳ ದಾಖಲೆಯ ವರ್ಷಗಳಾಗಿ ಆಚರಣೆಯಾಗುತ್ತಿರುವ ದಶಮಾನೋತ್ಸವ,

ರಜತೋತ್ಸವ, ಸುವರ್ಣೋತ್ಸವ, ವಜ್ರೋತ್ಸವ ಶತಮಾನೋತ್ಸವಗಳು ಅರ್ಥಪೂರ್ಣವಾದವುಗಳೆನಿಸುತ್ತದೆ.

ಪ್ರತಿಷ್ಠಾನದ ದಶಮಾನೋತ್ಸವದಂತೆ ಇನ್ನು ಕೆಲವು ಪ್ರಮುಖ ಸಂಘ ಸಂಸ್ಥೆಗಳೂ ಈ ವರ್ಷ ತಮ್ಮ ದಶಮಾನೋತ್ಸವಗಳನ್ನು ನಡೆಸಿವೆ.

ಕರ್ನಾಟಕ ಲೇಖಕಿಯರ ಸಂಘ: 24–3–89ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತನ್ನ ದಶಮಾನೋತ್ಸವನ್ನು ಆಚರಿಸಿದ ಈ ಲೇಖಕಿಯರ ಸಂಘ ಹತ್ತು ವರ್ಷಗಳಲ್ಲಿ ಮಹಿಳಾ ಸಾಹಿತ್ಯವನ್ನು ಕುರಿತಂತೆ ವಿಶೇಷವಾದ ಕಾರ್ಯ ಮಾಡಿದೆ. ಹಲವಾರು ಪುಸ್ತಕಗಳನ್ನು ಪ್ರಕಟಿಸಿ, ಉದಯೋನ್ಮುಖ ಮಹಿಳಾ ಲೇಖಕಿಯರಿಗೆ ವೇದಿಕೆಯನ್ನೊದಗಿಸುತ್ತ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರನ್ನು ತೊಡಗಿಸುತ್ತ ಮಹಿಳಾ ಸಾಹಿತ್ಯ ಬೆಳವಣಿಗೆಗೆ ತನ್ನದೇ ಆದ ಕೊಡುಗೆಯನ್ನು ಸಲ್ಲಿಸಿದೆ. ಪ್ರಾರಂಭದಲ್ಲಿ ಶ್ರೀ ಜಿ. ನಾರಾಯಣ ಅವರು ಅಧ್ಯಕ್ಷರಾಗಿದ್ದ ಈ ಸಂಘಕ್ಕೆ ಈಗ ಶ್ರೀಮತಿ ಹೇಮಲತ ಮಹಿಷಿ ಅವರು ಅಧ್ಯಕ್ಷರಾಗಿದ್ದಾರೆ. ಮಹಿಳಾ ಸಾಹಿತಿಗಳನ್ನು ಕನ್ನಡದ ಗಂಭೀರ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸುವತ್ತ ಈ ಸಂಘ ಗಮನ ಹರಿಸಬೇಕಾಗಿದೆ. ಸೃಜನಶೀಲ ಸಾಹಿತ್ಯ ಕ್ಷೇತ್ರದಲ್ಲಿರುವಂತೆ ಮಹಿಳಾ ಲೇಖಕಿಯರು ಸೃಜನೇತರ ಸಾಹಿತ್ಯ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಪ್ರಮಾಣದಲ್ಲಿಲ್ಲ ಎಂಬುದನ್ನು ಯಾರೂ ಒಪ್ಪುವ ಮಾತಾಗಿದೆ.

ಮುಂಬಯಿ ವಿ.ವಿ. ಕನ್ನಡ ವಿಭಾಗ: ಕರ್ನಾಟಕದಲ್ಲಿದ್ದುಕೊಂಡೇ ಅನೇಕ ಸಂಘ ಸಂಸ್ಥೆಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುವಲ್ಲಿ ಅನೇಕ ತೊಡಕುಗಳನ್ನೆದುರಿಸುತ್ತಿರುವಾಗ ಕರ್ನಾಟಕದ ಹೊರಗಡೆ ಮುಂಬಯಿಯಲ್ಲಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗವೊಂದು ಕನ್ನಡಕ್ಕಾಗಿ ದುಡಿಯುತ್ತಿರುವುದು ಸ್ತುತ್ಯರ್ಹವಾದದ್ದು. ಈ ವಿಭಾಗ ಡಾ॥ ಶ್ರೀನಿವಾಸ ಹಾವನೂರ್ ಅವರ ನಿರ್ದೇಶನದಲ್ಲಿ ಗಣನೀಯವಾದ ಕೆಲಸವನ್ನು ಮಾಡಿದೆ. ಹಲವಾರು ಮೌಲಿಕ ಕೃತಿಗಳನ್ನು ಪ್ರಕಟಿಸಿರುವುದರ ಜೊತೆಗೆ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತಂತೆ ಪ್ರತಿವರ್ಷ ಉಪನ್ಯಾಸಗಳನ್ನೂ ವಿಚಾರಗೋಷ್ಠಿಗಳನ್ನೂ ನಡೆಸಿರುವ ಈ ವಿಭಾಗದ ದಶಮಾನೋತ್ಸವವನ್ನು 17–3–90ರಂದು ಮುಂಬಯಿ ವಿ.ವಿ.ಯ ಕುಲಪತಿಗಳಾದ ಎಂ. ಡಿ. ಬೆಂಗಾಲಿ ಅವರ ಅಧ್ಯಕ್ಷತೆಯಲ್ಲಿ ಕನ್ನಡದ ಖ್ಯಾತ ಬರಹಗಾರರಾದ ಡಾ॥ ಯು. ಆರ್. ಅನಂತ ಮೂರ್ತಿ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ದಶಮಾನೋತ್ಸವ ದತ್ತಿನಿಧಿಯನ್ನು ವ್ಯವಸ್ಥೆ ಮಾಡಿದ್ದಲ್ಲದೆ 'ದಶಮಾನ' ಕೃತಿಯನ್ನು ಬಿಡುಗಡೆ ಮಾಡಲಾಯಿತು. ಡಾ॥ ತಾಳ್ತಜೆ ವಸಂತಕುಮಾರ್ ಅವರ ನಿರ್ದೇಶಕತ್ವದಲ್ಲಿ ಈಗ ವಿಭಾಗ ಕೆಲಸ ಮಾಡುತ್ತಿದೆ.

ಅಕಾಡೆಮಿಗಳ ಸಾಧನೆ

ಕರ್ನಾಟಕ ಸಾಹಿತ್ಯ ಅಕಾಡೆಮಿ : ನಾಡಿನಲ್ಲಿ ವ್ಯಾಪಕವಾದ ಸಾಹಿತ್ಯ ಚಟುವಟಿಕೆಗಳೊಂದಿಗೆ ಹತ್ತಾರು ಕೃತಿಗಳನ್ನು ಪ್ರಕಟಿಸಿದೆ. ಇವುಗಳೆಲ್ಲ ಮಕುಟ ಪ್ರಾಯವಾಗಿ ತನ್ನ ಬೆಳ್ಳಿಹಬ್ಬದ ಸವಿನೆನಪಿಗಾಗಿ 'ಭಾರತೀಯ ಸಾಹಿತ್ಯ ಸಮೀಕ್ಷೆ' ಎಂಬ ಎರಡು ಬೃಹತ್ ಸಂಪುಟಗಳ, ಸುಮಾರು ೧೫೫೦ ಪುಟಗಳ ಗ್ರಂಥವನ್ನು 24-3-1990, ಸಂಜೆ ಸೆಂಟ್ರಲ್ ಕಾಲೇಜು ಆವರಣದ ಸೆನೆಟ್ ಭವನದಲ್ಲಿ ಡಾ॥ ಕೆ. ಶಿವರಾಮ ಕಾರಂತರ ಮೂಲಕ ಬಿಡುಗಡೆ ಮಾಡಿದೆ. ಅಕಾಡೆಮಿ ಅಧ್ಯಕ್ಷ ರಾದ ಡಾ॥ ಜಿ. ಎಸ್. ಶಿವರುದ್ರಪ್ಪನವರ ಮಾರ್ಗದರ್ಶನದಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿರಾಯರ ಸಂಪಾದಕತ್ವದಲ್ಲಿ ಸುಮಾರು 125 ಮಂದಿ ಕನ್ನಡ ಲೇಖಕರ ನೆರವಿಂದ ಹೊರಬಂದ ಈ ಗ್ರಂಥಕ್ಕೆ ಮೂಲ ಡಾ॥ ಕೆ. ಎಂ. ಜಾರ್ಜ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾಗಿರುವ 'ಕಂಪರೇಟಿವ್ ಇಂಡಿಯನ್ ಲಿಟರೇಚರ್' ಎಂಬುದು. ಕನ್ನಡಿಗರಿಗೆ ಇದೊಂದು ಹೆಮ್ಮೆಯ ಅಮರ ಕೃತಿ.

ತೌಲನಿಕ ಸಾಹಿತ್ಯ ಮತ್ತು ಭಾಷಾಂತರಕ್ಕೆ ಹೆಚ್ಚಿನ ಮನ್ನಣೆಯಿರುವ ಇಂದಿನ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಈ ಕೃತಿಯ ಪ್ರಕಟನೆ ಬಹಳ ಮಹತ್ವಪೂರ್ಣ ವಾದದ್ದು. ಈ ಸಂದರ್ಭದಲ್ಲಿ ಪ್ರತಿಷ್ಠಾನ ಪ್ರಕಟಿಸಿರುವ 'ಭಾಷಾಂತರ ಕಲೆ' ಪುಸ್ತಕ ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಗಿದೆ. 'ತೌಲನಿಕ ಸಾಹಿತ್ಯ'ವೂ ಕೂಡ ಪ್ರಕಟನೆಯ ಹಾದಿಯಲ್ಲಿದೆ. ಆ ಕಡೆಯ ಈ ಸಂಪುಟದ ಜೊತೆಗೆ ಸಾಹಿತ್ಯ ವಿಮರ್ಶೆಯ ವಿವಿಧ ವಾದಗಳನ್ನು ಕುರಿತಂತೆ 'ವಿಮರ್ಶೆಯ ಪಾರಿಭಾಷಿಕ ಮಾಲೆ' ಯಲ್ಲಿ ಹತ್ತು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ವಿಮರ್ಶನ ಕ್ಷೇತ್ರಕ್ಕೆ ಅಕಾಡೆಮಿಯ ಕೊಡುಗೆಯಾಗಿದೆ.

ಪತ್ರಿಕಾ ಅಕಾಡೆಮಿ : ಶ್ರೀ ಜಿ. ನಾರಾಯಣ ಅವರು ಪತ್ರಿಕಾ ಅಕಾಡೆಮಿ ಅಧ್ಯಕ್ಷರಾದ ಮೇಲೆಯೇ ಪತ್ರಿಕಾ ಅಕಾಡೆಮಿ ಸಾರ್ವಜನಿಕರ ಗಮನಕ್ಕೆ ಬರುವಂತಾ ದದ್ದು. "ಕನ್ನಡ ಪತ್ರಿಕೋದ್ಯಮದ 145ನೇ ವರ್ಷ" ಎಂಬ ಹೆಸರಿನಲ್ಲಿ ಇಡೀ ವರ್ಷ ಎಲ್ಲ ಜಿಲ್ಲಾ ತಾಲ್ಲೂಕುಗಳಲ್ಲಿ ಪತ್ರಿಕಾ ಪ್ರದರ್ಶನ, ಉಪನ್ಯಾಸ, ವಿಚಾರ ಗೋಷ್ಠಿಗಳನ್ನು ನಡೆಸಿದ್ದಲ್ಲದೆ ಸುಮಾರು 20ಕ್ಕೂ ಹೆಚ್ಚು ಉಪಯುಕ್ತ ಪುಸ್ತಕ ಗಳನ್ನು ಪ್ರಕಟಿಸಿದೆ. ಜನವರಿಯಲ್ಲಿ ಇದರ ಸಮಾರೋಪ ಸಮಾರಂಭವನ್ನು ಬೆಂಗಳೂರಿನಲ್ಲಿ ಅದ್ದೂರಿಯಿಂದ ನಡೆಸಲಾಯಿತು. ಈ ಸಮಾರಂಭಕ್ಕೆ ಬಂದಿದ್ದ ಹಲವಾರು ಕೇಂದ್ರ ಸರ್ಕಾರದ ಮತ್ತು ಇತರ ರಾಜ್ಯ ಸರ್ಕಾರದ ಪ್ರಮುಖರು ಇಂಥ ಕೆಲಸ ದೇಶದಲ್ಲೇ ಮೊದಲನೆಯ ಪ್ರಯತ್ನ ಎಂದು ಸ್ಮರಿಸಿದುದರ ಜೊತೆಗೆ ಇಂಥ ಕಾರ್ಯದ ಅಗತ್ಯವನ್ನು ಒತ್ತಿ ಹೇಳಿದರು. ದೇಶದ ಪತ್ರಿಕಾ ಕ್ಷೇತ್ರದ

ಗಮನಸವನ್ನು ಸೆಳೆದ ಈ ಅಕಾಡೆಮಿಯು ಕಾರ್ಯಸಾಧನೆ ದಾಖಲೆಯಾಗಿ ನಿಲ್ಲುವಂತಹುದು.

ಕನ್ನಡದಲ್ಲಿ ಸಾಕಷ್ಟು ಪತ್ರಿಕೆಗಳಿದ್ದರೂ ಆ ಕ್ಷೇತ್ರದಲ್ಲಿ ಅಧ್ಯಯನ ಮಾಡಲು ಕನ್ನಡದಲ್ಲಿ ಪುಸ್ತಕಗಳಿರಲಿಲ್ಲ. ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ಅಧ್ಯಯನ ಶಾಖೆಗಳಿದ್ದರೂ ಈಗಲೂ ಅಲ್ಲೆಲ್ಲ ಇಂಗ್ಲಿಷಿನಲ್ಲಿಯೇ ಅಧ್ಯಯನ ನಡೆಯುತ್ತಿರುವುದು ದುರದೃಷ್ಟಕರ. ಕನ್ನಡ ಪತ್ರಿಕೋದ್ಯಮ, ಪತ್ರಿಕಾರಂಗ ಇಷ್ಟೊಂದು ಶ್ರೀಮಂತವಾಗಿದ್ದರೂ ಅಲ್ಲಿ ಕೆಲಸ ಮಾಡಲು ಬರುವ ಪದವೀಧರರೆಲ್ಲ ಇಂಗ್ಲಿಷ್ ಪತ್ರಿಕೋದ್ಯಮ ಓದಿದವರು. ಇಂಥ ಸಂದರ್ಭದಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಪತ್ರಿಕಾ ಅಕಾಡೆಮಿ ಪ್ರಕಟಿಸಿರುವ ಪುಸ್ತಕಗಳು ಬಹಳ ಉಪಯುಕ್ತವಾದುವಾಗಿವೆ. ರಾಷ್ಟ್ರಮಟ್ಟದಲ್ಲಿ ಕನ್ನಡ ಪತ್ರಿಕಾರಂಗದ ಚಿತ್ರವನ್ನು ಮೂಡಿಸುವಲ್ಲಿ ಶ್ರೀ ಜಿ. ನಾರಾಯಣ ಅವರ ಸೇವೆ ಸ್ಮರಣೀಯವಾದದ್ದಾಗಿದೆ.

ಅಕಾಡೆಮಿಗಳು ಸರ್ಕಾರದಿಂದ ಪೋಷಿಸಲ್ಪಟ್ಟಿದ್ದರೂ ಸ್ವತಂತ್ರ ಸಂಸ್ಥೆಗಳು. ಅಕಾಡೆಮಿಗಳಿಗೆ ಪೂರ್ಣ ಆರ್ಥಿಕ ನೆರವನ್ನೂ ನೀಡುವುದರ ಜೊತೆಗೆ ಅಕಾಡೆಮಿಗಳು ಮಾಡುವ ಕೆಲಸವನ್ನೇ ಸರ್ಕಾರವೂ ಮಾಡುವ ಪುನರಾವರ್ತನೆಯನ್ನು ಬಿಟ್ಟು ಅಂಥ ಕೆಲಸ ಮಾಡಬಲ್ಲ ಸಂಘ ಸಂಸ್ಥೆಗಳಿಗೆ ಅನುದಾನಗಳನ್ನು ನೀಡಿ ಕೆಲಸ ಮಾಡಿಸುವ ಪೋಷಕ ಸಂಸ್ಥೆಯಾಗಿರಬೇಕು. ಹಾಗಾದಾಗ ಮಾತ್ರ ಯಾವುದೇ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ನಡೆಸಲು ಸಾಧ್ಯ.

ಐತಿಹಾಸಿಕ ದಾಖಲೆಗಳ ಪ್ರದರ್ಶನ : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಮುಖ್ಯ ಧ್ಯೇಯಗಳಲ್ಲೊಂದು "ದೇಶದಲ್ಲಿ ಹುಳು ತಿಂದು ಹೋಗದೆ ಇರುವ ಗ್ರಂಥಗಳನ್ನೆಲ್ಲ ಒಂದೆಡೆ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚು ಹಾಕುವುದು, ಅಚ್ಚಾದ ಮೇಲೆ ಎಲ್ಲವನ್ನೂ ಕೊನೆಮುಟ್ಟ ಶೋಧಿಸಿ ಹೊಸದಾಗಿ ಲಕ್ಷಣ ಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು" ಎಂಬ ಬಿ.ಎಂ.ಶ್ರೀ. ವಾಣಿ. ಅದಕ್ಕನುಗುಣವಾಗಿ ಪ್ರತಿವರ್ಷ ಈ ಕೆಲಸಕ್ಕೆ ಪೂರಕವಾಗಿ ಸಾರ್ವಜನಿಕರಲ್ಲಿ ಆಸಕ್ತಿ ಮೂಡಿಸಲು ಹಸ್ತಪ್ರತಿಗಳ ಪ್ರದರ್ಶನವನ್ನು ವ್ಯವಸ್ಥೆ ಮಾಡುತ್ತೇವೆ. ನಮ್ಮ ಈ ಪ್ರದರ್ಶನದಿಂದ ಕನಿಷ್ಟ ಒಂದೆರಡಾದರೂ ಹಸ್ತಪ್ರತಿಗಳು ದೊರೆಯುತ್ತವೆ. ದೊರೆಯದಿದ್ದರೂ ಅವು ಇರುವ ಸ್ಥಳವಾದರೂ ಪತ್ತೆಯಾಗುತ್ತದೆ.

ನಮ್ಮಲ್ಲಿ ಇಂಥ ಇನ್ನೂ ಅಜ್ಞಾತವಾಗಿರುವ ಎಷ್ಟೋ ಹಸ್ತಪ್ರತಿಗಳು, ಪ್ರಾಚೀನ ಸಾಂಸ್ಕೃತಿಕ ದಾಖಲೆಗಳು ಹುಳು ತಿಂದು ಹೋಗುತ್ತಿವೆ. ಇದನ್ನು ತಪ್ಪಿಸಿ ಅವನ್ನು ಸಂಗ್ರಹಿಸಿ ಸಂರಕ್ಷಿಸಲು ಸಾರ್ವಜನಿಕವಾಗಿ ಎಷ್ಟು ಪ್ರದರ್ಶನಗಳು

ನಡೆದರೂ ಸಾಲದು. ವ್ಯವಸ್ಥಿತವಾದ ಸರ್ವೇಕ್ಷಣ ಕಾರ್ಯವೊಂದು ರಾಜ್ಯಮಟ್ಟದಲ್ಲಿ ನಡೆಯಬೇಕಾದ ಅಗತ್ಯವಿದೆ. ಉಳ್ಳವರಲ್ಲಿ ಅವುಗಳ ಬಗ್ಗೆ ಭಾರಿ ಬೆಲೆಬಾಳುತ್ತದೆಂಬ ನಂಬಿಕೆ ಹೇಗೋ ಬಂದಿರುವುದರಿಂದ ಕೊಂಚವಮಟ್ಟಿಗಾದರೂ ಪ್ರೋತ್ಸಾಹ ಧನವನ್ನು ನೀಡಿದರೂ ಸರಿಯೇ ಅವುಗಳೆಲ್ಲ ಹಾಳಾಗುವ ಮುನ್ನ ಸಂಗ್ರಹಿಸುವತ್ತ ಅಧ್ಯ ಸಂಸ್ಥೆಗಳು ಮತ್ತು ಸರ್ಕಾರ ಆಲೋಚಿಸಬೇಕು.

ಈ ನಿಟ್ಟಿನಲ್ಲಿ ರಾಜ್ಯಸರ್ಕಾರದ ರಾಜ್ಯ ಪತ್ರಾಗಾರ ಇಲಾಖೆ ಪತ್ರಾಗಾರ ಸಪ್ತಾಹದಂಥ ಉಪಯುಕ್ತ ಕಾರ್ಯಕ್ರಮವೊಂದನ್ನು ಏರ್ಪಡಿಸಿ ತನ್ನಲ್ಲಿರುವ ಐತಿಹಾಸಿಕ ದಾಖಲೆಗಳ ಪ್ರದರ್ಶನವನ್ನು ವ್ಯವಸ್ಥೆ ಮಾಡಿತ್ತು. ಇಂಥ ಪ್ರದರ್ಶನಗಳನ್ನು ಸಾರ್ವಜನಿಕ ವಲಯಕ್ಕೂ ತಂದು ಹಲವಾರು ಕಡೆ ಪ್ರದರ್ಶನವಿಟ್ಟು ಪ್ರಚಾರ ಕೊಟ್ಟರೆ ಇನ್ನೂ ಹೆಚ್ಚು ಪ್ರಯೋಜನವಾದೀತು.

ಹಾಗೆಯೇ ಧಾರ್ಮಿಕ ಸಂಸ್ಥೆಯಾದ ಶ್ರೀ ಕ್ಷೇತ್ರ ಧರ್ಮಸ್ಥಳ ತನ್ನ ಕಾರ್ಯ ಕ್ಷೇತ್ರವನ್ನು ಕೇವಲ ಧರ್ಮಪ್ರಚಾರ, ಸಂರಕ್ಷಣೆಗಷ್ಟೇ ಮೀಸಲುಗೊಳಿಸದೆ ಈಗಾಗಲೆ ವಿದ್ಯೆ, ಸಂಸ್ಕೃತಿ, ಸಾಹಿತ್ಯ ಕ್ಷೇತ್ರಗಳಲ್ಲೂ ಗಣನೀಯ ಪ್ರಮಾಣದಲ್ಲಿ ಸೇವೆ ಸಲ್ಲಿಸುತ್ತಿದೆ ಎಂಬುದು ವೇದ್ಯವಾಗಿದೆ. ಇದೀಗ ಪ್ರಾಚೀನ ಹಸ್ತಪ್ರತಿಗಳ ಭಂಡಾರವೊಂದನ್ನು ಸ್ಥಾಪಿಸಿ ಅದರ ಅಧ್ಯಯನ, ಸೂಚಿ ತಯಾರಿಕೆಯನ್ನು ಶ್ರೀ ಗೌ. ಮ. ಉಮಾಪತಿಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ನಡೆಸುತ್ತಿದೆ. ಇದರ ಜೊತೆಗೆ ಇತ್ತೀಚೆಗೆ ಪ್ರಾಚ್ಯ, ಜಾನಪದ ವಸ್ತುಪ್ರದರ್ಶನವನ್ನೂ ವ್ಯವಸ್ಥೆ ಮಾಡಿರುವುದು ಸ್ತುತ್ಯ ಸಂಗತಿಯಾಗಿದೆ. ಈ ಸಂಗ್ರಹಾಲಯಕ್ಕೆ 'ಮಂಜೂಷ' ಎಂಬ ಅರ್ಥಪೂರ್ಣ ಹೆಸರಿಟ್ಟು ಅಲ್ಲಿಗೆ ಬರುವ ಯಾತ್ರಾರ್ಥಿಗಳಿಗೆ ಸಂಸ್ಕೃತಿಯ ಸಾರವನ್ನೂ ಮಹತ್ವವನ್ನೂ ಉಣಬಡಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ಈ ಪ್ರದರ್ಶನದಲ್ಲಿ ಪ್ರಾಚೀನ ಓಲೆಗರಿ ಗ್ರಂಥಗಳೂ ಇರುತ್ತವೆ ಎಂಬುದು ನಮ್ಮ ಭಾವನೆ. ಅವುಗಳ ಪ್ರದರ್ಶನದಿಂದ ಅವುಗಳನ್ನು ಉಳ್ಳವರು ಹೊರಕ್ಕೆ ತರಲು ಪ್ರಚೋದನೆಯಾಗಬಹುದು. ಅಲ್ಲಿಯ ವ್ಯವಸ್ಥಾಪಕರು ಸಂದರ್ಶನ ಕಾಲದಲ್ಲಿ ಆಸಕ್ತರನ್ನು ಗುರುತಿಸಿ ಸಂಗ್ರಹಿಸುವ ಕಾರ್ಯವನ್ನೂ ಮಾಡಿದರೆ ಪ್ರದರ್ಶನ ಇನ್ನೂ ಹೆಚ್ಚು ಅರ್ಥಪೂರ್ಣವಾಗುತ್ತದೆ. ಈ ಎಲ್ಲದಕ್ಕೂ ಮೂಲಕಾರಣರಾದ ಶ್ರೀ ವೀರೇಂದ್ರ ಹೆಗಡೆ ಅವರಿಗೆ ನಾಡಿನ ಜನತೆ ಕೃತಜ್ಞತೆ ಸಲ್ಲಿಸುತ್ತದೆ.

ಪ್ರತಿಷ್ಠಾನ ವಾರ್ತೆ

ಪ್ರೊ॥ ಎಂ. ವಿ. ಸೀತಾರಾಮಯ್ಯನವರ ನಿಧನಕ್ಕೆ ಶೋಕ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ತನ್ನ ಈ ಬಾರಿಯ ಪ್ರತಿಷ್ಠಾನ ವಾರ್ತೆಯನ್ನು ಅತ್ಯಂತ ವಿಷಾದದಿಂದ ಹೇಳಿಕೊಳ್ಳಬೇಕಾಗಿದೆ. ಪ್ರತಿಷ್ಠಾನದ ಉಸಿರೇ ಆಗಿದ್ದ ಸಂಸ್ಥಾಪಕರೂ ಅಧ್ಯಕ್ಷರೂ ಆಗಿದ್ದ ಪ್ರೊ॥ ಎಂ. ವಿ. ಸೀತಾರಾಮಯ್ಯನವರ ನಿಧನ ಪ್ರತಿಷ್ಠಾನಕ್ಕೆ ಆಘಾತವನ್ನುಂಟುಮಾಡಿದೆ. ದಿನಾಂಕ 12–3–90ರಂದು ಬೆಳಗಿನ ಜಾವ 2–30ರಲ್ಲಿ ದೈವಾಧೀನರಾದ ಶ್ರೀಯುತರ ಸಾವು ಅನಿರೀಕ್ಷಿತವಾದದ್ದು. ಹಿಂದಿನದಿನ ಪ್ರತಿಷ್ಠಾನದ ಶಾಶ್ವತ ನಿಧಿ ಸಂಗ್ರಹಕ್ಕಾಗಿ ಕಾರ್ಯಕರ್ತರ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಮೂರು ದಿನಗಳ ಹಿಂದೆ ಬಿದ್ದ ಮಳೆಯ ಪರಿಣಾಮವಾಗಿ ಸ್ವಲ್ಪ ಹದಗೆಟ್ಟ ಅವರ ಆರೋಗ್ಯದ ಕಾರಣದಿಂದ ಸಭೆಗೆ ಬರಲಾಗದೆ ತಮ್ಮ ಪರವಾಗಿ ಸಭೆಯಲ್ಲಿ ಮಾತನಾಡಲು ಜಿ, ನಾರಾಯಣ, ಎಲ್. ಎಸ್. ಶೇಷಗಿರಿರಾವ್, ಚಿದಾನಂದ ಮೂರ್ತಿ ಅವರಿಗೆ ಮಧ್ಯಾಹ್ನ ದೂರವಾಣಿಯಲ್ಲಿ ಬಿನ್ನವಿಸಿದ್ದರು. ಅದೇ ಕಾರ್ಯಕ್ರಮದ ಜೊತೆಯಲ್ಲಿ ಅವರ 80ನೇ ವರ್ಷದ ಅಭಿನಂದನಾ ಸಮಿತಿ ಏರ್ಪಡಿಸಿದ್ದ ಅವರ 'ಮಾದನ ಮಗಳು' ಪುಸ್ತಕದ ಬಿಡುಗಡೆ ಸಮಾರಂಭಕ್ಕೆ ಸಾಧ್ಯವಾದರೆ ಬರುತ್ತೇನೆ ತಾವು ಕಾರು ತನ್ನಿ ಎಂದು ಡಾ॥ ಜಿ. ಎಸ್. ಶಿವರುದ್ರಪ್ಪನವರಿಗೆ ತಿಳಿಸಿದ್ದರು. ಕಾರ್ಯಕ್ರಮ ಮುಗಿದ ನಂತರ ಶ್ರೀ ಗೀತಾಚಾರ್ಯ ಅವರೊಂದಿಗೆ ಸುಮಾರು ಅರ್ಧ ಗಂಟೆಯ ಕಾಲ ನಾಳೆ ಮಾಡಬೇಕಾದ ಕೆಲಸದ ಬಗೆಗೆ ಚರ್ಚಿಸಿದ್ದರು. ದಶಮಾನೋತ್ಸವ ಕಾರ್ಯಕ್ರಮದ ರೂಪುರೇಷೆಯನ್ನು ಸಿದ್ಧಪಡಿಸಿಟ್ಟಿದ್ದರು. ನಿವೇಶನದ ಶಂಕುಸ್ಥಾಪನೆಗಾಗಿ ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆಯೊಂದಿಗೆ ವ್ಯವಹರಿಸಿ, ಅಪಾರವಾಗಿ ಶ್ರಮಿಸಿದ್ದರು.

ಹೀಗೆ ಸಂಸ್ಥೆಯ ಬೆಳವಣಿಗೆಗಾಗಿ ಸದಾ ಚಟುವಟಿಕೆಯಿಂದಿದ್ದು ಸಂಸ್ಥೆಯ ಭವಿಷ್ಯದ ಕನಸು ಕಾಣುತ್ತಿದ್ದವರನ್ನು, ಅಸ್ವಮಾದೊಂದಿಗೆ ನಿರಂತರ ಹೋರಾಟ ಮಾಡುತ್ತಲೇ ಆತ್ಮಸ್ಥೈರ್ಯದಿಂದಿದ್ದವರನ್ನು ವಿಧಿ ಹೀಗೆ ಅನಿರೀಕ್ಷಿತವಾಗಿ ನಮ್ಮಿಂದ ದೂರಮಾಡುತ್ತದೆ ಎಂದುಕೊಂಡಿರಲಿಲ್ಲ.

ಅಂತ್ಯಕ್ರಿಯೆ

ದಿನಾಂಕ 12–3–90ರಂದು ದಿವಂಗತರ ಪಾರ್ಥಿವ ಶರೀರವನ್ನು ಅವರ ಪ್ರಮುಖ ಕಾರ್ಯಕ್ಷೇತ್ರವಾಗಿದ್ದ ಪ್ರತಿಷ್ಠಾನದ ಗ್ರಂಥಾಲಯದ ಕೊಠಡಿಯಲ್ಲೇ ಇಡಲಾಗಿತ್ತು. ಒಂದು ಬದಿಯಲ್ಲಿ ಪ್ರತಿಷ್ಠಾನದ ಅಪಾರ ಗ್ರಂಥರಾಶಿ, ಇನ್ನೊಂದು ಬದಿಯಲ್ಲಿ ಪ್ರತಿಷ್ಠಾನದ ಮೂಲಕ ಅವರ ಅವಿರತ ಶ್ರಮದಿಂದ ಪ್ರಕಟಿಸಲ್ಪಟ್ಟ

ಪ್ರಕಟನೆಗಳು, ಮತ್ತೊಂದು ಬದಿಯಲ್ಲಿ ಪ್ರತಿಷ್ಠಾನದಲ್ಲಿ ಯಾವ ಯಾವ ಮಹನೀಯರನ್ನು ಸ್ಮರಿಸಿ ಅವರಿಗೆ ತಮ್ಮ ಕರ್ತವ್ಯವನ್ನು ಸಲ್ಲಿಸಿದ್ದರೋ ಆ ಮಹನೀಯರ ಭಾವಚಿತ್ರಗಳು ಮೂಕ ಸಾಕ್ಷಿಯಂತಿದ್ದವು. ನಾಡಿನ ಅನೇಕ ಗಣ್ಯರು, ಹಿರಿಯರು, ಅಭಿಮಾನಿಗಳು ಮೃತರ ಪಾರ್ಥಿವ ಶರೀರದ ಅಂತಿಮ ದರ್ಶನದಲ್ಲಿ ಪಾಲ್ಗೊಂಡಿದ್ದರು. ನಂತರ ಮಧ್ಯಾಹ್ನ 2–30ರ ಸುಮಾರಿನಲ್ಲಿ ಪಾದರಾಯನಪುರದ ಚಿತಾಗಾರದಲ್ಲಿ ಸರ್ಕಾರದ ಸಕಲ ಮರ್ಯಾದೆಗಳೊಡನೆ ಸಂಸ್ಕಾರ ಮಾಡಲಾಯಿತು.

ಗಣ್ಯರಿಂದ ಸಂತಾಪ

ದಿನಾಂಕ 16–3–90ರಂದು ಪ್ರತಿಷ್ಠಾನ ಜರೂರು ಕಾರ್ಯಸಮಿತಿ ಸಭೆಯನ್ನು ಕರೆದು ತನ್ನ ಶೋಕವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಕೈಗೊಂಡಿತು. ಅನೇಕ ಸಂಘ ಸಂಸ್ಥೆಗಳೂ ಇಂಥ ನಿರ್ಣಯಗಳನ್ನು ಮಾಡಿ ಕಳುಹಿಸಿಕೊಟ್ಟಿದ್ದವು. ನೂರಾರು ಜನ ಅಭಿಮಾನಿಗಳು, ಹಿರಿಯರು, ಗಣ್ಯರು ತಮ್ಮ ಶೋಕವನ್ನು ವ್ಯಕ್ತಪಡಿಸಿ ಸಂಸ್ಥೆಗೆ ಪತ್ರಗಳನ್ನು ಬರೆದಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ದಿನಾಂಕ 15–3–90ರಂದು ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿತ್ತು. ನಾಡಿನ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳು, ಶಾಲೆ, ಕಾಲೇಜುಗಳು, ಸಂಘ ಸಂಸ್ಥೆಗಳು ಇಂಥ ಕಾರ್ಯಕ್ರಮಗಳನ್ನು ನಡೆಸಿದ್ದವು. ಅನೇಕ ಪತ್ರಿಕೆಗಳು ಸ್ಮರಣ ಲೇಖನಗಳನ್ನು ಪ್ರಕಟಿಸಿದ್ದವು.

ಪ್ರತಿಷ್ಠಾನದ ಶೋಕಸಭೆ

ಬಿ.ಎಂ.ಶ್ರೀ. ಪ್ರತಿಷ್ಠಾನವು ಪ್ರತಿಷ್ಠಾನಕ್ಕೆ ಮತ್ತು ದಿವಂಗತರಿಗೆ ನಿಕಟ ಸಂಪರ್ಕವಿದ್ದ ಗೋಖಲೆ ಸಂಸ್ಥೆಯೊಂದಿಗೆ ಸೇರಿ 28–3–90ರಂದು ಶೋಕಸಭೆಯನ್ನು ನಡೆಸಿತು. ಪ್ರತಿಷ್ಠಾನದ ಗೌರವಾಧ್ಯಕ್ಷರೂ ಗೋಖಲೆ ಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಡಾ॥ ಪು. ತಿ. ನರಸಿಂಹಾಚಾರ್, ಪ್ರೊ॥ ಜಿ. ವೆಂಕಟಸುಬ್ಬಯ್ಯ ಮತ್ತು ಡಾ॥ ಪಿ. ವಿ. ನಾರಾಯಣ ಅವರು ತಮ್ಮ ಶೋಕವನ್ನು ವ್ಯಕ್ತಪಡಿಸುತ್ತ ದಿವಂಗತರ ವಿವಿಧ ಮುಖಗಳ ಸೇವೆಯನ್ನು ಸ್ಮರಿಸಿದರು. ಹಿರಿಯ ಸಾಹಿತಿಗಳಾದ ಪ್ರೊ॥ ಎ. ಎನ್. ಮೂರ್ತಿರಾವ್ ಅವರು ದಿವಂಗತರ ಭಾವಚಿತ್ರವನ್ನು ಅನಾವರಣ ಮಾಡುತ್ತ ದಿವಂಗತರ ವ್ಯಕ್ತಿತ್ವವನ್ನು ಕುರಿತು ಭಾವಪರವಶರಾಗಿ ಮಾತನಾಡಿದರು. ಪ್ರತಿಷ್ಠಾನಕ್ಕೆ ನೂತನ ಅಧ್ಯಕ್ಷರಾದ ಪ್ರೊ॥ ಎಚ್. ಎಸ್. ಶೇಷಗಿರಿರಾವ್ ಅವರು ಪ್ರಾರಂಭದಲ್ಲಿ ಮಾತನಾಡಿ ಸೀತಾರಾಮಯ್ಯನವರ ಅವಿರತ ಶ್ರದ್ಧೆ, ಶ್ರಮ, ಚಟುವಟಿಕೆಗಳನ್ನು ಸ್ಮರಿಸಿದರು. ನಂತರ ಸಭೆ ಈ ರೀತಿ ನಿರ್ಣಯ ಮಾಡಿತು.

"ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯದರ್ಶಿಗಳೂ ನಂತರದಲ್ಲಿ ಅಧ್ಯಕ್ಷರೂ ಆಗಿದ್ದು ಈ ಸಂಸ್ಥೆಗಾಗಿ ಸಮರ್ಪಣ ಭಾವದಿಂದ ಶ್ರಮಿಸಿದ ಮತ್ತು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಕಾರ್ಯಶೀಲ ಅಭಿಮಾನಿಗಳಲ್ಲಿ ಒಬ್ಬರಾಗಿದ್ದ; ಕವಿ, ಕತೆಗಾರ, ಕಾದಂಬರಿಗಾರ, ನಾಟಕಕಾರ, ವಿಮರ್ಶಕರೂ ವಿದ್ವತ್ ಸಂಶೋಧಕರೂ ಆಗಿದ್ದ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರ ನಿಧನಕ್ಕಾಗಿ ಈ ಸಭೆಯು ಗಾಢವಾದ ದುಃಖವನ್ನು ವ್ಯಕ್ತಪಡಿಸುತ್ತದೆ. ಸೃಜನಶೀಲ ಸಾಹಿತಿಗಳಾಗಿ ಮತ್ತು ಸಂಶೋಧಕರಾಗಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಪ್ರೊ॥ ಎಂ. ವಿ. ಸೀತಾರಾಮಯ್ಯ ಅವರು ನೀಡಿದ ಕೊಡುಗೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ. ಕನ್ನಡದ ಮತ್ತು ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗಾಗಿ ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ದಿಟ್ಟ ಹೋರಾಟಗಾರರಾಗಿ, ಹಿರಿಯ ಮಾರ್ಗದರ್ಶಕರಾಗಿ ಅವರು ಸಲ್ಲಿಸಿದ ಸೇವೆಯನ್ನು ಸಭೆ ಅಭಿಮಾನದಿಂದ ಸ್ಮರಿಸಿಕೊಳ್ಳುತ್ತದೆ. ಶ್ರೀಯುತರ ನಿಧನದಿಂದ ಕನ್ನಡ ನಾಡಿನ ವಿದ್ವತ್ಪ್ರಪಂಚಕ್ಕೆ ಉಂಟಾಗಿರುವ ನಷ್ಟ ಹಿರಿದಾದುದು ಎಂಬುದನ್ನು ನೆನಪಿಸಿಕೊಳ್ಳುತ್ತ ದಿವಂಗತರ ಆತ್ಮಕ್ಕೆ ಈ ಸಭೆಯು ಚಿರಶಾಂತಿಯನ್ನು ಕೋರುತ್ತದೆ.

ಸದಸ್ಯವರ್ಗ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ.

ಎಂ.ವಿ.ಸೀ. ಸಂಸ್ಮರಣೆ

ಬರುವ ಸೆಪ್ಟೆಂಬರ್ 9ಕ್ಕೆ 80 ತುಂಬುತ್ತಿದ್ದ ಸಂದರ್ಭದಲ್ಲಿ ಎಂ.ವಿ.ಸೀ. ಅವರನ್ನು ಅಭಿನಂದಿಸಿ ಅಭಿನಂದನ ಸಂಪುಟವನ್ನು ಹೊರತರಬೇಕೆಂದು ಹಿಂದಿನದಿನ ತಾನೆ ಒಂದು ಸಮಾಲೋಚನ ಸಭೆಯನ್ನು ನಡೆಸಿದ್ದ ಅಭಿನಂದನ ಸಮಿತಿಯನ್ನು ಅನಿವಾರ್ಯವಾಗಿ ಸಂಸ್ಮರಣ ಸಮಿತಿಯಾಗಿ ಪರಿವರ್ತಿಸಿ ತನ್ನ ಯೋಜನೆಯನ್ನು ಪೂರ್ಣಮಾಡಲು ತೀರ್ಮಾನಿಸಿದೆ. ಆ ಸಂಸ್ಮರಣ ಸಮಿತಿಯೊಂದಿಗೆ ಪ್ರತಿಷ್ಠಾನದ ಸಹೃದಯ ಗೋಷ್ಠಿ ಪ್ರತಿತಿಂಗಳೂ ನಗರದ ಬೇರೆ ಬೇರೆ ಸಂಘ ಸಂಸ್ಥೆಗಳ ಜೊತೆಯಲ್ಲಿ ಎಂ.ವಿ.ಸೀ. ಅವರ ಜೀವನ ಸಾಧನೆಗಳನ್ನು ಕೃತಿ ಸಮೀಕ್ಷೆಯನ್ನು ಕುರಿತ ಒಂದೊಂದು ಸಂಸ್ಮರಣ ಕಾರ್ಯಕ್ರಮಗಳನ್ನು ನಡೆಸಿ ವರ್ಷಾಂತ್ಯದಲ್ಲಿ ಅವುಗಳನ್ನೆಲ್ಲ ಸೇರಿಸಿ ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. 'ಬೇಂದ್ರೆ ಸ್ಮೃತಿ', 'ಮಾಸ್ತಿ ಸ್ಮರಣೆ' ಎಂಬ ಪ್ರತಿಷ್ಠಾನದ ಪ್ರಕಟನೆಗಳು ಇದೇ ಬಗೆಯವು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಈ ಯೋಜನೆಯಂತೆ ದಿನಾಂಕ 15-4-90ರಂದು ಗೋಖಲೆ ಸಂಸ್ಥೆಯೊಂದಿಗೆ ಪ್ರಥಮ ಕಾರ್ಯಕ್ರಮ ನಡೆಯಿತು. ಡಾ॥ ಜಿ. ಎಸ್. ಶಿವರುದ್ರಪ್ಪ ಅವರು ಈ ಯೋಜನೆಯನ್ನು ಉದ್ಘಾಟಿಸಿ ಅತ್ಯಂತ ಸ್ತುತ್ಯವಾದ ಕಾರ್ಯ ಎನ್ನುತ್ತ ಸೀತಾರಾಮಯ್ಯನವರ ವ್ಯಕ್ತಿಚಿತ್ರವನ್ನು ಸ್ವಾರಸ್ಯವಾಗಿ ಬಿಡಿಸಿದರು. ಡಾ॥ ಎಂ. ಎಲ್. ಲಲಿತಮ್ಮ ಅವರು ಅವರ ವ್ಯಕ್ತಿತ್ವವನ್ನು ಪರಿಚಯಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ॥ ಎಲ್. ಎಸ್. ಶೇಷಗಿರಿರಾವ್ ಅವರು ಅಧ್ಯಕ್ಷತೆ ವಹಿಸಿದ್ದರು, ಸಂಸ್ಮರಣ ಸಮಿತಿ ಮತ್ತು ಸಹೃದಯ ಗೋಷ್ಠಿಯ ಸಂಚಾಲಕರಲ್ಲಿ ಒಬ್ಬರಾದ ಶ್ರೀ ನಾ. ಗೀತಾಚಾರ್ಯ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಎರಡನೇ ಕಾರ್ಯಕ್ರಮ ಉದಯ ಭಾನು ಕಲಾ ಸಂಘದಲ್ಲಿ ನಡೆಯಿತು. ಡಾ॥ ಪಿ. ವಿ. ನಾರಾಯಣ ಅವರು ಎಂ.ವಿ.ಸೀ. ಅವರ ಕನ್ನಡ ಪ್ರೇಮ ಕುರಿತು ಮಾತನಾಡಿದರು. ಶ್ರೀ ಹಿ. ಮ. ನಾಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿಯವರಾದ ಶ್ರೀ ಎಂ. ನರಸಿಂಹ ಅವರು ವಂದನಾರ್ಪಣೆ ಮಾಡಿದರು.

ಭಾವೈಕ್ಯ ಸಾಧನೆಯಲ್ಲಿ ಸಾಹಿತ್ಯ ಕಲೆಗಳ ಪಾತ್ರ

ಪ್ರತಿಷ್ಠಾನದ ದಶಮಾನೋತ್ಸವ ಮತ್ತು ನೆಹರು ಜನ್ಮಶತಾಬ್ದಿ ಸ್ಮರಣೆಗಾಗಿ ಭಾರತೀಯ ಸ್ಟೇಟ್ ಬ್ಯಾಂಕ್‌ನ ನೆರವಿನೊಂದಿಗೆ 12-11-89ರಂದು ಗೋಖಲೆ ಸಂಸ್ಥೆಯ ಸಭಾಂಗಣದಲ್ಲಿ ಇಡೀ ದಿನ ನಡೆದ ಈ ಕಾರ್ಯಕ್ರಮ ವೈಶಿಷ್ಟ್ಯಪೂರ್ಣವಾಗಿತ್ತು. ಬೆಳಗಿನ ಕಾರ್ಯಕ್ರಮ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದು ಡಾ॥ ರಂ. ಶ್ರೀ. ಮುಗಳಿ ಅವರು ಗೋಷ್ಠಿಯನ್ನು ಉದ್ಘಾಟನೆ ಮಾಡಿದರು. ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯ ಅವರು ಪ್ರತಿಷ್ಠಾನದ ಎರಡು ಪ್ರಕಟನೆಗಳಾದ 'ದತ್ತಿ ಉಪನ್ಯಾಸ 1988' ಮತ್ತು 'ಮರುನ್ನಂದನ ಶತಕ' ಕೃತಿಗಳನ್ನು ಬಿಡುಗಡೆ ಮಾಡಿದರು. ಪ್ರಾರಂಭದಲ್ಲಿ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಎಂ. ವಿ. ಸೀತಾರಾಮಯ್ಯನವರು ಗೋಷ್ಠಿಯ ಉದ್ದೇಶವನ್ನು ವಿವರಿಸಿ ಸ್ವಾಗತಿಸಿದರು.

ಮಧ್ಯಾಹ್ನದ ಗೋಷ್ಠಿಯಲ್ಲಿ ಡಾ॥ ರಾಮಚಂದ್ರಶರ್ಮ ಅವರು ಪ್ರವಾಸ ಕ್ಷೇತ್ರದಲ್ಲಿ, ಶ್ರೀ ಟಿ. ವಿ. ಕೆ. ಶಾಸ್ತ್ರಿ ಅವರು ಸಂಗೀತಕ್ಷೇತ್ರದಲ್ಲಿ ಮತ್ತು ಪ್ರೊ॥ ನಿಜಾಮುದ್ದೀನ್ ಅವರು ಮತೀಯ ಸೌಹಾರ್ದದಲ್ಲಿ ಭಾವೈಕ್ಯ ಸಾಧನೆಯನ್ನು ಕುರಿತು ವಿಚಾರಪೂರ್ಣವಾಗಿ ಮಾತನಾಡಿದರು. ನಂತರ ನಡೆದ ಎರಡನೇ ಗೋಷ್ಠಿಯಲ್ಲಿ ಪ್ರೊ॥ ಎಲ್. ಎಸ್. ಶೇಷಗಿರಿರಾವ್ ಅವರು ಸಾಹಿತ್ಯ ಕ್ಷೇತ್ರದಲ್ಲಿ, ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಚಿತ್ರ ಮತ್ತು ಶಿಲ್ಪ ಕಲಾ ಕ್ಷೇತ್ರದಲ್ಲಿ ಹಾಗೂ ಡಾ॥ ಎಂ. ಚಿದಾನಂದಮೂರ್ತಿ ಅವರು ಭಾಷೆಯ ಮೂಲಕ ಭಾವೈಕ್ಯ ಸಾಧನೆ

ಯನ್ನು ಕುರಿತು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಡಾ॥ ಜಿ. ಎಸ್. ಶಿವರುದ್ರಪ್ಪನವರು ಡಾ॥ ಕೆ. ಕೃಷ್ಣಮೂರ್ತಿ ಅವರು ಬರೆದಿರುವ "ಸೃಜನಶೀಲತೆ ಮತ್ತು ಪಾಂಡಿತ್ಯ" ಕೃತಿಯನ್ನು ಬಿಡುಗಡೆ ಮಾಡಿದರು. ಕೊನೆಯಲ್ಲಿ ಶ್ರೀ ಜಿ. ನಾರಾಯಣ ಅವರು ಸಮಾರೋಪ ಭಾಷಣ ಮಾಡುತ್ತ ಪ್ರತಿಷ್ಠಾನದ ಸಾಧನೆ ಗಳನ್ನು ಸ್ಮರಿಸಿದರು.

ಬಿ.ಎಂ.ಶ್ರೀ. ಸ್ಮಾರಕ ಸಾಹಿತ್ಯ ಸ್ಪರ್ಧೆ

ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನ ನಾಡಿನಾದ್ಯಂತ ಬಿ.ಎಂ.ಶ್ರೀ.ಯವರನ್ನು ಕುರಿತ ಪ್ರಬಂಧ ಮತ್ತು ಕಂಠಪಾಠ ಸ್ಪರ್ಧೆಯನ್ನು ನಡೆಸಿತ್ತು. ಬಿ.ಎಂ.ಶ್ರೀ.ಯವರ ಹುಟ್ಟೂರಾದ ಬೆಳ್ಳೂರಿನಲ್ಲಿ ಶತಮಾನೋತ್ಸವ ಉದ್ಘಾಟನಾ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಿತ್ತು. ಅಲ್ಲಿರುವ ಬಿ.ಎಂ.ಶ್ರೀ. ಯುವಕ ಸಂಘ, ಎ. ಎಲ್. ಕೆ. ಸರ್ಕಾರಿ ಪದವಿಪೂರ್ವ ಕಾಲೇಜುಗಳು ಬಿ. ಎಂ. ಶ್ರೀ. ಹೆಸರನ್ನು ಚಿರಸ್ಥಾಯಿಯಾಗಿಸಿವೆ. ಕಾಲೇಜಿನ 'ಬಿ.ಎಂ.ಶ್ರೀ. ಸ್ಮಾರಕ ಸಾಹಿತ್ಯ ಸ್ಪರ್ಧಾ ಸಮಿತಿ' ಪ್ರತಿವರ್ಷ ರಾಜ್ಯಮಟ್ಟದ ಅಂತರ ಪ್ರೌಢಶಾಲಾ ಪ್ರಬಂಧ ಮತ್ತು ಕಂಠಪಾಠ ಸ್ಪರ್ಧೆಯನ್ನು ನಡೆಸುತ್ತದೆ. ಈ ಎರಡೂ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸುವ ವಿದ್ಯಾರ್ಥಿಗಳಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ಒಂದೊಂದು ಬಹುಮಾನವನ್ನು ನೀಡುತ್ತ ಬಂದಿದೆ. ಈ ಬಾರಿಯ ಸ್ಪರ್ಧೆ 5–1–90ರಂದು ನಡೆದಿದ್ದು ಪ್ರತಿಷ್ಠಾನ ತನ್ನ ಕರ್ತವ್ಯವನ್ನು ಪಾಲಿಸಿದೆ.

ಶಹಾಪುರದಲ್ಲಿ ಎ.ಆರ್.ಕೃ. ಜನ್ಮಶತಮಾನೋತ್ಸವ

ಬಿ.ಎಂ.ಶ್ರೀ. ಪ್ರತಿಷ್ಠಾನದ ದಶಮಾನೋತ್ಸವ ಕಾರ್ಯಕ್ರಮಗಳನ್ನು ಕೆಲವು ಪ್ರಮುಖ ಸ್ಥಳಗಳಲ್ಲಿ ನಡೆಸಬೇಕೆಂಬ ಮತ್ತು ಅಲ್ಲೆಲ್ಲ ದಶಮಾನೋತ್ಸವದೊಂದಿಗೆ ಎ.ಆರ್.ಕೃ. ಅವರ ಜನ್ಮಶತಮಾನೋತ್ಸವವನ್ನೂ ನಡೆಸಬೇಕೆಂಬ ಉದ್ದೇಶದಿಂದ ಪ್ರೊ॥ ಎಂ. ವಿ. ಸೀತಾರಾಮಯ್ಯನವರೇ ಶಹಾಪುರ. ಚಳ್ಳಕೆರೆ, ಗುಲಬರ್ಗ, ಹೈದರಾಬಾದ್‌ಗಳಿಗೆ ಕಾಗದ ಬರೆದಿದ್ದರು. ಮಾರ್ಚ್ ಅಥವ ಏಪ್ರಿಲ್‌ನಲ್ಲಿ ಕಾರ್ಯಕ್ರಮ ವ್ಯವಸ್ಥೆ ಮಾಡಿ ಅಲ್ಲಿಗೆಲ್ಲ ಹೋಗಿ ಬರಬೇಕೆಂಬುದು ಅವರ ಯೋಜನೆ ಯಾಗಿತ್ತು. ಶಹಾಪುರದಲ್ಲಿ ಕಾಲೇಜಿನಲ್ಲಿ ಕಾರ್ಯಕ್ರಮ ವ್ಯವಸ್ಥೆಯಾಗಬೇಕಾದುದ ರಿಂದ ಕಾರ್ಯಕ್ರಮವನ್ನು ಮುಂದೂಡುವುದು ಸಾಧ್ಯವಾಗದೆ 7–3–90ರಂದೇ ನಡೆಸಲಾಯಿತು. ಪ್ರತಿಷ್ಠಾನದ ಅತಿಥಿಗಳಾಗಿ ಪ್ರೊ॥ ಬಿ. ರಾಮಸ್ವಾಮಿ ಅವರು ಭಾಗವಹಿಸಿ ಪ್ರತಿಷ್ಠಾನದ ಬಗೆಗೆ ಮತ್ತು ಎ. ಆರ್. ಕೃ. ಅವರನ್ನು ಕುರಿತು ಮಾತನಾಡಿದರು. ಶಾಸಕರಾದ ಶಿವಶೇಖರಪ್ಪ ಪಾಟೀಲ ಶಿರವಾಳ ಅವರ ಅಧ್ಯಕ್ಷತೆಯಲ್ಲಿ ಶ್ರೀ ದೊಡ್ಡಬಸಪ್ಪ ಬಳರೂಗಿ ಅವರೂ ಮಾತನಾಡಿದರು.

ಪ್ರಾಚಾರ್ಯರಾದ ಬಿ. ಆರ್. ಸುರಪುರ ಅವರು ಈ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿದ್ದರು. ಬಿ.ಎಂ.ಶ್ರೀ ಪ್ರತಿಷ್ಠಾನ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸಗರ ನಾಡು ಅಧ್ಯಯನ ಸಂಸ್ಥೆಗಳ ಸಹಯೋಗದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಪ್ರಾಚೀನ ಹಸ್ತಪ್ರತಿಗಳ ದಾನ

ಮೈಸೂರಿನ ಪ್ರಸಿದ್ಧ ಗುಂಡ್ಲುಪಂಡಿತರ ಮನೆತನದವರಾದ ಶ್ರೀ. ಜಿ.ಎಸ್. ರಾಜನ್ ಅವರ ಸಂಗ್ರಹದಲ್ಲಿದ್ದ ಸುಮಾರು 300ಕ್ಕೂ ಹೆಚ್ಚು ಓಲೆಗರಿ ಗ್ರಂಥಗಳನ್ನು ಇತ್ತೀಚೆಗೆ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರಕ್ಕೆ ತರಲಾಗಿದೆ. ಆಯುರ್ವೇದಕ್ಕೆ ಸಂಬಂಧಿಸಿದಂತೆ ಮತ್ತು ಕನ್ನಡ ಪ್ರಾಚೀನ ಕಾವ್ಯಕೃತಿಗಳಿಗೆ ಸಂಬಂಧಿಸಿದಂತೆ ಹಲವಾರು ಅಪೂರ್ವ ಗ್ರಂಥಗಳನ್ನು ಒಳಗೊಂಡಿರುವ ಈ ಅಮೂಲ್ಯ ಸಂಗ್ರಹವನ್ನು ಪ್ರತಿಷ್ಠಾನಕ್ಕೆ ಉದಾರವಾಗಿ ನೀಡಿದ ಶ್ರೀ ಜಿ. ಎಸ್. ರಾಜನ್ ಮತ್ತು ಕುಟುಂಬ ವರ್ಗಕ್ಕೆ ಪ್ರತಿಷ್ಠಾನ ಆಭಾರಿಯಾಗಿರುತ್ತದೆ.

ತುಮಕೂರು ಜಿಲ್ಲೆಯ ಮುಳುಕುಂಟೆಯ ಶ್ರೀ ಎಂ. ಡಿ. ನರಸಿಂಹ ಶಾಸ್ತ್ರಿಯವರ ಸಂಗ್ರಹದಲ್ಲಿದ್ದ ಸುಮಾರು 30ಕ್ಕೂ ಹೆಚ್ಚು ಓಲೆಗರಿ ಗ್ರಂಥಗಳನ್ನು ಶ್ರೀ ಎಚ್. ಎಸ್. ಗೋಪಾಲರಾವ್ ಅವರು ಇತ್ತೀಚೆಗೆ ಪ್ರತಿಷ್ಠಾನಕ್ಕೆ ಉದಾರವಾಗಿ ನೀಡಿದ್ದಾರೆ.

ಬಾಣಾವರದ ಶ್ರೀ ಜಿ. ಕೆ. ಅನಂತರಾಮಯ್ಯ ಅವರು ಭಾಗವತ ಗ್ರಂಥವಿರುವ ಒಂದು ಓಲೆಗರಿ ಕಟ್ಟನ್ನೂ, ತಿಪ್ಪಸಂದ್ರದ ಶ್ರೀ ಲಕ್ಷ್ಮೀನಾರಾಯಣ ಅಯ್ಯಂಗಾರ್ ಅವರು ಒಂದು ಓಲೆಗರಿ ಗ್ರಂಥವನ್ನೂ ಪ್ರತಿಷ್ಠಾನದ ಭಂಡಾರಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಈ ಎಲ್ಲ ಮಹನೀಯರಿಗೆ ಪ್ರತಿಷ್ಠಾನ ಕೃತಜ್ಞವಾಗಿರುತ್ತದೆ.

ಅಭಿನಂದನೆ

ತೀ.ನಂ.ಶ್ರೀ. ಅವರಿಗೆ ಪಂಪ ಪ್ರಶಸ್ತಿ

ಆದಿಕವಿ ನಾಡೋಜ ಪಂಪನ ಹೆಸರಿನಲ್ಲಿ, ಭಾರತ ಸ್ವಾತಂತ್ರ್ಯದ 40ನೆಯ ವರ್ಷದ ಸವಿ ನೆನಪಿನ ಕಾಣಿಕೆ ಪಂಪಪ್ರಶಸ್ತಿ; ಇದು ಒಂದು ಲಕ್ಷ ರೂಪಾಯಿಯ ಬಹುಮಾನ. ಈ ಪ್ರಶಸ್ತಿಯ ಮೊದಲ ಪ್ರದಾನ ಕಳೆದ ವರ್ಷ ಶ್ರೀ ಕುವೆಂಪು ಅವರ 'ರಾಮಾಯಣ ದರ್ಶನಂ' ಕಾವ್ಯಕ್ಕೆ ಸಂದಿದೆ. ಇದೀಗ ಎರಡನೆಯದಾಗಿ ಹೊಸಗನ್ನಡ ಸಾಹಿತ್ಯದ ಆಚಾರ್ಯಪುರುಷರಲ್ಲೊಬ್ಬರಾದ, ವಿದ್ವತ್ತು ಪ್ರತಿಭೆಗಳ ಕಾವ್ಯ ತತ್ತ್ವ ಪರಿಣತಿಯ ಅದ್ವಿತೀಯ ವಿದ್ವಾಂಸರಾದ ದಿ|| ತೀ.ನಂ.ಶ್ರೀ.ಯವರ "ಭಾರತೀಯ ಕಾವ್ಯಮೀಮಾಂಸೆ"ಗೆ ಸಂದಿದೆ. ಇದರ ವರ್ಣರಂಜಿತ ಸಮಾರಂಭ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 29-3-1990ರ ಸಂಜೆ ನೆರವೇರಿತು. ಶ್ರೀಮತಿ ಜಯಲಕ್ಷ್ಮಮ್ಮ ತೀನಂಶ್ರೀ ಅವರು ಕರ್ನಾಟಕ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರಿಂದ ಈ ಪ್ರಶಸ್ತಿಯನ್ನು ಸ್ವೀಕರಿಸಿದರು. ಪ್ರೊ|| ಎ. ಎನ್. ಮೂರ್ತಿರಾಯರು ಅಭಿನಂದನ ಭಾಷಣ ಮಾಡಿದರು.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇದೇ ದಿನದಂದು ಬೆಳಗ್ಗೆ 10-30ಕ್ಕೆ 'ತೀ.ನಂ.ಶ್ರೀ. ಸಾಹಿತ್ಯ ಸಮೀಕ್ಷೆ' ಎಂಬ ವಿಚಾರ ಸಂಕಿರಣವನ್ನು ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಏರ್ಪಡಿಸಿದ್ದಿತು.

—ವಿ. ವೆಂಕಟರಾವ್

ಆಚಾರ್ಯ ತೀ.ನಂ.ಶ್ರೀ.

ತೀ.ನಂ.ಶ್ರೀ. ಕಾವ್ಯನಾಮದಿಂದ ಸುಮಾರು ನಾಲ್ಕು ದಶಕಗಳ ಕಾಲ ಕನ್ನಡ ಸಾರಸ್ವತ ಲೋಕವನ್ನು ಬೆಳಗಿಸಿದ ಸಂಭಾವಿತ ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯನವರು ಜನಿಸಿದ್ದು 26-11-1906ರಲ್ಲಿ ತುಮಕೂರು ಜಿಲ್ಲೆ ಚಿಕ್ಕ ನಾಯಕನಹಳ್ಳಿ ತಾಲ್ಲೂಕು ತೀರ್ಥಪುರದಲ್ಲಿ.

ಪ್ರಾಥಮಿಕ ಶಿಕ್ಷಣ ಚಿಕ್ಕನಾಯಕನಹಳ್ಳಿ ಮತ್ತು ತುಮಕೂರುಗಳಲ್ಲಿ ನಡೆಸಿದ ಶ್ರೀಯುತರು ಉನ್ನತ ವ್ಯಾಸಂಗಕ್ಕಾಗಿ ಮೈಸೂರು ಮಹಾರಾಜ ಕಾಲೇಜನ್ನು ಪ್ರವೇಶಿಸಿದರು. ಇಂಗ್ಲಿಷ್ ಮತ್ತು ಕನ್ನಡದಲ್ಲಿ ಎಂ.ಎ. ಪದವಿ ಪಡೆದರು. ರೆವಿನ್ಯೂ ಇಲಾಖೆಯಲ್ಲಿ ದೊರೆತಿದ್ದ ಅಮಲ್ದಾರ್ ಹುದ್ದೆಯನ್ನು ತ್ಯಜಿಸಿ ಕನ್ನಡ ಅಧ್ಯಾಪಕ ಹುದ್ದೆಯನ್ನು ಒಪ್ಪಿಕೊಂಡದ್ದು ಬೋಧನ ವೃತ್ತಿಯಲ್ಲಿ ಅವರಿಗಿದ್ದ ಅದಮ್ಯ ಅಭಿಮಾನಕ್ಕೆ ಪ್ರತೀಕ.

'ಬರಹ ಓದಿಗೆ ಶತ್ರು' ಎಂದು ಭಾವಿಸಿದ್ದ ತೀ.ನಂ.ಶ್ರೀ. 'ನನ್ನ ಲೇಖನ ವ್ಯವಸಾಯ ಹುಲುಸಲ್ಲ' ಎಂದರೂ ಕನ್ನಡಕ್ಕೆ ಅನೇಕ ಮೌಲಿಕ ಕೃತಿಗಳನ್ನು ನೀಡಿದ್ದಾರೆ. ಅವರ ಏಕೈಕ ಕವನ ಸಂಕಲನ 'ಒಲುಮೆ' ವಿಶಿಷ್ಟವಾದ ಕವನ ಸಂಕಲನವೆಂಬ ಪ್ರಸಿದ್ಧಿಗೆ ಪಾತ್ರವಾಗಿದೆ. 'ನಂಟರು' ಎಂಬ ಪ್ರಬಂಧ ಸಂಕಲನ ಪ್ರಕಟಿಸಿದ್ದಾರೆ. 'ರಾಕ್ಷಸ ಮುದ್ರಿಕೆ' ಎಂಬ ನಾಟಕ ರಚಿಸಿದ್ದಾರೆ. 'ನಂಬಿಯಣ್ಣನ

ರಗಳೆ' ಮತ್ತು 'ಗದಾಯುದ್ಧ' ಸಂಗ್ರಹಗಳನ್ನು ಸಂಪಾದಿಸಿದ್ದಾರೆ. 'ಕಾವ್ಯ ಸಮೀಕ್ಷೆ' ಮತ್ತು 'ಸಮಾಲೋಕನ'ಗಳೆಂಬ ವಿಮರ್ಶೆ ಮತ್ತು ಛಂದಸ್ಸನ್ನು ಪರಿಚಯಿಸುವ ಗ್ರಂಥಗಳನ್ನು ಬರೆದಿದ್ದಾರೆ. ಇವೆಲ್ಲಕ್ಕೂ ಶಿಖರವಿಟ್ಟಂತಿರುವ 'ಭಾರತೀಯ ಕಾವ್ಯಮೀಮಾಂಸೆ' ಶ್ರೀಯುತರ ದೀರ್ಘಕಾಲದ ಅಧ್ಯಯನದ ಫಲ, ಆಚಾರ್ಯ ಕೃತಿ. ಭಾರತೀಯ ಲಾಕ್ಷಣಿಕಕಾರರು ಕಾವ್ಯಲಕ್ಷಣಗಳ ಬಗ್ಗೆ ವ್ಯಕ್ತ ಪಡಿಸಿರುವ ವಿವಿಧ ಅಭಿಪ್ರಾಯಗಳ ವಿಸ್ತಾರವಾದ ಚರ್ಚೆ ಇಲ್ಲಿದೆ. ಇದು ಕನ್ನಡ ದಲ್ಲಿ ಒಂದು ಮಹತ್ವದ ಕೃತಿ ಮಾತ್ರವಲ್ಲ, ಇತರ ಭಾರತೀಯ ಭಾಷೆಗಳಲ್ಲಿ ಇಂಥ ಕೃತಿ ರಚಿತವಾಗಿಲ್ಲ ಎಂಬ ಕೀರ್ತಿಗೂ ಪಾತ್ರವಾಗಿದೆ.

ಈ ಕೃತಿಗೆ ಪಂಪ ಪ್ರಶಸ್ತಿ ದೊರೆತದ್ದು ಉತ್ತಮ ಕಾರ್ಯಕ್ಕೆ ಎಂದಾದರೂ ಮನ್ನಣೆ ದೊರೆಯುತ್ತದೆ ಎಂಬ ಮಾತನ್ನು ನಿಜವಾಗಿಸಿದೆ. ●

'ಸಂಪ್ರತಿ'ಗೆ ಪ್ರಶಸ್ತಿ

ಕನ್ನಡದಲ್ಲಿ ಖ್ಯಾತ ಅಂಕಣ ಬರಹಗಾರರೂ ಅನೇಕ ಗ್ರಂಥಗಳ ಕರ್ತರೂ ವಿಮರ್ಶಕರೂ ಆಗಿರುವ ಡಾ॥ ಹಾ. ಮಾ. ನಾಯಕರ 'ಸಂಪ್ರತಿ' ಎಂಬ ಪ್ರಜಾ-ವಾಣಿಯ ಅಂಕಣ ಲೇಖನ ಸಮುಚ್ಚಯಕ್ಕೆ 1989ನೇ ವರ್ಷದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಐಬಿಹೆಚ್ ಶಿಕ್ಷಣ ಟ್ರಸ್ಟ್ ಪ್ರಶಸ್ತಿಯೂ ಇದೇ ವರ್ಷ ಈ ಕೃತಿಗೆ ಲಭಿಸಿದೆ. ಇವರ ಇನ್ನೊಂದು ಕೃತಿ 'ಪ್ರಣಯ ಪದಾವಳಿ' ಎಂಬುದಕ್ಕೆ ವರ್ಧಮಾನ ಪ್ರಶಸ್ತಿ ಬಂದಿದೆ. 'ಸಂಪ್ರತಿ' ಎಂಬುದು ಪ್ರಜಾವಾಣಿ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟಗೊಂಡ 103 ಅಂಕಣ ಬರಹಗಳ ಸಂಕಲನ ವಾಗಿದ್ದು 450 ಪುಟಗಳ ಉದ್ಗ್ರಂಥ. ಬೇರೆ ಬೇರೆ ಬಗೆಯ ಲೋಕಾನುಭವಗಳ ಹಾಗೂ ವೈಚಾರಿಕತೆಯ ಒಂದು ನಿಧಿಯಂತಿದೆ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗುವುದರ ಮೂಲಕ ಭಾರತೀಯ ಸಾಹಿತ್ಯದಲ್ಲಿ ಅಂಕಣ ಬರಹವನ್ನೂ ಒಂದು ಸಾಹಿತ್ಯಪ್ರಕಾರವನ್ನಾಗಿ ಪರಿಗಣಿಸಿದಂತಾಗಿದೆ.

ಸಾಮಗ–ಶೇಣಿ ಸನ್ಮಾನ

ದಿನಾಂಕ 3–9–1989, ಆದಿತ್ಯವಾರ ಉಡುಪಿಯ ಎಂ.ಜಿ.ಎಂ. ಕಾಲೇಜಿನ ರವೀಂದ್ರಮಂಟಪದ ಮಹಾಸಭೆಯಲ್ಲಿ ಯಕ್ಷಗಾನ ಕಲೆಯ ಹಿರಿಮೆಯ ಮೂರ್ತಿ ವೆತ್ತ ಮಲ್ಪೆ ಶಂಕರನಾರಾಯಣ ಸಾಮಗ ಮತ್ತು ಶೇಣಿ ಗೋಪಾಲಕೃಷ್ಣ ಭಟ್ಟ ಎಂಬೀರ್ವರು ಕಲಾವಿದರನ್ನು ಉಡುಪಿಯ ಯಕ್ಷಗಾನ ಕಲಾರಂಗದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ 'ಆಶು ವೈಭವ' ಎಂಬ ಅಮೂಲ್ಯವೂ ಪ್ರೌಢ ವಿಚಾರ ವಿಮರ್ಶಯುಕ್ತವೂ ಆದ ಅಭಿನಂದನ ಗ್ರಂಥವನ್ನು ಹೊರತರ ಲಾಯಿತು. ಇದೇ ಸಂದರ್ಭದಲ್ಲಿ ವಿಚಾರ ಸಂಕಿರಣವೂ ಪ್ರಭಾವಿಯಾಗಿ ನಡೆದಿದೆ.

ಶ್ರದ್ಧಾಂಜಲಿ

ದಿನಾಂಕ 23–10–89ರಂದು ಧಾರವಾಡದಲ್ಲಿ
ಬಸವರಾಜ ಕಟ್ಟೀಮನಿ : ಅವರು ಕ್ರಾಂತಿಕಾರಿ ಧೋರಣೆಯ
ಕೊನೆಯುಸಿರೆಳೆದ ಬಸವರಾಜ ಕಟ್ಟೀಮನಿ ಅವರು ಕ್ರಾಂತಿಕಾರಿ ಧೋರಣೆಯ
ಸಾಹಿತಿಗಳಾಗಿದ್ದರು. ಕತೆ, ಕಾದಂಬರಿ, ನಾಟಕ, ಪ್ರವಾಸ, ಆತ್ಮಕಥನ, ಜೀವನ
ಚರಿತ್ರೆ ಇತ್ಯಾದಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು 60ಕ್ಕೂ ಹೆಚ್ಚು
ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಮುಖವಾಗಿ ಪ್ರಗತಿಶೀಲ ಪಂಥದ ಮುಖ್ಯ
ಲೇಖಕರಾಗಿದ್ದ ಶ್ರೀ ಬಸವರಾಜ ಕಟ್ಟೀಮನಿ ಅವರು ಸ್ವಾತಂತ್ರ್ಯಯೋಧರೂ
ಪತ್ರಿಕೋದ್ಯೋಗಿಗಳೂ ಸಾಮಾಜಿಕ ಕಾರ್ಯಕರ್ತರೂ ಶಾಸಕರೂ ಆಗಿದ್ದರು.
ಜನಿವಾರ-ಶಿವದಾರ, ಮಾಡಿ ಮಡಿದವರು, ಜರತಾರಿ ಜಗದ್ಗುರು, ಜ್ವಾಲಾಮುಖಿಯ
ಮೇಲೆ, ಮೋಹದ ಬಲೆಯಲ್ಲಿ–ಮುಂತಾದ ಹಲವಾರು ಕೃತಿಗಳನ್ನು ರಚಿಸಿರುವ
ದಿವಂಗತರಿಗೆ ಅನೇಕ ಸಾಹಿತ್ಯ ಪ್ರಶಸ್ತಿಗಳು ಬಂದಿವೆ. ಕಟ್ಟೀಮನಿಯವರ ಬರಹ
ಗಳು ಒಂದಲ್ಲ ಒಂದು ರೀತಿಯಲ್ಲಿ ಸಮಾಜದ ಡಂಬಾಚಾರಗಳ, ಶೋಷಕರ,
ವಿರುದ್ಧದ ಕಟು ಬರಹಗಳಾಗಿ ಸಾಮಾಜಿಕ ಕೋಲಾಹಲಗಳನ್ನುಂಟುಮಾಡುತ್ತ
ಒಂದು ರೀತಿಯಲ್ಲಿ ಸಮಾಜದಲ್ಲಿ ವೈಚಾರಿಕ ಜಾಗೃತಿಯನ್ನು ಮೂಡಿಸುತ್ತಿದ್ದವು.
ನಿರ್ಭಿಡೆಯ ವಿಚಾರಧಾರೆ ಮತ್ತು ತೀಕ್ಷ್ಣ ಬರವಣಿಗೆಯ ಕಟ್ಟೀಮನಿ ಅವರ ಸಾಹಿತ್ಯ
ಕನ್ನಡ ಸಾಹಿತ್ಯಕ್ಕೆ ಒಂದು ಕೊಡುಗೆಯೇ ಆಗಿದೆ.

96 ವರ್ಷ ಸಾರ್ಥಕ ಜೀವನವನ್ನು ನಡೆಸಿ
ಆರ್. ಆರ್. ದಿವಾಕರ್ : ದಿವಂಗತರ ಅಂತಿಮ ಸಂಸ್ಕಾರವು
1990 ಜನವರಿ 15ರಂದು ಇಹವನ್ನು ತ್ಯಜಿಸಿದ ದಿವಂಗತರ ಅಂತಿಮ ಸಂಸ್ಕಾರವು
ಸರ್ಕಾರಿ ಗೌರವಗಳೊಂದಿಗೆ ನಡೆಯಿತು. ಅವರು ಹಿರಿಯ ಗಾಂಧೀವಾದಿ,
ಸ್ವಾತಂತ್ರ್ಯಯೋಧರು, ತತ್ವಜ್ಞಾನಿ, ಶ್ರೇಷ್ಠ ಪತ್ರಿಕೋದ್ಯಮಿ, ಉತ್ತಮ ಸಾಹಿತಿ
ಯಾಗಿದ್ದರು. ಸುಮಾರು 30ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿರುವ ದಿವಂಗತರ
'ವಚನ ಶಾಸ್ತ್ರ ರಹಸ್ಯ' ಅಮೂಲ್ಯ ಕೃತಿ. ಲೋಕಮಾನ್ಯ ತಿಲಕರ ಪ್ರಭಾವ
ಕ್ಕೊಳಗಾಗಿ ದಿವಾಕರರು 1921ರಲ್ಲಿ ಚಳವಳಿಯಲ್ಲಿ ಭಾಗವಹಿಸಿ 8 ವರ್ಷಕ್ಕಿಂತಲೂ
ಹೆಚ್ಚುಕಾಲ ಸೆರೆಮನೆಯಲ್ಲಿದ್ದರು. ಕಾಂಗ್ರೆಸ್ ಸಂಸ್ಥೆಗೆ ಪ್ರಾಂತೀಯ ಅಧ್ಯಕ್ಷರಾಗಿ,
ಜವಹರಲಾಲರ ಮಂತ್ರಿಮಂಡಲದಲ್ಲಿ ವಾರ್ತಾ ಪ್ರಸಾರ ಮಂತ್ರಿಯಾಗಿ 1952–
57ರ ವೇಳೆಗೆ ಬಿಹಾರದ ರಾಜ್ಯಪಾಲರಾಗಿ 1968ರಲ್ಲಿ ರಾಜಕೀಯದಿಂದ ನಿವೃತ್ತ
ರಾದರು. ಅನಂತರ ಗಾಂಧೀ ತತ್ವ ಪ್ರಸಾರಕರಾದರು. ಸಂಯುಕ್ತ ಕರ್ನಾಟಕ
ದಿನಪತ್ರಿಕೆಯ ಸಂಪಾದಕರಾಗಿದ್ದರು. ಭಾರತೀಯ ವಿದ್ಯಾಭವನದ ಪತ್ರಿಕೆಯಲ್ಲಿಯೂ
ಮುಖ್ಯ ಪಾತ್ರ ವಹಿಸಿದ್ದರು. ವಿಶ್ವ ಧರ್ಮ ಸಮ್ಮೇಳನದ ಉಪಾಧ್ಯಕ್ಷರೂ ಆಗಿದ್ದರು.

ಡಾ॥ ಗುಂಡ್ಮಿ ಚಂದ್ರಶೇಖರ ಐತಾಳ (ಜನನ 1936) : 19-2-1990 ರಂದು ದಿವಂಗತರಾದ ಐತಾಳರು ನವ್ಯಕವನ, ಪ್ರಬಂಧ, ವಿಮರ್ಶೆ, ಸಂಶೋಧನೆ, ಜಾನಪದ ಗೀತ ಸಂಗ್ರಹ ಮುಂತಾದ ವಿವಿಧ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾದವರು. ಮಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರ ಕೆಲವು ಕೃತಿಗಳಿಗೆ ರಾಜ್ಯದ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಬಂದಿವೆ. 'ಮದ್ದುಂಟೆ ಜನನ ಮರಣಕ್ಕೆ' ಎಂಬ ಹಳ್ಳಿಹಾಡಿನ ಸಂಕಲನಕ್ಕೆ ಮೈಸೂರು ವಿಶ್ವವಿದ್ಯಾಲಯದ ಸುವರ್ಣೋತ್ಸವದ ಬಹುಮಾನ, 'ಮಾತ್ರಸಂಹಿತೆ' ಎಂಬ ಕವನ ಸಂಕಲನದ ಇಂಗ್ಲಿಷ್ ಅನುವಾದಕ್ಕೆ ಅಮೇರಿಕ ವಿಶ್ವವಿದ್ಯಾಲಯದಿಂದ ಡಿ. ಲಿಟ್ ಪದವಿ, ಡಿ.ವಿ.ಜಿ. ಸಾಹಿತ್ಯದ ಮೇಲೆ ಅವರು ಮಾಡಿದ ಸಂಶೋಧನ ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಬಂದಿವೆ.

ಬಿ. ಎಚ್. ಶ್ರೀಧರ : 25-4-90ರಂದು ನಿಧನರಾದ ಶ್ರೀ ಬಿ. ಎಚ್. ಶ್ರೀಧರ ಅವರು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದವರು. ಲೇಖಕರಾಗಿ ಅನುವಾದಕರಾಗಿ ಕಾವ್ಯ, ವಿಮರ್ಶೆ, ವಿಚಾರ ಸಾಹಿತ್ಯ, ಸಂಶೋಧನೆ, ಶಿಶುಸಾಹಿತ್ಯ ಹೀಗೆ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಕೆಲ ಕಾಲ ಮಿಲಿಟರಿಯಲ್ಲಿ ಕೆಲಸ ಮಾಡಿ ಮತ್ತೆ ಕೆಲವು ಕಾಲ ಪ್ರೌಢ ಶಾಲಾ ಅಧ್ಯಾಪಕರಾಗಿ ಅನಂತರ 'ಕರ್ಮವೀರ' ವಾರಪತ್ರಿಕೆಯ ಉಪಸಂಪಾದಕರಾಗಿ ಕೆಲಸ ಮಾಡಿ 1951ರಿಂದ ಮತ್ತೆ ಅಧ್ಯಾಪಕ ವೃತ್ತಿಗೇ ಮರಳಿ, ಪ್ರಾಧ್ಯಾಪಕರಾಗಿ ಪ್ರಾಚಾರ್ಯರಾಗಿ ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಅಪಾರ ಪರಿಣತಿ ಹೊಂದಿದ್ದರು. ಭಾರತೀಯ ಮೂರ್ತಿಶಿಲ್ಪ, ಕಾವ್ಯಸೂತ್ರ, ಭಾರತೀಯ ವಾಙ್ಮಯ, ಜ್ಞಾನಸೂತ್ರ, ಮುಂತಾದ ಹಲವಾರು ಮೌಲ್ಯಯುತ ಗ್ರಂಥಗಳನ್ನು ಶ್ರೀಧರ ಅವರು ಕನ್ನಡಕ್ಕೆ ಕೊಟ್ಟಿದ್ದಾರೆ. ಅವರ ಅನೇಕ ವೈಚಾರಿಕ ಲೇಖನಗಳು ಅವರ ಜೀವನಶ್ರದ್ಧೆ, ಪ್ರಕೃತಿ ಪ್ರೇಮ ಮಾನವೀಯ ಅನುಕಂಪಗಳ ಸಾಕಾರ ರೂಪಗಳಾಗಿವೆ. ಶ್ರೀಧರ ಅವರ ಹಲವಾರು ಕೃತಿಗಳು ವಿವಿಧ ಸಾಹಿತ್ಯ ಪ್ರಶಸ್ತಿಗಳನ್ನು ಗಳಿಸಿವೆ. ಕನ್ನಡ ವಾಙ್ಮಯ ಲೋಕಕ್ಕೆ ಅವರ ನಿಧನ ಅಪಾರವಾದ ನಷ್ಟವಾಗಿದೆ.

ಈ ಎಲ್ಲ ಮಹನೀಯರ ಆತ್ಮಕ್ಕೆ ಚಿರಶಾಂತಿ ಕೋರುತ್ತ ಪ್ರತಿಷ್ಠಾನ ಗೌರವ ಪೂರ್ವಕ ನಮನಗಳನ್ನು ಅರ್ಪಿಸುತ್ತದೆ.